ಶರಣ ಸೌರಭ



ಶ್ರೀಮತಿ ಜಯಶ್ರೀ ಸುಕಾಲೆ

ಶರಣ ಸೌರಭ

ಶ್ರೀಮತಿ ಜಯಶ್ರೀ ಸುಕಾಲೆ

ಸಾಧನಾ ಪಬ್ಲಿಕೇಷನ್

ಶಾಪ್ ನಂ. 144/1, ಉಲ್ಲಾಳ ಕೆರೆ ಹತ್ತಿರ, ವಿಶ್ವೇಶ್ವರಯ್ಯ ಬಡಾವಣೆ 5ನೇ ಹಂತ,
ಉಲ್ಲಾಳ ಮುಖ್ಯರಸ್ತೆ, ಬೆಂಗಳೂರು – 560 056

SHARANA SOURABHA

by : Smt. Jayashri Sukale

'Basava Prakasha Nilaya'

Road No. 1, Sharananagara, Bidar.

Ph. No.9481633463

Email : jayshreesukale12@gmail.com

Published by

M/s. Sadhana Publication

Shop No. 144/1, Near Ullal Lake,

Vishveshwaraiah 5th Stage, Ullal Main Road,

Bengaluru - 560 056

ಪ್ರಥಮ ಮುದ್ರಣ	:	2024
ಹಕ್ಕುಗಳು	:	ಪ್ರಕಾಶಕರದು
ಪುಟಗಳು	:	124
ಆಕಾರ	:	ಡೆಮಿ 1/8
ಪ್ರತಿಗಳು	:	1000
ಬಳಸಿದ ಕಾಗದ	:	ಮ್ಯಾಪ್ಲಿಥೊ 70 ಜಿ.ಎಸ್.ಎಂ.
ಅಕ್ಷರ ಜೋಡಣೆ	:	ದಿ ಪಬ್ಲಿಷರ್ ಫ್ರೆಂಡ್, 8867202286
ಬೆಲೆ	:	**ರೂ. 125/-**

ಮುದ್ರಣ :

ಸಾಧನಾ ಮುದ್ರಣಾಲಯ

ನಂ. 52, 2ನೇ ಅಡ್ಡರಸ್ತೆ, ಕಾಳಪ್ಪ ಗಾರ್ಡನ್,

ಅಗ್ರಹಾರ ದಾಸರಹಳ್ಳಿ, ಮಾಗಡಿ ಮುಖ್ಯರಸ್ತೆ,

ಬೆಂಗಳೂರು – 560 072.

ಮೊಬೈಲ್ : 94800 88960

ನಿವೇದನೆ

ಹನ್ನೆರಡನೆಯ ಶತಮಾನದ ಪ್ರತಿಯೊಬ್ಬ ವಚನಕಾರರು ಒಂದೊಂದು ಬಗೆಯ ವಿಶಿಷ್ಟ ವ್ಯಕ್ತಿತ್ವ ಪಡೆದಿದ್ದಾರೆ. ಅವರ ವ್ಯಕ್ತಿತ್ವದ ಒಳನೋಟಗಳನ್ನು ಅರ್ಥೈಸಿಕೊಳ್ಳುವುದರ ಮೂಲಕ ಇಂದಿನ ಜನಸಮುದಾಯ ತಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳ ಬಹುದಾಗಿದೆ. ಕನ್ನಡದ ನೆಲದಲ್ಲಿ ಜನ ಸಮುದಾಯಕ್ಕೆ ಮೊದಲ ಬಾರಿಗೆ ಸಹಜವಾದ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟವರೆಂದರೆ ವಚನಕಾರರು. ರಾಜಸತ್ತೆಯ ಕಪಿಮುಷ್ಟಿಯಲ್ಲಿ ಜನಸಮುದಾಯದ ವ್ಯಕ್ತಿತ್ವವೆಲ್ಲಾ ಕುಸಿದು ಹೋಗಿ ರಾಜಮಹಾರಾಜರ ವ್ಯಕ್ತಿತ್ವವೇ ರಾಜ್ಯದ ತುಂಬಾ ವಿಜೃಂಭಿಸುತ್ತಿರುವಾಗ ವಚನಕಾರರು ಸಾಮಾನ್ಯ ಜನತೆಯಲ್ಲಿ ಅರಿವು, ಆಲೋಚನೆಗಳನ್ನು ಹುಟ್ಟುಹಾಕುವುದರ ಮೂಲಕ ಹೊಸ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರು.

ಅಲ್ಲಮಪ್ರಭುದೇವರು– ಜಂಗಮತ್ವಕ್ಕೆ, ಬಸವಣ್ಣನವರು–ಭಕ್ತಿಗೆ, ಚನ್ನಬಸವಣ್ಣ ನವರು–ಜ್ಞಾನಕ್ಕೆ, ಸಿದ್ಧರಾಮೇಶ್ವರರು– ಯೋಗಕ್ಕೆ, ಅಕ್ಕಮಹಾದೇವಿಯವರು–ವೈರಾಗ್ಯಕ್ಕೆ ಹೆಸರಾಗಿರುವಂತೆ ಅನೇಕ ಮಾನವೀಯ ಮೌಲ್ಯಗಳನ್ನು ಹುಟ್ಟುಹಾಕುವಲ್ಲಿಯೂ ಇವರು ಪ್ರಮುಖರಾಗಿದ್ದಾರೆ. ಇನ್ನೂ ದುಡಿಯುವ ವರ್ಗದಿಂದ ಬಂದ ಅನೇಕ ವಚನಕಾರರು ಅನುಭವ ಮಂಟಪದ ಪ್ರಣಾಳಿಕೆಯನ್ನು ಚರ್ಚಿಸುತ್ತಾ, ಪ್ರಶ್ನಿಸುವುದರ ಮೂಲಕ ಪ್ರಾರಂಭದಲ್ಲಿ ತಾವು ಹಾಕಿಕೊಂಡ ಗೆರೆಗಳನ್ನು ತಾವೇ ದಾಟುತ್ತಾರೆ. ಹೀಗಾಗಿ ವಚನಕಾರರ ವ್ಯಕ್ತಿತ್ವ ಒಂದರ್ಥದಲ್ಲಿ ಸಾಮಾಜಿಕವಾಗುತ್ತಾ, ಜನಸಮೂಹದ ಮೂಲಕ ಅದು ಗುರುತಿಸಲ್ಪಡುತ್ತದೆ. ವಚನಕಾರರು ತತ್ವ ಮತ್ತು ಆಚಾರ ಎರಡು ದೃಷ್ಟಿಯಿಂದ ಸಮಸ್ತ ಜನತೆಗೆ ಅನುಸರಿಸಲು ಯೋಗ್ಯವಾಗಬಲ್ಲ ಉದಾತ್ತತೆಯ ಮನೋಭಾವ ಸೃಷ್ಟಿಸಿದರು. ಸರಳನಡೆ – ನುಡಿಯಿಂದ ಶಿಸ್ತಿನ ಸಂಘಟನೆಯಿಂದ, ಎತ್ತರದ ಆಲೋಚನೆಗಳಿಂದ, ಸ್ಪಷ್ಟ ನಿಲುವುಗಳಿಂದ, ಸಂಯಮದ ನಿರ್ಣಯಗಳಿಂದ, ನಿಸ್ವಾರ್ಥ ತ್ಯಾಗಗಳ ಸಂಬಂಧದಿಂದ ಬಸವಣ್ಣನವರು ವಚನಕಾರರಲ್ಲೇ ವಿಶಿಷ್ಟ ವ್ಯಕ್ತಿತ್ವ ಪಡೆದರು. ತನ್ನ ಸಾಧನೆ–ಸಿದ್ಧಾಂತ ಸಿದ್ಧಿಗಳ ಮುಖಾಂತರ ಮಾನವೀಯತೆಯ ಮಹಾವ್ಯಕ್ತಿಯಾದರು.

ಕ್ರಾಂತಿಯೆಂಬುದಕ್ಕೆ ಬಸವಣ್ಣನವರೂ, ವಚನಕಾರರೂ ಇಟ್ಟುಕೊಂಡ ಪರಿಕಲ್ಪನೆ ವಾಸ್ತವಿಕ ವಿಚಾರ ಸರಣಿಯದಾಗಿತ್ತು. ಸಾಮಾಜಿಕ ಪ್ರಗತಿ ಮತ್ತು ಬದಲಾವಣೆ ಕೇವಲ ಒಬ್ಬಿಬ್ಬರು ನಾಯಕರು ಸೃಷ್ಟಿಸುವ ಪವಾಡವೆಂದು ಶರಣರು ಭಾವಿಸಿರಲಿಲ್ಲ. ಕ್ರಾಂತಿ ಫಲಪ್ರದವಾಗುವುದು ಬಹುಸಂಖ್ಯಾತ ಜನತೆಯ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳಲ್ಲಿ ಬಲವು ಹೆಚ್ಚಾದಾಗ ಮಾತ್ರ ಎಂಬುದನ್ನು ಅವರು ಸ್ಪಷ್ಟವಾಗಿ ಮನಂಗಂಡಿದ್ದರು. ಅವರ ಲಕ್ಷ್ಯವೆಲ್ಲ, ಪಾಮರರೆಂದು ತಿರಸ್ಕರಿಸಿದ ಕೆಳವರ್ಗ-ವರ್ಣದವರ ಮೇಲೆಯೆ ಹೆಚ್ಚು ಕೇಂದ್ರಿತವಾಗಿದ್ದಿತು. ಬಸವಣ್ಣನವರು ಮುಖ್ಯವಾಗಿ ಸಮಾನತೆಯ ಜೊತೆಗೆ ಅವರಲ್ಲಿನ ಕೀಳರಿಮೆಯನ್ನು ಅಳಿಸಿ, ಆತ್ಮವಿಶ್ವಾಸವನ್ನು, ಆತ್ಮಗೌರವವನ್ನು ಹೆಚ್ಚಿಸಲು ಅನುಭವ ಮಂಟಪನ್ನು ಸ್ಥಾಪಿಸಿದರು. 'ಸರ್ವರಿಗೂ ಸಮಪಾಲು, ಸಮಬಾಳು' ಎಂದು ಬರಿಯ ಮಾತಿನಲ್ಲಿ ಹೇಳದೆ ಅವರಲ್ಲಿ ಬೆಳೆದು ಬಂದಿದ್ದ ಅಜ್ಞಾನ, ಅಂಧ ಶ್ರದ್ಧೆಗಳನ್ನು ತೊಡೆದು ಹಾಕುವ ಕಾರ್ಯವನ್ನು ಕೈಗೊಂಡಿದ್ದರು. ಇದು ಎಂದಿನಂತೆ ಅಂದೂ ಅಗತ್ಯವಾಗಿದ್ದಿತು. ಸಾಮಾನ್ಯ ಜನತೆಯಲ್ಲಿ ದೈವ ಶ್ರದ್ಧೆ ಹಾಗೂ ಧರ್ಮಾಚರಣೆಯಲ್ಲಿ ಭಯ ಮತ್ತು ಅಜ್ಞಾನ ಅಂದಿಗೂ, ಇಂದಿಗೂ ತಾಂಡವವಾಡುತ್ತಿರುವುದು ಕಾಣಬಹುದು.

ಬಸವಾದಿ ಶರಣರು ತಮ್ಮ ನಡೆ-ನುಡಿ, ಚಿಂತನ-ಮಂಥನದ ಮೂಲಕ ಸಮಾಜದಲ್ಲಿ ಸಾಧಿಸಿ ಮಾರ್ಗದರ್ಶಿಯಾದರು. ಅಂದಿನ ಸಂದರ್ಭದಲ್ಲಿ ಮಾತ್ರವಲ್ಲ, ಇಂದಿಗೂ ಕೂಡ ಶರಣರು ವಿಭೂತಿ ಪುರುಷರಾಗಿ ಪ್ರೇರಣೆ ನೀಡಬಲ್ಲ ಮಹಾಚೇತನ. ಅವರ ಬಾಳು, ಸಾಧನೆ ಸಿದ್ಧಿಗಳು ಇಂದಿಗೂ ಅಗೆದಷ್ಟು ಸಂಪತ್ತನ್ನು ನೀಡಬಲ್ಲ ಸಮೃದ್ಧ ಚಿನ್ನದ ಗಣಿ. ಬದಲಾದ ಇಂದಿನ ಕಾಲದಲ್ಲೂ ಶರಣರ ವಚನಗಳತ್ತ ಗಮನ ಹರಿಸಿದಲ್ಲಿ ಮಾನವೀಯತೆಯ ಜ್ಯೋತಿಯ ಬೆಳಕಿನಲ್ಲಿ ನಮ್ಮ ಬದುಕು ಪರುಷ ಮುಟ್ಟಿದ ಕಬ್ಬಿಣದಂತೆ ಬಂಗಾರವಾಗುವುದು. ವಚನಕಾರರ ಪರಿಮಳ ಸೂಸುವಂಥ ವಚನಗಳು ಅರ್ಥೈಸಿಕೊಳ್ಳುವ ಪ್ರಯತ್ನದಲ್ಲಿ ನಾವು ಸಾಗಬೇಕಾಗಿದೆ.

"ಶರಣ ಸೌರಭ" ಪುಸ್ತಕಕ್ಕೆ ರಾಷ್ಟ್ರೀಯ ಬಸವ ಪುರಸ್ಕಾರದಿಂದ ಅಲಂಕೃತಗೊಂಡ ಇಬ್ಬರೂ ದಿಗ್ಗಜ ಸಾಹಿತಿಗಳು ತಮ್ಮ ಬಿಡುವಿಲ್ಲದ ಕೆಲಸದ ಮಧ್ಯೆಯೂ ಅತ್ಯಂತ ಸಂತೋಷದಿಂದ ಶಾಂತಮೂರ್ತಿ ಶ್ರೀ ಎನ್. ಜಿ. ಮಹಾದೇವಪ್ಪನವರು ಮುನ್ನುಡಿ ಬರೆದರೆ, ಸದಾ ಪ್ರೋತ್ಸಾಹದ ನುಡಿಗಳಿಂದ ಮುನ್ನಡೆಸುತ್ತಾ ಬೆನ್ನುಡಿ ಬರೆದು ಕೊಟ್ಟ ಶ್ರೀ ರಂಜಾನ್ ದರ್ಗಾ ಅವರಿರ್ವರಿಗೂ ಭಕ್ತಿಪೂರ್ವಕ ಶರಣು-- ಶರಣಾರ್ಥಿ ಸಲ್ಲಿಸುತ್ತೇನೆ. ಈ ಪುಸ್ತಕ ಪ್ರಕಟಿಸಲು ಸಂತೋಷದಿಂದ ಮುಂದೆ ಬಂದು ಎಲ್ಲಾ ರೀತಿಯಿಂದ ಸಹಕರಿಸಿದ ಸಾಧನಾ ಪ್ರಕಾಶನದ ಶ್ರೀ ರವಿಚಂದ್ರ ರಾವ್ ಅವರಿಗೂ

ಹಾಗೂ ಅವರ ಸಿಬ್ಬಂದಿ ವರ್ಗದವರೆಲ್ಲರಿಗೂ ಧನ್ಯವಾದಗಳೊಂದಿಗೆ ಶರಣು-ಶರಣಾರ್ಥಿ ಸಲ್ಲಿಸುವೆ. ಈ ಲೇಖನಗಳ ಸಂಗ್ರಹದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿಯಲ್ಲಿನ ಲೇಖನಗಳಲ್ಲಿ ಹೆಚ್ಚಾಗಿ ಶರಣರ ಸ್ಮಾರಕಗಳ ಬಗ್ಗೆ ಹೆಚ್ಚಾಗಿ ಕಾಣಬಹುದು. ಬೆಟ್ಟ ಬಾಲ ಕುಂದಾದಲ್ಲಿ 'ಬಾಲಸಂಗಯ್ಯನ' ಸಮಾಧಿಯ ಮೇಲೆ ಚಿಕ್ಕಮಗುವಿನ ಗುರುತಿದೆ ಎಂಬುದು ಕೇಳಿ ನೋಡಬೇಕು ಎಂಬ ಹಂಬಲವಾಗಿತ್ತು. ಅಲ್ಲಿಗೆ ಹೋಗಿ ಬರುವಷ್ಟರಲ್ಲಿ ಶ್ರೀ ಶಿವರಂಜನ್ ಸತ್ಯಂಪೇಟೆಯವರು 'ಶರಣಮಾರ್ಗ' ಮಾಸಪತ್ರಿಕೆಗೆ ಪ್ರತಿ ತಿಂಗಳು ಒಂದು ಲೇಖನ ಕಳಿಸುವಂತೆ ಕೇಳಿದರು. ಆಮೇಲೆ ಸಾಧ್ಯವಾದಷ್ಟು ಶರಣರ ಸ್ಮಾರಕಗಳನ್ನು ನೋಡುತ್ತಾ ಲೇಖನಗಳನ್ನು ಬರೆಯುಲು ಪ್ರೋತ್ಸಾಹ ಸಿಕ್ಕಿತು. ನನ್ನ ಲೇಖನಗಳನ್ನು ಶರಣಮಾರ್ಗ, ಬಸವಪಥ, ಮಹಾಮನೆ, ಶಾಂತಿಕಿರಣ, ಬಸವಕಿರಣ, ಸಿದ್ಧಗಂಗಾಶ್ರೀಗಳವರ ಮಾಸಪತ್ರಿಕೆ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಿಸಿದ ಸಂಪಾದಕರಿಗೂ ಹಾಗೂ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುವ ಸಹೃದಯರೆಲ್ಲರಿಗೂ ಶರಣು- ಶರಣಾರ್ಥಿ.

– ಜಯಶ್ರೀ ಪಿ. ಸುಕಾಲೆ

ಮುನ್ನುಡಿ

ಖಗೋಳದಲ್ಲಿ ಇರುವುದು ಒಂದೇ ಧ್ರುವ ನಕ್ಷತ್ರ, ಆದರೆ ಲಿಂಗಾಯತ ಧರ್ಮದಲ್ಲಿ ಅನೇಕ ಧ್ರುವ ನಕ್ಷತ್ರಗಳಿವೆ. ಶರಣೆ ಜಯಶ್ರೀ ಸುಕಾಲೆ ರಚಿಸಿರುವ ಶರಣ ಸೌರಭ ಕೆಲವು ಧ್ರುವನಕ್ಷತ್ರ ಪ್ರಾಯರಾದ ಶರಣರ ಜೀವನವನ್ನೂ ಅವರ ರತ್ನಪ್ರಾಯವಾದ ಆದರ್ಶಗಳನ್ನೂ ಬಿಂಬಿಸುವ ಒಂದು ಪ್ರಾಮಾಣಿಕ ಪ್ರಯತ್ನ.

ಜಂಗಮ ದಾಸೋಹದಲ್ಲಿ ನಿರತರಾಗಿದ್ದ ಗಂಗಾಂಬಿಕೆ, ನೀಲಾಂಬಿಕೆ ಮುಂತಾದವರು ಬಾಲಸಂಗಯ್ಯನ ಅಪಮೃತ್ಯು ಸುದ್ದಿಯನ್ನು ಕೇಳಿದರೂ ದುಃಖವನ್ನು ತಡೆದುಕೊಂಡು, ದಾಸೋಹಕ್ಕೆ ಚ್ಯುತಿ ಬಾರದಂತೆ ವರ್ತಿಸುವುದು; ಮೇದಾರ ಕೇತಯ್ಯ ಬಿದಿರು ಕಡಿಯುವಾಗ ಚಿನ್ನ ಸಿಕ್ಕಿದರೂ ಅದು ಕಾಯಕದಿಂದ ಬಂದದ್ದಲ್ಲವೆಂಬ ಕಾರಣಕ್ಕೆ ಅದನ್ನು ಕಡೆಗಣಿಸುವುದು; ಯಾವುದೇ ಕಾರಣಕ್ಕೂ ದೇವರನ್ನು ಬೇಡಬಾರದೆಂಬ ಲದ್ದೆಯ ಸೋಮನ ಛಲ ಮತ್ತು ನಿರ್ಲಿಪ್ತತೆ; ಹಡಪದ ಅಪ್ಪಣ್ಣನ ಬಸವ ನಿಷ್ಠೆ; ಇವುಗಳನ್ನು ಮನದಟ್ಟಾಗುವಂತೆ ವಿವರಿಸುವ ಸುಕಲೆ ಸುಕಾಲೆಯವರದು. ಕುಂಬಾರ ಗುಂಡಯ್ಯನ ಕಾಯಕ ನಿಷ್ಠೆಯ ಬಗ್ಗೆ ಬರೆಯುವಾಗ ಅವರು ಶಿವ ಬಂದು ಎದುರಿಗೆ ಕುಣಿಯುತ್ತಿದ್ದರೂ ಮಣ್ಣು ಹದ ಮಾಡುತ್ತಿದ್ದ ಗುಂಡಯ್ಯನಿಗೆ ಅದು ಗೊತ್ತಾಗಲಿಲ್ಲವಂತೆ, ಎನ್ನುತ್ತಾರೆ. ಅವನ ಹೆಂಡತಿ ಕೇತಲದೇವಿಯೂ ವಚನಕಾರ್ತಿ. ಮಡಕೆಯ ಮಾಡಲು ಮಣ್ಣು ಹದವಾದಂತೆ ಶಿವಾರ್ಪಿತವಾಗಲು ಮಾನವ ಜೀವನವು ಆಧ್ಯಾತ್ಮಿಕ ಸಾಧನೆಯಲ್ಲಿ ಹದವಾಗಿರಬೇಕು ಎಂಬುದು ಆಕೆಯ ನಿಲವು. ಕಾಶ್ಮೀರದ ಮಹಾದೇವ ಭೂಪಾಲನ ತಂಗಿ ಬೊಂತಾದೇವಿ ಬರೆದಿರುವ ವಚನಗಳು ಅಧ್ಯಯನ ಯೋಗ್ಯ ಎಲ್ಲರ ಆತ್ಮಗಳು ಬ್ರಹ್ಮವೇ ಎಂದು ಸಾರಿದ ಉಪನಿಷತ್ಕಾರರು, ಬಾದರಾಯಣ ಮತ್ತು ವೇದಾಂತಾ ಚಾರ್ಯರು ಶೂದ್ರರಿಗೂ ಅಸ್ಪೃಶ್ಯರಿಗೂ ಮೋಕ್ಷವಿಲ್ಲವೆನ್ನುತ್ತಾರೆ. ಇದನ್ನು ಧಿಕ್ಕರಿಸುತ್ತ ಬೊಂತಾದೇವಿ 'ಊರ ಒಳಗಣ ಬಯಲು ಊರ ಹೊರಗಣ ಬಯಲು ಎಂದುಂಟೆ? ಊರೊಳಗಣ ಬ್ರಾಹ್ಮಣ ಬಯಲು ಊರಹೊರಗೆ ಹೊಲೆ ಬಯಲೆಂದುಂಟೆ?' ಎಂದು ಕೇಳುತ್ತಾಳೆ. ಎಲ್ಲಿ ನೋಡಿದರೂ ಒಂದೇ ಬಯಲು (= ಒಂದೇ ಬ್ರಹ್ಮ) ಇರುವಾಗ ಈ ತರ-ತಮ ಏಕೆ? ಎಂಬುದು ಆಕೆಯ ಪ್ರಶ್ನೆ. ಇವನ್ನೆಲ್ಲ ಮನೋಜ್ಞವಾಗಿ ಇಲ್ಲಿ ವಿವರಿಸಲಾಗಿದೆ.

ಶರಣೆ ಸುಕಾಲೆಯವರಿಗೆ ಬಸವಣ್ಣನವರ ಮೇಲೆ ವಿಶೇಷ ಭಕ್ತಿ. ಪ್ರಾಯಶಃ ಬಸವಣ್ಣನವರನ್ನು ಪ್ರೀತಿಸದ, ಶ್ಲಾಘಿಸದ ವ್ಯಕ್ತಿಗಳು ಇಲ್ಲ – ಹೊಟ್ಟೆಕಿಚ್ಚಿನ ಪಂಚಾಚಾರ್ಯರು ಮತ್ತು ಅವರ ಅನುಯಾಯಿಗಳನ್ನು ಬಿಟ್ಟರೆ. ಶರಣೆ ಸುಕಾಲೆಯವರು ಬಸವಣ್ಣನವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಮೊದಲು ಪ್ರಸ್ತಾಪಿಸಿ ಅವರ ಶ್ಲಾಘನೀಯ ಅನುಕರಣೀಯ ಘನಸಿದ್ಧಾಂತಗಳನ್ನು ಪ್ರಸ್ತಾಪಿಸುತ್ತಾರೆ. ಲಿಂಗಾಯತ ಧರ್ಮದ ಸಂಸ್ಥಾಪಕ, ಇಷ್ಟಲಿಂಗ ಜನಕ, ಎಂದು ಅವರನ್ನು ವರ್ಣಿಸುವುದಲ್ಲದೆ ಅವರು ಇಷ್ಟಲಿಂಗ ಪ್ರದಾನದ ಮೂಲಕ ಜನರಲ್ಲಿ ಸಮಾನತೆಯ ಭಾವವನ್ನು ಉಂಟು ಮಾಡಿದುದಕ್ಕೂ ಜನರು ಗುಡಿಗಳಿಗೆ ಹೋಗಿ ದೇ ವರಿಗೆ ಹಣ ಒಡವೆ ಜಮೀನುಗಳನ್ನು ಅರ್ಪಿಸುವುದರ ಬದಲು ಸತ್ಕಾಯಕದಿಂದ ಬಂದ ದ್ರವ್ಯವನ್ನು ಇಲ್ಲದವರಿಗೆ ದಾಸೋಹ ಮಾಡುವುದಕ್ಕೂ ಒತ್ತುಕೊಟ್ಟರೆಂಬುದನ್ನು ಪ್ರಸ್ತಾಪಿಸಿದ್ದಾರೆ. ಅನುಭವಮಂಟಪ ಸ್ಥಾಪಿಸಿ ಎಲ್ಲರಿಗೂ ಮಾತನಾಡುವ ಸ್ವಾತಂತ್ರ್ಯಗ ಕೊಟ್ಟಿದುದನ್ನೂ ಎಲ್ಲ ಕಾಯಕಗಳು ಸಮಾನ, ಕಾಯಕದಲ್ಲೇ ಆಧ್ಯಾತ್ಮವನ್ನು ಕಾಣಬೇಕು, ಎಂದುದನ್ನೂ, ಮೋಳಿಗೆ ಮಾರಯ್ಯ, ನುಲಿಯ ಚಂದಯ್ಯ ಎಂಬ ಕಾಯಕ ತತ್ವದ ತೀವ್ರ ಪ್ರತಿಪಾದಕರು ಕಾಯಕದಲ್ಲಿ ನಿರತನಾದವನು ಗುರುಲಿಂಗ ಜಂಗಮರನ್ನು ಮರೆಯಬೇಕು ಎಂದುದನ್ನೂ ಶರಣೆ ಸುಕಾಲೆ ಮನಸಾರೆ ಶ್ಲಾಘಿಸಿದ್ದಾರೆ.

ಸಂಗ್ರಹ ದಾಸೋಹಕ್ಕೆ ವಿರುದ್ಧ. ದಾಸೋಹವಿದ್ದರೆ ಬಡತನವೂ ಇಲ್ಲ, ಸಿರಿತನವೂ ಇಲ್ಲ. ಕಾಯಕದ ಉದ್ದೇಶ ದಾಸೋಹವೇ ಹೊರತು ಕೈಲಾಸ, ಮೋಕ್ಷವಲ್ಲ. ಕಾಯಕವೇ ಕೈಲಾಸ.

ಬಸವಣ್ಣನವರು ಇಷ್ಟಲಿಂಗದ ಮೂಲಕ ತಂದ ಸಮಾನತೆಯಿಂದಾಗಿ ಶೂದ್ರರು, ಪಂಚಮರು ಮತ್ತು ಸ್ತ್ರೀಯರು ಧೈರ್ಯವಾಗಿ ತಮ್ಮ ಅಭಿಪ್ರಾಯಗಳನ್ನು ವಚನಗಳ ಮೂಲಕ ವ್ಯಕ್ತಪಡಿಸಿದರು. ಬಸವಣ್ಣ ಚೆನ್ನಬಸವಣ್ಣ ಮುಂತಾದ ಕೆಲವೇ ಕೆಲವು ಶರಣರನ್ನು ಬಿಟ್ಟರೆ ಉಳಿದ 225 ವಚನಕಾರರೆಲ್ಲ ಶೂದ್ರರು, ಪಂಚಮರು. ಸುಮಾರು 33 ವಚನಕಾರ್ತಿಯರಿದ್ದರು. ಪ್ರಪಂಚದಲ್ಲಿ ಒಟ್ಟಿಗೆ ಇಷ್ಟೊಂದು ಜನ ಸಾಹಿತ್ಯ ಕೃಷಿಯಲ್ಲಿ ನಿರತರಾದ ಉದಾಹರಣೆ ಮತ್ತೊಂದು ಇಲ್ಲ.

ಬಸವಣ್ಣನವರ ಸಿದ್ಧಾಂತಕ್ಕೆ ಮಾರುಹೋದ ಕಾಶ್ಮೀರದ ರಾಜ ರಾಣಿಯರು (ಮೋಳಿಗೆ ಮಾರಯ್ಯ ಮತ್ತು ಮಹಾದೇವಿ) ಕಲ್ಯಾಣಕ್ಕೆ ಬಂದು ನೆಲೆಸಿದರು. ಮಾರಯ್ಯ ಆ ಸಿದ್ಧಾಂತಕ್ಕನುಗುಣವಾಗಿ ಕಾಡಿನಿಂದ ಸೌದೆ ತಂದು ಮಾರಿ, ಬಂದ ಹಣದಲ್ಲಿ ದಾಸೋಹ ಮಾಡುವುದು ದಂಪತಿಗಳ ಧರ್ಮವಾಗಿತ್ತು. ಬಸವಣ್ಣನವರು ಗೌಪ್ಯವಾಗಿ ಇಟ್ಟ ಚಿನ್ನವನ್ನು ಧಿಕ್ಕರಿಸಿದ ಮಹಾನುಭಾವ ಈ ಮಾರಯ್ಯ. ಕಲ್ಯಾಣದಲ್ಲಿ

ರಕ್ತಪಾತವಾದಾಗ ತಾನು ಕೈಲಾಸಕ್ಕೆ ಹೋಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದಾಗ ಮಹಾದೇವಿ 'ಕೈಲಾಸವೇನು ನಿಮ್ಮ ಭಕ್ತಿಯ ಕೂಲಿಯೇ? ಬಯಲಲ್ಲಿ ಒಂದಾಗಿ' ಎಂದು ನಿಷ್ಠುರವಾಗಿ ಎಚ್ಚರಿಸುತ್ತಾಳೆ.

12ನೇ ಶತಮಾನದ ಶರಣರ ಬಗ್ಗೆ ಬರೆಯುವಾಗ ಕೇವಲ ವಚನಗಳನ್ನು ಅವಲಂಬಿಸದೆ, ಕ್ಷೇತ್ರ ಸಂಶೋಧನೆಯನ್ನೂ ಸರ್ವಜ್ಞನ ವಚನ, ಜಾನಪದ ಸಾಹಿತ್ಯವನ್ನೂ ಬಳಸಿಕೊಂಡು ಶರಣೆ ಸುಕಾಲೆಯವರು ತಮ್ಮ ಬರಹಕ್ಕೆ ನಿಸ್ಸಂದೇಹತ್ವವನ್ನು ಒದಗಿಸಿದ್ದಾರೆ.

ಸುಕಾಲೆಯವರು ಶರಣರ ಬಗ್ಗೆಯೂ ಅಲ್ಲದೆ ಅಷ್ಟಾವರಣಗಳ ಬಗ್ಗೆಯೂ ಶರಣೆಯರ ಬಗ್ಗೆಯೂ ಬರೆದಿದ್ದಾರೆ. ಶರಣೆಯರು ತಮ್ಮ ಸಮಾನತೆ ಮತ್ತು ವಾಕ್ಸ್ವಾತಂತ್ರವನ್ನು ಸದ್ಬಳಕೆ ಮಾಡಿದರು. ಸುಕಾಲೆಯವರು ದಾರಿಯಲ್ಲಿ ಬಿದ್ದಿದ್ದ ವಸ್ತುವನಾಗಲಿ ಗಂಡ ಅತಿ ಆಸೆಯಿಂದ ತಂದ ಹೆಚ್ಚಿನ ಪದಾರ್ಥಗಳನ್ನಾಗಲಿ ಮುಟ್ಟದ, ಹೆಚ್ಚಿನದನ್ನು ಹಿಂದಿರುಗಿಸುವಂತೆ ಆದೇಶಿಸುವ, ಪುರುಷರ ಅನಾಚಾರಗಳನ್ನು ಧೈರ್ಯವಾಗಿ ಖಂಡಿಸುವ, ಹೆಣ್ಣನ್ನು ಅಧ್ಯಾತ್ಮಕ್ಕೆ ಅಡ್ಡಿಯಲ್ಲವೆಂದು ಘೋಷಿಸುವ ಅವೈಚಾರಿಕ ವ್ರತಗಳನ್ನು ಪ್ರಶ್ನಿಸುವ ವಚನಕಾರ್ತಿಯರನ್ನು ಶ್ಲಾಘಿಸಿದ್ದಾರೆ.

ವಚನಕಾರರ ಅರ್ಥಶಾಸ್ತ್ರದ ಬಗ್ಗೆಯೂ ಬರೆಯುತ್ತಾ ಕಾರ್ಲ್ಮಾರ್ಕ್ಸ್, ಶರಣರ ವೈಚಾರಿಕತೆಗೂ ಶರಣ ಸೌರಭದಲ್ಲಿ ಜಾಗ ಕಲ್ಪಿಸಲಾಗಿದೆ. ಜಗತ್ತಿನ ಸೃಷ್ಟಿಕರ್ತ ಒಬ್ಬನೇ ಎಂದು ಒಪ್ಪಿಕೊಂಡ ಮೇಲೆ, ಮೊರ, ಮಡಕೆ, ಹಣಿಗೆ ಮುಂತಾದ ನಿರ್ಜೀವ ವಸ್ತುಗಳನ್ನೂ ಬ್ರಹ್ಮ, ವಿಷ್ಣು ಮುಂತಾದ ಹಲವಾರು ದೈವಗಳನ್ನೂ ಪೂಜಿಸುವುದು ಅವೈಚಾರಿಕವೆಂದು ಅವರು ತೋರಿಸಿ ಕೊಟ್ಟಿದ್ದಾರೆ; ಬಂಡಿ ತುಂಬ ಪತ್ರ ತಂದು ಪೂಜಿಸುವುದನ್ನೂ ಅವೈಚಾರಿಕ ವ್ರತ ನೇಮಗಳ ಆಚರಣೆಯನ್ನೂ ಹೆಣ್ಣು ಹೊನ್ನು ಮಾಯೆ ಎಂಬುದನ್ನೂ ಗುಡಿ ಅರ್ಚಕ ಪದ್ಧತಿಯನ್ನೂ ಖಂಡಿಸಿದ್ದಾರೆ.

ಪುರಾತನರನ್ನೂ ಅಲ್ಲದೆ ಲಿಂಗಾಯತ ಸಮಾಜಕ್ಕೆ ತಮ್ಮ ಶ್ರೇಷ್ಠ ಕೊಡುಗೆ ನೀಡಿದ ಧ್ರುವತಾರೆಯರನ್ನೂ ಶರಣೆ ಸುಕಾಲೆಯವರು ನಮ್ಮ ಗಮನಕ್ಕೆ ತರುತ್ತಾರೆ. 1974ನೇ ಇಸವಿಯಲ್ಲಿ ಗದುಗಿನ ತೋಂಟದಾರ್ಯ ಮಠಕ್ಕೆ 19ನೇ ಪೀಠಾಧಿಕಾರಿಗಳಾಗಿ ಬಂದ ಪೂಜ್ಯ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳನ್ನೂ ಅವರು ಮೊದಲು ಪ್ರಸ್ತಾಪಿದ್ದಾರೆ. ತಮ್ಮ ಪ್ರವೃತ್ತಿಯಿಂದಾಗಿ ಜನಾನುರಾಗಿಗಳಾಗಿದ್ದ ಪೂಜ್ಯರು ಹೋರಾಟದ ಸ್ವಾಮಿಗಳು, ಕನ್ನಡದ ಜಗದ್ಗುರು, ಪುಸ್ತಕಗಳ ಸ್ವಾಮಿಗಳು ಎಂಬ ಹೆಸರಿಗೆ ಪಾತ್ರರಾಗಿದ್ದಾರಲ್ಲದೆ ಮಾತೃ ಹೃದಯದವರೆಂಬ ಹೆಸರಿಗೂ ಪಾತ್ರರಾಗಿದ್ದರು.

ಬಸವಣ್ಣನವರ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತಂದಿದ್ದ ಪೂಜ್ಯರು ಬಡ ಭಕ್ತರ ಮನೆಗೆ ದವಸ ಔಷಧಿ ಬಟ್ಟೆಗಳನ್ನು ಕಳಿಸಿಕೊಡುತ್ತಿದ್ದರು. ಸ್ವಾಮಿಜಿಯವರ ವೈಶಿಷ್ಟ್ಯವೆಂದರೆ ಸ್ಪಷ್ಟತೆ, ವೈಚಾರಿಕತೆ ಮತ್ತು ಧೈರ್ಯ. ಪ್ರಶಂಸಿಸಬೇಕಾದರಾಗಲಿ, ಖಂಡಿಸಬೇಕಾದರಾಗಲಿ ಅವರಿಗೆ ಯಾರ ಮುಲಾಜೂ ಇರುತ್ತಿರಲಿಲ್ಲ.

ಲಿಂಗಾಯತ ಸಮಾಜದ ಮತ್ತೊಂದು ಸಾಲುದೀಪವೆಂದರೆ ಸಿದ್ಧಗಂಗಾ ಮಠದ ಪೂಜ್ಯ (ಲಿಂ) ಶಿವಕುಮಾರ ಸ್ವಾಮಿಗಳು. ಗೋಸಲ ಸಿದ್ಧೇಶ್ವರರಿಂದ ಪ್ರಾರಂಭವಾದ ಶ್ರೀಮಠದ ಒಲೆ ಭಕ್ತರ ದಾಸೋಹಕ್ಕಾಗಿ ಇಂದಿನವರೆಗೂ ಬಿಡುವಿಲ್ಲದೆ ಉರಿಯುತ್ತಲೇ ಇದೆ. 20ನೇ ಸಮಾನದ ಅಗತ್ಯವನ್ನು ಕಂಡುಕೊಂಡ ಪೂಜ್ಯ ಶಿವಕುಮಾರ ಸ್ವಾಮಿಗಳು ಕೆಲವರ ಸ್ವತ್ತಾಗಿದ್ದ ವಿದ್ಯೆಯನ್ನು ಎಲ್ಲ ಬಡ ಶೂದ್ರ ಮತ್ತು ಪಂಚಮರ ಮಕ್ಕಳಿಗೂ ದಾಸೋಹ ಮಾಡಿದರು. ಇಂದಿಗೂ ಪ್ರತಿ ದಿನ 10,000 ಬಡಮಕ್ಕಳಿಗೆ ಅನ್ನದಾಸೋಹ ಮಾಡುತ್ತಿರುವ ಮಠ ಶ್ರೀಗಳ ಹಾಕಿ ಕೊಟ್ಟ ಮೇಲ್ಪಂಕ್ತಿಯಾಗಿದೆ. ಬಸವಣ್ಣನವರತತ್ವಗಳನ್ನು ಮೈಗೂಡಿಸಿಕೊಂಡಿದ್ದ ಶ್ರೀಗಳು ಮೊದಲಿಗೆ ಭಿಕ್ಷ ಬೇಡಿ ಬಡ ವಿದ್ಯಾರ್ಥಿಗಳಿಗೆ ಅನ್ನ ನೀಡುತ್ತಿದ್ದರಂತೆ. ಶಿಶುವಿಹಾರದಿಂದ ಹಿಡಿದು ಎಂ. ಟೆಕ್ವರೆಗೂ ಜ್ಞಾನದಾಸೋಹ ಮಾಡುವ ಪೂಜ್ಯರ ಸಾಹಸ ಮೆಚ್ಚತಕ್ಕದ್ದೆ.

ಶರಣೆ ಸುಕಾಲೆಯವರ ಲೇಖನಿಯಿಂದ ಇನ್ನೂ ಒಳ್ಳೆಯ ಕೃತಿಗಳು ಬರಲಿ.

–ಎನ್. ಜಿ.ಮಹಾದೇವಪ್ಪ

ಪರಿವಿಡಿ

ಶರಣ ಸೌರಭ

ವಚನಗಳಲ್ಲಿ ಸಹಬಾಳ್ವೆಯ ಪಾಠ

ಬಸವಾದಿ ಶರಣರ ಸಮಗ್ರ ವಚನಗಳು ಜೀವಜಗತ್ತಿನ ಸಂರಕ್ಷಣೆ ಮಾಡುವುದನ್ನು ತಿಳಿಸಿಕೊಡುವ ತತ್ವಗಳಾಗಿವೆ. ಸತ್ಯಶುದ್ಧ ಕಾಯಕ ದಾಸೋಹದೊಂದಿಗೆ ಈ ಮಹಾಮನೆಯನ್ನು ರಕ್ಷಿಸುವ ಜವಾಬ್ದಾರಿ ಮತ್ತು 'ನದಿಯೊಳಗೆ ನದಿ ಬೆರಸಿದಂತೆ' ಭಾವಕ್ಯದೊಂದಿಗೆ ಬದುಕುತ್ತ ವಿಶ್ವ ಸಾಮರಸ್ಯದ ಮೂಲಕ ಜನಸಮುದಾಯವನ್ನು ಭ್ರಮಾತ್ಮಕ ಲೋಕದಿಂದ ದೂರ ಸರಿಸುತ್ತ ಹೊಸ ತತ್ವವ ಕೊಟ್ಟು, ಸಕಲಜೀವಿಗಳ ಜೊತೆ ಏಕತ್ವವನ್ನು ಸಾಧಿಸಿದರು. ಅಂತೆಯೆ ಪ್ರಸಿದ್ಧವಾದ ಬಸವಣ್ಣನವರ ಈ ವಚನವು ಧರ್ಮದ ಮೂಲಭೂತ ಲಕ್ಷಣವನ್ನು ಸೂತ್ರರೂಪವಾಗಿ ನಿರೂಪಿಸುತ್ತದೆ.

"ದಯವಿಲ್ಲದ ಧರ್ಮವದೇವುದಯ್ಯಾ ದಯವೇ ಬೇಕು
ಸಕಲಪ್ರಾಣಿಗಳೆಲ್ಲರಲ್ಲಿಯು. ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ."

ದಯೆಯಿಲ್ಲದ ಧರ್ಮ ಏನನ್ನು ತಾನೇ ಮಾಡಬಲ್ಲದು? ಅದರಿಂದ ಪ್ರಯೋಜನವೇನು ? ಸಕಲಪ್ರಾಣಿಗಳೆಲ್ಲರಲ್ಲಿಯೂ ದಯೆಯನ್ನು ತೋರಿಸಬೇಕು. ಅಂತಹ ದಯೆವೇ ಧರ್ಮದ ಮೂಲ. ದಯವಿಲ್ಲದ ಧರ್ಮವನ್ನು ದೇವನಿಗೆ ಒಪ್ಪಿಗೆಯಾಗುವುದಿಲ್ಲ.ಎಂಬ ನಿಜದ ನಿಲುವನ್ನು ತಾಳುವುದರ ಮೂಲಕ ಮಾನವರು ಜಾತಿ, ಕುಲ, ಮತ, ಪಂಥ, ದೇಶ, ಭಾಷೆ ಮುಂತಾದವುಗಳಿಂದ ಹೊರಬಂದು ಮಾನವಧರ್ಮವನ್ನು ಪಾಲಿಸುತ್ತ ಸರ್ವಸಮತ್ವದ ಬದುಕನ್ನು ಬದುಕಬೇಕು ಎಂಬುದೇ ಬಸವಣ್ಣನವರ ಆಶಯವಾಗಿತ್ತು. ತುಳಿತಕ್ಕೊಳಗಾದ ದುಡಿಯುವ ಜನರನ್ನು ಒಂದು ಗೂಡಿಸುತ್ತ ಅವರ ಸಮೂಹಶಕ್ತಿಯಿಂದ ಮಾತ್ರ ಹೊಸ ಜಗತ್ತನ್ನು ನಿರ್ಮಾಣ

ಮಾಡಲು ಸಾಧ್ಯ ಎಂಬುದನ್ನು ವಿಶ್ವದಲ್ಲೇ ಮೊದಲ ಬಾರಿಗೆ ಕಂಡುಕೊಂಡವರೆಂದರೆ ಬಸವಣ್ಣನವರು.

ಜೇಡರ ದಾಸಿಮಯ್ಯನವರು ತಮ್ಮ ವಚನದಲ್ಲಿ "ಇಂದಿಂಗೆಂತು ನಾಳಿಗೆಂತೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೆ? ರಾಮನಾಥ" ಎನ್ನುತ್ತಾರೆ. ಶರಣರು ಇಂದಿಂಗೆ ನಾಳಿಂಗೆ ಎನ್ನದೆ, ಬಂದ ತತ್ಕಾಲಕ್ಕೆ ಉಂಟು ಎಂದು ಹೇಳುತ್ತ, ವಸ್ತುಮೋಹದಿಂದ ದೂರ ಉಳಿಯುವ ಶಕ್ತಿ ಸಾಮರ್ಥ್ಯವನ್ನು ಹೊಂದಿದ್ದರು. ವಸ್ತುಮೋಹ ಎಂಬುದು ಬಲಾಢ್ಯರ, ಧನಾಢ್ಯರ ಮತ್ತು ಸಾಮ್ರಾಜ್ಯಶಾಹಿಗಳ ಮನದಾಳದಲ್ಲಿ ಇರುತ್ತದೆ. ಸಂಪತ್ತು ಹೆಚ್ಚಿದಷ್ಟೂ ಸಾಮ್ರಾಜ್ಯ ವಿಸ್ತರಣೆಯಾದಷ್ಟೂ ಅವರ ದಾಹ ಹೆಚ್ಚಾಗುತ್ತಲೇ ಹೋಗುತ್ತದೆ. ಅವರು ಪರರನ್ನು ಶೋಷಿಸುವ ಮೂಲಕ ಸಂಪತ್ತಿನ ವಿಸ್ತರಣೆ ಮಾಡುತ್ತ ಹೋಗುತ್ತಾರೆ. ಆದರೆ ಶಿವಭಕ್ತರು ತಮ್ಮ ಸ್ವಕಾಯಕದ ಮೇಲೆ ಅವಲಂಬಿತರಾಗಿರುತ್ತಾರೆ. ತಮ್ಮ ಗಳಿಕೆಯಲ್ಲಿ ಬೇಕಾದಷ್ಟನ್ನು ಮಾತ್ರ ಪ್ರಸಾದವೆಂದು ಸ್ವೀಕರಿಸಿ ಉಳಿದೆಲ್ಲವನ್ನು ದಾಸೋಹ ರೂಪದಲ್ಲಿ ಶರಣಸಂಕುಲಕ್ಕೆ ಅರ್ಪಿಸುತ್ತಾರೆ. ಹೀಗೆ ಮಾಡುವುದರಿಂದ ಯಾರೊಬ್ಬರ ಬಳಿಯೂ ಸಂಪತ್ತಿನ ಸಂಗ್ರಹಣೆ ಇರುವುದಿಲ್ಲ. ಶರಣರ ಶಿವನಿಧಿಯಲ್ಲಿ ಸಂಗ್ರಹವಾದ ಸಂಪತ್ತು, ಏನಿದ್ದರೂ ಇಡೀ ಸಮಾಜದ ಬಳಕೆಗೆ ಬರುವಂಥ ಶಿವನಿಧಿಯಾಗಿತ್ತು.

ಬಸವಣ್ಣನವರು ಯಾವುದರಲ್ಲೂ ಭೇದ ಮಾಡುತ್ತಿರಲಿಲ್ಲ ಒಬ್ಬ ಪ್ರಧಾನಮಂತ್ರಿಯಾಗಿದ್ದರೂ ಎಂಥ ಸಮಭಾವ ಸಹಬಾಳ್ವೆಯಿತ್ತು, ಸರ್ವೆ ಸಾಮಾನ್ಯವಾಗಿ ಎಲ್ಲರ ಜೊತೆಗೆ ಕುಳಿತು ಪ್ರಸಾದ ಸ್ವೀಕರಿಸುತ್ತಿದ್ದರು ಎನ್ನುವುದಕ್ಕೆ ಅವರ ವಚನದಲ್ಲಿಯೆ ನೋಡಬಹುದಾಗಿದೆ.

"ಹರಗಣಪಂಕ್ತಿಯ ನಡುವೆ ಕುಳ್ಳಿರ್ದು
ನಾನು–ಒಡೆತನದ ನಾಯಿತೇಜವ ಹೊತ್ತುಕೊಂಡು
ಮಡದಿಯೆನ್ನಗಲೊಳಗೆ ಸಕಲದೇವಾನ್ನವ
ಒಡೆಯರಿಂದಲೂ ಮಿಗಿಲಾಗಿ ಇಕ್ಕಲು, ತೆಗೆದಿರಿಸಿದೆನು !
ಈ ಪರಿಯ ಆಯ ಕಣ್ಗೆ ತೋರಲು ಕಿಲ್ಬಿಷವಾದವು !
ಕರುಣಿ ಚನ್ನಬಸವಣ್ಣನ ಮರೆದು ಕೊಂಡೆನಾದಡೆ
ಒಡೆಯ ಕೂಡಲಸಂಗಯ್ಯ ಕೆಡಹಿ ನರಕದಲ್ಲಿಕ್ಕುವ !"

–ಬಸವಣ್ಣನವರು.

ಶರಣರೆಲ್ಲರೊಡನೆ ಪ್ರಸಾದ ಸ್ವೀಕಾರಕ್ಕಾಗಿ ಕುಳಿತಿದ್ದಾಗ ಸಹಪಂಕ್ತಿಯಲ್ಲಿ ಪ್ರಸಾದ ಬಡಿಸುವಾಗಲೂ ಕೂಡ ಯಾರಿಗೂ ಹೆಚ್ಚು ಕಡಿಮೆ ನೀಡುವ ಪಂಕ್ತಿಭೇದ ಬರಬಾರದು ಎನ್ನತ್ತಾರೆ ಬಸವಣ್ಣನವರು. ಒಂದು ವೇಳೆ ತನ್ನವರೆಂಬ ಅಭಿಮಾನದಿಂದ ತಟ್ಟೆಯಲ್ಲಿ ಪ್ರಸಾದವನ್ನು ಹೆಚ್ಚಾಗಿ ಬಡಿಸಿದರೆ ಅದು ಪಂಕ್ತಿಭೇದ ತೋರಿದಂತೆ! ನಾನು ಒಡೆತನದ ನಾಯಿತೇಜವನ್ನು ಹೊತ್ತು ಕುಳಿತಂತೆ ! ನನ್ನ ಒಡೆಯರು ಅಂದರೆ ಶರಣರಿಗಿಂತಲೂ ಮಿಗಿಲಾದುದನ್ನು ನನಗೆ ಬಡಿಸಿದರೆ ಅದು ನನ್ನ ಕಣ್ಣಿಗೆ ಅಪರಾಧ, ಕಪಟವೆಂಬಂತೆ ಭಾಸವಾಗುತ್ತದೆ. ಅದಕ್ಕಾಗಿ ಹೆಚ್ಚಿನ ಪ್ರಸಾದವನ್ನು ತೆಗೆದಿರುಸುವೆನು ಎನ್ನುತ್ತಾರೆ. ಆ ಸಮಯದಲ್ಲಿ ಪ್ರಸಾದದ ರಹಸ್ಯ ಬಲ್ಲ ಚನ್ನಬಸವಣ್ಣನವರನ್ನು ಮನದಲ್ಲಿ ಸ್ಮರಿಸುತ್ತೇನೆ. ಬಸವಣ್ಣನವರು ಪ್ರಸಾದದಲ್ಲಿ ಪಕ್ಷಪಾತ ಸಲ್ಲದೆಂಬ ಭಾವದ ಹಿಂದೆ ಅದೆಷ್ಟು ವಿಶಿಷ್ಟವಾದ ಸೂಕ್ಷ್ಮತೆ ಅಡಗಿದೆ ಎಂಬುದನ್ನು ಗ್ರಹಿಸಬೇಕಾಗಿದೆ.

ಬಸವಣ್ಣನವರು ಸಮೂಹ ಪ್ರಜ್ಞೆಯ ಶರಣಸಂಕುಲ ಸೃಷ್ಟಿಸಿದ್ದು. ಮಾನವಕುಲಕ್ಕೆ ಒಳಿತಾಗುವ ವಿಚಾರಗಳು ಜನಮಾನಸವನ್ನು ಹೊಕ್ಕಾಗ, ಸಮೂಹ ಪ್ರಜ್ಞೆಯೊಂದಿಗೆ ಕ್ರಿಯಾಶೀಲವಾಗುತ್ತ ಮಾನವೀಯತೆಯ ಮಹಾದರ್ಶನಕ್ಕೆ ಕಾರಣವಾಗುತ್ತವೆ. ಎಂಬುದನ್ನು ಶರಣರು ಸಾಧಿಸಿ ತೋರಿಸಿದರು. ಬಸವಧರ್ಮದ ಪ್ರಕಾರ ಸರ್ವಸಮತ್ವವನ್ನು ಸಾಧಿಸಿ ವಿಶ್ವಮಾನವನಾಗುವವನೇ ಭಕ್ತನು. ಸರ್ವಸಮತ್ವ ಹೊಂದಿರುವವರ ಮಾತುಗಳು ಎಲ್ಲ ಜೀವಿಗಳ ಪರವಾಗಿರುತ್ತವೆ. ಅವರು ಶಿವಸ್ವರೂಪಿಯೇ ಆಗಿರುತ್ತಾರೆ. ಅಂಥ ಭಕ್ತನ ವಚನದಲ್ಲಿ ದೇವರು ತುಂಬಿಕೊಂಡಿರುತ್ತಾನೆ. ವಚನಗಳು ಸಹಬಾಳ್ವೆಯ ಪಾಠವನ್ನೇ ಕಲಿಸುತ್ತವೆ ಮತ್ತು ಮಾನವರ ಮಧ್ಯೆ ಸಮಾನತೆ ತರುವ ಉದ್ದೇಶದಿಂದಲೆ ಕೂಡಿವೆ.

ನಿಸರ್ಗಧರ್ಮದಲ್ಲಿ ಪ್ರತಿಯೊಂದು ಜೀವಿಗೂ ಅದರದೇ ಆದ ವೈಶಿಷ್ಟ್ಯವಿದೆ. ತನ್ನದೇ ಆದ ಕಾಯಕ, ಜೀವನವಿಧಾನ ಮತ್ತು ವಿಕಾಸಕ್ರಿಯೆಯಲ್ಲಿ ಪಡೆದ ಶಕ್ತಿಯಿಂದಾಗಿ ಪ್ರತಿಯೊಂದು ಜೀವಿ ನಿಸರ್ಗದಲ್ಲಿ ತನ್ನದೇ ಆದ ಮಹತ್ವವನ್ನು ಹೊಂದುವ ಮೂಲಕ ತಾನು ಬದುಕಿರುವುದರ ಸಾರ್ಥಕತೆಯನ್ನು ಸೂಚಿಸುತ್ತದೆ. ಮಾನವ ತನ್ನ ಭೋಗಲಾಲಸೆಯಿಂದ ನಿಸರ್ಗದ ಸುಲಿಗೆಯನ್ನು ನಿರಂತರವಾಗಿ ಮಾಡುತ್ತ ಈ ಭೂಮಿಯನ್ನು ಹದಗೆಡಿಸುತ್ತಿದ್ದಾನೆ. ಎಲ್ಲವನ್ನು ಶೋಷಣೆಗೆ ಒಳಪಡಿಸುತ್ತಿದ್ದಾನೆ. ವಿಕೃತಗೊಳಿಸುತ್ತಿದ್ದಾನೆ. ಇಡೀ ಪರಿಸರ ಅವನ ಅಹಂಕಾರದಿಂದ ಕೂಡಿದ ಕುಕೃತ್ಯದಿಂದಾಗಿ ನಲುಗಿ ಹೋಗಿದೆ. ಎಲ್ಲ ರೀತಿಯ ವೈವಿಧ್ಯಗಳಿಂದ ಕೂಡಿದ ಜೀವಜಗತ್ತನ್ನು ಹೊಂದಿರುವ ಪೃಥ್ವಿಯೇ ನಮ್ಮ ಏಕೈಕ ಮಹಾಮನೆಯಾಗಿದೆ. ಎಂದು ಒಂಬತ್ತು ಶತಮಾನಗಳ ಹಿಂದೆಯೆ ಬಸವಾದಿ ಶರಣರು ಸರಳ ಸಹಜತೆಯಿಂದ

ಕೂಡಿದ ಸಹಬಾಳ್ವೆಯ ಪಾಠ ಕಲಿಸಿದರೂ ನಾವಿನ್ನೂ ಅದರ ಮಹತ್ವವನ್ನು ಅರಿಯದೇ ಸಾಗುತ್ತಿದ್ದೇವೆ.

"ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಪಂಪನ ಮಾತಿನಂತೆ, ಮುನುಷ್ಯ ಜಾತಿ ಒಂದೇ ಸತ್ಯ ಎಂದು ತಿಳಿದು ಭಾರತೀಯರೆಲ್ಲ ಜಾತಿ ಮತಗಳನ್ನು ದೂರ ಸರಿಸಿ ಒಂದಾಗಬೇಕು. ದೇಶದ ನೆಲ, ಜಲ, ಪ್ರಾಣಿ, ಪಕ್ಷಿ, ಸಸ್ಯಸಂಕುಲ ಮತ್ತು ಮಾನವರ ಒಳಿತಿಗಾಗಿ ಕರ್ತವ್ಯ ನಿಭಾಯಿಸುವ ಕಡೆಗೆ ಗಮನ ಹರಿಸಬೇಕು. ದುಷ್ಟ ಶಕ್ತಿಗಳು ಜನರನ್ನು ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಬೇರ್ಪಡಿಸಿ ಶೋಷಣೆ ಮಾಡುವ ತಂತ್ರಗಳನ್ನು ಅರಿತಾಗ ಮಾತ್ರ ಜನರು ಒಂದಾಗಿ ಬದುಕುತ್ತ ಎಲ್ಲ ಸವಾಲುಗಳನ್ನು ಎದುರಿಸಲು ಸಾಧ್ಯವಾಗುವುದು.

ಮನುಷ್ಯರು ಹೇಗೆ ಶಾಂತಿಯುತ ಸಹಬಾಳ್ವೆ ಮಾಡಬೇಕೇಂದು ಅಕ್ಕ ಮಹಾದೇವಿ ಹೇಳುತ್ತಾಳೆ.

> **"ಆಡುವುದು ಹಾಡುವುದು ಹೇಳುವುದು ಕೇಳುವುದು**
> **ನಡೆವುದು ನುಡಿವುದು**
> **ಸರಸ ಸಮ್ಮೇಳನವಾಗಿಪ್ಪುದಯ್ಯಾ ಶರಣರೊಡನೆ.**
> **ಚೆನ್ನಮಲ್ಲಿಕಾರ್ಜುನಯ್ಯಾ ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ,**
> **ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು."**

–ಅಕ್ಕಮಹಾದೇವಿ

ಅಂದರೆ ಅಕ್ಕ ಮಹಾದೇವಿಯ ಈ ವಚನದಲ್ಲಿ ನಾವು ಭೂಮಿಯ ಮೇಲೆ ಇರುವವರೆಗೆ ಯಾರೊಡನೆ ಹೇಗೆ ಇರಬೇಕು? ಎಂಬ ಪ್ರಶ್ನೆಗೆ ಆಡುವಿಕೆ, ಹಾಡುವಿಕೆ, ಹೇಳುವಿಕೆ, ಕೇಳುವಿಕೆ, ನಡೆಯುವಿಕೆ, ನುಡಿಯುವಿಕೆ ಸರಸ ಸಮ್ಮೇಳನವಾಗಿರುವಿಕೆ ಎಲ್ಲವೂ ಶರಣರೊಡನೆ ಇರಬೇಕು ಎಂಬುದು ಉತ್ತರವಾಗಿದೆ. ಸಕಲಜೀವಾತ್ಮರಿಗೆ ಲೇಸನು ಬಯಸುವವರೆಲ್ಲರೂ ಶರಣರು. ಅಂಥವರ ಸತ್ಸಂಗದಲ್ಲಿ ಮಾನವರು ಜೀವಜಾಲ ಸಮತೋಲನಕ್ಕೆ ಧಕ್ಕೆ ತರದೆ ಬದುಕುವಂಥ ಸಂಸ್ಕಾರವನ್ನು ಪಡೆಯುತ್ತಾರೆ. ಶರಣರು ಲಿಂಗಸುಖಿಗಳು. ಲಿಂಗಸುಖಿಗಳೆಂದರೆ ಎಲ್ಲ ಜೀವಸಂಕುಲದ ಪ್ರತಿಯೊಂದು ಜೀವಿಯ ಒಳಗೆ ದೇವರಿರುವನೆಂಬ ಅರಿವಿನೊಂದಿಗೆ 'ಯಾವುದು ನನ್ನದಲ್ಲ; ಎಲ್ಲವೂ ನಮ್ಮದು' ಎಂದು ಭಾವಿಸಿ ಯಾವುದಕ್ಕೂ ಸಮಸ್ಯೆ ಒಡ್ಡದಂತೆ ಕಾಯಕ ಮಾಡುತ್ತ ಬದುಕುವುದರಲ್ಲಿ ಸುಖ ಕಾಣುವರೊ ಅವರೇ ಶರಣರು. ಅವರು ನುಡಿದಂತೆ ನಡೆಯುತ್ತ ತಮ್ಮ ಸರಳ ಸಹಜ ಬದುಕಿನ ಅನುಭವವನ್ನು ವಚನಗಳ ರೂಪದಲ್ಲಿ ನೀಡಿದವರು.

ಶರಣರ ವಚನ ಚಳವಳಿಯಿಂದಾಗಿ ಕನ್ನಡದ ನೆಲದ ಹನ್ನರಡನೆಯ ಶತಮಾನ ಇಂದಿಗೂ ವಿಶ್ವವಿನೂತನವಾಗಿದೆ. ಪ್ರಜಾಪ್ರಭುತ್ವವಾದಿ ನೆಲೆಯ ಚಿಂತನಮಂಥನಕ್ಕಾಗಿ ಬೇಕಾದ ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ಜನರಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸಿದರು. "ಅನುಭವ ಮಂಟಪ" ಎಂಬುದು ವಿಶಿಷ್ಟವಾದ ಸಮಾಜೋ ಧಾರ್ಮಿಕ ಸಂಸತ್ ಆಗಿತ್ತು. ಅಲ್ಲಿ ಅಸ್ಪೃಶರು ಮೊದಲು ಮಾಡಿ ವಿವಿಧ ಜಾತಿಗಳ ಜನ ಅನುಭವ ಮಂಟಪದಲ್ಲಿದ್ದರು. ಏಳುನೂರಾ ಎಪ್ಪತ್ತು ಅಮರಗಣಂಗಳಲ್ಲಿ ಬಹುಪಾಲು ಜನರು ವಿವಿಧ ಕಾಯಕಜೀವಿಗಳೇ ಆಗಿದ್ದರು. ಲೋಕವೇ ತಾನಾದವನು ಅಂದರೆ ಸರ್ವರಿಗೂ ಒಳಿತನ್ನು ಬಯುಸುವವನು ಮಾತ್ರ ಗಣ ಎಂದು ಕರೆಯಿಸಿಕೊಳ್ಳುತ್ತಾನೆ.

ಎಲ್ಲ ಧರ್ಮ. ಸಿದ್ಧಾಂತ ಮತ್ತು ಜೀವನ ವಿಧಾನಗಳಲ್ಲಿನ ಒಳ್ಳೆಯದನ್ನು ಕ್ರೋಡಿಕರಿಸುತ್ತ ಮಾನವಧರ್ಮವಾಗಿಸಿ ಬದುಕುವುದರಲ್ಲೇ ನಿಜವಾದ ಆನಂದವಿದೆ. ಒಂದು ಧರ್ಮದವರು ಇನ್ನೊಂದು ಧರ್ಮದಲ್ಲಿ ಲೋಪದೋಷಗಳಿವೆ ಎಂದು ಆರೋಪಿಸುತ್ತ ಹೋದಂತೆ, ಮಾನವ ಮಾನವರ ಮಧ್ಯೆ ದ್ವೇಷವೇ ಹರಡುತ್ತದೆ. ಆದರೆ ಎಲ್ಲ ಧರ್ಮಗಳ ಗ್ರಂಥಗಳನ್ನು ಓದುತ್ತ ಅವುಗಳ ಒಳಗಿನ ಜೀವನ ಮತ್ತು ನಿಸರ್ಗ ಪ್ರೀತಿಯನ್ನು ಅರಿತು ಬದುಕಿನಲ್ಲಿ ಅಳವಡಿಸಿಕೊಂಡು ಅದನ್ನೇ ಜನಸಮುದಾಯಗಳಿಗೆ ಅರಿವು ಮೂಡಿಸುತ್ತ "ಸರ್ವರಿಗೆ ಮಂಗಲವಾಗಲಿ' ಎಂದು ಹೇಳುತ್ತ ಹೋದರೆ ದೇಶದೊಳಗಿನ ಆಂತರಿಕ ಹಿಂಸೆ, ಲೂಟಿ ಮತ್ತು ಕೊಲೆ ಸುಲಿಗೆಗಳು ನಿರ್ನಾಮವಾಗುತ್ತವೆ. ಆಗ ದೇಶದ ಸ್ಥಿತಿಗತಿಗಳ ಕಡೆಗೆ ಲಕ್ಷ ಕೊಟ್ಟು ಸರ್ವೋದಯದ ಪ್ರಜ್ಞೆಯಿಂದ ಒಂದಾಗಿ ದುಡಿದಾಗ ನೆಮ್ಮದಿಯ ಬದುಕಾಗುತ್ತದೆ. ಮಾನವರಿಗೆ ದಾರಿದೀಪವಾಗುವ ಸಹಬಾಳ್ವೆಯ ಪಾಠ ಶರಣರ ವಚನಗಳಲ್ಲಿದೆ, ಎಂಬ ಸತ್ಯದ ಅರಿವು ಜಾಗ್ರಮಾಡಿಸುವ ಅಂಶಗಳಿರುವ ವಚನ ಸಾಹಿತ್ಯದ ಕಡೆಗೆ ಗಮನ ಹರಿಸುವ ಅವಶ್ಯಕತೆಯಿದೆ.

******

ಬಸವ ಶಿಶು ಬಾಲಸಂಗಯ್ಯಾ

"ಹನ್ನೆರಡು ಗಾವುದ ವಿಸ್ತರ್ಣ ಪಟ್ಟಣಕ್ಕೆ ಕಲ್ಯಾಣವೆಂಬ ಪ್ರಣತೆ
ಆಪ್ರಣಿತೆಯಲ್ಲಿ ಮಹತ್ತೆಂಬ ಎಣ್ಣೆಯನೆಱೆದು,
ಜ್ಞಾನವೆಂಬ ಜ್ಯೋತಿಯ ಹೊತ್ತಿಸಿ ಒಪ್ಪತ್ತಿದ್ದಿತ್ತಯ್ಯಾ.
ಅಲ್ಲಿ ಕಾಳಯ್ಯ ಚೌಡಯ್ಯ ಕೋಲಶಾಂತಯ್ಯ
ಮೋಗವಾಡದ ಕೇಶಿರಾಜಯ್ಯ ಖಂಡೆಯದ ಬೊಮ್ಮಣ್ಣ
ಮಿಂಡಮಲ್ಲಿನಾಥ ಹಡಪದಪ್ಪಣ್ಣ
ಮಡಿವಾಳಯ್ಯಗಳು ಅವ್ವೆನಾಗಾಯಿಗಳು ಸಹಿತ
ಇವರೆಲ್ಲರೂ ಸಂಗನ ಬಸವಣ್ಣನ ಬಯಲು ಕೂಡಿಹೋದರು.
ಇದು ಕಾರಣ ಕೂಡಲಚೆನ್ನಸಂಗಮ ದೇವರಲ್ಲಿ
ಇವರೆಲ್ಲರ ಪ್ರಸಾದದ ಬಯಲು ಎನಗಾಯಿತ್ತು."

–ಚನ್ನಬಸವಣ್ಣನವರು.

ಚನ್ನಬಸವಣ್ಣನವರು ಕಲ್ಯಾಣದ ವಿಸ್ತೀರ್ಣದ ಬಗ್ಗೆ ಉಲ್ಲೇಖಿಸಿರುವುದನ್ನು ಮೇಲಿನ ವಚನದಲ್ಲಿ ಕಾಣಬಹುದು. ಸುತ್ತು ಹನ್ನೆರಡು ಗಾವುದ ವಿಸ್ತಾರವಾದ ಕಲ್ಯಾಣ ಪಟ್ಟಣವಾಗಿತು. 'ಕಲ್ಯಾಣವೆಂಬ ಮಹಾಘನವೇ ಪಣತಿ' ಸಂಗನ ಬಸವಣ್ಣನವರ ಆಕಾರ ನಿರಾಕಾರವಾಗಿ, ಮಹಾಘನಲಿಂಗದಲ್ಲಿ ಸಮರಸವಾಗಿ ಬೆಳಗನುಟ್ಟು ಬಯಲಾಗಿ ಹೋದರು. ಎಲ್ಲ ಶರಣರು ಲಿಂಗಾಂಗ ಸಾಮರಸ್ಯವಾಗಿ ಬಯಲು ಬಯಲಾಗಿ ಹೋದರೆಂದು ಮತ್ತು ಆ ಶರಣರು ಅನುಗ್ರಹಿಸಿ ತನ್ನ ಅನುಭವಕ್ಕೆ ನೀಡಿದ ಪ್ರಸಾದದ ಬಯಲೇ ಚನ್ನಬಸವಣ್ಣನೆಂಬ ಶಬ್ದ ನಿಶ್ಯಬ್ದವಾಗಿ ಹೋದ ಬಯಲು ಎಂದು ಶರಣರ ಜೀವನದ ಚರಮಗೀತೆಗಳು ಕಲ್ಯಾಣದ ಶರಣರ ಚಿತ್ರಣವನ್ನು ಕಣ್ಣ ಮುಂದೆ ಸುಳಿಯುತ್ತವೆ. ಹೀಗೆ ಕೆಲವು ಐತಿಹಾಸಿಕ ಎನ್ನಬಹುದಾದ ಅಂಶಗಳು ಕಂಡುಬರುತ್ತವೆ.

ಅನೇಕ ಶರಣರ ಐಕ್ಯಸ್ಥಳಗಳು ಬೆಳಕಿಗೆ ಬರದೆ ಸಂಶೋಧನೆಗಾಗಿ ಕಾದಿವೆ ಎಂದು ಹೇಳಬಹುದು.

ಕಲ್ಯಾಣವೆಂಬುದು ಕಾಯಕ ನಿಷ್ಠೆಯ ಕಲ್ಯಾಣವಾಯಿತು. ಅದು ಅನುಭವದಿಂದ ಬಂದ ಅನುಭಾವ ನೀಡುವ ಮತ್ತು ದಾಸೋಹದ ಮಹಾಮನೆಯೂ ಆಗಿ ಪರಿವರ್ತನೆವಾಯಿತು. ಕಲ್ಯಾಣದ ಪ್ರಭಾವ ಎಲ್ಲಾ ಕಡೆಗೂ ಪಸರಿಸಿ ಅದೊಂದು ಮಹಾಚುಂಬಕ ಶಕ್ತಿಯಾಗಿ ತಂಡೋಪ ತಂಡವಾಗಿ ಬಂದ ಜನರನ್ನು ಒಗ್ಗೂಡಿಸಿತು.

ಬಸವಣ್ಣ, ಚನ್ನಬಸವಣ್ಣ ಹೀಗೆ ಶರಣರ ಹೊಣೆಗಾರಿಕೆ ಹೆಚ್ಚಿದ್ದಂತೆ ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆಯರೂ ಎಡೆಬಿಡದೆ ಶರಣರ ಸೇವೆಯಲ್ಲಿ ನಿರತರಾದರು. ಒಮ್ಮೆ ಶರಣ ಗಣಮೇಳದಲ್ಲಿ ಮಹಾದಾಸೋಹದಲ್ಲಿ ಶರಣರು ಪ್ರಸಾದ ಸ್ವೀಕರಿಸುವುದಕ್ಕಾಗಿ ಸಾಲು ಸಾಲಾಗಿ ಕುಳಿತ್ತಿದ್ದಾರೆ. ನೀಲಾಂಬಿಕೆ ತಾಯಿಯೇ ಮುಂದೆ ನಿಂತು ಎಲ್ಲರಿಗೂ ಬಡಿಸುತ್ತಿದ್ದಾರೆ. ಬಸವಣ್ಣನವರೂ ಕೂಡ ಮಹಾದಾಸೋಹದ ಪಂಕ್ತಿಯಲ್ಲಿ ಇರುವದರಿಂದ ಎಲ್ಲಾ ಶರಣರು ಆನಂದದಿಂದ' ಎಮ್ಮಂತೆ ಪುಣ್ಯಗೈದವರುಂಟೆ' ನಾವೇ ಭಾಗ್ಯವಂತರು ಎಂಬ ಭಾವದಿಂದ ತುತ್ತಿಗೊಮ್ಮೆ ಶಿವಶರಣೆನ್ನುತ್ತಾ ಪ್ರಸಾದ ಸ್ವೀಕರಿಸುತ್ತಿದ್ದರು. ಹೊರಗಿನಿಂದ ಗೌರಮ್ಮನು ಅವಸರದಿಂದ ನೀಲಾಂಬಿಕೆಯ ಹತ್ತಿರ ಬಂದಾಗ ಆ ತಾಯಿಯು ದಾಸೋಹದ ಮನೆಯಲ್ಲಿ ಮಗ್ನಳಾಗಿ ಪ್ರಸಾದದ ವಿತರಣೆಯಲ್ಲಿ ಇರುವುದನ್ನು ಕಂಡು ಗೌರಮ್ಮ ದುಃಖ ನುಂಗಿ ಕಣ್ಣಿರಿನ ಧಾರೆ ತಡೆದುಕೊಂಡು ತುಸು ಬನ್ನಿ ಅಮ್ಮಾ ಮಾತಾಡಬೇಕು ಎಂದು ಹೇಳಿ ಹೊರಗೆ ಹೋದಳು.

ನೀಲಾಂಬಿಕೆ ಹೊರಗೆ ಬಂದು ಬೇಗ ಹೇಳು ಗೌರಮ್ಮ ಕಾಯಕಕ್ಕೆ ಚ್ಯುತಿ ಬರಬಾರದಲ್ಲವೇ ಎಂದಾಗ ಗೌರಮ್ಮ ತನ್ನ ಒಡಲಾಳದ ದುಃಖವನ್ನು ಸಹಿಸಿಕೊಳ್ಳುತ್ತಾ ನೀಲಾಂಬಿಕೆಯ ಕಿವಿಯ ಹತ್ತಿರ ಬಂದು ಅಮ್ಮ 'ಬಾಲಸಂಗಯ್ಯಾ, ಬಾಲಸಂಗಯ್ಯಾ' ಎಂದು ಕಳವಳದಿಂದ ಕನವರಿಸಿದಳು. ಏನಾಯಿತು ಬಾಲಸಂಗಯ್ಯಾನಿಗೆ ಬೇಗ ಹೇಳಬಾರದೆ? ಶರಣರ ಪ್ರಸಾದ ಇನ್ನೂ ಮುಗಿದಿಲ್ಲ ಅಲ್ಲಿಗೆ ಹೋಗಬೇಕು.

"ಬಾಲಸಂಗಯ್ಯಾ ಇನ್ನಿಲ್ಲ ಅಮ್ಮ: ನಿನ್ನೊಡಲ ಬರಿದು ಮಾಡಿ ಕೂಡಲಸಂಗಯ್ಯಾ ಕೂಡಿಕೊಂಡ" ನೀಲಾಂಬಿಕೆಯ ಅಂತಃಕರಣದಲ್ಲಿ ಇದ್ದಕಿದ್ದಂತೆ ಕಂಪನ ಉಂಟಾಗಿ ಒಳಗೊಳಗೆ ಉಮ್ಮಳಿಸಿತು. ಅವಳ ತಾಯಿಹೃದಯ ಆಕ್ರಂದನಗೈದು ಹೋರಳಾಡಿ ಅಳುತ್ತಿತ್ತು. ಆದರೆ ಅಸಾಮಾನ್ಯ ಸಹನಶೀಲಮೂರ್ತಿಯಾದ ನೀಲಾಂಬಿಕೆ ಚೇತರಿಸಿಕೊಂಡು ಗೌರಮ್ಮನಿಗೆ ಹೇಳಿದಳು. 'ಶರಣರ ಪ್ರಸಾದ ಮುಗಿಯುವವರೆಗೆ ಈ ಸುದ್ದಿ ಹರಡಬಾರದು ನೀನು ಹೋಗಿ ಅಕ್ಕ ಗಂಗಮ್ಮಳನ್ನು ಸಮಾಧಾನ ಪಡಿಸಲು ತಿಳಿಸಿದಳು.

ನೀಲಾಂಬಿಕೆ ಮತ್ತೇ ಶರಣರ ಕಡೆಗೆ ಧಾವಿಸಿ ಯಾರಿಗೆ ಏನು ಬೇಕೆಂದು ಬಡಿಸಿದಳು. ಜಂಗಮರೆಲ್ಲರ ಪ್ರಸಾದ ಮುಗಿದ ಮೇಲೆ ಅವರೆಲ್ಲರೂ ಶರಣೆನ್ನುತ್ತಾ ಮೇಲೆದ್ದರು. ನೀಲಾಂಬಿಕೆ ಬಸವರಸರನ್ನು ಕರೆದುಕೊಂಡು ನೆಲಮನೆ ಕಡೆಗೆ ಓಡಿದಳು. ಏನೂ ಅರಿಯದ ಬಸವಣ್ಣನವರು ಅವಳ ಅವಸರದ ಓಟಕ್ಕೆ ಏನಾದರೂ ಕಾರಣವಿರಬಹುದೆಂದು ಹಾಗೆಯೇ ಹಿಂಬಾಲಿಸಿದರು.

ನೆಲಮನೆಯಲ್ಲಿ ಗಂಗಾಂಬಿಕೆ ಬಾಲಸಂಗಯ್ಯಾನನ್ನು ತೊಡೆಯ ಮೇಲೆ ಹಾಕಿಕೊಂಡು ಉಕ್ಕಿ ಉಕ್ಕಿ ಹೊರಬರಲು ಹವಣಿಸುತ್ತಿರವ ದುಃಖವನ್ನು ಅದುಮಿಸಿಕೊಂಡು ಶಾಂತಸಾಗರದಂತೆ ಗರ್ಜನೆಯಿಲ್ಲದೆ ಕುಳಿತ್ತಿದ್ದಳು. ಬಸವರಸ ನೀಲಾಂಬಿಕೆಯರು ಬರುತ್ತಿದ್ದಂತೆ ಮಡುಗಟ್ಟಿದ್ದ ದುಃಖದ ಕಟ್ಟೆಯೊಡೆದು ಕಣ್ಣೀರಾಗಿ ಹರಿದಿತ್ತು ತೊಡೆಮೇಲಿದ್ದ ಮಗುವನ್ನು ತೋರಿಸುತ್ತಾ ಅಳುತ್ತಿದ್ದಳು. ಅಳಬೇಡ ಅಕ್ಕಾ ಅಳಬೇಡ ಎನ್ನುತ್ತಾ ನೀಲಾಂಬಿಕೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಆಗ ಗಂಗಾಂಬಿಕೆ ಅವಳನ್ನು ಸಮಾಧಾನ ಮಾಡುತ್ತಾ, ನನಗೆ ಅಳಬೇಡವೆಂದು ನೀನು ಅಳುತ್ತಿರುವಿಯಲ್ಲೇ!! ನೀಲಾ, ಹೆತ್ತಕರುಳು ತನ್ನ ಕುಡಿಯ ಅಕಾಲಿಕ ಅಗಲುವಿಕೆಯಿಂದ ರೋದಿಸುತ್ತದೆ. ಆದರೂ ನಾವು ಸಹನೆ ತಂದುಕೊಳ್ಳಲೇಬೇಕು. ನಾವು ಹಿಡಿದದ್ದು ಶರಣ ಮಾರ್ಗ ಬಸವರಸರ ಮಾರ್ಗದಲ್ಲಿರುವ ನಾವು ಮರಣವನ್ನು ಕಂಡು ಹೆದರುವವರಲ್ಲ. ನಡೆ ನಮ್ಮ ಮಗುವಿನ ದೇಹವನ್ನು ಸಂಗಮನಾಥನ ಮಡಿಲಿಗಿಟ್ಟು ಬರೋಣ ಎಂದು ಮಗುವಿನ ದೇಹವನ್ನು ಬಸವಣ್ಣನವರ ಕೈಯಲ್ಲಿಕೊಟ್ಟಳು.

"ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ
ಎಂದು ಹೇಳಿದರಮ್ಮಾ ಎನ್ನ ಒಡೆಯರು
ಫಲವಿಲ್ಲದ ಕಂದನಿರ್ಪನವಳಿಗೆ,
ಎನಗೆ ಫಲವಿಲ್ಲ, ಕಂದನಿಲ್ಲ.
ಇದೇನೋ ದುಃಖದಂದುಗ
ಗಂಗಾಪ್ರಿಯ ಕೂಡಲಸಂಗಮದೇವಾ ?"

–ಗಂಗಾಂಬಿಕೆ

ಈ ವಚನದಲ್ಲಿ ಗಂಗಾಂಬಿಕೆಯು ತನ್ನ ಹೆತ್ತ ಮಗುವಿನ ಅಗಲುವಿಕೆಯ ದುಃಖದಲ್ಲಿ ರಚಿಸಿರಬಹುದೆಂದು ಅರ್ಥೈಸುತ್ತದೆ.

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿ ಬರುವ ಬೆಟ್ಟಬಾಲಕುಂದಾ ಗ್ರಾಮದ ಬಯಲಿನಲ್ಲಿ ಬಸವಣ್ಣನವರ ಶಿಶು ಬಾಲಸಂಗಯ್ಯನ ಸಮಾಧಿಯಿದೆ ಎಂಬುದನ್ನು ಕೇಳಿ ಅಲ್ಲಿಗೆ ಹೋಗಬೇಕೆಂಬ ಹಂಬಲವಾಗಿತ್ತು. ಇತ್ತೀಚಿನ ದಿನದಲ್ಲಿ

ಬಸವಕಲ್ಯಾಣಕ್ಕೆ ಹೋದಾಗ ಅಲ್ಲಿಗೆ ಹೋಗುವ ಅವಕಾಶ ಸಿಕ್ಕಿತು. ಬಸವಕಲ್ಯಾಣದಿಂದ ಐದು ಕಿಲೋಮೀಟರ ದೂರದಲ್ಲಿರುವ ಬೆಟ್ಟ ಬಾಲಕುಂದಾಗ್ರಾಮವಿದೆ. ಇದು ಶರಣರ ಸ್ಥಳವಾದರೂ ಕೂಡ ಬೆಳಕಿಗೆ ಬರದೇ ಇರುವ ಸ್ಥಳಗಳಲ್ಲಿ ಒಂದಾಗಿದೆ.

"ಬಸವನಿದ್ದಂತೆ ಊರ ಪಶುವ ನೊಯಿವರೆ ಸಂಗಯ್ಯಾ?
ಕಗ್ಗಾಯಿಯಿದ್ದಂತೆ ಹೂಮಿಡಿಯ ನೊಯಿವರೆ ಸಂಗಯ್ಯಾ?
ನಾನಿದ್ದಂತೆ ನನ್ನ ಶಿಶುಸಂಗಯ್ಯನ ನೊಯಿವರೆ
ಕೂಡಲಸಂಗಯ್ಯಾ?"

–ಬಸವಣ್ಣನವರು

ಅಪ್ಪ ಬಸವಣ್ಣನವರ ಹೃದಯ ವಿದ್ರಾವಕ ವಚನದ ನೆನಪಿನಲ್ಲಿ ಹೆಜ್ಜೆ ಹಾಕುತ್ತಾ ವಿಶಾಲವಾದ ಬಯಲಿನಲ್ಲಿ ನಡೆಯುತ್ತಿರುವಾಗ ಅಲ್ಲಿ ಬಾಲಸಂಗಯ್ಯನ ಸಮಾಧಿ ಕಾಣಿಸಿತು. ಚಿಕ್ಕಬೇವಿನ ಮರದ ಕೆಳಗೆ ಪುಟ್ಟ ಮಗುವಿನ ಚಿಕ್ಕ ಚಿಕ್ಕ ಪಾದದ ಗುರುತು ಇರುವ ಒಂದು ಸಣ್ಣ ಚೌಕಾಕಾರದ ಕರಿಯ ಕಲ್ಲು ಇರುವುದನ್ನು ಕಂಡು ಮನಸ್ಸು ಭಾರವಾಗಿ ಹೃದಯ ತುಂಬಿ ಬಂದಿತು. ಇಳಿ ಹೊತ್ತಿನ ಸಮಯದಲ್ಲಿ ಬಂಗಾರದ ಬಣ್ಣದಲ್ಲಿ ಸೂರ್ಯನ ಕಿರಣಗಳು ಹೊಂಬೆಳಕು ಬೀರುತ್ತಿದ್ದವು. ನೋಡುತ್ತಿದ್ದಂತೆಯೇ ಹೊಂಬಣ್ಣ ಸವಿಯುತ್ತಾ ಕಲರವ ಮಾಡುತ್ತಾ ನಲಿಯುತ್ತಿರುವ ನವಿಲುಗಳು ಕಂಡವು. ಆ ಬಯಲಿನಲ್ಲಿ ಬಯಲು ರೂಪುಗೊಂಡು ಗರಿಬಿಚ್ಚಿ ಕುಣಿಯುತ್ತಿದ್ದ ನವಿಲಿನ ನರ್ತನೆಯಲ್ಲಿ ಮುದ್ದು ಮುದ್ದಾದ ಮಗುವಿನ ನಗುವ ಕಂಡಂತೆ ಭಾಸವಾಗಿ ಮೈಮನವೆಲ್ಲಾ ರೋಮಾಂಚನಗೊಂಡ ಕ್ಷಣ ಅದಾಗಿತ್ತು.

ಅನುಭವ ಮಂಟಪದಲ್ಲಿ ಅನುಭಾವ ಗೋಷ್ಠಿ ಮತ್ತು ಮಹಾಮನೆಯಲ್ಲಿ ದಾಸೋಹದ ಕಾಯಕಗಳು 770 ಅಮರ ಗಣಂಗಳ ದಿನನಿತ್ಯದ ಕಾರ್ಯಕ್ರಮಗಳಾಗಿದ್ದವು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಎಂದು ಹೇಳುವಂತೆ ಶರಣ ಗಣಮೇಳವನ್ನು ಈ ಬೆಟ್ಟ ಬಾಲಕುಂದಾದ ವಿಶಾಲವಾದ ಬಯಲಿನಲ್ಲಿ ನಡೆಯುತ್ತಿತ್ತು. ಶರಣ ಸಮುದಾಯದ ಸಂಖ್ಯೆ ಹೆಚ್ಚಿನದಾಗಿರುವದಕ್ಕೆ ಅನುಭವ ಮಂಟಪ ಅನುಭಾವಗೋಷ್ಠಿಗೆ ಕಿರಿದಾಗುತ್ತಿತ್ತು. ಅದಕ್ಕಾಗಿ ಗಣಮೇಳವನ್ನು ಈ ಬಯಲಿನಲ್ಲಿಯೇ ನಡೆಸುತ್ತಿದ್ದರು ಎಂದು ಹೇಳಲಾಗುತ್ತದೆ. ಈಗಲೂ ನಾವು ಬಾಲಸಂಗಯ್ಯನ ಸಮಾಧಿಯಿಂದ ಸ್ವಲ್ಪ ದೂರದಲ್ಲಿ ಇರುವ ನೆಲದಲ್ಲಿ ಗೋಲಾಕಾರದಿಂದ ಕೂಡಿದ ಗುರುತುಗಳನ್ನು ನಾವು ನೋಡಬಹುದು. ಅವುಗಳು ಅನುಭಾವ ಗೋಷ್ಠಿ ನಡೆಸಲು ಮತ್ತು ಮಹಾದಾಸೋಹ ನಡೆಸಲು ಬಯಲ್ಲಿನಲ್ಲಿ ಆಶ್ರಯಕ್ಕಾಗಿ ನೆಡೆಸಿದ ಕಂಬಗಳ ಗುರುತುಗಳಾಗಿವೆ ಎನ್ನಲಾಗಿದೆ.

ಒಂದು ಕಡೆ ಅನುಭವ ಗೋಷ್ಠಿ ನಡೆದರೆ ಅಲ್ಲಿಯೇ ಮತ್ತೊಂದು ಕಡೆ ಮಹಾದಾಸೋಹ ನಡೆಯುತ್ತಿತ್ತು. ಪ್ರಸಾದ ತಯಾರಿಸುವ ಸ್ಥಳವನ್ನು ನೋಡಿದೆವು ಅದಕ್ಕೆ ಗಂಜಿಕೆರೆ ಎನ್ನುತ್ತಾರೆ. ಲಕ್ಷಾಂತರ ಜನರಿಗೆ ಪ್ರಸಾದಕ್ಕೆಂದು ಅನ್ನ ಮಾಡುವಾಗ ಅದರೊಳಗಿನ ಬಸಿದು ತೆಗೆದ ಗಂಜಿ ಹರಿಯುತ್ತಿದ್ದರಿಂದ ಅದಕ್ಕೆ ಗಂಜಿಕೆರೆಯೆನ್ನುತ್ತಾರೆ. ಅಲ್ಲಿಂದ ಸ್ವಲ್ಪ ಮುಂದೆ ಹೋದಾಗ 1972ರ ಬರಗಾಲದಲ್ಲಿ ಕೆರೆ ನಿರ್ಮಿಸುತ್ತಿದ್ದಾಗ ನೆಲ ಅಗೆಯುವ ಸಂದರ್ಭದಲ್ಲಿ ಶರಣರು ಪ್ರಸಾದ ಸ್ವೀಕರಿಸುತ್ತಿದ್ದ ಮಣ್ಣಿನ (ಮುಚ್ಚಳ, ಪರಿಯಾಣ) ಪಾತ್ರೆಗಳ ತುಣುಕುಗಳು ಸುಮಾರಾಗಿ ಸಿಕ್ಕಿದವು. ಅದಕ್ಕಾಗಿ ಆ ಸ್ಥಳಕ್ಕೆ ಖಪರಾಳ ಎಂದೇ ಕರೆಯುತ್ತಾರೆ. ಇನ್ನೂ ಬೆಟ್ಟದಿಂದ ಕೆಳಗೆ ಇಳಿಯುತ್ತಿದ್ದಂತೆಯೇ ಕೆಲವು ಚಿಕ್ಕ ಗವಿಗಳಿವೆ. ಇಲ್ಲಿ ಶರಣರು ಇಷ್ಟಲಿಂಗ ಯೋಗ ಮಾಡುವ ಸ್ಥಳವಾಗಿದೆ ಮತ್ತು ಒಂದು ಕಡೆ ಬಾಣಂತಿಗೃಹ, ಬಚ್ಚಲು ಮನೆ ಎಂದು ಹೇಳುವ ಸ್ಥಳಗಳು ಕಾಣಸಿಗುತ್ತವೆ.

ಬೆಟ್ಟ ಬಾಲಕುಂದಾದ ಈ ವಿಶಾಲವಾದ ಬಯಲಲ್ಲಿ ಒಂದು ಕಡೆ ಈಗ ಮುರಾರ್ಜಿ ದೇಸಾಯಿ ಶಾಲೆಯ ಕಟ್ಟಡವನ್ನು ನಿರ್ಮಿಸಿದ್ದಾರೆ. ಆಟದ ಮೈದಾನಕ್ಕಾಗಿ ಅಲ್ಲಿನ ಅನೇಕ ಗುರುತುಗಳು ಮರೆಯಾಗಿವೆ. ಆದ ಕಾರಣದಿಂದ ತುಂಬಾ ಅಭಿವೃಧಿ ಕಂಡರೂ ಇನ್ನೂ ಅನೇಕ ಶರಣರ ಸ್ಥಳಗಳು ಅನಾಥವಾಗಿವೆ ಎಂದು ಮನನೊಂದಿತು. ಅದಕ್ಕೆ ಆ ಊರಿನ ಹಿರಿಯ ಮುಖಂಡರನ್ನು ವಿಚಾರಿಸಿದಾಗ ಅವರು ಹಿಂದಿನಿಂದ ಇಂದಿನವರೆಗೆ ಈ ಅಮೂಲ್ಯವಾದ ಸ್ಥಾನವನ್ನು ಉಳಿಸಿಕೊಂಡು ಬಂದಿದ್ದಾರೆ ನೀವಿಗ ಇದರ ಅಭಿವೃಧಿಗಾಗಿ ಪ್ರಯತ್ನಿಸಬೇಕು ಎಂದು ಹೇಳಿದಾಗ ಅವರು ಹೇಳುವುದೇನೆಂದರೆ ನಾವೆಲ್ಲಾ ತುಂಬಾ ದಿನಗಳಿಂದ ಅನೇಕ ಮುಖ್ಯಮಂತ್ರಿಯವರಿಗೂ, ಪತ್ರಗಳು ಸಲ್ಲಿಸುತ್ತಲೇ ಇದ್ದೇವೆ ಯಾರೂ ಸ್ಪಂದಿಸುತ್ತಿಲ್ಲ. ಪ್ರಾಧಿಕಾರದವರಿಗೂ ಎಷ್ಟೊಂದು ಸಲ ಹೋಗಿ ಬೇಡಿಕೊಂಡಿದ್ದೇವೆ ಆದರೂ ಅವರು ನಮ್ಮ ಕಡೆ ಬರಲಿಲ್ಲ ಎಂದರು. ಇಷ್ಟಾದರೂ ಕಾಪಾಡಿಕೊಂಡು ಬಂದಿರುವ ಜನತೆಗೆ ಹೃತ್ಪೂರ್ವಕ ಶರಣು ಶರಣಾರ್ಥಿ ಸಲ್ಲಿಸೋಣ.

****

ಮರ್ತ್ಯಕ್ಕೆ ಮರಳಿದ ಮೇದಾರ ಕೇತಯ್ಯ

ಕಲ್ಯಾಣದ ಶರಣರ ಕೊನೆಯ ದಿನಗಳ ಚಿತ್ರವನ್ನು ಮಡಿವಾಳ ಮಾಚಯ್ಯನವರ, ಚನ್ನಬಸವಣ್ಣನವರ ಚರಮಗೀತೆಗಳು ನಮ್ಮ ಕಣ್ಣ ಮುಂದೆ ನಿಲ್ಲುತ್ತವೆ.

ನಿರ್ವಾಹವಾಯಿತ್ತಯ್ಯಾ ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನಲ್ಲಿ.
ಅಕ್ಕನಾಗಾಯಿ ಮಿಂಡಮಲ್ಲಿನಾಥ ಹಡಪದಪ್ಪಣ್ಣ ಮೊಗವಾಡದ ಕೇಶಿರಾಜ
ಕೋಲಶಾಂತಯ್ಯ ಮೊದಲಾದ ಶಿವಗಣಂಗಳೆಲ್ಲರೂ
ಬಸವಣ್ಣನ ಬಯಲ ಬೆರಸಿದರು.
ಆ ಬಯಲ ಪ್ರಸಾದದಿಂದ ನಿರುಪಮ ಪ್ರಭುದೇವರು ಕದಳಿಯಲ್ಲಿ ಬಯಲಾದರು.
ಆ ಬಯಲ ಪ್ರಸಾದದಿಂದ ಮೋಳಿಗೆಯ ಮಾರಯ್ಯ ಕಕ್ಕಯ್ಯ
ಪಡಿಹಾರಿ ಉತ್ತಣ್ಣ ಕನ್ನದ ಮಾರಣ್ಣ ಕಲಕೇತ ಬೊಮ್ಮಣ್ಣ ನುಲಿಯ ಚಂದಯ್ಯ
ಹೆಂಡದ ಮಾರಯ್ಯ ಶಂಕರ ದಾಸಿಮಯ್ಯ ಏಕಾಂತ ರಾಮಯ್ಯ
ಮೇದಾರ ಕೇತಯ್ಯ ಮೊದಲಾದ ಏಳುನೂರೆಪ್ಪತ್ತು ಅಮರಗಣಂಗಳ ದಂಡು
ಕೈಲಾಸಕ್ಕೆ ನಡೆಯಿತ್ತು. ಬಂದ ಮಣಿಹ ಸಂದಿತ್ತು.
ಸಂದ ಪುರಾತನರೆಲ್ಲರೂ ಎನ್ನ ಮನದ ಮೈಲಿಗೆಯ ಕಳೆದ ಕಾರಣ–
ಕಲಿದೇವರ ಕಲಿದೇವಯ್ಯಾ, ಇವರೆಲ್ಲರ ಒಕ್ಕ ಮಿಕ್ಕ ಪ್ರಸಾದದ ಬಯಲು ಎನಗಾಯಿತ್ತು.
–ಮಡಿವಾಳ ಮಾಚಿದೇವರು.

ಮಡಿವಾಳಯ್ಯನವರ ಈ ಪ್ರಸಾದಗೀತದಲ್ಲಿ ಅಕ್ಕನಾಗಮ್ಮ ಮೊದಲಾದ ಶಿವಗಣಂಗಳು ಕಲ್ಯಾಣದ ಕಪ್ಪಡಿಯಲ್ಲಿ, ಕದಳಿಯ ಬನದಲ್ಲಿ, ಉಳವಿಯಡೆಗೆ ಇಲ್ಲವೆ ಕಲ್ಯಾಣದ ಸುತ್ತ ಮುತ್ತ ಬಯಲಾಗಿ ಹೋದರು.

ಕಲ್ಯಾಣದಲ್ಲಿ ಸಮಾವೇಶಗೊಂಡ ಶರಣರಲ್ಲಿ ಮೇದಾರ ಕೇತಯ್ಯ-ಸಾತವ್ವೆ ದಂಪತಿಯರು ಬಿದಿರಿನ ಕಾಯಕವನ್ನು ಕೈಕೊಂಡು ಪ್ರತಿ ನಿತ್ಯ ಕಾಡಿಗೆ ಹೋಗಿ ಬಿದಿರುಗಳನ್ನು ಕಡಿದುಕೊಂಡು ಬಂದು ಅವುಗಳಿಂದ ಬುಟ್ಟಿ, ಮೊರ, ತೊಟ್ಟಿಲು ಮುಂತಾದವುಗಳನ್ನು ಹೆಣೆದು ಅವುಗಳನ್ನು ಮಾರಿ ಬಂದದ್ದರಲ್ಲಿ ಜೀವನ ಸಾಗಿಸುವುದರ ಜೊತೆಗೆ ಜಂಗಮ ದಾಸೋಹ ಮಾಡುತ್ತಿದ್ದರು. ಮೇದಾರ ಕೇತಯ್ಯನವರ ವಚನಗಳು 'ಗವರೇಶ್ವರಾ' ಎಂಬ ವಚನಾಂಕಿತದಿಂದ ರಚಿಸಿಲ್ಪಟ್ಟ ಕೇವಲ 18 ವಚನಗಳು ಮಾತ್ರ ಲಭ್ಯವಾಗಿವೆ. ಇವರ ಪತ್ನಿ ಸಾತವ್ವೆಯ ವಚನಗಳು ಇನ್ನೂ ಗಮನಕ್ಕೆ ಬಂದಿಲ್ಲ. ಕೇತಯ್ಯ-ಸಾತವ್ವೆಯರ ಪವಾಡ ಸದೃಶ ಘಟನೆಯೊಂದು 'ಶಿವತತ್ವ ಚಿಂತಾಮಣಿ' ಮತ್ತು 'ಸಿಂಗಿರಾಜಪುರಾಣ'ದಲ್ಲಿ ಕಂಡುಬಂದಂತಿದೆ.

ಒಮ್ಮೆ ಪರಶಿವನು ವೇಷಧಾರಿಯಾಗಿ ಕೇತಯ್ಯನವರ ಮನೆಗೆ ಬಂದಾಗ ಸಾತವ್ವೆ ಶರಣು ಶರಣಾರ್ಥಿ ಸಲ್ಲಿಸಿ ಸ್ವಾಗತಿಸಿದರು. ಕೇತಯ್ಯ ಎಲ್ಲೆಂದು ವಿಚಾರಿಸಿದಾಗ ಸಾತವ್ವೆ ಕಾಯಕಕ್ಕೆ ಹೋಗಿದ್ದಾರೆಂದು ತಿಳಿಸುತ್ತಾರೆ. ಆಗ ವೇಷದಾರಿ ಶಿವನು ತಾನು ತಂದ ಹೊನ್ನರಾಶಿಯನ್ನು ಸುರಿದು ಅಮ್ಮಾ ! ನೀವು ಬಡವರು ಈ ಹೊನ್ನನ್ನು ತೆಗೆದುಕೊಂಡು ನಿಮ್ಮ ದಾಸೋಹಕ್ಕೆ ಉಪಯೋಗಿಸಿಕೊಳ್ಳಿರಿ, ಎಂದು ಪರಶಿವನು ಹೇಳಿದಾಗ ಸಾತವ್ವೆ ಆ ಹೊನ್ನನ್ನು ಕಣ್ಣೆತ್ತಿಯೂ ಸಹ ನೋಡದೆ ನಿರಾಕರಿಸುತ್ತಾರೆ. ಆದರೂ ಶಿವನು ಕೇಳದೆ ಅಲ್ಲಿಯೆ ಇಟ್ಟು ಹೊರಟು ಹೊಗುತ್ತಾನೆ. ಅಷ್ಟರಲ್ಲಿ ಮನೆಗೆ ಬಂದ ಮೇದಾರ ಕೇತಯ್ಯನವರಿಗೆ ಪತ್ನಿ ಸಾತವ್ವೆಯಿಂದ ವಿಷಯ ತಿಳಿದು ಬೇಸರಗೊಂಡು ಆ ಹೊನ್ನಿನ ಗಂಟನ್ನು ಒಯ್ದು ತಿಪ್ಪೆಯಲ್ಲಿ ಎಸೆದು, ಕಾಯಕದಿಂದಲ್ಲದೆ ಬಂದದ್ದು ಮುಟ್ಟಿದ್ದಕ್ಕೆ ಮೈಲಿಗೆಯಾಯಿತ್ತೆಂದು ಸ್ನಾನಮಾಡಿ ಇಷ್ಟಲಿಂಗಪೂಜೆಯ ನಂತರ ದಾಸೋಹ ಮಾಡುತ್ತಾರೆ. ಮುಂದೆ ಕೆಲವು ದಿನಗಳ ನಂತರ ಕೇತಯ್ಯ-ಸಾತವ್ವೆಯರು ಬಿದಿರು ತರಲು ಅಡವಿಗೆ ಹೋಗುವರು. ಅಲ್ಲಿ ಕೇತಯ್ಯ ಬಿದಿರನ್ನು ಕಡಿಯುವಾಗ ಆ ಬಿದಿರಿನೊಳಗಿನಿಂದ ಬಂಗಾರದ ನಾಣ್ಯಗಳು ಬಳಬಳನೆ ಉದುರುತ್ತಿದ್ದವು. ಸದಾ ಕಾಯಕದಿಂದ ಜೀವಿಸುವವರಾದ ಕೇತಯ್ಯ ಅದನ್ನು ಮುಟ್ಟದೆ ಸಾತವ್ವೆಗೆ ಹೇಳುತ್ತಾನೆ.

"ಬಂಗಾರ ಹುಳುಹತ್ತಿ, ಭಂಗವಾಗಿದೆ ಬಿದಿರು
ಕಂಗಳಿಗೆ ಬೇಡ ಹೊಲೆಯೆಂದ! ದಾಸೋಹ
ಸಂಗ ಜೋಡಣೆಗೆ ಕೆಂದೆಂದ."

'ನೋಡು ಸಾತವ್ವೆ ಈ ಬಿದಿರಿಗೆ ಹುಳಹತ್ತಿದೆ' ಎಂದು ಹೇಳುತ್ತಾ ಮುಂದೆ ಹೋಗಿ ಬೇರೊಂದು ಬಿದಿರು ಕಡಿಯಲು ಹೋದಾಗ ಮತ್ತೆ ಆ ಬಿದಿರಿನಲ್ಲಿಯೂ

ಹಾಗೆಯೇ ಆಗುತ್ತದೆ. ಆಗ ಸಾತವ್ವೆ ಇಂದೇಕೆ ಹೀಗಾಗುತ್ತಿದೆ ಎಂದು ಕೇತಯ್ಯನಿಗೆ ಕೇಳುತ್ತಾಳೆ. ಆಗ ಅವರು ನಾವು ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವವರು, ಕಾಯಕವೇ ನಮ್ಮ ಉಸಿರು, ಸತ್ಯ ಶುದ್ಧ ಕಾಯಕದಿಂದ ಬಂದುದರಲ್ಲಿ ದಾಸೋಹ ಮಾಡುತ್ತ ಬದುಕುವುದೇ ನಮ್ಮ ಗುರಿ. ನಾವು ಇನ್ನೂ ಸ್ವಲ್ಪ ಮುಂದೆ ಹೋಗಿ ಬಿದಿರು ತೆಗೆದುಕೊಂಡು ಬರೋಣವೆಂದು ಬೇರೊಂದು ಕಡೆಗೆ ಹೋಗುತ್ತಾರೆ. ಕೇತಯ್ಯ ಅಲ್ಲಿದ್ದ ಎತ್ತರವಾದ ಒಂದು ಮರದ ಮೇಲೆ ಹತ್ತಿ ಬಿದಿರನ್ನು ಕಡಿಯತೊಡಗಿದನು. ಆಗ ಅದೆಲ್ಲಿಂದಲೋ ಸುಂಟರಗಾಳಿಯು ಬೀಸಲಾರಂಭಿಸಿತು. ಕೇತಯ್ಯ ಕಾಲು ಜಾರಿ ಕೆಳಗೆ ಬಿಳುತ್ತಾನೆ. ಬೀಳುವಾಗ ಬಿದಿರಿನ ತುದಿಯೊಂದು ಕೇತಯ್ಯನ ಎದೆಗೆ ನಾಟಿತು. ಆಗ ಸಾತವ್ವೆ ಓಡಿಹೋಗಿ ಎದೆಗೆ ಚುಚ್ಚಿಕೊಂಡಿದ್ದ ಬಿದಿರು ತೆಗೆಯಬೇಕು ಎನ್ನುವಷ್ಟರಲ್ಲಿ ನಿಲ್ಲು ಸಾತವ್ವೆ! ಇಂದಿನ ಜಂಗಮದಾಸೋಹ ಮುಗಿಸಿದ ನಂತರವೇ ನನ್ನ ಪ್ರಾಣ ಒಯ್ಯಬಹುದೆಂದೂ ಅಷ್ಟರೊಳಗೆ ಒಯ್ದರೆ ಆಣೆ ಎಂದು ದೇವರಿಗೆ ಸವಾಲು ಹಾಕಿದನೆಂಬ ಜನಪದರ ನುಡಿಯಲ್ಲಿ ಡಾ. ಬಿ.ಎಸ್. ಗದ್ದಗಿಮಠ ಅವರ " ಜನಪದ ಗೀತೆಗಳು" ಎಂಬ ಮಾಹಾಪ್ರಬಂಧದಲ್ಲಿಯೂ ಉಲ್ಲೇಖಿಸಿದ್ದಾರೆ.

"ಬಿಸಿರಗುತ ಚಿಮ್ಮುತಿರೆ, ಹಸುನಗುತ ಕೇತಯ್ಯಾ
ನೊಸಲಗಣ್ಣನಿಗೆ ಕೈಮುಗಿದು । ಬೇಡಿದನು
ಕಸುವೊಂದೆ ಸಾಕು ಕಾಯಕಕೆ."

'ಶರಣರ ಕಾಯಕ, ಒರೆಗೆ ಹಚ್ಚುವರಾರು' ಎಂಬಂತೆ ಕೇತಯ್ಯ ಮತ್ತೆ ಕೈಯಲ್ಲಿದ್ದ ಕುಡುಗೋಲಿನಿಂದ ಬಿದಿರು ಸವರುತ್ತ, ಹೇಳುತ್ತಾರೆ ಜನಪದರು.

ಹಾರದಿರು ಪಡುಗಡಲ, ಏರಿ ಇಳಿಯುವರ ರವಿಯೆ
ಮಾರಹರನಾಣೆ ಎನ್ನಾಣೆ । ಶಿವಶರಣ
ಧೀರಕಾಯದ ಮನದಾಣೆ.

ಕಾಯಕ ಮುಗಿಸುವವರೆಗೆ ನಿಲ್ಲು ರವಿಯೆ ಎಂದು ಸೂರ್ಯನಿಗೆ ಮುಳಗ ಬೇಡೆಂದು ಹರನಾಣೆ ಹಾಕಿದ ಕೇತಯ್ಯನ ಚಿತ್ಕಳೆಯು ಅಕಾಲವಾಗಿ ಶಿವಲೋಕ ಸೇರಲು 'ಶಿವಲೋಕ । ಚೇತನವೆ ತುಂಬಿ ಬೆಳಗಾಯ್ತು' ಶಿವಲಿಂಗವೇ ಹಿಕ್ಕಿಯಲ್ಲಿ ಮೂಡಲು ಹೂಬಿಸಿಲು ಬಿದ್ದು ಸೂರ್ಯೋದಯವಾಗಿ ಬೆಳಕು ಮನೆ ಮನೆ ಹೊಕ್ಕು ಬೆಳಗಿತೆಂದು ಸೂರ್ಯೋದಯಕ್ಕೆ ಹೊಂದಿಸಿ ದಿವ್ಯಸೃಷ್ಟಿಯನ್ನು ಕಲ್ಪಿಸಿ, ಸಂಕೋಚಬಾರದಂತೆ ಬಣ್ಣಿಸುತ್ತಾ ಓದುಗರಿಗೆ ಬಿಟ್ಟುಗೊಡುತ್ತಾ ಕವಿಯು ಹಾಡಿದ್ದಾನೆ.

"ಮರಣಬಂದರು ಕೂಡ, ಶರಣ ಕಾಯಕ ಮುಗಿಸಿ
ಹರುಷದಲಿ ಹರಣ ನೀಗಿದನು । ಕೇತಯ್ಯ
ಹರನಿತ್ತ ಪದವ ಕರುಣೆಯಲಿ."

ಪ್ರತಿದಿನದಂತೆ ತನ್ನ ಕಾಯಕ– ದಾಸೋಹ ಮುಗಿಸಿ ಎದೆಗೆ ನಾಟಿದ್ದ ಬಿದಿರು ತೆಗೆಯಲು ಪತ್ನಿ ಸಾತವ್ವೆಗೆ ಹೇಳಿದಾಗ ಎದೆಯೊಳಗೆ ನಟ್ಟು, ಮುರಿದ ಕೂರಲಗನ್ನು ಶಿವ ಶಿವನೆಂದು ಕೇತಯ್ಯನ ಮಡದಿಯು ಕಿತ್ತೊಗೆಯಲು ಕೇತನ ಚಿತ್ಕಳೆಯು ಶಿವನ ಸನ್ನಿಧಿಗೆ ಸೇರುತಲಿ ಹೊತ್ತು ಮುಳುಗಿತ್ತೆಂದು ಕವಿ ವರ್ಣಿಸುತ್ತಾನೆ.

"ಪತಿಯು ಲಿಂಗಾಗಿದ್ದ , ಸತಿ ಶರಣೆ ನಾನಿದ್ದೆ
ರತನ ಕಾಯಕವೆ ಶಿವಪೂಜೆ । ಇಂದ್ಹೋಯ್ತು
ಜತನೇಕೆ ಇಂದು ಬಾಳುದಕೆ."
"ಜೀಯ ಬಸವನೆ ಶರಣು, ಕಾಯಕವು ಶರಣರಿಗೆ
ತಾಯಿ ಬೇರಂತೆ ಶಿವಮತಕೆ । ಜಗದೊಳಗೆ
ಕಾಯಕವೆ ಕಾಣೊ ಕೈಲಾಸ."

ಕ್ಷಣದಲ್ಲಿಯೇ ಶರಣರೆಲ್ಲಾ ನೆರೆದು ಕೇತಯ್ಯನ ಕಳೇಬರಹಕ್ಕೆ ಕ್ರಿಯಾಸಮಾಧಿಯನ್ನು ಮಾಡಿಸಲು ಏರ್ಪಾಡು ಮಾಡಿದರು. ಆಗ ಅಲ್ಲಿ ಇಲ್ಲದಿದ್ದ ಮಡಿವಾಳ ಮಾಚಿದೇವನನ್ನು ಕರೆತರಲು ಪಡಿಹಾರಿ ಉತ್ತಣ್ಣನನ್ನು ಕಳುಹಿಸಿದರು. ಕೇತಯ್ಯನವರ ಅಕಾಲ ಮರಣವ ಕೇಳಿ ಮಾಚಿದೇವ ಗಾಬರಿಯಿಂದ "ಜಂಗಮಪ್ರಾಣಿಯಾದ ಬಸವಣ್ಣನವರ ಪ್ರಾಣವು ಜಂಗಮಶ್ರೇಷ್ಠನೊಂದಿಗೆ ಹೋಗುವದೆಂಬ ದುರಂತವನ್ನು ಅರಿತ ಮಡಿವಾಳ ಮಾಚಿದೇವರು "ಹರನಿಗಾಯಿತೆ ಎದೆಯು ಶರಣರಸು ಒಯ್ಯುದಕೆ," ಹರನ ಉಪ್ಪರಿಗೆ ಉರುಳಿಸುವೆ' ಎಂದೂ ವೀರಘಂಟೆಯನ್ನು ಬಾರಿಸುತ್ತಾ ಬರುವನು.

"ಆಕಾಶ ಘಂಟೆಗಾ, ಏಕಗುಣಿ ಕಾಯಕವ
ಸಾಕೆನ್ನದೆ ಮಾಚ ಬಾರಿಸಲು । ಗಡಚಿಕ್ಕಿ
ತಾಕಿ ದಿಕ್ಕುಗಳು ಶಿವಗೆದ್ದು."
"ನೂಕುವನು ಶಿವಲೋಕ, ತೂಕ ಹಿಡಿಯಲು ಕಷ್ಟ
ಸಾಕು ಮಾಚಯ್ಯ ತಡೆನಿಲ್ಲು । ಅನ್ನುದಕೆ
ತೂಕಡಿಸಿ ಬಸವ ಕೇತೆದ್ದು."

ಮಡಿವಾಳ ಮಾಚಯ್ಯನವರು ವೀರಘಂಟೆಯನ್ನು ಬಾರಿಸುತ್ತಾ ಭಕ್ತಿಯಿಂದ ಕ್ರಾಂತಿಯನ್ನೆಬ್ಬಿಸಿದಾಗ ಅವರಿಬ್ಬರ ಹೋದ ಪ್ರಾಣ ತಿರುಗಿ ಬಂದಿತು. ಆಗ ಅಲ್ಲಿ ನೆರೆದಿದ್ದ ಶರಣಸಂಕುಲವೆಲ್ಲಾ ಆನಂದ ಸಾಗರದಲ್ಲಿ ಮುಳುಗಿತು. ಮುಂದೆ ಮೇದಾರ ಕೇತಯ್ಯನವರು ಮೊದಲಿನಂತೆಯೇ ತನ್ನ ಬಿದಿರಿನ ಕಾಯಕವನ್ನು ಮಾಡುತ್ತಾ ಜಂಗಮ ದಾಸೋಹವನ್ನು ಕೈಗೊಂಡು, ಅನುಭಾವ ಮಂಟಪದಲ್ಲಿ ಶರಣರೊಡನೆ ಬೆರೆತು ವಚನಗಳ ರಚನೆ ಮಾಡುತ್ತಾ ತನ್ನ ಅನೇಕ ವಚನಗಳಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮಯ್ಯ, ಮಡಿವಾಳ ಮಾಚಿದೇವ, ಮರುಳ ಶಂಕರದೇವ, ಘಟ್ಟಿವಾಳ ಮುದ್ದಯ್ಯ, ಮೊದಲಾದ ಶರಣರನ್ನು ಸ್ತುತಿಸುತ್ತಾನೆ.

"ಎನ್ನ ಕಾಯದ ಕಳವಳವ ನಿಲಿಸಿ, ಗುರುಲಿಂಗವ ತೋರಿದ,
ಎನ್ನ ಮನದ ವ್ಯಾಕುಳವ ನಿಲಿಸಿ, ಜಂಗಮಲಿಂಗವ ತೋರಿದ
ಇಂತು ಅಂತರಂಗ ಬಹಿರಂಗದಲ್ಲಿ ತಾನೆಯಾಗಿ, ಎನ್ನ ಪಾವನವ ಮಾಡಿದ
ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೆ ಒಯ್ದಡೆ,
ಸದ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳಿ ತಂದ
ಸಂಗನಬಸವಣ್ಣನೆ ಗುರುವೆನಗೆ, ಸಂಗನಬಸವಣ್ಣನೆ ಪರವೆನಗೆ,
ಸಂಗನಬಸವಣ್ಣನ ಕರುಣದಿಂದ, ಘನಕ್ಕೆ ಘನಮಹಿಮ ಅಲ್ಲಮಪ್ರಭುವಿನ
ಶ್ರೀಪಾದವ ಕಂಡು ಬದುಕಿದೆನು ಕಾಣಾ, ಗವರೇಶ್ವರಾ."

–ಮೇದಾರ ಕೇತಯ್ಯ.

ಮೇದಾರ ಕೇತಯ್ಯನವರ ಈ ವಚನ ನೋಡಿದರೆ ಜನಪದರ ನುಡಿಗೆ ಆಧಾರವೆಂಬಂತಿದೆ. ನನ್ನ ಶರೀರದೊಳಗಿನ ಭ್ರಾಂತಿಯನ್ನು ತೆಗೆದು ಗುರುವು ನನ್ನೊಳಗಿನ ದೇವರನ್ನು ಎನ್ನ ಅಂಗೈಯಲ್ಲಿಟ್ಟು ತೋರಿದ. ನನ್ನ ಮನಸ್ಸಿನೊಳಗೆ ಚಿಂತೆಯ ಅಳಲನ್ನು ಅಳಿಸಿ ಸಮಾಜದಲ್ಲಡಗಿದ ದೇವರನ್ನು ತೋರಿದ, ಹೀಗೆ ಒಳಗೂ ಹೊರಗೂ ಒಂದಾಗಿ ಪಾವನವ ಮಾಡಿದ. ದೇವತೆಗಳು ನನ್ನನ್ನು ಕೈಲಾಸಕ್ಕೆ ಒಯ್ದಡೆ ಅವರಿಂದ ಬಿಡಿಸಿಕೊಂಡು ಬಂದ ಸಂಗನ ಬಸವಣ್ಣನೆ ಸರ್ವಸ್ವವಾಗಿ ಅವರ ದಯೆಯಿಂದಲೇ ಬದುಕಿದೆ ಎಂದು ಕೊಂಡಾಡುತ್ತಾ, ತಾವು ಮಾಡುವ ಕಾಯಕದ ರೀತಿ ಅದರ ಮಹತ್ವ ಹಾಗೂ ಕಾಯಕದ ಮೂಲಕ ಪಡೆದ ಲಿಂಗಾಂಗ ಸಾಮರಸ್ಯವನ್ನು ಕೇತಯ್ಯನವರು ತಮ್ಮ ವಚನಗಳಲ್ಲಿ ವಿವರಿಸಿದ್ದಾನೆ.

"ಭಕ್ತಂಗೆ ಸುಖವೂ ಸರಿ, ದುಃಖವೂ ಸರಿ,
ಉರಿ ಸಿರಿ ಉಭಯವೂ ಸರಿ ಎನ್ನದಿರ್ದಡೆ ಭಕ್ತನಿಗದೇ ಹಾನಿ.
ಜಂಗಮವೆಂದು ಪ್ರಮಾಣಿಸಿ,
ತನ್ನ ಕಂಗಳ ಮುಂದೆ ಕಂಡವರ ಭಂಜಿಸಲಿಕ್ಕೆ,
ತನ್ನಂಗವ ಹೊರೆದಡೆ ತೀರ್ಥಪ್ರಸಾದಕ್ಕೆ ಅವನಂದೇ ಹೊರಗು, ಗವರೇಶ್ವರಾ."

–ಮೇದಾರ ಕೇತಯ್ಯ

ಭಕ್ತನಾದವನು ಸುಖದಲ್ಲಿ ಹಿಗ್ಗದೆ ದುಃಖ ಬಂದಾಗ ಕುಗ್ಗದೆ ಬಡತನವಿರಲಿ ಶ್ರೀಮಂತನಾಗಿರಲಿ ಎರಡರಲ್ಲಿಯೂ ಭೇದವಿಲ್ಲದೆ ಏಕಭಾವದಿಂದಿರಬೇಕು ಎಂದು ಭಕ್ತನ ಭಕ್ತಿಯ ಮರ್ಮವನ್ನು ತಿಳಿಸಿದ್ದಾರೆ.

ಕಲ್ಯಾಣದಿಂದ ಮೇದಾರ ಕೇತಯ್ಯ–ಸಾತವ್ವೆಯರು ಬೀದರ ನಗರದ ಹೊರವಲಯದಲ್ಲಿರುವ ಚಿದ್ರಿ ಎಂಬ ಗ್ರಾಮದಲ್ಲಿ ಬಂದು ನೆಲೆಸಿ ತಮ್ಮ ಕಾಯಕದಲ್ಲಿ ನಿರತರಾದರು. ಬೀದರಿನ ದಕ್ಷಿಣದ ಕಾಡಿನಲ್ಲಿ ಒಂದು ಸಿಡಿಲು ಹೊಂಡವಿದೆ. ಸಿಡಿಲಿನಿಂದ ನೈಸರ್ಗಿಕವಾಗಿ ನಿರ್ಮಾಣವಾದ ಹೊಂಡ ಅದು ಎನ್ನಲಾಗುತ್ತದೆ. ವರ್ಷದ ಹನ್ನೆರಡು ತಿಂಗಳು ಆ ಹೊಂಡದಲ್ಲಿ ತಂಪಾದ, ಸಿಹಿ ನೀರು ತುಂಬಿರುತ್ತಿತ್ತು. ಎಂಥ ಬೇಸಿಗೆಯಲ್ಲಿಯೂ ನೀರು ಬತ್ತುವುದಿಲ್ಲ. ದಾರಿ ಹೋಕರಿಗೆ, ಕಾಡಿನಲ್ಲಿ ಕೆಲಸ ಮಾಡುವವರಿಗೆ, ದನಗಾಹಿಗಳಿಗೆ ಅದು ಜೀವಸೆಲೆಯಾಗಿತ್ತು. ಆ ಹೊಂಡದ ದಂಡೆಯಲ್ಲಿ ಒಂದು ಬೇವಿನ ಮತ್ತು ಅಶ್ವತ್ಥ ಮರಗಳಿದ್ದವು. ಆ ಎರಡು ಮರಗಳ ನೆರಳು ದಣಿದು ಬಂದ ಜೀವಿಗಳಿಗೆ ಕೈ ಮಾಡಿ ಕರೆದು ತಂಪನ್ನು ನೀಡುತ್ತಿದ್ದವು. ಬೀದರಿನ ಸುತ್ತಲಿರುವ ಹಳ್ಳಿಗಳಿಂದ ಬರುವ ಮೇದಾರರು, ಮೋಳಿಗೆಯವರು, ಬಡಿಗಿಗಳು ತಮ್ಮ ತಮ್ಮ ಕಾಯಕಕ್ಕೆ ಬೇಕಾದ ಸರಕುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಇಂಥ ಕಾಯಕ ಜೀವಿಗಳಿಗೆ ಆಯಾಸ ನೀಗಿಸಿಕೊಳ್ಳಲು, ಮಧ್ಯಾಹ್ನದ ಹಸಿವನ್ನು ತಣಿಸಿಕೊಳ್ಳಲು ತಮ್ಮ ಮನೆಯಿಂದ ತಂದ ಬುತ್ತಿ ಗಂಟನ್ನು ಬಿಚ್ಚಿ ಎಲ್ಲರೂ ಸೇರಿ ಊಟ ಮಾಡುತ್ತಿದ್ದರು. ಸಿಡಿಲು ಹೊಂಡದ ದಂಡೆಯಲ್ಲಿರುವ ಮರದ ನೆರಳಲ್ಲಿ ಒಂದು ಜುಳುಕು ಜೊಂಪಿಸಿ ಎದ್ದು ಮತ್ತೆ ಅವರವರ ಕಾಯಕಕ್ಕೆ ತೆರಳುತ್ತಿದ್ದರು.

ಕೇತಯ್ಯನವರು ಆ ಸಿಡಿಲು ಹೊಂಡದ ಹತ್ತಿರದಲ್ಲಿಯೇ ಗುಡಿಸಲು ಹಾಕಿಕೊಂಡು ವಾಸಿಸುತ್ತಿದ್ದರು. ಮೊದಮೊದಲಿಗೆ ಅಲ್ಲಿ ಒಂಟಿ ಗುಡಿಸಲೆನಿಸಿದರೂ ಮುಂದೆ ಕೆಲವೆ ದಿನಗಳಲ್ಲಿ ಅನೇಕ ಕಾಯಕ ಜೀವಿಗಳು ತಮ್ಮ ಕಾಯಕದ ಅನುಕೂಲಕ್ಕಾಗಿ ಕೇತಯ್ಯನವರ ನೆರೆಯಲ್ಲಿ ಗುಡಿಸಲು ಹಾಕಿಕೊಂಡು ವಾಸಕ್ಕೆ ಬಂದರು. ಆ ಪ್ರದೇಶದಲ್ಲಿ ಕಾಯಕ ಜೀವಿಗಳು ತಮಗೆ ಬೇಡವಾದ ಬರಲು ಗೆಲ್ಲುಗಳನ್ನು ಚಟಕಾಯಿಸಿ ಎಲ್ಲೆಂದರಲ್ಲಿ

ಚಿದಿರು ಉದುರಿಸಿ ಹೋಗಿದ್ದರಿಂದ ಜನರ ಬಾಯಲ್ಲಿ ಅದು "ಚಿದಿರಿ" ಯಾಗಿ ಮುಂದೆ ಚಿದ್ರಿ ಎಂದು ಹೆಸರಾಯಿತು.

ಮೇದಾರ ಕೇತಯ್ಯ ಸಾತವ್ವೆಯರು ನಸುಕಿನ ಜಾವದಲ್ಲಿ ಇಷ್ಟಲಿಂಗ ಪೂಜೆ ಮುಗಿಸುತ್ತಿದ್ದರು. ಒಂದು ದಿನ ನಸುಕಿನಲ್ಲಿ ಸಾತವ್ವೆ ತಳಿ ಹೊಡೆದು ಗುಡಿಸಲಿನ ಒಳಗೆ ಹೋಗಬೇಕು ಅನ್ನುವಷ್ಟರಲ್ಲಿ ಕುದುರೆಯ ಗೊರಸಿನ ಸದ್ದು ಕೇಳಿಸಿತು. ಯಾರು ಸ್ವಾಮಿ? ಇಂಥ ನಸುಕಿನಲ್ಲೆ ಪ್ರಯಾಣ ಮಾಡುತ್ತಿರುವವರು ಇಲ್ಲೇಕೆ ನಿಂತಿರಿ? ಏನು ಬೇಕಾಗಿತ್ತು? ಎಂದು ಕೇತಯ್ಯನವರು ಕೇಳುವಷ್ಟರಲ್ಲಿ ಆ ಇಬ್ಬರೂ ಕುದುರೆ ಸವಾರರೂ ಕೆಳಗೆ ಇಳಿದರು. ಗಾಬರಿಯಾಗಬೇಡಿ ಕೇತಯ್ಯನವರೆ, ನಾನು ಹಡಪದ ಅಪ್ಪಣ್ಣ, ಇವರು ಅಣ್ಣ ಬಸವಣ್ಣನವರು ಸಧ್ಯಕ್ಕೆ ನಮ್ಮ ಮುಂಜಾನೆಯ ಪೂಜೆಯ ವ್ಯವಸ್ಥೆಯಾಗಬೇಕು ಎಂದರು. ಆಗ ಕೇತಯ್ಯನವರು ಮರದ ಕೆಳಗೆ ಜಗುಲಿಯನ್ನು ಶುಚಿಗೊಳಿಸಿ ಪೂಜೆಗಾಗಿ ಅಣಿಮಾಡಿದರು. ಬಸವಣ್ಣನವರು ಪೂಜೆ ಮುಗಿಸಿಕೊಳ್ಳುವಷ್ಟರಲ್ಲಿ ಸಾತವ್ವೆ ಪ್ರಸಾದ ಎಡೆಮಾಡಿದಳು. ಪೂಜೆ ಪ್ರಸಾದದ ನಂತರ ಬಸವಣ್ಣನವರು ಹಡಪದಅಪ್ಪಣ್ಣನವರೊಂದಿಗೆ ಗದ್ದುಗೆಯಿಂದ ಪ್ರಯಾಣ ಬೆಳೆಸಿದರು. ಅವರು ಕಣ್ಮರೆಯಾಗುವವರೆಗೆ ದಂಪತಿಯರು ಗುಡಿಸಲಿನ ಎದುರಿಗೆ ನೋಡುತ್ತಲೇ ನಿಂತು, ಕಣ್ಮರೆಯಾದ ಮೇಲೆ ಭಾರವಾದ ಮನಸ್ಸಿನಿಂದ ಗುಡಿಸಲಿನ ಕಡೆ ಹೆಜ್ಜೆ ಹಾಕಿದರು.

ಒಮ್ಮೆ ಕಲ್ಯಾಣಕ್ಕೆ ಹೋಗಿ ಬರಬೇಕೆಂಬದು ಮನದಲ್ಲಿ ತುಡಿತವಾಗುತ್ತಿತ್ತು. ಸಾತ್ವವ್ವೆಗೆ ಹೇಳಿದಾಗ ಅವಳು ನನಗೂ ಎಲ್ಲಾ ಶರಣರ ಕಾಣುವ ತವಕ ಎಂದಳು. ಅಷ್ಟರಲ್ಲಿ ಕಲ್ಯಾಣದಲ್ಲಿ ಎದ್ದ ಕೋಲಾಹಲದಿಂದಾಗಿ ಶರಣರು ಚೆಲ್ಲಾಪಿಲ್ಲಿಯಾಗುತ್ತಿರುವ ಸುದ್ದಿ ಕೇತಯ್ಯನವರ ಮನಸ್ಸಿಗೆ ಸಿಡಿಲು ಬಡಿದ ಹಾಗಾಯಿತು.

ದಿನ ಕೇತಯ್ಯನವರು ಇವತ್ತು ಯಾಕೋ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ ತುಂಬಾ ತಳಮಳವಾಗುತ್ತಿದೆ. ಯಾವುದೊ ಕರೆ ಕೈಮಾಡಿ ಕರೆಯುತ್ತಿದೆ. ಈ ತಳಮಳ ಶಾಂತವಾಗಿ ಸೀಮಿತಕ್ಕೆ ಬರಬೇಕಾದರೆ ಲಿಂಗಸಾಧನೆಯಲ್ಲಿ ಮೈ ಮರೆಯಬೇಕು ಎಂದು ಕೇತಯ್ಯನವರು ಸಿಡಿಲು ಹೊಂಡದಲ್ಲಿ ಮುಳುಗೆದ್ದು ಮರದ ಕೆಳಗಿನ ಜಗುಲಿಯ ಕಡೆಗೆ ಬರುತ್ತಾರೆ. ಇಷ್ಟಲಿಂಗ ಪೂಜೆಗಾಗಿ ಪದ್ಮಾಸನ ಹಾಕಿ ಕುಳಿತುಕೊಂಡವರು ನಿಧಾನವಾಗಿ ಅಂತರ್ಮುಖಿಯಾಗುತ್ತಾರೆ. ಬರಬರುತ್ತಾ ಅವರ ಬಾಹ್ಯೇಂದ್ರಿಯಗಳು ಸ್ತಬ್ಧವಾಗಹತ್ತಿದವು. ಉಸಿರಾಟ ಮಂದಮಂದವಾಗುತ್ತಾ ನಿಂತು ಹೋಯಿತು. ಇದೇನು ಕೇತಯ್ಯನವರು ಪೂಜೆಯಿಂದ ಮೇಲೇಳುತ್ತಿಲ್ಲ ಎಂದು ಅಲ್ಲಾಡಿಸುತ್ತಿದ್ದಂತೆ ಕೇತಯ್ಯನವರ ಶರೀರ ಬುತ್ತಿ ಬಸವಣ್ಣನ ಜಗುಲಿಯ ಮೇಲೆ ಉರುಳಿತು. ಅದನ್ನು ಕಂಡು ನೆರೆದ

ಎಲ್ಲಾ ಶರಣರಿಗೆ ಎಷ್ಟೇ ನಿಯಂತ್ರಿಸಿದರೂ ದುಃಖ ಉಮ್ಮಳಿಸಿ ಬಂತು. ಸಾತವ್ವೆ ದುಃಖದಿಂದ ಪ್ರಲಾಪಿಸುತ್ತಾ ಕುಸಿದಳು. ಮತ್ತೆ ಎಲ್ಲರೂ ಸ್ವಲ್ಪ ಸುಧಾರಿಸಿಕೊಂಡು ಕಲ್ಯಾಣದಿಂದ ಬಂದ ಶರಣರೆಲ್ಲರೂ ಕೂಡಿ ಮೇದಾರ ಕೇತಯ್ಯನವರ ಪಾರ್ಥಿವ ಶರೀರಕ್ಕೆ ಮಜ್ಜನ ಮಾಡಿಸಿ, ಭಸ್ಮಸ್ನಾನ ಮಾಡಿ, ಪ್ರಣವ ಪಂಚಾಕ್ಷರಿ ಮಂತ್ರ ಘೋಷಣೆಯೊಂದಿಗೆ ಪಂಚಭೂತದೊಳಗೆ ಸಮಾಲೀನಗೊಳಿಸಿದರು.

ಬೀದರದಿಂದ 4 ಕಿಲೋ ಮೀಟರ್ ದೂರದಲ್ಲಿ ಚಿದ್ರಿ ಎಂಬ ಗ್ರಾಮವಿದೆ. (ಅದು ಈಗ ಬೀದರ ನಗರದಲ್ಲಿಯೇ ಸೇರಿಕೊಂಡಿದೆ) ಅಲ್ಲಿ ಬುತ್ತಿ ಬಸವಣ್ಣನ ಆ ದೇವಾಲಯ ಮತ್ತು ಸಿಡಿಲು ಹೊಂಡವಿದೆ. ಬಸವಣ್ಣನವರು ಇಷ್ಟಲಿಂಗ ಪೂಜೆ ಮಾಡಿಕೊಂಡು ಹೋದ ಸ್ಥಳದಲ್ಲಿಯೇ ಕೇತಯ್ಯನವರು ಇಷ್ಟಲಿಂಗ ಪೂಜೆ ಮಾಡಿಕೊಳ್ಳುತ್ತಾ ಐಕ್ಯರಾದರು ಎಂದು ಪ್ರತೀತಿ ಇದೆ. ಮೇದಾರ ಕೇತಯ್ಯನವರ ಸಮಾಧಿ (ಐಕ್ಯಸ್ಥಳ) ಬೀದರ ನಗರದ ಹೊರವಲಯದಲ್ಲಿರುವ ಚಿದ್ರಿಯ ಬುತ್ತಿ ಬಸವಣ್ಣನ ದೇವಸ್ಥಾನದಿಂದ 1.6 ಕಿಲೋ ಮೀಟರ ದೂರದಲ್ಲಿದೆ. ಬೀದರದಿಂದ ಕೇತಯ್ಯನವರ ಸಮಾಧಿಯು 2.4 ಕಿಲೋ ಮೀಟರ ದೂರದಲ್ಲಿ ಇದೆ.

ಮೊದಲು ಇಲ್ಲಿ ಬಯಲಿನಲ್ಲಿರುವ ಮೇದಾರ ಕೇತಯ್ಯನವರ ಸಮಾಧಿ ಗದ್ದುಗೆಗೆ ಯಾವುದೇ ರಕ್ಷಣೆ ಇರಲಿಲ್ಲ. ಆಗಾಗ ಮೇದಾರ ಸಮಾಜದವರು ಬಂದು ಪೂಜೆ ಸಲ್ಲಿಸಿ ಹೋಗುತ್ತಿದ್ದರು. ಹಲವಾರು ಸಲ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾಗ ಚಿತ್ರದುರ್ಗದ ಒಂದು ಕಾರ್ಯಕ್ರಮದಲ್ಲಿ ಕೇತಯ್ಯನವರ ಸಮಾಧಿಗೆ ಒಂದು ಕೋಟಿ ರೂ. ನೀಡುವುದಾಗಿ ಸಮಾಜಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಭರವಸೆ ನೀಡಿದ್ದರು. ಆದರೆ ಇದುವರೆಗೆ ಯಾವ ಅನುದಾನವು ಸಿಕ್ಕಿಲ್ಲ. ಇದ್ದ ಕೇತಯ್ಯನವರ ಸಮಾಧಿ ಸ್ಥಳದಲ್ಲಿ ಆ ಕಡೆಯಿಂದ ಈ ಕಡೆಯಿಂದ ಜನರು ಸ್ಥಳ ಕಬಳಿಸಿ ಅತಿ ಚಿಕ್ಕದಾಗಿಸಿದ್ದಾರೆ. 12ನೇ ಶತಮಾನದ ಮಹಾನ್ ಶರಣರಲ್ಲಿ ಒಬ್ಬರಾದ ಮೇದಾರ ಕೇತಯ್ಯನವರ ತತ್ವ ಸಿದ್ಧಾಂತವನ್ನು ಉಳಿಸಬೇಕಾದರೆ ಅವರ ಐಕ್ಯ ಸ್ಥಳವನ್ನು ನಾವು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು. ಇದೀಗ ಬೀದರ ಜಿಲ್ಲೆ ಮೇದಾರ ಸಮಾಜದ ಮುಖಂಡರೆಲ್ಲರೂ ಮುಂದಾಳತ್ವ ವಹಿಸಿಕೊಂಡು ಎಲ್ಲಾ ಮೇದಾರ ಸಮಾಜದ ಜನರು ಕೂಡಿ ಇದ್ದಷ್ಟೇ ಸ್ಥಳದಲ್ಲಿ ಕೇತಯ್ಯನವರ ಐಕ್ಯ ಮಂಟಪ, ಹೆಬ್ಬಾಗಿಲು ನಿರ್ಮಿಸಿದ್ದಾರೆ ಎಂಬುದೇ ಒಂದು ಸಂತೋಷವಾದರೂ ನಶಿಸಿ ಹೋಗುತ್ತಿರುವ ಶರಣರ ಐಕ್ಯಸ್ಥಳಗಳಲ್ಲಿ ತತ್ವ ಅಡಗಿದೆ ಎಂಬುದನ್ನು ನಾವು ಮರೆಯಬಾರದು.

****

ಸ್ವಾಭಿಮಾನಿ ಲದ್ದೆಯ ಸೋಮಣ್ಣ

"ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ,
ಎನ್ನ ಒಡಲಿಂಗೆ, ಎನ್ನ ಒಡವೆಗೆಂದು ಎನ್ನ ಮಡದಿ–ಮಕ್ಕಳಿಗೆಂದು,
ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ !
'ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ॥
ಎಂಬ ಶ್ರುತಿಯ ಬಸವಣ್ಣ ನೋದುವನು,
ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ ? ಕೊಡಲಮ್ಮೆ.
ಹೊಲೆಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನದಡೆ
ತಲೆದಂಡ ಕೂಡಲಸಂಗಮದೇವಾ !"

–ಬಸವಣ್ಣನವರು

ಬಸವಣ್ಣನವರ ಕಾಯಕದ ಒಳಗೆ ಗಂಬೀರವಾಗಿ ಹರಿವ ನಿಜೋದ್ದೇಶ ದಾಸೋಹ, ಲಿಂಗನಿಷ್ಠೆ, ನ್ಯಾಯನಿಷ್ಠುರ ಭಕ್ತನ ನಿತ್ಯಕಾಯಕದಲ್ಲಿ ಚಕಚಕಿಸುತ್ತದೆ. ಕಾಯಕದಲ್ಲಿ ಹೊಳೆಯುತ್ತಿದ್ದ ಬಸವಣ್ಣನವರು ಹೇಳ್ತಾರೆ ಕೂಡಲಸಂಗಮದೇವನ ಮಹಾಮನೆಯ ಡಿಂಗರಿಗ ನಾನಾಗಿದ್ದು, ನಿಮಗಾಗಿ ದುಡಿದು, ನಿಮ್ಮ ಸೊಮ್ಮು ನಿಮಗೆ ಸಲ್ಲಿಸಿ, ನಿಮ್ಮ ಆಳಿನ ಆಳಾಗಿ, ನಿಮಗೆಂದು ದುಡಿವುದು. ಶರಣ ಕಾಯಕ ಮಾಡುತ್ತಿರುವಾಗ ಆ ಕಾಯಕಕ್ಕೆ ಪಡಿಯಾಗಿ ಬಂದದ್ದರಲ್ಲಿ ಎನ್ನ ಒಡಲಿಂಗೆ ಮತ್ತು

ಹೆಂಡತಿ ಮಕ್ಕಳಿಗೆ, ತನ್ನ ಪ್ರಪಂಚಕ್ಕೆ ಬೇಕೆಂದು ಕುದಿಯುತ್ತ ದುಡಿದರೆ, ಬಯಸಿ ಬೇಡಿದರೆ, ವಂಚಿಸಿ ಉಳಿಸಿಕೊಂಡರೆ ತನ್ನ ತಲೆಯನ್ನು ದಂಡವಾಗಿ ಕೊಡುವೆನೆಂಬ ಛಲವಂತರು. ಶರಣರು ಹಗಲಿರುಳು ಕುದಿಯುತ್ತಿರುವುದು ಯಾರಿಗೆ? ನಿಮ್ಮ ನಿಲುವಿಂಗೆ, ಗುರು ಲಿಂಗ ಜಂಗಮದ ನಿಲುವಿಗೆ, ನಿರ್ವಂಚಕ ಬುದ್ದಿಯಿಂದ ದುಡಿದು ನಿಮ್ಮ ಸೊಮ್ಮನ್ನು ನಿಮಗರ್ಪಿಸಿದಲ್ಲಿ ಅದು ಕಾಯಕವಾಗಿ ದಾಸೋಹವಾಗಿ ಸಲ್ಲುತ್ತದೆ ಎಂಬುದೆ ಬಸವಣ್ಣನವರು ನೀಡಿದ ಮಹೋನ್ನತ ನಿಲುವಾಗಿದೆ. ಆದರೆ ನಾವಿಂದು ಮಾಡುತ್ತಿರುವುದು ನಮಗಾಗಿ ಎಲ್ಲದಕ್ಕೂ ಗುಡಿ ಗುಂಡಾರಕ್ಕೆ ಮೊರೆಹೋಗುವ ಮತ್ತು ನಾವು ನಡೆಸಿರುವ ವೃತಿ ಉದ್ಯೋಗ ಕಸಬುಗಳಿಗೂ ಹಾಗೂ ಬಸವಾದಿ ಶರಣರ ಕಾಯಕಕ್ಕೂ ಇರುವ ಭೂಮಿ ಆಕಾಶದ ಅಂತರವೆಂಬುದು ನಮಗೀಗ ಸ್ಪಷ್ಟವಾಗಿರಬೇಕು. ಕೇವಲ ಮೇಲ್ವರ್ಗದವರ ಸೇವೆ ಮಾಡಿಕೊಂಡು ಬದುಕಿದ ಶ್ರಮಜೀವಿಗಳನ್ನು ಕಾಯಕಜೀವಿಗಳಾಗಿ ಮಾಡುವುದಲ್ಲದೆ ಸ್ವಾಭಿಮಾನಿಗಳಾಗಿ ಬೆಳೆಯಲು ಅವಕಾಶ ಕಲ್ಪಿಸಿದವರು ಬಸವಣ್ಣನವರು. ಅಂಥ ಕಾಯಕಜೀವಿಗಳಲ್ಲಿ ಎದ್ದು ಕಾಣುವಂಥ ಸ್ವಾಭಿಮಾನಿ ಶರಣ ಲದ್ದೆಯ ಸೋಮಣ್ಣನವರು.

ಬಸವಣ್ಣನವರ ಸಮಕಾಲೀನ ಶರಣರಾದ ಸೋಮಣ್ಣನವರು ಮೂಲತಃ ಭಾಲ್ಕಿ ತಾಲೂಕಿನಲ್ಲಿ ಬರುವ ಲದ್ದೆ (ಲಾದಾ) ಗ್ರಾಮದವರು. ತಮ್ಮ ಊರಿಗೆ ಸಮೀಪದಲ್ಲಿ ಬರುವ ಬಸವಕಲ್ಯಾಣ ತಾಲೂಕಿನ ಹುಲಸೂರಿನಲ್ಲಿ ಹುಲ್ಲು ಮಾರುವ ಕಾಯಕದಲ್ಲಿ ನಿರತರಾಗಿ ಲದ್ದೆಯ ಸೋಮಣ್ಣ ತನ್ನ ಪತ್ನಿಯೊಂದಿಗೆ ಹುಲಸೂರಿನಲ್ಲಿಯೇ ನೆಲೆಸಿದರು. ಅಂದಿನ ಕಾಲದಲ್ಲಿ ಹುಲಸೂರು ಒಂದು ಪ್ರಸಿದ್ಧ ದೇಗುಲಗಳ ಹಾಗೂ ವಾಣಿಜ್ಯ ಕೇಂದ್ರವಾಗಿತ್ತು. ಕೃಷಿಯ ಪ್ರಮುಖ್ಯತೆ ಹೆಚ್ಚಾಗಿರುವುದರಿಂದ ಸಹಜವಾಗಿಯೇ ಅಲ್ಲಿದ್ದ ದನಕರುಗಳಿಗೆ ಮತ್ತು ಕುದುರೆಗಳಿಗೆ ಹುಲ್ಲನ್ನು ಒದಗಿಸುವವರಲ್ಲಿ ಒಬ್ಬರಾಗಿದ್ದರು. ಹುಲಸೂರಿಗೆ ಹತ್ತಿರದಲ್ಲಿರುವ ಕಲ್ಯಾಣದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಅದ್ಭುತವಾದ ವಚನ ಚಳವಳಿಯಿಂದಾಗಿ ದೂರದೂರದಿಂದ ಆಕರ್ಷಿತರಾಗಿ ಜನರು ಧಾವಿಸುತ್ತಿದ್ದರು. ಅದಕಂಡ ಸೋಮಣ್ಣಸವರು ಕಲ್ಯಾಣಕ್ಕೆ ಬಂದು ನೆಲೆಸಿ, ಅಲ್ಲಿಯೇ ತಮ್ಮ ಕಾಯಕ ನೇರವೇರಿಸುತ್ತಾ ಅನುಭವ ಮಂಟಪದಲ್ಲಿ ಭಾಗಿಯಾಗಿ ಶರಣಸಂಕುಲದಲ್ಲಿ ಬೆರೆತರು.

ಸೋಮಣ್ಣನವರಿಗೆ ತಮ್ಮ ಆರಾಧ್ಯ ದೇವನಾದ ಸೋಮೇಶ್ವರನಲ್ಲಿ ಅತ್ಯಂತ ಭಕ್ತಿ ಶ್ರದ್ಧೆ ನಿಷ್ಠೆ ಇರುವುದನ್ನು ಕಂಡುಬರುತ್ತದೆ. ತನ್ನ ಊರಿನ ಹೆಸರಿನೊಂದಿಗೆ ಗುರುತಿಸಿಕೊಂಡಿರುವ ಇವರು ರಚಿಸಿರುವ ವಚನವು "ಭಾಪು ಲದ್ದೆಯ ಸೋಮಾ" ಎಂಬ ಅಂಕಿತನಾಮದಿಂದ ಕೂಡಿದ ಕೇವಲ ಒಂದೇ ಒಂದು ವಚನ ದೊರೆತಿದೆ. ಸೋಮಣ್ಣನವರ ವೈಯಕ್ತಿಕ ಜೀವನದ ಸಂಗತಿಗಳು ಅಷ್ಟಾಗಿ ಲಭ್ಯವಾಗಿಲ್ಲ. ಆದರೂ

ಇವರು ಮಾಡಿದ ಕಾಯಕ, ಯಾರ ಹಂಗಿಲ್ಲದೆ ಸ್ವಾಭಿಮಾನದ ಬದುಕು, ಇಂದಿಗೂ ಜನರ ಮನದಲ್ಲಿ ಅಚ್ಚಳಿಯದೆ ಉಳಿದುಕೊಳ್ಳುವಂಥ ವಚನ ಅವರದಾಗಿದೆ.

"ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು
ವ್ಯಾದಿ ಬಂದಡೆ ನರಳು, ಬೇನೆ ಬಂದಡೆ ಒರಲು,
ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ,
ಭಾಪು ಲದ್ದೆಯ ಸೋಮಾ."

–ಲದ್ದೆಯ ಸೋಮಣ್ಣ.

ಶರಣಸಂಕುಲದಲ್ಲಿನ ಕಾಯಕನಿಷ್ಠೆ, ಆತ್ಮಗೌರವ, ಎಂಥದ್ದೆಂದು ಎತ್ತಿಹಿಡಿದ ಲದ್ದೆಯ ಸೋಮಣ್ಣನವರ ಈ ವಚನದಲ್ಲಿ ತೋಚುತ್ತದೆ. ಯಾವುದೇ ಕಾಯಕವಾದರೂ ಸರಿಯೇ ತಲ್ಲೀನವಾಗಿ ಮಾಡಿ ಆ ಕಾಯಕದಿಂದ ಬಂದದ್ದನ್ನು ಗುರು ಲಿಂಗ ಜಂಗಮಕ್ಕೆ ದಾಸೋಹಂ ಭಾವದಿಂದ ಅರ್ಪಿಸಿದ ನಂತರ ಉಳಿದಿದ್ದನ್ನು ಪ್ರಸಾದವಾಗಿ ಸ್ವೀಕರಿಸುವುದು. ತನಗೆ ಕಷ್ಟ–ನಷ್ಟಗಳು ಬಂದರೆ ಯಾರ ಮುಂದೆಯೂ ಕೈಚಾಚಬಾರದು; ಅಷ್ಟೇ ಏಕೆ, ದೇವರ ಮುಂದೆಯೂ ಬೇಡಬಾರದು. ರೋಗ ಬಂದರೆ ನರಳು, ನೋವಾದರೆ ಅರಚು, ಸಾವು ಬಂದರೆ ಸಾಯಿ, ಎಲ್ಲವನ್ನು ಅನುಭವಿಸಬೇಕು ಇದಕ್ಕೆ ಆ ದೇವರ ಹಂಗೇಕೆ ? ಎನ್ನುತ್ತಾ ದೇವರ ಹಂಗಿನಲ್ಲಿ ಕೂಡ ಇರಬಾರದೆಂಬ ಛಲ ಮತ್ತು ಜನನದಂತೆ ಮರಣವೂ ಒಂದು ಜೈವಿಕ ಪ್ರಕ್ರಿಯೆಯಾಗಿದೆ ಎಂಬುದು ಅರಿತು ಸಂತೋಷದಿಂದ ಇರಬೇಕು. ಏಕಾಗ್ರತೆಯಿಂದ ಮಾಡಿದ ಕಾಯಕ ಮಾತ್ರ ಆನಂದವನ್ನು ಕೊಡುತ್ತದೆ ಎಂಬ ಸ್ವಾಭಿಮಾನದ ಉತ್ಸಾಹ ಮತ್ತು ದೇವರ ಜೊತೆಗಿನ ಸಲುಗೆಯ ಭಾವ ಎದ್ದು ಕಾಣುವ ಮಹತ್ವದ ನಿಲುವುಗಳನ್ನು ಹೊಂದಿದ ಲದ್ದೆಯ ಸೋಮಣ್ಣನವರು ಅಸಾಮಾನ್ಯ ಧೀರವ್ಯಕ್ತಿತ್ವದ ವಚನಕಾರರಾಗಿದ್ದಾರೆ.

ಒಮ್ಮೆ ಸೋಮಣ್ಣನವರ ಹೆಂಡತಿಯ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬಂದು ತುಂಬಾ ಸಂಕಟಪಡುತ್ತಾಳೆ. ರೋಗದ ನೋವನ್ನು ತಾಳಲಾರದೆ ಗಂಡನಿಗೆ ತನ್ನ ಕಷ್ಟವನ್ನು ನಿವಾರಿಸಲು ನೀವು ಶಿವನಲ್ಲಿ ಪ್ರಾರ್ಥಿಸಿಕೊಳ್ಳಿ ಎಂದು ಬೇಡಿಕೊಳ್ಳುತ್ತಾಳೆ. ಆಗ ಸ್ವಾಭಿಮಾನಿ ಶರಣ ಸೋಮಣ್ಣ 'ಭಕ್ತನು ದೇವರನ್ನು ಬೇಡಬಾರದು' ದೇವರನ್ನು ಕೇಳಿದರೆ ಅದು ಭಕ್ತಿಯ ಮೌಲ್ಯ ಕಳೆದುಕೊಂಡು ವ್ಯವಹಾರವಾಗುತ್ತದೆ. ಆದ್ದರಿಂದ ನಮಗೆ ಬರುವ ದೈಹಿಕ ನೋವನ್ನು ಸಹಿಸಿಕೊಳ್ಳಬೇಕು, ಎಂದು ಹೇಳಿ ಸತಿಯ ವಿನಂತಿಯನ್ನು ಗಂಭೀರವಾಗಿ ಪರಿಗಣಿಸದೆ ತನ್ನ ಕಾಯಕಕ್ಕೆ ತೆರಳುತ್ತಾರೆ.

ಸೋಮ್ಮಣ್ಣ ಮನೆಯಲ್ಲಿಲ್ಲದ್ದನ್ನು ಅರಿತ ಶಿವನು ಅವರ ಮನೆಗೆ ಬಂದು ಅವರ ಹೆಂಡತಿಗೆ ನಾನು ನಿನ್ನ ದೇಹಕ್ಕೆ ಅಂಟಿರುವ ರೋಗವನ್ನು ದೂರಮಾಡಲು ಬಂದಿರುವೆ. ಆದರೆ ನೀನು ಶಿವ ಶಿವ ಎಂದು ಪ್ರಾರ್ಥನೆ ಮಾಡಬೇಕು ಎನ್ನತ್ತಾನೆ. ಮೊದಲಿಗೆ ನಿರಾಕರಿಸಿ ಮತ್ತೆ ದೇಹದ ನೋವನ್ನು ಸಹಿಸಿಲಾಗದೆ ಶಿವನನ್ನು ಅನನ್ಯಳಾಗಿ ಸ್ಮರಿಸುತ್ತಾಳೆ. ಶಿವನಾಮಸ್ಮರಣೆಯಿಂದ ಕೊಡಲೇ ಅವಳ ನೋವು ನಿವಾರಣೆಯಾಗುತ್ತದೆ. ಕಾಯಕದಿಂದ ಮರಳಿದ ಸೊಮಣ್ಣನವರು ಹೆಂಡತಿಯು 'ಶಿವನನ್ನು ಬೇಡಿಕೊಂಡು ಗುಣಮುಖಳಾದದ್ದನ್ನು ಕಂಡು ಸಂತೋಷಪಡದೆ ಕೋಪಗೊಂಡು, ನೀನು ಭಕ್ತಿಯನ್ನು ಕೊಡುಕೊಳ್ಳುವ ವ್ಯವಹಾರ ಮಾಡಿದೆ ನಿನಗೆ ಶಿಕ್ಷೆಯಾಗಲೇಬೇಕು' ಎಂದು ಕೋಪದ ಭರದಲ್ಲಿ ಹೆಂಡತಿಯ ಮೂಗನ್ನು ಕೊಯ್ದು ಎಸೆದಾಗ ಅಲ್ಲಿ ಸ್ಮಾರಕವಾಗಿ, ಮೂಗನೂರು ಎಂಬ ಹೆಸರಿನ ಊರೇ ನಿರ್ಮಾಣವಾಯಿತಂತೆ. ಶಿವನು ಸೋಮಣ್ಣನ ಉಗ್ರವತಾರವನ್ನು ಶಮನ ಮಾಡಲು ಪ್ರತ್ಯಕ್ಷನ್ನಾಗಿ ನಿನ್ನ ಭಕ್ತಿ, ನಿಷ್ಠೆಗೆ ಮೆಚ್ಚಿದ್ದೇನೆ. ನಿನ್ನ ಹೆಂಡತಿಯ ಮೂಗನ್ನು ಸರಿಪಡಿಸಿದ್ದೇನೆ, ನಿನ್ನಂಥ ನಿಷ್ಠಾವಂತ ಭಕ್ತನನ್ನು ಕಂಡು ನಾನು ಮೆಚ್ಚಿದೆ ನೀನಗೇನು ಬೇಕು ಕೇಳು ನೀನು ಬೇಡಿದ ವರವನ್ನು ನೀಡುತ್ತೇನೆ. ಎಂದ ಶಿವನ ಒತ್ತಾಯಕ್ಕೆ ಮಣಿಯದ ಸೋಮಣ್ಣ ತನ್ನ ಆತ್ಮಭಿಮಾನವನ್ನು ಬಿಟ್ಟುಕೊಡಲಿಲ್ಲ.

ಸದಾ ಕಾಯಕದಲ್ಲಿ ನಿರತನಾಗಿರುವ ಸೋಮಣ್ಣ ಯಾರ ಸಹಾಯವಿಲ್ಲದೆ ತಾನೇ ಹುಲ್ಲನ್ನು ಕೊಯ್ದು ಅದನ್ನು ಹೊರೆಯಾಗಿ ಕಟ್ಟಿ ಸಂತೆಯಲ್ಲಿ ಮಾರಿ, ಬಂದ ಆದಾಯದಲ್ಲಿ ದಾಸೋಹ ಸಲ್ಲಿಸುತ್ತಾ ತನ್ನ ಜೀವನವನ್ನು ಸಾಗಿಸಿಕೊಳ್ಳುತ್ತಿದ್ದರು. ಒಂದು ದಿನ ಶಿವನು ಇವರ ಭಕ್ತಿ ಸಾಮರ್ಥ್ಯವನ್ನು ಪರಿಕ್ಷೇಮಾಡಬೇಕೆಂದು ದೊಡ್ಡ ಗಾತ್ರದ ಕಲ್ಲನ್ನು ಹುಲ್ಲಿನ ಹೊರೆಯಲ್ಲಿ ಮುಚ್ಚಿಟ್ಟನು. ಸೋಮಣ್ಣ ಎಂದಿನಂತೆ ಹುಲ್ಲಿನ ಹೊರೆಯನ್ನು ಎತ್ತಲು ಹೋದಾಗ ಅದು ಬಹಳ ಭಾರವೆನಿಸುತ್ತದೆ. ಇದು ಶಿವನ ಪರೀಕ್ಷೇಯ ಆಟವೆಂದರಿತ ಸೋಮಣ್ಣ, ನನ್ನ ಭಕ್ತಿಯ ಸಾಮರ್ಥ್ಯವನ್ನು ನೀನು ನೋಡು ಎಂದು ತನ್ನ ಎಡಗಾಲಿನ ಅಂಗುಷ್ಟದಿಂದ ಹುಲ್ಲಿನ ಹೊರೆಯನ್ನು ಚಿಮ್ಮಿಸಿದರೆ, ಅದು ಸಂತೆಯ ಆವರಣದಲ್ಲಿ ಹೋಗಿ ಬಿದ್ದಿತಂತೆ. ಭಕ್ತವತ್ಸಲನಾದ ಶಿವನು ಪ್ರತ್ಯಕ್ಷನ್ನಾಗಿ 'ನಿನ್ನ ಭಕ್ತಿ ಸಾಮರ್ಥ್ಯ ಹಾಗೂ ಕಾಯಕ ನಿಷ್ಠೆಗೆ ನಾನು ಮನಸೋತಿರುವೆ ನೀನು ಯಾವ ವರವನ್ನಾದರೂ ಕೇಳು ನೀಡುತ್ತೇನೆ'. ಸ್ವಾಭಿಮಾನಿ ಸೋಮಣ್ಣ ನನ್ನ ಭಕ್ತಿ ಮಾರಾಟದ ವಸ್ತುವಲ್ಲ ಎಂದು ನಿರಾಕರಿಸಿದರೂ ಕೇಳದೆ ಮತ್ತೆ ಮತ್ತೆ ಭಕ್ತನನ್ನು ವಿನಂತಿಸುತ್ತಿರುವ ಶಿವನ ಒತ್ತಾಯಕ್ಕೆ ಮಣಿದು, ನೀನೇ ಇಷ್ಟೊಂದು ಹಟ ಮಾಡುವುದಾದರೆ ನೀನು ಸದಾ ನನ್ನ ಮುಂದಿರು ಎಂದು ಸೋಮಣ್ಣ ಕೇಳಿಕೊಳ್ಳುತ್ತಾರಂತೆ. ಭಕ್ತನ ಬಯಕೆ ಶಿವನು ಒಪ್ಪಿಕೊಂಡು " ನಿನ್ನ ಭಾವಕ್ಕೆ ಮೆಚ್ಚಿದೆನು

ನೀನು ಹೇಳಿದಾಂಗ ನಿನ್ನ ಮುಂದೆ ಕುಂತಿದೆನಯ್ಯ। ಲದ್ದೆಸೋಮ" ಎಂಬ ಹೇಳಿಕೆಯ ಸೋಜಿಗದ ಪ್ರಸಂಗಗಳು ದಂತಕಥೆಗಳಲ್ಲಿ ಕಂಡುಬರುತ್ತವೆ.

ಬೀದರ ಜಿಲ್ಲೆಯಲ್ಲಿ ಲದ್ದೆ ಎಂಬ ಹೆಸರಿನ ಎರಡು ಗ್ರಾಮಗಳಿವೆ. ಔರಾದ(ಬಿ) ತಾಲೂಕಿನಲ್ಲಿ ಒಂದು ಲದ್ದೆ (ಲಾದಾ) ಬರುತ್ತದೆ ಆದರೆ ಭಾಲ್ಕಿ ತಾಲೂಕಿನಲ್ಲಿ ಬರುವ ಲದ್ದೆ (ಲಾದಾ) ಗ್ರಾಮದವರೆ ಎನ್ನಲಾಗುವ ಸೋಮಣ್ಣನವರು ಕಲ್ಯಾಣದಲ್ಲಿ ಶರಣರೊಡಗೂಡಿ ಕಾಯಕ ನಡೆಸಿ, ಅನುಭಾವದಲ್ಲಿ ಪಾಲ್ಗೊಂಡು ಶರಣರೊಡನೆ ಜೀವನ ಸಾಗಿಸುತ್ತಿದ್ದರು. ಶರಣರ ಕಾಯಕವನ್ನು ಸಹಿಸದ ಕೊಂಡಿಗಳು ಕಲ್ಯಾಣದಲ್ಲಿ ಕೋಲಾಹಲ ಎಬ್ಬಿಸಿದರು. ಬಸವಣ್ಣನವರಿಲ್ಲದ ಕಲ್ಯಾಣ ಉರಿವ ನಗರಿಯಾಯಿತು. ಉಳಿದ ಶರಣರು ವಚನ ಸಾಹಿತ್ಯದ ರಕ್ಷಣೆಗಾಗಿ ಬೇರೆ ಬೇರೆ ದಿಕ್ಕಿಗೆ ಹೊರಟು ಹೋದರು. ಲದ್ದೆಯ ಸೋಮಣ್ಣನವರು ತಮ್ಮ ಮೊದಲ ಕಾಯಕ ಕ್ಷೇತ್ರವಾದ ಹುಲಸೂರಿಗೆ ಮರಳಿದರು. ಸೋಮಣ್ಣ ಇಷ್ಟಲಿಂಗ ಪೂಜೆಯೊಂದಿಗೆ ಲದ್ದೆ ಮತ್ತು ಹುಲಸೂರಿನಲ್ಲಿ ಬಸವತತ್ವ ಪ್ರಚಾರ ಮಾಡುತ್ತಾ ತಮ್ಮ ನಡೆನುಡಿಗಳಿಂದ ಸಾಮಾನ್ಯ ಜನರಿಂದ 'ಸೋಮಾರಾಧ್ಯ' ಎಂದು ಪ್ರಸಿದ್ಧಿ ಪಡೆದು, ಕೊನೆಯ ದಿನಗಳು ಹುಲಸೂರಿನಲ್ಲಿಯೆ ಕಳೆದು ಅಲ್ಲಿಯೇ ಲಿಂಗೈಕ್ಯರಾದರು ಎಂಬ ಪ್ರತೀತಿಯಿದೆ.

ಇತ್ತೀಚೆಗೆ ಬೀದರ ಜಿಲ್ಲೆಯಲ್ಲಿ ಹೊಸ ತಾಲೂಕು ಕೇಂದ್ರವಾದ ಹುಲಸೂರಿನಲ್ಲಿ ಲದ್ದೆ ಸೋಮಣ್ಣನವರ ಐಕ್ಯಸ್ಥಳದಲ್ಲಿ ಸಮಾಧಿ (ಗದ್ದುಗೆ) ಇದೆ. ಲದ್ದೆ ಸೋಮಣ್ಣನ ಗುಡಿ ಎಂದು ಕರೆಯಲ್ಪಡುವ ದೇವಾಲಯದಲ್ಲಿ ಎರಡು ಸ್ಥಾವರಲಿಂಗ ಸ್ಥಾಪಿಸಿದ್ದಾರೆ. ಸೋಮಣ್ಣನವರ ಗದ್ದುಗೆ ಮೇಲೆ ಇರುವ ಲಿಂಗ ಹಿಂದಿನದಾದರೆ ಸೋಮೇಶ್ವರ ದೇವರಲಿಂಗ ಮುಂದೆ ಇದೆಯೆಂಬ ಅಲ್ಲಿನ ಸ್ಥಳಿಯರ ಭಾವನೆಯಾಗಿದೆ. ಇತಿಹಾಸದಲ್ಲಿ ಸ್ವಲ್ಪ ತಿರುವು ಮುರುವಾದರೂ ಸೋಮಣ್ಣನವರ ಊರಾದ ಲಾದಾದಲ್ಲಿಯೂ ಮತ್ತು ಹುಲಸೂರಿನಲ್ಲಿಯೂ ಶರಣ ಸೋಮಣ್ಣನವರ ವಿಶೇಷ ಪೂಜೆ ಉತ್ಸವ ಅನೇಕ ಕಾರ್ಯಕ್ರಮಗಳು ನಡೆಯುತ್ತವೆ. ಮುಖ್ಯವಾಗಿ ಇಂದಿಗೂ ಅವರ ಒಂದು ವಚನವು ಎಲ್ಲಾ ಕಡೆಗಳಲ್ಲಿ ಹಚ್ಚ ಹಸಿರಾಗಿ ನಳನಳಿಸುತ್ತಿರುವುದು ಕಂಡುಬರುತ್ತದೆ.

****

ನಿಜಸುಖಿ ಹಡಪದ ಅಪ್ಪಣ್ಣ

ಹನ್ನೆರಡನೆಯ ಶತಮಾನದ ಬಾನಂಗಳದ ಬಸವಾದಿ ಶರಣರು ಎಂದೆಂದು ಕಂಡರಿಯದ ಹೊಸ ಬೆಳಕನ್ನು ವಿಶ್ವಕ್ಕೆ ನೀಡಿದ ಮಾಹಾನುಭಾವರು. ಭಾರತದ ಮೂಲೆ ಮೂಲೆಯಿಂದ ಅನೇಕ ಶರಣರು ಕಲ್ಯಾಣಕ್ಕೆ ಬಂದು ಬಸವಣ್ಣನವರ ಸಾನಿಧ್ಯದಲ್ಲಿ ಧನ್ಯತೆ ಪಡೆದು, ಬಂದ ಮಣಿಹಪೂರೈಸಿತೆಂದು ಬದುಕಿನಲ್ಲಿ ಸಾರ್ಥಕತೆ ಕಂಡುಕೊಂಡ ಶರಣಸಂಕುಲದಲ್ಲಿ ಒಬ್ಬರಾದ ಹಡಪದ ಅಪ್ಪಣ್ಣನವರು ಘನವ್ಯಕ್ತಿತ್ವದ ಬಸವಣ್ಣನವರಿಗೆ ಆಪ್ತ ಸಹಾಯಕವಾಗಿದ್ದವರು.

ಕಲ್ಯಾಣಪಟ್ಟಣದಲ್ಲಿ ಬಸವಣ್ಣನವರ ಜೊತೆಗೂಡಿ ಆಪ್ತರಾಗಿ, ಒಡನಾಡಿಯಾಗಿ, ಮನಃಪೂರ್ವಕವಾಗಿ ಸಮರ್ಪಣ ಸೇವಾಭಾವದಿಂದ ಎಡೆಬಿಡದೆ ಕೊನೆಯವರೆಗೂ ಇದ್ದರೆಂಬ ಕೀರ್ತಿ ಹಡಪದ ಅಪ್ಪಣ್ಣನವರದು. ಬಸವಣ್ಣನವರ ಸೇವಾವೃತ್ತಿಯೇ ಕಾಯಕವಾಗಿಸಿಕೊಂಡು ಅನುಭವ ಮಂಟಪದ ಅನುಪಮ ಚೇತನ ಮಾಹಾನುಭಾವಿ ಎನಿಸಿಕೊಂಡ ಹಡಪದ ಅಪ್ಪಣ್ಣನವರ ಕಾಯಕನಿಷ್ಠೆ, ಜೀವನನಿಷ್ಠೆ ಹಾಗೂ ಸೇವಾನಿಷ್ಠೆಗಳು ಇವರ ಘನವ್ಯಕ್ತಿತ್ವದ ವಿಶೇಷತೆಯಾಗಿದೆ.

"ನಿಜಸುಖಿ" ಎನಿಸಿಕೊಂಡ ಅಪ್ಪಣ್ಣ ಶರಣರು ಬ್ರಹ್ಮಚಾರಿಯೇನಲ್ಲ; ಮಹಾಶರಣೆ ಶ್ರೇಷ್ಠ ಅನುಭಾವಿ ವಚನಕಾರ್ತಿ 'ನಿಜಮುಕ್ತೆ ಲಿಂಗಮ್ಮ ' ಹಡಪದ ಅಪ್ಪಣ್ಣನವರ ಪತ್ನಿ ನಿಜಸುಖಿಯ ಅರ್ಧಾಂಗಿ ನಿಜಮುಕ್ತೆ ಎನಿಸಿಕೊಂಡವರು. ತಮ್ಮ ವಚನಗಳಲ್ಲಿ ಪೂರ್ವಾಶ್ರಮದ ಬಗ್ಗೆ ಏನನ್ನೂ ಹೇಳದ ಅಪ್ಪಣ್ಣನವರು ತಮ್ಮಗೆ ಚನ್ನಮಲ್ಲೇಶ್ವರರು ಆಧ್ಯಾತ್ಮದ ಪಥವ ತೋರಿದ ಗುರುಗಳೆಂದು ತಿಳಿಸುತ್ತಾರೆ. ಹಡಪದ ಅಪ್ಪಣ್ಣನವರ ಹುಟ್ಟೂರು ಬಿಜಾಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲೂಕು, ಮಸಬಿನಾಳ ಗ್ರಾಮದಲ್ಲಿ ಜನಿಸಿದರು. ಹಡಪದ ಅಪ್ಪಣ್ಣನವರ ಮತ್ತು ಅವರ ಪತ್ನಿ ಲಿಂಗಮ್ಮನವರ ತಂದೆ ತಾಯಿಯರ ಬಗ್ಗೆ ಯಾವುದೇ ನಿಖರವಾದ ಮಾಹಿತಿ ಲಭ್ಯವಾಗಿಲ್ಲ.

ಹಡಪದ ಲಿಂಗಮ್ಮನವರ ವೈಯಕ್ತಿಕ ಜೀವನದ ಬಗೆಗಿನ ವಿವರಗಳು ದೊರಕದಿದ್ದರೂ ಅವರು ರಚಿಸಿದ 114 ವಚನಗಳು ದೊರೆತಿವೆ. 'ಅಪ್ಪಣ್ಣಪ್ರಿಯ ಚನ್ನಬಸವಣ್ಣಾ' ಎಂಬ ವಚನಾಂಕಿತದಿಂದ ಕೂಡಿದ ಇವರ ವಚನಗಳು ಅವರ ವ್ಯಕ್ತಿವೈಶಿಷ್ಟಗಳನ್ನು ಅರಿತುಕೊಳ್ಳಲು ಸಹಾಯಕವಾಗಿವೆ. ಲಿಂಗಮ್ಮನವರ ವಚನಗಳನ್ನು ಬೋಧೆಯ ವಚನಗಳು ಎಂದು ಕರೆಯಲಾಗುತ್ತದೆ ಏಕೆಂದರೆ ಶರಣತತ್ವ ಮೈಗೂಡಿಸಿಕೊಂಡು ರಚಿಸಿರುವ ಅವರ ವಚನಗಳಲ್ಲಿ ತತ್ವ ಬೋಧೆಯೇ ಮುಖ್ಯವಾಗಿದ್ದು ಬೆಡಗಿನ ಪರಿಭಾಷೆಯನ್ನು ಬಳಸಿಕೊಂಡು ಟೀಕಿಸುವಲ್ಲಿ ಸರಳ, ದೇಶೀ ಸೊಗಡಿನಿಂದ ಸಂಭ್ರಮಿಸುತ್ತಾ ಅಚ್ಚಗನ್ನಡ ಮಾತುಗಳು ವಚನ ಸತ್ವವನ್ನು ಹೆಚ್ಚಿಸಿ ಆಕರ್ಷಕವೆನಿಸಿವೆ.

ಬನವಾಸಿ ಮಧುಕೇಶ್ವರನ ದೇವಾಲಯದ ಬಾಗಿಲಿನ ಬಲಭಾಗದಲ್ಲಿ ಒಂದು ಸುಂದರವಾದ ಕಲ್ಲಿನ ಸಿಂಹಾಸನ ಮಂಟಪವಿದ್ದು,ಅದರ ಕೆಳಭಾಗದಲ್ಲಿ ಎಂಟು ಜನ ಶಿವಶರಣರ ಪ್ರತಿಮೆಗಳಿವೆ. ಪ್ರತಿಯೊಂದು ಪ್ರತಿಮೆಯ ಕೆಳಗೆ ಆಯಾ ಶರಣರ ಹೆಸರುಗಳು ಕೊರೆಯಲ್ಪಟ್ಟಿವೆ. ಇವುಗಳಲ್ಲಿ ಹಡಪದ ಅಪ್ಪಣ್ಣನವರ ಪ್ರತಿಮೆಯು ನಾವಲ್ಲಿ ಕಾಣಬಹುದಾಗಿದೆ.

ಹಡಪದ ಅಪ್ಪಣ್ಣನವರು ಬಸವಣ್ಣನವರ ಘನವ್ಯಕ್ತಿತ್ವಕ್ಕೆ ಎಳ್ಳಷ್ಟು ಚ್ಯುತಿಬಾರದಂತೆ ತಾವು ಕೈಕೊಂಡಿದ್ದ ಕಾಯಕವನ್ನು ಅಚ್ಚು ಕಟ್ಟಾಗಿ ನೆರವೇರಿಸುತ್ತಾ ಶರಣಸಮೂಹದಲ್ಲಿ ಉನ್ನತವಾದ ಸ್ಥಾನಗಳಿಸಿದ್ದರು.ಅವರು ಲೌಕಿಕ ವಿಚಾರದಲ್ಲಿ ಚಾಣಾಕ್ಷರಾಗಿದ್ದಂತೆಯೇ ಪಾರಮಾರ್ಥಿಕ ವಿಚಾರಗಳಲ್ಲಿಯೂ ಒಳ್ಳೆಯ ತಿಳುವಳಿಕೆಯ ಅರಿವನ್ನು ಅರಗಿಸಿಕೊಂಡು, ಅದನ್ನು ಆಚರಣೆಯಲ್ಲಿ ತಂದುಕೊಂಡು ಲೌಕಿಕ ಪಾರಮಾರ್ಥಿಕಗಳೆರಡು ಸಮಸುಖವಾಗಿ ಲೀಲಾಜಾಲವಾಗಿ ನಡೆಸಿಕೊಂಡು ಹೋಗುತ್ತಿದ್ದ ಅಪ್ಪಣ್ಣನವರನ್ನು ಶರಣರೆಲ್ಲಾ 'ನಿಜಸುಖಿ ಅಪ್ಪಣ್ಣ' ಎಂದು ಕರೆಯುತ್ತಿದ್ದರು. ಅಪ್ಪಣ್ಣನವರ 'ಹಡಪದ ಕಾಯಕ' ಆದರೆ ಹಡಪ ಪದಕ್ಕೆ ಎರಡು ಅರ್ಥಗಳಿವೆ ' ಅಡಕೆ ಎಲೆಯ ಚೀಲ' (ಸಂಚಿ), 'ಕ್ಷೌರಿಕನ ಸಲಕರಣೆಯ ಚೀಲ' ಎಂದು ಅರ್ಥೈಸಲಾಗಿದೆ. ತನ್ನ ಒಡೆಯನಿಗೆ ಅಡಕೆಎಲೆಯ ಚೀಲವನ್ನು ಹಿಡಿದು ಸೇವೆ ಮಾಡುವವನಿಗೆ ಹಡಪಾಳಿ ಅಥವಾ ಹಡಪಿಗ ಎನ್ನುತ್ತಾರೆ. ಕ್ಷೌರ ಮಾಡುವ ಕಾಯಕ ಜೀವಿಗಳಿಗೆ 'ಹಡಪದ ಸಮಾಜದವರು' ಎಂದು ಕರೆಯುವುದು ವಾಡಿಕೆಯಾಗಿದೆ. ಕಾಯಕ ಜೀವಿಗಳು ತಮ್ಮ ಕಾಯಕದಲ್ಲಿ ಬದಲಾವಣೆ ಮಾಡಿಕೊಳ್ಳುವುದು ಸಹಜವಾಗಿದೆ ಆದರೆ ಹಡಪದ ಕಾಯಕದವರಂತೂ ತಾವು ಅಪ್ಪಣ್ಣನವರ ವಂಶಸ್ಥರೆಂದೂ, ಅವರೇ ತಮ್ಮ ಆರಾಧ್ಯ ದೇವರು, ನಾವು ಅವರ ಅನುಯಾಯಿಗಳೆಂಬುದು ಇಂದಿಗೂ ರೂಢಿಗತವಾಗಿದೆ.

ಹಡಪದ ಅಪ್ಪಣ್ಣನವರು ಯಾವ ಕಾಯಕವನ್ನೇ ಅವಲಂಬಿಸಿರಲಿ ಅದರಿಂದ ಅವರ ಯೋಗ್ಯತೆಗೇನು ಧಕ್ಕೆಯಾಗಲಾರದು. ಏಕೆಂದರೆ ಶರಣರ ತತ್ವಗಳಲ್ಲಿ "ಕಾಯಕ"ಕ್ಕೆ ಮಹತ್ವವಿದ್ದಿತೇ ಹೊರತು ಯಾವ ಕಾಯಕ ಎಂಬುದಕ್ಕಲ್ಲ. ಶರಣರಲ್ಲಿ ಕುಂಬಾರ, ಮಡಿವಾಳ, ನೆಯ್ಗೆಯವ, ಸಮಗಾರ, ಬುಟ್ಟಿ ಮೊರ ಹೆಣೆಯುವ, ಹಗ್ಗ ಹೊಸೆಯುವ, ವ್ಯಾಪಾರಿ, ಅಧಿಕಾರಿ ಮೊದಲಾದ ಎಲ್ಲಾ ಕಾಯಕದವರೂ ಇದ್ದರು. ಅವರೆಲ್ಲ ಒಬ್ಬರಿಗೊಬ್ಬರು ಸರಿಸಮಾನರಾಗಿ ಯಾವ ಭೇದ ಭಾವವಿಲ್ಲದೆ ಅನುಭವ ಮಂಟಪದಲ್ಲಿ ಭಾಗಿಯಾಗಿ ಚರ್ಚೆಯಲ್ಲಿ ಪಾಲ್ಗೊಳ್ಳುತಿದ್ದರು. ಬಸವಣ್ಣನವರು ಹೇಳ್ತಾರೆ.

"ದೇವ ಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ,
ನಿಮ್ಮಾಣೆ ! ನಿಮ್ಮ ಪ್ರಮಥರಾಣೆ ! ತಲೆದಂಡ ! ತಲೆದಂಡ !
ಕೂಡಲಸಂಗಮದೇವಾ ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ ! "

–ಬಸವಣ್ಣನವರು.

ಎಂದು ಅವರ ವಚನವೊಂದರಲ್ಲಿ ಎಲ್ಲಾ ಕಾಯಕಗಳಿಗೂ ಸಮಾನವಾದ ಗೌರವವಿದ್ದಿತೆಂದು ಸಾರುತ್ತದೆ.

ಭಕ್ತಿ ಭಂಡಾರಿ ಬಸವಣ್ಣನವರ ಸನ್ನಿಧಿಯ ಸೇವಾವಕಾಶ ದೊರೆತದ್ದೇ ತನ್ನ ಭಾಗ್ಯವೆಂದು ಅತ್ಯಂತ ಭಕ್ತಿ, ಶ್ರದ್ಧೆಯಿಂದ ಕಾಯಕ ಮಾಡುತ್ತಾ, ಅನುಭವ ಮಂಟಪದಲ್ಲಿ ಎಲ್ಲ ಶರಣರೊಂದಿಗೆ ಚರ್ಚಿಸುತ್ತಾ ವಚನಗಳ ರಚನೆಯಲ್ಲಿ ತೊಡಗಿದರು ಹಡಪದ ಅಪ್ಪಣ್ಣನವರು. ಬಸವಪ್ರಿಯ ಕೂಡಲಚನ್ನಬಸವಣ್ಣಾ, ಎಂಬ ವಚನಾಂಕಿತದಿಂದ ಕೂಡಿದ ಇವರ ವಚನಗಳು ನಮಗೆ ದೊರತದ್ದು ಕೇವಲ 246 ಮಾತ್ರ. ಅಪ್ಪಣ್ಣನವರ ವಚನಗಳಲ್ಲಿ ಬೆಡಗಿನ ವಚನಗಳ ಸಂಖ್ಯೆಯೇ ಹೆಚ್ಚಾಗಿ ಕಂಡು ಬರುತ್ತವೆ. ಷಟಸ್ಥಲ ವಿಷಯವನ್ನೇ ಪ್ರಮುಖವಾಗಿ ವಿಚಾರಿಸಿದರೂ ಸರಳತೆ, ಸಹಜತೆ ಹಾಗೂ ಕಥಾಶೈಲಿಯನ್ನು ಬಳಸುತ್ತಾ ವಚನಗಳು ರಚಿಸಿದ್ದರಿಂದ ಸುಲಭವಾಗಿ ಅರ್ಥೈಸಬಹುದಾಗಿದೆ.

ಫ.ಗು.ಹಳಕಟ್ಟಿಯವರ ಸಂಪಾದಿತ ಸಮಗ್ರ ಸಾಹಿತ್ಯದಲ್ಲಿನ ಪ್ರಸ್ತಾಪದಂತೆ ಇನ್ನೂ ಇವರು ರಚಿಸಿರುವ ಎರಡು ಕವನಗಳ ರೂಪದಲ್ಲಿಯೂ ಕಂಡುಬರುತ್ತವೆ. ಒಂದಕ್ಕೆ 'ಸ್ವರವಚನ' ವೆಂತಲೂ ಇನ್ನೊಂದಕ್ಕೆ 'ಮಂತ್ರಗೋಪ್ಯ' ವೆಂತಲೂ ಹೆಸರಿಸಲಾಗಿದೆ. ಇವುಗಳು ಗದ್ಯದಲ್ಲಿರದೆ ಹಾಡಿನಲ್ಲಿ ಹೇಳಲು ಬರುವಂತೆ ಅವುಗಳ ರಚನೆ ಇದೆ.

(ಹಡಪದ ಅಪ್ಪಣ್ಣನವರ ಸ್ವರವಚನಗಳ 29 ನುಡಿಗಳು ದೊರೆತ್ತಿವೆ)

"ನಾ ನೀನೆನಬೇಡ ಮೋನ ಮುಗ್ಧವೆನಬೇಡ ।
ಮಾನವರ ಬೇಡ ಬೇಡ ।
ಮನುಜರೊಳು ನುಡಿಯಬೇಡ ।
ಅದು ತಾನು ತಾನಾದುದೆ ಮಹಾಘನವು ॥ ಪಲ್ಲವಿ॥
ಕಂಡೆನೆಂದು ನುಡಿಯಬೇಡ ಕಾಣೆನೆಂದು ನೋಡಬೇಡ ।
ಉಂಡೆನೆಂದು ಉಲಿಯಬೇಡ ಉಣ್ಣೆನೆಂದು ಸುಮ್ಮನಿರಬೇಡ ।
ಅಂಡಾಯವ ಮಾಡಿ ಭಂಡುಮಾಡಿಕೊಳಬೇಡ ।
ಚಂಡ ವಿಕ್ರಮ ಬಸವಪ್ರಿಯ ಕೂಡಲ ಚನ್ನಬಸವಣ್ಣಾ."

ಹೀಗೆ ಅಪ್ಪಣ್ಣನವರು ಸ್ವರವಚನದಲ್ಲಿ ನೈತಿಕ ವಿಷಯಗಳನ್ನು ಮೊದಲು ಹೇಳಿ ಆಮೇಲೆ ಷಡ್ಲಿಂಗಗಳನ್ನು ವಿವರಿಸುತ್ತಾ ತನ್ನೊಳಗಿರುವ ಪರಮಾತ್ಮನನ್ನು ಹೇಗೆ ಕಾಣಬೇಕೆಂಬುದನ್ನು ವಿವರಿಸುತ್ತಾರೆ.ಮುಂದೆ ಪಲ್ಲವಿಯಿಂದ 27 ನುಡಿಗಳ ಮಂತ್ರಗೋಪ್ಯದಲ್ಲಿನ ಒಂದೆರಡು ಸಾಲು ನೋಡೋಣ.

ಆತ್ಮ ಕೇಳಾನಂದ ಜೋತಿರ್ಲಿಂಗದೊಳು ।
ನಿತ್ಯಮುಕ್ತನಾದ ನಿಜ ಶರಣರನುವ ॥ಪಲ್ಲ॥
ನಾದಬ್ರಹ್ಮದಿಂದ ನಮಃ ಶಿ । ವಾಯೆಂಬ ಪಂಚಾಕ್ಷರಿ ಉದಯ । ಪಂಚಾಕ್ಷರಿಗೆ ಪರಶಕ್ತಿ ರೂಪು ।
ಶಕ್ತಿರೂಪಾಗಿ ಚಿತ್ತ ಸಂಚಲಿಸಲಿಕೆ ।ಮತ್ತೆ ಆಯವಾಯುತ್ತು ಸಚರಾಚರವೆಲ್ಲವು ॥ 1 ॥
ಬಯಲ ಲಿಂಗವೆ ಒಂದು ನೆವಕೆ ರೂಪನೆ ತೊಟ್ಟು ! ಭುವನದೊಳು ತನ್ನ ಲೀಲೆಯನೆ ನಟಿಸಿ।
ಭವವಿರಹಿತ ಬಸವಪ್ರಿಯ ಕೂಡಲಚನ್ನಬಸವನೊಳು । ಅವಿರತವಾಗಿ ತಾ ಬೆರೆದ ಶರಣ ॥27 ॥

ಈ ರೀತಿಯಾಗಿ ಮಂತ್ರಗೋಪ್ಯದಲ್ಲಿ ದೇಹದಲ್ಲಿರುವ ಷಟ್ಚಕ್ರಗಳಲ್ಲಿ ಚೈತನ್ಯವನುಂಟು ಮಾಡಿ ಅಂಗತ್ರಯದಲ್ಲಿ ಲಿಂಗತ್ರಯವನ್ನು ಸಂಧಾನಿಸಿ ಲಿಂಗದಲ್ಲಿ ಬೆರೆಯುವ ವಿಧಾನವನ್ನು ವಿವರಿಸಿದ್ದಾರೆ ಹಡಪದ ಅಪ್ಪಣ್ಣನವರು.

ಹನ್ನೆರಡನೆಯ ಶತಮಾನದ ಪೂರ್ವದಲ್ಲಿ ಎಲ್ಲ ರಂಗಗಳಲ್ಲಿ ಸ್ವಾರ್ಥಿ-ಪುರೋಹಿತಶಾಹಿಯ ಕಪಿಮುಷ್ಠಿಯಲ್ಲಿ ಸಿಲುಕಿ ಬಹುಸಂಖ್ಯಾತ ಶೂದ್ರ ದಲಿತರನ್ನು ವಿದ್ಯಯಿಂದ ದೂರವಿಟ್ಟು ಅವರನ್ನು ಪಶುಗಳಿಗಿಂತ ಕೀಳಾಗಿ ಕಾಣುತ್ತಿದ್ದರೋ ಅಂಥ ವಿಷಮ ಪರಿಸ್ಥಿತಿಯಲ್ಲಿ ಜ್ಯೋತಿಯಾಗಿ ಬಸವಣ್ಣನವರು 'ಸಕಲಜೀವಾತ್ಮರ ಲೇಸಿಗಾಗಿ

ಮಾನವಕುಲದ ಕಲ್ಯಾಣಕ್ಕಾಗಿ ಜನರ ಮನದೊಳಗೆ ಮನೆಮಾಡಿರುವ ಮೌಢ್ಯತೆ ಅಂಧವಿಶ್ವಾಸ ತೊಡೆದು ಹಾಕಿದರು. ಸಮಾಜೋಧಾರ್ಮಿಕ ವ್ಯವಸ್ಥೆಯ ನಡುವೆ ಮೂಢಾಚರಣೆಯಲ್ಲಿ ಒದ್ದಾಡುತ್ತಿರುವ ಜನರು ಬೆಳಗ್ಗೆ ಎದ್ದು ಮೊದಲಿಗೆ ಹಡಪದರ ಮುಖವನ್ನು ನೋಡಬಾರದು. ಒಂದು ವೇಳೆ ಅವರು ಎದುರಿಗೆ ಬಂದರೆ ಅನಿಷ್ಠವಾಗುವುದು ಎಂಬ ಭ್ರಮೆಯನ್ನು ಅಲ್ಲಗಳೆದು ಬಸವಣ್ಣನವರು ಹಡಪದ ಅಪ್ಪಣ್ಣನವರನ್ನು ಸದಾ ತನ್ನ ಜೊತೆಯಲ್ಲಿಯೇ ಅತ್ಯಂತ ಆಪ್ತರಾಗಿ ಪ್ರೀತಿಯಿಂದ ಕಾಣುತ್ತಿದ್ದರು. ಯಾರೆ ಆಗಲಿ ಬಸವಣ್ಣನವರನ್ನು ಕಾಣಬೇಕಾದರೆ ಅಪ್ಪಣ್ಣನವರ ಅಪ್ಪಣೆ ಪಡೆದು ಹೊಗುತ್ತಿದ್ದರು.

ಕಾಯಕಪ್ರೇಮಿಯಾದ ಹಡಪದ ಅಪ್ಪಣ್ಣನವರು ಸೇವಾನಿಷ್ಠರು ಮತ್ತು ಸಮರ್ಥ ರಾಯಭಾರಿಗಳು ಹಾಗೂ ಅಪ್ಪಟ ಸ್ವಾಮಿಭಕ್ತರು. ಬಸವಣ್ಣನವರ ವೈಯಕ್ತಿಕ, ಕೌಟುಂಬಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಆಪ್ತ ಕಾರ್ಯದರ್ಶಿಯಾಗಿ ಇದ್ದರು. ಅಪ್ಪಣ್ಣನವರಿಗೆ ಬಸವಣ್ಣನವರಲ್ಲಿದ್ದ ಭಕ್ತಿ–ಪ್ರೇಮ–ಶ್ರದ್ಧೆ–ನಿಷ್ಠೆಗಳ ಆಳವು ಅವರ ವಚನಾಂಕಿತವಾದ "ಬಸವಪ್ರಿಯ" ಎಂಬ ಆತ್ಮವಿಶ್ವಾಸದ ನುಡಿಯಿಂದಲೇ ವ್ಯಕ್ತವಾಗುತ್ತದೆ.

ಶೂನ್ಯಸಂಪಾದನೆಯಲ್ಲಿ ಬರುವ ಅನುಭವ ಮಂಟಪದಲ್ಲಿನ ಸನ್ನಿವೇಶ ಮತ್ತು ಸಂದರ್ಭದ ಘಟನೆಯಲ್ಲಿ ಗಮನಿಸಿದರೆ,ಅನುಭವ ಮಂಟಪದ ಶೂನ್ಯಪೀಠಾಧ್ಯಕ್ಷರಾದ ಅಲ್ಲಮಪ್ರಭುಗಳು ಮೊಟ್ಟ ಮೊದಲನೆಯ ದಿನ ಶಿವಯೋಗಿ ಸಿದ್ಧರಾಮರೊಡನೆ ಬಸವ ಮಹಾಮನೆಯಂಗಳ ಮಾಹಾದ್ವಾರದ ಮುಂದೆ ನಿಂತಿರುತ್ತಾರೆ. ಇವರನ್ನು ಕಂಡ ಘನಶರಣರಾದ ಅಪ್ಪಣ್ಣನವರು ಪ್ರಭುದೇವರನ್ನು ನೋಡುತ್ತಲೇ ಅವರ ಆಳವಾದ ಅನುಭವದಿಂದ ಎದುರಿಗಿದ್ದ ಮಹಾತ್ಮರ ವ್ಯಕ್ತಿತ್ವವು ಅಸಾಮಾನ್ಯವಾದುದೆಂದು ಅರಿತು, ಅತ್ಯಂತ ಭಕ್ತಿಯಿಂದ ಅವರನ್ನು ಸ್ವಾಗತಿಸಲು ಮುಂದಾದಾಗ ಅಲ್ಲಮಪ್ರಭುಗಳು ಬಸವಣ್ಣನವರೇ ಬಂದು ತಮ್ಮನ್ನು ಆಹ್ವಾನಿಸಬೇಕೆಂದು ತಿಳಿಸಿದಾಗ ಅಪ್ಪಣ್ಣನವರಿಗೆ ದಿಕ್ಕುತೋಚದಂತಾಗುತ್ತದೆ. ಈ ಸುದ್ದಿಯನ್ನು ಮಹಾಗುರು ಬಸವಣ್ಣನವರಿಗೆ ತಲುಪಿಸಬೇಕೆಂದು ಅವಸರದಿಂದ ಮಹಾಮನೆಯೊಳಗೆ ಹೋಗುತ್ತಾರೆ.

ಆ ಸಮಯದಲ್ಲಿ ಬಸವಣ್ಣನವರು ಇಷ್ಟಲಿಂಗ ಪೂಜೆಯಲ್ಲಿ ಪರವಶರಾಗಿ ಕುಳಿತು ಬಿಟ್ಟಿದ್ದರು. ಇತ್ತ ಪೂಜೆಗೆ ಭಂಗ ತರುವಂತಿಲ್ಲ, ಅತ್ತ ಅಲ್ಲಮಪ್ರಭುಗಳು ಮಹಾಮನೆಯೊಳಗೆ ಬಸವಣ್ಣನವರು ಸ್ವಾಗತಿಸದೆ ಬರುವಂತಿಲ್ಲ. ಇದು ಅಪ್ಪಣ್ಣನವರಿಗೆ ಅತ್ಯಂತ ಜಟಿಲವಾದ ಪ್ರಸಂಗ. ಆ ಸಂದರ್ಭದಲ್ಲಿ ಅತಿ ಸೂಕ್ಷ್ಮದಿಂದ ನಿರ್ವಹಿಸಿದ ಪಾತ್ರ ನಾವಿಲ್ಲಿ ಅವರ ವಚನದಲ್ಲಿ ಬರುವ ಅಂಶ ಬಹುಮುಖ್ಯವಾಗಿದೆ ಮತ್ತು ಸಮಯೋಚಿತವಾಗಿದೆ. "ದೇವದೇವ ಮಹಾಪ್ರಸಾದ, ನಿಮ್ಮ ಶರಣರು ಎನ್ನಿಚ್ಛೆಗೆ

ಬಪ್ಪರೆ ? 'ಚಕಿತಮಭಿದತ್ತೇ ಶ್ರುತಿರಪಿ' ಎನ್ನಲು, ಎಮ್ಮ ನುಡಿ ಶರಣರ ತಾಗಬಲುದೆ? ಹಣೆಯ ಹೊಣೆಯ ತೋರಿ ಉದರವ ಹೊರೆವ ನಿಮ್ಮ ಮರೆಯಲಡಗಿಪ್ಪ ಹಡಪಿಗ ನಾನಯ್ಯ ! "ಎಂದು ಬಿನ್ನವಿಸಿಕೊಳ್ಳುತ್ತಾರೆ. ಮತ್ತೆ ಮುಂದುವರೆದು ಅಪ್ಪಣ್ಣನವರು ಹೇಳ್ತಾರೆ " ನಿನ್ನಳವಲ್ಲ ಎನ್ನಳವಲ್ಲ, ಇದಾರಳವಲ್ಲದ ಘನವು ನೋಡಯ್ಯ .ನಿಂದರೆ ನೆಳಲಿಲ್ಲ, ಸುಳಿದರೆ ಹೆಜ್ಜೆಯಿಲ್ಲ . ಪ್ರಭುದೇವರೆಂಬ ಭಾವ ತೋರುತ್ತಿದೆ. ಎಂದು ಬಸವಣ್ಣನವರಿಗೆ ವಿವರಿಸುತ್ತಾ ಅಲ್ಲಮರ ಕಡೆಗೆ ಕರೆದುಕೊಂಡು ಹೋದ ಪ್ರಸಂಗ ಬರುತ್ತದೆ ಹೀಗೆ ಬಸವಣ್ಣ-ಅಲ್ಲಮಪ್ರಭು ಇಬ್ಬರನ್ನು ಸಂತೈಸಿದ ರೀತಿ ಅಪ್ಪಣ್ಣನವರ ವ್ಯಕ್ತಿತ್ವಕ್ಕೆ ಕನ್ನಡಿಯಾಗಿದೆ. ಇಲ್ಲಿ ನಾವು ಗಮನಿಸಬೇಕಾದ ವಿಷಯವೇನೆಂದರೆ ತಮ್ಮ ಮುಂದೆ ನಿಂತವರು ಅಲ್ಲಮ ಪ್ರಭುದೇವರು ಎಂದು ಗೊತ್ತಿಲ್ಲದಿದ್ದರೂ ಅವರ ಠೀವಿಯಿಂದ ಆಡುವ ಮಾತು, ಮುಖದ ತೇಜಸ್ಸು, ಗಂಭೀರ ವ್ಯಕ್ತಿತ್ವ ಕಂಡು ಅವರು ಅಲ್ಲಮರೇ ಇರಬಹುದೆಂದು ಊಹಿಸಿದವರು ಮೊಟ್ಟಮೊದಲಿಗರು ಎಂದರೆ ಹಡಪದ ಅಪ್ಪಣ್ಣನವರು.

ಶರಣ ಹಡಪದ ಅಪ್ಪಣ್ಣನವರ ವಚನ ಎಂಬುದು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಗಿದ್ದು, ಅವು ಶರಣರ ಅನುಭಾವದ ನುಡಿಗಳಾಗಿವೆ. ವ-ಎಂದರೆ ವಚಿಸು (ಅರಿವು), ಚ-ಎಂದರೆ ಚರಿಸು (ಆಚಾರ), ನ-ಎಂದರೆ ನಯನಿಸು (ಅನುಭಾವ) ಎಂದು ಅರ್ಥೈಸಲಾಗಿದೆ. ವಚನ ಎಂದರೆ ಅರಿವು ಆಚಾರ ಅನುಭಾವದಿಂದ ಹೊರಹೊಮ್ಮಿದ ನುಡಿಗಳಾಗಿವೆ.

ಶರಣರ ವಚನಗಳಲ್ಲಿ ವ್ಯಕ್ತಿ-ಸಮಾಜದ, ವ್ಯಷ್ಟಿ-ಸಮಷ್ಟಿಯ, ಅಂತರಂಗ-ಬಹಿರಂಗ ಹೀಗೆ ಸಮಗ್ರ ವಿಷಯದ ವ್ಯಾಪ್ತಿಯಿಂದ ಕೂಡಿದೆ. ಧಾರ್ಮಿಕ ರಂಗದಲ್ಲಿ ಧರ್ಮ ಮತ್ತು ದೇವರು, ಧರ್ಮಗ್ರಂಥಗಳು, ಪೂಜಾರಿ ಪುರೋಹಿತರ ಕುರಿತಾದ ಸರಿಯಾದ ಕಲ್ಪನೆ, ಶೋಷಣೆಯ ಕುರಿತಾದ ನಿರ್ಭೀತಿಯ ಖಂಡನೆ, ಹೀಗೆ ಸಾಮಾಜಿಕ ವ್ಯವಸ್ಥೆಯ ಬಗ್ಗೆ ವಿಡಂಬನೆ ಹಾಗೂ ಮಾನವೀಯ ಕಳಕಳಿಯಿಂದ ಕೂಡಿದ ಹಡಪದ ಅಪ್ಪಣ್ಣನವರ ಈ ವಚನದಲ್ಲಿ ನೋಡಬಹುದಾಗಿದೆ.

> **"ವೇದವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ,**
>
> **ಸಾಹಂ ಎಂದು ಅಹಂಕರಿಸಿ, ಅನಿತ್ಯದೇಹಿಗಳಾಗಿ, ಅನಾಮಿಕರಾಗಿ ಹೋದರು,,,,,,**
>
> **ಲಿಂಗ ಜಂಗಮದ ಮರ್ಮವನರಿಯದೆ, ಅಧರ್ಮಿಗಳಾಗಿ ಹೋದರು.,,,,,,**
>
> **ಎಮ್ಮ ಬಸವಪ್ರಿಯ ಕೂಡಲಚನ್ನಬಸವಣ್ಣನ ಶರಣರ ಪರಿ ಬೇರೆ."**

-ಹಡಪದ ಅಪ್ಪಣ್ಣನವರು.

ಈ ವಚನದಲ್ಲಿ ಹಡಪದ ಅಪ್ಪಣ್ಣನವರು ವಚನದ ವಸ್ತು ವೇದ-ಶಾಸ್ತ್ರ-ಪುರಾಣಗಳನ್ನು ಮೀರಿದ ಶರಣರ ಅನುಭಾವದ ನಿಲುವನ್ನು ವಿವರಿಸುವದಾಗಿದೆ. ವೇದ, ಶಾಸ್ತ್ರ, ಪುರಾಣಗಳು ಕೇವಲ ವಾಕ್ ಚಾತುರ್ಯದ ಪಂಡಿತರ ಮಾತುಗಳಾಗಿವೆಯೇ ಹೊರತು, ಅವು ಅವರ ಅನುಭದಿಂದ ಬಂದ ಅನುಭಾವದ ನುಡಿಗಳಲ್ಲ. ಆದರೆ ಶರಣನ ಪರಿ ಬೇರೆ ಅವರು ನುಡಿದಂತೆ ನಡೆದವರು ತಮ್ಮ ಅನುಭವದಿಂದ ಅನುಭಾವ ನೀಡಿದವರು ಎಂಬುದನ್ನು ಇಲ್ಲಿ ಹಡಪದ ಅಪ್ಪಣ್ಣನವರು ವ್ಯಕ್ತಪಡಿಸಿದ್ದಾರೆ. ಅವರು ತಮ್ಮ ವಚನಗಳಲ್ಲಿ ಷಟಸ್ಥಲ ಮಾರ್ಗದ ಲಿಂಗಾಂಗ ಸಾಮರಸ್ಯದ ಬಗ್ಗೆ ಹೇಳಿರುವುದನ್ನು ಕಂಡುಬರುತ್ತದೆ.

ಬಸವಣ್ಣನವರ ಆಪ್ತ ವಲಯದೊಳಗಿದ್ದರೂ ತಮ್ಮ ಬದುಕನ್ನು ಸತ್ಯ ಶುದ್ಧಕಾಯಕ, ದಾಸೋಹಕ್ಕೆ ಅರ್ಪಿಸಿಕೊಂಡ ಹಡಪದ ಅಪ್ಪಣ್ಣ-ಲಿಂಗಮ್ಮ ದಂಪತಿಯರು. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ' ಎಂಬ ನುಡಿಗೆ ನಿಜಸುಖಿ ಹಡಪದ ಅಪ್ಪಣ್ಣ ಮತ್ತು ಅವರ ಪುಣ್ಯಸ್ತ್ರೀ ನಿಜಮುಕ್ತೆ ಲಿಂಗಮ್ಮರು ಸಾಕ್ಷಿಯಾಗಿದ್ದಾರೆ. ಶರಣಸಂಕುಲದಲ್ಲಿ ಜನಸಾಮಾನ್ಯರು ಸ್ವರೂಪ ಗೊಂದಲದಿಂದ ಮುಕ್ತರಾಗಿ ನವಮಾನವರಾದದ್ದು ಮಾನವ ಇತಿಹಾಸದಲ್ಲಿ ಮರೆಯಲಾಗದ ಅನುಭವ. ಕಾಯಕ ಜೀವಿಗಳು ತಮ್ಮ ದೈನಂದಿನ ದುಡಿಮೆಯ ಅನುಭವದ ಮೂಲಕವೇ ಅನುಭಾವದ ಎತ್ತರಕ್ಕೆ ಏರುವ ಅನುಪಮ ಕ್ರಮವನ್ನು ಬಸವಣ್ಣನವರು ತೋರಿಸಿಕೊಟ್ಟಿದ್ದರು. ಶರಣರು ಪ್ರಜ್ಞಾಪೂರ್ಣ ಮುಗ್ದತೆಯನ್ನು ಹೊಂದಿದ್ದರು.

****

ಶಿವಕಣಿ ಕುಂಬಾರ ಗುಂಡಯ್ಯ, ಕೇತಲದೇವಿ

ಹನ್ನೆರಡನೆಯ ಶತಮಾನ ಬಸವಯುಗವಾದ ಕನ್ನಡ ನಾಡಿನಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಹಿತಿಕ ಕ್ರಾಂತಿಗಳು ಬದುಕಿನ ವಿವಿಧ ರಂಗಗಳಲ್ಲಿ ತಲೆದೋರಿತು. ವೈಚಾರಿಕ ಬುದ್ಧಿಗೆ ಬೆಲೆ ಬಂದಿತು. ಸಮಾಜವಾದ, ಸಮತಾವಾದಗಳು ಸಂಕೀರ್ಣಗೊಂಡು ಮಾನವತಾವಾದ ಮೇಲೇರಿ ನಿಂತಿತು. ಸತ್ಯ-ಶುದ್ಧ ಕಾಯಕ ಜೀವಿಗಳಿಗೆ ಮನ್ನಣೆ ದೊರೆತ ಪರಿಣಾಮವಾಗಿ ಮೇಲು-ಕೀಳುಗಳು ಮಾಯಾವಾದವು. ಲಿಂಗಭೇದಕ್ಕೆ ಅವಕಾಶ ಇಲ್ಲದಂತಾಯಿತು. ಜಾತಿ ಮತಗಳ ಬುಡಕ್ಕೆ ಹೊಡೆತ ಬಿದ್ದಿತು. ಈ ಮಹಾಕ್ರಾಂತಿಗೆ ಮೂಲಕಾರಣಿಕರು ಬಸವಾದಿ ಶರಣರು. ಅವರು ಸಾಂಸ್ಕೃತಿಕ ಮಹಾಚಳವಳಿಯಲ್ಲಿ ಅತ್ಯಂತ ಕೆಳಗಿನ ಸ್ತರದಲ್ಲಿ ಜನ್ಮವೆತ್ತಿದವರು ಎನಿಸಿಕೊಳ್ಳವವರು ಬೆರಗುಗೊಳಿಸುವ ವೈಚಾರಿಕತೆಯ ನಿಲುವಿನ ಮೇಲೆ ದೇವರು, ಜೀವ, ಜಗತ್ತು ಮೊದಲಾದ ಗೂಢವಾದ, ಗಾಢವಾದ ವಿಚಾರ ಪ್ರಣಾಳಿಯನ್ನು ವಚನಗಳ ಮೂಲಕ ಪ್ರತಿಪಾದಿಸಿರುವುದನ್ನು ಕಾಣಬಹುದು.

ಬಸವಣ್ಣನವರ ಮುಖ್ಯ ಸಿದ್ಧಾಂತಗಳಲ್ಲಿ ಇಂದಿಗೂ ಪ್ರಸ್ತುತವೆನಿಸುವದು ಕಾಯಕ ಸಿದ್ಧಾಂತವಾಗಿದೆ. ಈ ಕಾಯಕ ತತ್ವವನ್ನು ಎತ್ತಿ ಹಿಡಿದ ವಿವಿಧ ವೃತ್ತಿಯ ಶರಣರಲ್ಲಿ ಕುಂಬಾರ ಗುಂಡಯ್ಯ-ಕೇತಲದೇವಿಯರು ಬರುತ್ತಾರೆ. ಅವರ ಕಾಯಕ

"ಕುಂಬಾರ ಗುಂಡಯ್ಯ ತುಂಬಿ ತಿಗರಿಗೆ ಕೆಸರ
ಶಂಬು ಹರನೆಂದು ತಿರುಗಿಸಲು । ಶಿವಕುಣಿದ
ಹಂಬಲಿಸಿ ಜಂಗ ಕಟ್ಟಿಗೊಂಡು."
" ಭೂಮಿಯೊಳು ಗುಂಡಯ್ಯ, ಸೀಮೆ ಮೀರಿದ ಭಕ್ತ
ನೇಮದಲಿ ನುಡಿಸಿ ಗಡಿಗೆಗಳ । ಕುಣೆಯುವನು
ತೋಮ ಧಿತ್ತಯ್ಯ ಹೆಜ್ಜೆಯೊಳು."

ಕುಂಬಾರ ಗುಂಡಯ್ಯನವರ ಜೀವನ ಮೌಲ್ಯಗಳಾದ ಕಾಯಕನಿಷ್ಠೆ, ಕಾಯಕದಲ್ಲಿರುವ ಕಲೆ, ಕಾಯದಲ್ಲಿನ ತಲ್ಲೀನತೆ, ಕಾಯಕದಲ್ಲೇ ಆನಂದ ಸಂತೋಷದ ಮೂಲಕವೇ ಮುಕ್ತಿ ಹೊಂದುವುದು. ಗುಂಡಯ್ಯನವರಲ್ಲಿದ್ದ ಜೀವನ ಪ್ರೀತಿ ಅಗಾದವಾದುದು. ಆ ಪ್ರೀತಿಯಲ್ಲಿ ಶಿವಭಕ್ತಿಯ ಉಸಿರು, ಕಾಯಕ ನಿಷ್ಠೆಯ ಶ್ರಮ ಅತ್ಯನ್ನತ ಮಟ್ಟದ್ದಾಗಿತ್ತು. ಅದಕ್ಕಾಗಿ ಶಿವನು ಮೆಚ್ಚಿಕೊಂಡು ತನ್ನ ಭಕ್ತನ ಕಾಯಕ ಮಾಡುವಾಗ ಮಡಿಕೆಯ ವಾದ್ಯದ ಮುಂದೆ ಸುರಲೋಕದ ವಾದ್ಯಗಳು ಬೇಕೆನಿಸಲಿಲ್ಲವಂತೆ, ಎಲ್ಲ ವಾದ್ಯಗಳು ಗುಂಡಯ್ಯನ ಮಡಿಕೆವಾದ್ಯವೊಂದೇ ಕೇಳಿಸುತ್ತಿದಂತೆ ಶಿವನು ನೃತ್ಯಮಾಡುತ್ತಾನೆ. ಇಲ್ಲಿ ಮಾನವ ಹಾಗೂ ದೈವಿ ಸಂಬಂಧದ ನೆಲೆಯನ್ನು ಎತ್ತಿ ತೋರಿಸುವ ಪ್ರಸಂಗವಿದು ಎಂದು ಹೇಳಬಹುದು.

ಹನ್ನೆರಡನೆಯ ಶತಮಾನದ ಶರಣ ಚಳವಳಿಯಲ್ಲಿ ತೊಡಗಿಕೊಂಡಿದ್ದ ಕುಂಬಾರ ಗುಂಡಯ್ಯನವರು ಮೂಲತಃ ಬೀದರ ಜಿಲ್ಲೆಯ ಭಾಲ್ಕಿ(ಭಲುಂಕೆ)ಯವರು. ವೃತ್ತಿಯಲ್ಲಿ ಗಡಿಗೆ ಮಾಡುತ್ತಿದ್ದರೂ ಪ್ರವೃತ್ತಿಯಲ್ಲಿ ದಾಸೋಹಂ ಭಾವದ ಕಾಯಕನಿಷ್ಠರಾಗಿದ್ದರು. ಪರಮ ಶಿವಭಕ್ತರಾದ ಗುಂಡಯ್ಯ ದಂಪತಿ ಕಾಯಕದ ಶಿವಕಣಿ ಎನಿಸಿಕೊಂಡವರು. ಜನಪದ ಗೀತೆಯೊಂದರಲ್ಲಿ 'ಕುಂಬಾರ ಗುಂಡಯ್ಯನ ಮನೆಯ ಕುಡಕೆ ಶಬ್ದವ ಕೇಳಿ ಶಿವನು ಕೈಲಾಸದಲ್ಲಿ ಥೈ?? ತೊಂ?? ಥೈ?? ತೊಂ?? ಎಂದು ಕುಣಿದ' ಎಂದು ಹಾಡುತ್ತಾರೆ. ಗುಂಡಯ್ಯನವರು ಮಣ್ಣು ಹದ ಮಾಡುವುದಾಗಲಿ, ಮಡಕೆಗಳು ಮಾಡುವುದಾಗಲಿ ಶಿವನಾಮಸ್ಮರಣೆಯಿಂದ ಗಡಿಗೆ ತಯಾರಿಸುವ ಕಾಯಕದಲ್ಲಿಯೇ ಇಷ್ಟಲಿಂಗಾರ್ಚನೆ, ಪ್ರಾಣಲಿಂಗಾರ್ಚನೆಗಳು ಘಟಿಸುವಷ್ಟು ಏಕಾಗ್ರತೆ ಪಡೆದಿದ್ದರು. ಅವರ ಜೀವನದ ಪ್ರತಿಕ್ಷಣವೂ ಪೂಜೆಯೆ. ಶಿವ ಶಿವಾ ಎನ್ನುತ್ತ ಗಡಿಗೆ ತಟ್ಟುವ ವಿಸ್ಮಯಕಾರಕ ತಾಳಕ್ಕೆ ಅವರ ಭಕ್ತಿ ಬಣ್ಣವೇರಿ ಶಿವನಿಗೆ ಕೈಲಾಸದಲ್ಲಿ ನೃತ್ಯ ಮಾಡದೆ ಇರಲಾಗುತ್ತಿರಲಿಲ್ಲ. ಗುಂಡಯ್ಯನವರ ಭಕ್ತಿಯ ಸೆಳತಕ್ಕೆ ಶಿವ ಬಂದು ಎದುರು ನಿಂತರೂ ಕಣ್ಣೆತ್ತಿಯೂ ನೋಡದಂಥ ಕಾಯಕನಿಷ್ಠೆ ಅವರದು, ಎಂದು ಜನಪದ ಕವಿಗಳು ಶರಣರ ಕಾಯಕ ಸಂಸ್ಕಾರವು ಎಷ್ಟು ಉನ್ನತಮಟ್ಟದ್ದು ಎಂಬುದು ಅವರು ತಮ್ಮ ಅನೇಕ ನುಡಿಗಳಲ್ಲಿ ದಾಖಲಿಸಿದ್ದಾರೆ.

"ಪ್ರಾಣಲಿಂಗಿಯು ಗುಂಡ, ಏನೊಂದು ಹೊರಗರಿಯ
ಪ್ರಾಣಲಿಂಗದೊಳು ಶಿವಬೆಳಕು। ಬೀಳುತಲಿ
ತಾಣ ಕಳೆಯೇರಿ ಕಾಯಕವು"
"ಕಾಯಕವೆ ಶಿವಭಕ್ತಿ, ಕಾಯಕವೆ ಶಿವಭಜನೆ
ಕಾಯಕವೆ ಲಿಂಗ ಶಿವಪೂಜೆ। ಶಿವಯೋಗ
ಕಾಯಕವೆ ಕಾಯ್ವ ಕೈಲಾಸ."

ಶಿವಶರಣರು ಕಾಯಕದಲ್ಲಿ ನಿರತರಾದರೆ ಅದರೊಡನೆ ಬೆರೆತು ಒಂದಾಗುವರು. ಅವರಿಗೆ ಬಾಹ್ಯಲೋಕದೆಡೆಗೆ ಗಮನ ಇರುತ್ತಿರಲಿಲ್ಲ. ಶಿವಭಕ್ತ ಗುಂಡಯ್ಯ ಕಾಯಕದಲ್ಲಿ ಬೆರೆತಿರಲು, ಶಿವನು ಮುಂದೆ ಬಂದು ಕುಣಿದರೂ ಆ ಭಕ್ತನಿಗೆ ಪರಿವೆಯೆ ಇಲ್ಲದಾಗ, ಶಿವನು ಪ್ರಾಣಲಿಂಗದ ಚಿತ್ಕಳೆಯನ್ನು ಹಿಡಿದೆತ್ತಲು ಆಗ ಗುಂಡಯ್ಯನು ಶಿವನನ್ನು ಕಾಣುತ್ತಾನೆ. ಕುಂಬಾರ ಗುಂಡಯ್ಯನವರ ಭಕ್ತಿಗೆ ಶಿವನು ಮನಸೋತು ಪ್ರೀತಿಯಿಂದ ಕೈಲಾಸಕ್ಕೆ ಕರೆದೊಯ್ದು ಶಿವಪದವ ಕೊಡುವೆ ನನ್ನೊಡನೆ ಬಾ ಎಂದು ಕರೆಯುತ್ತಾರೆ. ಆಗ ಕುಂಬಾರ ಗುಂಡಯ್ಯನವರು ನಿರಾಕರಿಸುವ ರೀತಿ ಹೇಗೆಂದರೆ..

"ಬೇಡೆನಗೆ ಕೈಲಾಸ, ಬಾಡುವುದು ಕಾಯಕವು
ನೀಡೆನಗೆ ಶಿವನೆ ಕಾಯಕವ । ಕುಣಿದಾಡಿ
ನಾಡ ಹಂದರಕೆ ಹಬ್ಬಿಸುವೆ."
"ಬಲಕೇರಿ ಗುಂಡಯ್ಯ ಬಲವಂತ ಶಿವಭಕ್ತ
ಕುಲವಂತ ಶರಣ ಕುಂಬಾರ । ಕಾಯಕವು
ಕುಲಗೆಲಸ ನಿತ್ಯ ಜೀವನಕೆ."

ಶರಣರಿಗೆ ಕಾಯಕತತ್ವದ ಮುಂದೆ ಯಾವ ಕೈಲಾಸವು ಹೆಚ್ಚಿನದಾಗಿರಲಿಲ್ಲ. ಅವರು ಕಾಯಕದಲ್ಲಿ ಮಗ್ನರಾದಾಗ ದೇವರಿಗೆ ಪ್ರಿಯವಾದುದನ್ನೇ ಮಾಡುತ್ತ ಸ್ವಾವಲಂಬಿಗಳಾಗುತ್ತಾರೆ. ನಂತರ ದಾಸೋಹದ ಮೂಲಕ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.

ಕುಂಬಾರ ಗುಂಡಯ್ಯ ಮತ್ತು ಸತಿ ಕೇತಲದೇವಿಯವರ ಹೆಸರನ್ನು ಎತ್ತಿಕೊಂಡ ಈ ತ್ರಿಪದಿಯಲ್ಲಿ ದಂಪತಿಗಳ ತನುಮನದಿಂದ ಪರಿಶುದ್ಧವುಳ್ಳ ಕಾಯಕ ಜೀವಿಗಳ ಸಂಸಾರದ ಸೊಗಸಾದ ಚಿತ್ರವನ್ನು ಜನಪದರು ಹದುಳಾಗಿ ಬಿಡಿಸಿದ್ದಾರೆ.

"ಮಡದಿ ಕೇತಲದೇವಿ ಒಡನಾಡಿ ಗುಂಡನಿಗೆ
ಎಡೆಬಿಡದೆ ಸೇವೆಮಾಡುತಲಿ । ಬತ್ತಿಯೊಳು
ಬಿಡದೇರಿ ಎಣ್ಣೆಯುರಿದಂತೆ"

ವಚನಕಾರ್ತಿಯರ ಸಾಲಿನಲ್ಲಿ ಬರುವ ಕೇತಲದೇವಿಯದು ಆ ಮನೆಯ ದೀಪವಾಗಿ ಶಿವಬೆಳಕನ್ನು ಬೀರುವ ವ್ಯಕ್ತಿತ್ವವಾಗಿತ್ತು. ಶರಣಸಂಸ್ಕೃತಿ ಜಗತ್ತು ಕಂಡರಿಯದ ವಿಶಿಷ್ಟವಾದ ಸಂಸ್ಕೃತಿ. ಎಲ್ಲವೂ ಪರಮಾತ್ಮನ ಸ್ವರೂಪದಲ್ಲಿ ಕಾಣುವ ಗುಂಡಯ್ಯ-ಕೇತಲದೇವಿಯವರದು ಸಾಮರಸ್ಯದಿಂದ ಕೂಡಿದ ಶರಣ ದಾಂಪತ್ಯದಲ್ಲಿ ಒಂದಾಗಿ ಬದುಕಿದವರು. ಗುಂಡಯ್ಯನವರು ರಚಿಸಿದ ವಚನಗಳು ಕಂಡು ಬರದಿದ್ದರೂ ಜನಪದರ

ನುಡಿಗಳು ಅವರ ವ್ಯಕ್ತಿತ್ವದ ಬಗ್ಗೆ ಸಾರುತ್ತವೆ. ಕೇತಲದೇವಿಯವರ ಎರಡು ವಚನಗಳು ಮಾತ್ರ ಲಭ್ಯವಾಗಿವೆ. 'ಕುಂಭೇಶ್ವರಾ' ಎಂಬ ಅಂಕಿತನಾಮದಿಂದ ರಚಿಸಿದ್ದಾರೆ. ವೃತ್ತಿಪರಿಭಾಷೆಯನ್ನು ಬಳಸಿ ವಚನ ರಚನೆ ಮಾಡಿದ ವಚನಕಾರ್ತಿಯರಲ್ಲಿ ಕೇತಲದೇವಿಯೂ ಒಬ್ಬರು.

ಹದ ಮಣ್ಣಲ್ಲದೆ ಮಡಕೆಯಾಗಲಾರದು.

ವ್ರತಹೀನನ ಬೆರೆಯಲಾಗದು.

ಬೆರೆದಡೆ ನರಕ ತಪ್ಪದು.

ನಾನೊಲ್ಲೆ ಬಲ್ಲನಾಗಿ ಕುಂಭೇಶ್ವರಾ.

–ಕೇತಲದೇವಿ

ಕೇತಲದೇವಿ ಕುಂಬಾರ ಕಾಯಕದ ಅನುಭವದ ಮೂಲಕವೇ ರಚಿಸಿದ ವಚನವಿದು. ಮಣ್ಣು ಹದ ಮಾಡಿದಾಗ ಮಾತ್ರ ಅದರಿಂದ ಗಡಿಗೆ ಮಾಡಲು ಸಾಧ್ಯ. ಮಡಿಕೆ ತಯಾರಿಸಬೇಕಾದರೆ ಅದಕ್ಕೆ ಯೋಗ್ಯವಾದ ಮಣ್ಣು ಬಹಳ ಮುಖ್ಯ. ಮಣ್ಣನ್ನು ಸೋಸಿ ಸೋಸಿ ನುಣುಪುಗೊಳಿಸಬೇಕು. ಅದರಲ್ಲಿ ಯಾವುದೇ ಕಸ ಕಡ್ಡಿ ಹರಳುಗಳು ಇರಬಾರದು. ಅಂಥ ಮಣ್ಣನ್ನು ನೀರಲ್ಲಿ ನೆನೆಸಿ ತುಳಿದು ತುಳಿದು ಹದಗೊಳಿಸಿ ಮೃದುವಾಗಿಸಬೇಕು. ಆಗ ನೈಸರ್ಗಿಕ ಸಂಪನ್ಮೂಲವಾದ ಆ ಮಣ್ಣು ಮಡಕೆ ಮಾಡಲು ಬೇಕಾದ ಸಿದ್ಧವಸ್ತುವಾಗುವುದು. ಅದೇ ರೀತಿ ಮಾನವ ಕೂಡ ನೈಸರ್ಗಿಕ ಸಂಪನ್ಮೂಲವಾಗಿದ್ದಾನೆ. ಅವನು ಸಂಸ್ಕಾರದ ಮೂಲಕ ಹದಗೊಳ್ಳಬೇಕು. ಆಗ ಅನುಭಾವ ತುಂಬಿದ ಮಾನವ ಲಿಂಗ ಸತ್ಸಂಗದಿಂದ ಮಹಾದೇವನಾಗುತ್ತಾನೆ. ಆತನ ಶರೀರವು ಅನುಭಾವ ತುಂಬುವ ಘಟವಾಗಬೇಕಾದರೆ ನಾವು ಎಲ್ಲ ರೀತಿಯ ದೌರ್ಬಲ್ಯದಿಂದ ಮಕ್ತರಾಗಬೇಕು. ವ್ರತವೆಂದರೆ ಪವಿತ್ರವಾಗಿ ಬದುಕುವ ಪ್ರತಿಜ್ಞೆ ಮಾಡುವುದು ಮತ್ತು ಅದರಂತೆ ಬದುಕುವುದು. ವ್ರತಾಚರಣೆಯಿಂದ ನಮ್ಮ ಮನಸ್ಸನ್ನು ಸೋಸಿ ಶುದ್ಧಗೊಳಿಸಿಕೊಳ್ಳಬೇಕು. ಅದನ್ನು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಹದಕ್ಕೆ ತರಬೇಕು. ಆಗ ಕಾಯವು ಪ್ರಸಾದಕಾಯವಾಗುವುದು. ಇಲ್ಲದಿದ್ದರೆ ಬದುಕು ನರಕವಾಗುವುದು. ಈ ಕಾರಣದಿಂದಲೇ ತಾನು ಶರಣಸಂಕುಲ ಬಿಟ್ಟು ಬೇರೆಲ್ಲಿಯೂ ಹೋಗುವುದಿಲ್ಲ ಎಂಬ ವಿಚಾರವನ್ನು ತಿಳಿಸುತ್ತಾ ಇನ್ನೊಂದು ವಚನದಲ್ಲಿ ಹೇಳುತ್ತಾರೆ.

"ಲಿಂಗವಂತರ ಲಿಂಗಾಚಾರಿಗಳ ಅಂಗಳಕ್ಕೆ ಹೋಗಿ

ಲಿಂಗಾರ್ಪಿತವ ಮಾಡುವಲ್ಲಿ ಸಂದೇಹವಿಲ್ಲದಿರಬೇಕು.

ಕಾಣದುದನೆ ಚರಿಸದೆ, ಕಂಡುದನು ನುಡಿಯದೆ.

ಕಾಣದುದನು ಕಂಡುದನು ಒಂದೆಸಮವೆಂದು ಅರಿಯಬಲ್ಲರೆ

ಕುಂಭೇಶ್ವರಲಿಂಗವೆಂಬೆನು."

–ಕೇತಲದೇವಿ

ಸಮಾನತೆಯ ಬಗ್ಗೆ ಸಾರುತ್ತಿರುವ ಕೇತಲದೇವಿ ಎಲ್ಲವನ್ನು ಒಂದೇ ಸಮವೆಂದು ಅರಿಯಬೇಕು, ಲಿಂಗಾಚಾರಿಗಳ ಅಂಗಳಕ್ಕೆ ಹೋಗಿ ಲಿಂಗಾರ್ಪಿತವ ಮಾಡುವಲ್ಲಿ ಸಂದೇಹವಿಲ್ಲದಿರಬೇಕು ಎನ್ನತ್ತಾರೆ. ತನ್ನ ಪತಿಯ ಕಾಯಕದಲ್ಲಿ ಸಮಭಾಗಿಯಾಗುತ್ತಿದ್ದ ಕೇತಲದೇವಿಗೆ ಪತಿಯ ಶಿವನಾಮಸ್ಮರಣೆಯೊಂದೇ ಗೊತ್ತಿತ್ತು. ಹೊರಗಿನ ವ್ಯವಹಾರದ ಕಡೆ ಒಲವಿಲ್ಲದೆ, ಭಾಲ್ಕಿಯಿಂದ ಕಲ್ಯಾಣಕ್ಕೆ ಹೋಗಿ ಅಲ್ಲಿಯೇ ಶರಣರ ಸಂಗದಲ್ಲಿದ್ದ ಪ್ರಭಾವದಿಂದ ವಚನಗಳು ರಚಿಸಿರುವ ಸಾಧ್ಯತೆ ಕಂಡು ಬರುತ್ತದೆ. ಸತ್ಯಶುದ್ಧ ಕಾಯಕ ಜೀವಿಗಳಾಗಿದ್ದ ಗುಂಡಯ್ಯ ದಂಪತಿಯ ನಡೆ-ನುಡಿ-ಮನವೆಲ್ಲವೂ ಶಿವಪೂಜೆ, ಶಿವಭಜನೆಯೊಂದಿಗೆ ಶುದ್ಧವಾಗಿತ್ತು.

ಬೀದರ ಜಿಲ್ಲೆಯಿಂದ 40 ಕಿ.ಮೀ. ಬಸವಕಲ್ಯಾಣದಿಂದ 40 ಕಿ.ಮೀ. ದೂರದಲ್ಲಿ ಬರುವ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರ ಕಾರ್ಯಕ್ಷೇತ್ರವಾಗಿ ಕರ್ನಾಟಕದಾತ್ಯಂತ ಪ್ರಸಿದ್ಧಿ ಪಡೆದ ತಾಲೂಕಾ ಕೇಂದ್ರವಾದ ಭಾಲ್ಕಿಯವರಾದ ಕುಂಬಾರ ಗುಂಡಯ್ಯನವರ ಗದ್ದುಗೆ ಐಕ್ಯಸ್ಥಳವು, ಈಗಿನ ಭಾಲ್ಕಿಯ ಬಸ್ಸ್ ನಿಲ್ದಾಣದಿಂದ 1.5 ಕಿ.ಮೀ. ದೂರದಲ್ಲಿ ಇರುವ ಹಳೆಯ ಭಾಗದಲ್ಲಿ ಒಂದೇ ಆವರಣದಲ್ಲಿ ಹಿಂಭಾಗದಲ್ಲಿ ಒಂದು ಚಿಕ್ಕದಾದ ಗುಡಿಯ ರೂಪದಲ್ಲಿ ಗುಂಡಯ್ಯನವರ ಗದ್ದುಗೆ (ಸಮಾಧಿ) ಇದೆ. ಅಲ್ಲಿಯೇ ಮುಂದೆ ಕೇತಲದೇವಿಯವರ ಗುಡಿ ಮತ್ತು ಎದುರಿಗೆ ಒಂದು ಬಹಳ ಪುರಾತನ ಕಾಲದ್ದು ಎಂದು ಕರೆಯಿಸಿಕೊಳ್ಳುವ ಕುಂಭೇಶ್ವರ ಎಂಬ ದೇವಾಲಯವಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಭಾಲ್ಕೇಶ್ವರ ಎಂಬ ಪ್ರಸಿದ್ಧಿವುಳ್ಳ ದೇವಾಲಯವಿದೆ. ಈ ಎಲ್ಲ ದೇವಾಲಯಗಳ ಗರ್ಭಗುಡಿಯಲ್ಲಿ ಶಿವಲಿಂಗ ಮಾತ್ರ ಕಾಣಸಿಗುತ್ತಿದ್ದವು. ಆದರೀಗ ಅನೇಕ ರೀತಿಯ ಮೂರ್ತಿ ಶಿಲೆಗಳು ಆವರಿಸಿಕೊಂಡಿವೆ. ಇಲ್ಲಿಯ ಪೂಜಾರಿಗಳು ಗೊಸಾಯಿಗಳು. ಇವರು ಮೂಲತಃ ಶಿವನ ಆರಾಧಕರಾಗಿದ್ದವರು ಆದರೆ ಇತ್ತಿಚೇಗೆ ವೈಷ್ಣವ ಮತದ ಕಡೆಗೆ ಮೊರೆಹೊಗುವುದು ಕಂಡುಬರುತ್ತಿದೆ ಎನ್ನಲಾಗಿದೆ. ಶಿವಲಿಂಗಭಕ್ತ ಕುಂಬಾರ ಗುಂಡಯ್ಯನವರ ಮಡದಿ ಕೇತಲದೇವಿಯವರ ಕುಂಭೇಶ್ವರಲಿಂಗ ಎಂಬ ಅಂಕಿತ ಸಾಕ್ಷಿಯಾದಂತೆ ಇಲ್ಲಿ ಕುಂಭೇಶ್ವರ ದೇವಾಲಯ ಇದೆ. ಕುಂಬಾರರ ಓಣಿಯಲ್ಲಿರುವ ಕುಂಭೇಶ್ವರ ದೇವಾಲಯದಲ್ಲಾಗಲಿ, ಭಾಲ್ಕೇಶ್ವರ, ದೇವಾಲಯದಲ್ಲಾಗಲಿ ವಿಭೂತಿ, ರುದ್ರಾಕ್ಷಿ ಧರಿಸಿಯೆ ಪೂಜೆ ಸಲ್ಲಿಸಿತ್ತಿದ್ದರು. ಸ್ಥಾವರಲಿಂಗಗಳ ನೆಲೆಯಾದ ಭಾಲ್ಕಿಯಲ್ಲಿ 12 ಜ್ಯೋತಿರ್ಲಿಂಗಗಳಿವೆ ಎಂಬ ಪ್ರತೀತಿ ಇದೆ. ಈ ಎಲ್ಲ ಜ್ಯೋತಿರ್ಲಿಂಗಗಳಿಗೆ ಗೋಸಾಯಿಗಳೆ ಪೂಜೆ ಮಾಡುತ್ತಾರೆ ಎಂದು ಹೇಳುತ್ತಾರೆ.

ಪರಮಶಿವಭಕ್ತಳಾದ ಕೇತಲದೇವಿ ಲಿಂಗಕ್ಕೆ ಪಾವುಡ ಹೊದಿಸುವ ನೇಮ ಹೊತ್ತು ವ್ರತಮಾಡುತ್ತಿದ್ದಾಗ, ಒಂದು ಸಲ ಪಾವುಡವನ್ನು ದೊರೆಯದಿದ್ದಾಗ ತನ್ನ ಎದೆಯ ಚರ್ಮವನ್ನೇ ಸುಲಿದು ಪಾವುಡ ಮಾಡಿ ಹೊದಿಸಿದಳೆಂಬ ದಂತಕಥೆಯು ಕೇತಲದೇವಿಯವರ ವ್ರತ, ನಿಷ್ಠೆ, ಶಿವಭಕ್ತಿ ಎತ್ತಿ ತೋರಿಸುವದಾಗಿದೆ. ಕುಂಬಾರ ಗುಂಡಯ್ಯನವರು ತಮ್ಮ ಕಾಯಕದ ಲಯಗಾರಿಕೆಯಿಂದ ಶಿವನನ್ನೆ ನರ್ತನೆಗಿಳಿಯವಂತೆ ಮಾಡಿದರೆಂಬ ಕೀರ್ತಿ ಸಲ್ಲುತ್ತದೆ. ಗುಂಡಯ್ಯನವರು ಅಂದವಾಗಿ ತಯಾರಿಸಿದ ಗಡಿಗೆ ಸರಿಯಾಗಿ ಸುಟ್ಟಿದೆಯೋ ಇಲ್ಲಯೋ ಎಂಬುದನ್ನು ಬಾರಿಸಿ ನೋಡುವ ಪರಿ, ಆ ನಾದ ಬಾರಿಸುವ ಘಟವಾದ್ಯ ನುಡಿಸುವಿಕೆಗೆ ಶಿವನು ಕುಣಿಯುತ್ತಿದ್ದುದು ಎಂದು ಹೇಳುವುದರಲ್ಲಿ ಅದ್ಭುತ ತತ್ವವು ಅಡಗಿದೆ. ಬಸವಣ್ಣನವರು ಎಲ್ಲಾ ಕಾಯಕ ಜೀವಿಗಳಿಗೆ ತಾವು ಮಾಡುವ ಕಾಯಕವು ಪರಿಪೂರ್ಣತೆಯಿಂದ ಕೂಡಿರಬೇಕು ಎಂಬ ಅರಿವು ಮೂಡಿಸಿದ್ದರೆಂಬುದ್ದಕ್ಕೆ ಕುಂಬಾರ ಗುಂಡಯ್ಯನವರ ಕಾಯಕದ ಬಗ್ಗೆ ಜನಪದ ಕವಿಗಳು ಬಣ್ಣಿಸುತ್ತಾರೆ.

******

ಬಯಲ ಬೊಂತಾದೇವಿ

ಬಟ್ಟಬಯಲ ಮಹಾಮನೆಯೊಳಗೊಂದು
ಹುಟ್ಟದ ಹೊಂದದ ಶಿಶುವ ಕಂಡೆ.
ಮುಟ್ಟಿ ಪೂಜಿಸಹೋದಡೆ
ನೆಟ್ಟನೆ ಆ ಶಿಶು ತನ್ನುವ ನುಂಗಿತ್ತು
ಮುಟ್ಟಲಿಲ್ಲ ನೋಡಲಿಲ್ಲ, ಪೂಜೆಗೆ ಕಟ್ಟಳೆ ಮುನ್ನಿಲ್ಲ.
ಗುಹೇಶ್ವರ ಬಯಲು !

–ಅಲ್ಲಮಪ್ರಭುದೇವರು.

ಸರ್ವಶೂನ್ಯವಾಗಿ, ಅಖಂಡ ಪ್ರಸನ್ನವಾಗಿರುವ ನಿಜನಿರಾಳ ನಿರಾಲಂಬದಲ್ಲಿ ಬೆಳಗುವ ಮಹಾಬೆಳಗೇ ಮಹಾಮನೆ. ಆ ಮಹಾಮನೆಯಲ್ಲಿ ಅಖಂಡ ತೇಜೋರಾಶಿಯಾದ ಸ್ವಯಂಭು ಲಿಂಗ. ಹುಟ್ಟದ ಹೊಂದದ ಶಿಶು ತನ್ನ ತಾನೆ ಅಖಂಡ ಗೋಳಾಕಾರವಾಗಿ ಉದಯವಾದರೆ, ಅದನ್ನು ಕಂಡಕೊಂಡವರು ಶರಣರು. ಆ ಲಿಂಗವನ್ನು ಮುಟ್ಟಿ ಪೂಜಿಸಿದವರು ಶರಣರು. ನಿಮ್ಮ ನಂಬಿದ ಬಳಿಕ ನಾನು ಬಯಲಾದೆ. ಶರಣ ಲಿಂಗ, ಭಕ್ತ ದೇವ ಸಮರಸವಾಗಿ, ನೀಷ್ಪತ್ತಿಯಾಗಿ ನಿಂದ ಬಯಲು. ಯಾರನ್ನು ಯಾರು ಮುಟ್ಟಬೇಕು, ನೋಡಬೇಕು, ಪೂಜಿಸಬೇಕೆಂದು ಅಲ್ಲಮಪ್ರಭುಗಳ ಅದ್ಭುತವಾದ ತತ್ವವನೊಳಗೊಂಡ ವಚನ. ಶರಣರು ನಿಶ್ಚಿಂತ ನಿರಾಳವಾದ ಪೂಜೆಯೊಂದಿಗೆ ಈ ಬಯಲಿಗೆ ಬಂದು, ಬಯಲನ್ನು ಕಂಡುಕೊಂಡು ಬಯಲೊಳಗೆ ಬಯಲಾದ ಪರಿಯನ್ನು ಅನುಭವಿಸಲು ಅರಸುತ್ತಾ ಬಂದ ಬೊಂತಾದೇವಿಯವರು ವೀರ ವಿರಾಗಿಣಿಯಾಗಿ ಬಯಲಾದರು.

ಕಾಶ್ಮೀರದ ಮಾಂಡವ್ಯಪುರ ರಾಜನ ಮಗಳಾದ ನಿಜದೇವಿ ಚಿಕ್ಕಂದಿನಿಂದಲೂ ಶಿವಭಕ್ತಿಯಲ್ಲಿ ತಲ್ಲೀನಳಾಗಿರುತ್ತಿದ್ದಳು. ದೊಡ್ಡವಳಾದಂತೆ ಅವಳಲ್ಲಿ ವೈರಾಗ್ಯ ಭಾವವು

ಗಟ್ಟಿಗೊಂಡು ರಾಜಮನೆತನದ ಸುಖಭೋಗಗಳನ್ನು ತ್ಯಜಿಸಿ, ತನ್ನ ಉಡಿಗೆ ತೊಡುಗೆಗಳನ್ನು ಸಹ ಬಿಟ್ಟುಕೊಟ್ಟು ದಿಗಂಬರಿಯಾದಳು. ಆಗ ತಂದೆ ತಾಯಿಗಳು ಮಗಳ ಕಂಡು ಎಲೇ ಮಗಳೇ, ಇದೆಲ್ಲಿಯ ಭ್ರಾಂತಿ ನಿನಗೆ ? ಈ ಮಾರ್ಗವನ್ನು ಬಿಟ್ಟುಬಿಡು ಎಂದು ಎಷ್ಟು ಪರಿಯಿಂದ ಹೇಳಿದರೂ ಕೇಳದೆ, ನನಗೆ ಶಿವನ ಭ್ರಾಂತಿಯುಂಟಾಗಿದೆ ನಿಮ್ಮ ಯಾವ ರಾಜ್ಯವೈಭವವು ಬೇಡ. ನನಗೆ ಕಲ್ಯಾಣದಲ್ಲಿರುವ ಬಸವಾದಿ ಶರಣರ ಬಳಿಗೆ ಹೋಗುವ ತವಕವಾಗಿದೆ ಎನ್ನುತ್ತಾ ಕಲ್ಯಾಣದ ಕಡೆಗೆ ಹೊರಟಳು.

ಪಾದಚಾರಿಯಾಗಿ ಘೋರಾರಣ್ಯಗಳನ್ನು ಪ್ರವೇಶಿಸುತ್ತ ಬರುತ್ತಿರುವ ನಿಜದೇವಿಗೆ ಮಾರ್ಗಮಧ್ಯದಲ್ಲಿ ತುಂಬಾ ಜನರು ಕಾಡಿದರೂ ಹೆದರದೆ ಧೈರ್ಯದಿಂದ ಮುಂದುವರಿಯುತ್ತಿದ್ದಳು. ಅತ್ಯಂತ ಲಾವಣ್ಯವತಿಯು ವೈರಾಗ್ಯಶೀಲೆಯಾದ ನಿಜದೇವಿಯನ್ನು ಶಿವನು ಪರೀಕ್ಷಿಸಬೇಕೆಂದು ಒಮ್ಮೆ ಸುಂದರ ಯುವಕನ ರೂಪ ಧರಿಸುತ್ತಾ, ಮತ್ತೊಮ್ಮೆ ಒಬ್ಬ ವ್ಯಾಪಾರಸ್ಥನ ವೇಷ ಧರಿಸುತ್ತಾ ಅವಳಿದ್ದೆಡೆಗೆ ಬಂದು ಎಲೇ ನಿಜದೇವಿಯೇ, ನೀನು ನನ್ನ ಸತಿಯಾಗಿ ನನ್ನೊಡನೆ ಸುಖವಾಗಿ ಬಾಳು ಎಂದು ಕೇಳಿಕೊಳ್ಳುತ್ತಾನೆ. ಆದರೆ ನಿಜದೇವಿಯು ಅವನಾರೆಂಬುದುನ್ನು ತಕ್ಷಣವೆ ತನ್ನ ಸುಜ್ಞಾನದಿಂದ ಅರಿತು, ನಗುತ್ತಾ ನೀನಾರೆಂಬುದು ನನಗೆ ತಿಳಿಯಿತು. (ವೇಷಧಾರಿಯಾದ ಶಿವನನ್ನು ಗುರುತಿಸಿ) 'ಕಾಮವೈರಿಯಾದ ನಿನ್ನನ್ನು ಹೇಗೆ ಮದುವೆಯಾಗಲಿ? ನಿನಗೆ ಈಗಾಗಲೇ ಇಬ್ಬರು ಹೆಂಡತಿಯರು! ಮತ್ತೊಬ್ಬಳೇಕೆ ಎಂದು ಶಿವನನ್ನೇ ಪ್ರಶ್ನಿಸುತ್ತಾ, ಕಲ್ಯಾಣದ ಕಡೆಗೆ ಹೊರಟಿರುವ ನಾನು ನಿನ್ನನ್ನು ವರಿಸಿದರೆ, ಬಸವಾದಿ ಪ್ರಮಥರು ಮೆಚ್ಚದೆ ನಗುವರು ಎಂದು ನುಡಿಯುತ್ತಾಳೆ. ಶಿವನು ನಿಜದೇವಿಯ ವಿರಕ್ತಿಯನ್ನು ನೋಡಿ ಪ್ರತ್ಯಕ್ಷನಾಗಿ, ನಿಜದೇವಿಯೆ ನಿನ್ನ ವೈರಾಗ್ಯಕ್ಕೆ ಮೆಚ್ಚಿದೆನು ನೀನು ದಿಗಂಬರಿಯಾಗದೆ ಈ ಬೊಂತೆಯನ್ನು (ಬೊಂತೆ ಎಂದರೆ ಕೌದಿ) ಹೊದ್ದುಕೊಂಡು ಹೋಗೆಂದು ಬೊಂತೆಯನ್ನು ಹೊದಿಸುತ್ತಾನೆ. ಶಿವನ ಅಪ್ಪಣೆ ಮೀರಲಾರದೆ ಆ ಕೌದಿಯನ್ನು ಹೊದ್ದುಕೊಂಡು ಬರುವಾಗಲೆ ನಿಜದೇವಿಗೆ "ಬೊಂತಾದೇವಿ" ಎಂಬ ಹೆಸರು ಬಂತೆಂದು ದಂತಕಥೆಯಲ್ಲಿ ಬರುತ್ತದೆ.

ಬೊಂತಾದೇವಿ ಕಲ್ಯಾಣಕ್ಕೆ ಬಂದು ಶರಣರ ಸಂಗದಲ್ಲಿ ಬೆರೆತು ಜೀವನ ಸಾಗಿಸುತ್ತಾಳೆ. ಅನುಭವ ಮಂಟಪದಲ್ಲಿ ಭಾಗಿಯಾದ ಬೊಂತಾದೇವಿಯು "ಬಿಡಾಡಿ" ಎಂಬ ವಚನಾಂಕಿತದಿಂದ ರಚಿಸಿದ ವಚನಗಳು ದೊರತದ್ದು ಐದು ಮಾತ್ರ. ಯಾವ ಬಂಧನಕ್ಕೂ ಒಳಗಾಗದ ಬೊಂತಾದೇವಿಯ ವಚನಗಳು ಬಯಲರೂಪಿ ಶಿವನನ್ನು ಸಂಕೇತಿಸುವುದರ ಜೊತೆಗೆ ಸ್ವಾತಂತ್ರ್ಯ ಮನೋವೃತ್ತಿಯನ್ನು ಪ್ರತಿನಿಧಿಸುತ್ತವೆ. ಶಿವನ

ಅನಂತತೆಯ ಸ್ವರೂಪ, ಆಧ್ಯಾತ್ಮಿಕ ಸಾಧನೆ, ಸಮತಾಭಾವ ಹಾಗೂ ಸಾಮಾಜಿಕ ಕಳಕಳಿಯಿಂದ ಕೂಡಿದವುಗಳಾಗಿವೆ. ಅವುಗಳಲ್ಲಿ ಬಯಲಿನ ಪರಿಕಲ್ಪನೆಯ ಪ್ರಮುಖವಾದ ವಚನವಿದಾಗಿದೆ.

"ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ;
ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ,
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ."

–ಬೊಂತಾದೇವಿ

ದೇವರು ವಿಶ್ವ ಮತ್ತು ಸಮಾಜದೊಳಗಿನ ಸಕಲಜೀವಾತ್ಮರ ಆಂತರಿಕ ಸಂಬಂಧವನ್ನು ಹೊಂದಿರುವನೆಂಬುದು ಬೊಂತಾದೇವಿಯ ನಿಲುವಾಗಿದೆ. ಇಲ್ಲಿ ಬಯಲು ಎಂಬುದು ದೇವರು, ಬಾಹ್ಯಾಕಾಶ ಮತ್ತು ಸಮಾಜ ಎಂಬ ಮೂರು ಪ್ರಕಾರದಲ್ಲಿದೆ. ಈ ಬಯಲನ್ನು ವಿಜ್ಞಾನಿಗಳು ಆಕಾಶ, ಬಾಹ್ಯಾಕಾಶ ಮುಂತಾಗಿ ವಿಭಾಗಿಸುತ್ತಾರೆ. ಧಾರ್ಮಿಕವಾಗಿ ಈ ಬಯಲಿಗೆ ನಾನಾ ರೀತಿಯಾದ ದೇವರ ಹೆಸರುಗಳನ್ನು ಕೊಡುತ್ತಾರೆ. ವರ್ಣಭೇದ ನೀತಿಯ ಜನರು ಸಮಾಜವನ್ನು ಸವರ್ಣೀಯರು, ಅಸ್ಪೃಶ್ಯರು, ಕರಿಯರು, ಬಿಳಿಯರು ಮುಂತಾಗಿ ವಿಭಾಗಿಸುತ್ತಾರೆ. ಆದರೆ ಅನಂತನೂ ಲಯಕ್ಕೆ ಒಳಗಾಗದವನೂ ಆದಂಥ ದೇವರು ಬಯಲರೂಪಿಯಾಗಿದ್ದು ಎಲ್ಲವನ್ನೂ ಎಲ್ಲರನ್ನೂ ಒಳಗೊಂಡಿದ್ದಾನೆ. ಅವನಿಗೆ ಯಾವುದೇ ಕಟ್ಟುಪಾಡುಗಳಿಲ್ಲ. ಮಾನವ, ಮಾನವರ ಮಧ್ಯೆ ಅಡ್ಡಗೋಡೆ ಕಟ್ಟಿ, ಒಳಗೆ–ಹೊರಗೆ ಎಂದು ಹೆಸರಿಸುವುದು ಸರಿಯೇ ಎಂದು ಬೊಂತಾದೇವಿಯು ಪ್ರಶ್ನಿಸುತ್ತಾ ದೇವರು ಎಲ್ಲಡೆಯೂ ಇದ್ದಾನೆ. ಆದರೆ ಯಾವುದರಲ್ಲಿಯೂ ಸೀಮಿತವಾಗಿಲ್ಲದ ಬಿಡಾಡಿ. (ಬಿಡಾಡಿ ಎಂದರೆ ಯಾವುದೇ ಕಟ್ಟುಪಾಡುಗಳಿಲ್ಲದವನು.) ಎಲ್ಲಾ ಕಡೆಗಳಲ್ಲಿಯೂ ಇರುವ ದೇವರನ್ನು ಯಾರೇ ಆಗಲಿ ನಂಬಿ ಕರೆದರೆ ಓ ಎನ್ನುತ್ತಾನೆ ಎಂಬ ಆತ್ಮವಿಶ್ವಾಸದಿಂದ ಅಧ್ಯಾತ್ಮದ ತುದಿಗೇರಿದ ಬೊಂತಾದೇವಿಯ ಮನಸ್ಸು ಸಮತಾಭಾವ ಹಾಗೂ ಸಾಮಾಜಿಕ ಕಳಕಳಿಯಿಂದ ತುಂಬಿತ್ತು.

"ಘಟದೊಳಗಣ ಬಯಲು, ಮಠದೊಳಗಣ ಬಯಲು,
ಬಯಲು ಬಯಲು ಬಯಲು !
ತಾನೆಲ್ಲಾ ಬಯಲು, ಬಿಡಾಡಿ ಬಯಲು."

–ಬೊಂತಾದೇವಿ.

ಬೊಂತಾದೇವಿಯವರ ಬಯಲು ಶಬ್ದದ ಅನುರಣನ ಎಂತಹ ಮೋಹಕ! ಕಾವ್ಯ ಸೌಂದರ್ಯವನ್ನು ಕಾಣುವುದರೊಂದಿಗೆ ಪರಾತ್ಪರ ಪರಮಾತ್ಮನ ಒಳಗೊಂಡು, ಲಿಂಗಾಂಗ ಸಾಮರಸ್ಯ ಹೊಂದುವ ಅನುಭೂತಿಯೆಂಬಂತೆ ಬಯಲ ಗಳಿಕೆ ಮಾಡಿರುವುದು ಭಾಸವಾಗುತ್ತದೆ. ಸುಜ್ಞಾನವೆ ಮೈಗೂಡಿಸಿಕೊಂಡು ಅರಿವೆ ಗುರುವಾಗಿಸಿಕೊಂಡು ವಚನವೊಂದರಲ್ಲಿ

"ಅರಿವೆ ಬಿಡಾಡಿ, ಅರಿಯದೆ ಬಿಡಾಡಿ,
ಮರವೆ ಬಿಡಾಡಿ, ಮರೆಯದೆ ಬಿಡಾಡಿ,
ಅರಿವರಿತು ಕುರುಹಿಲ್ಲದಾತ ನೀನೆ ಬಿಡಾಡಿ."

–ಬೊಂತಾದೇವಿ

ಸತ್ಯವೆಂಬದು ಯಾರ ಸೊತ್ತಲ್ಲ. ಅದು ನಾವು ಅರಿತರೂ, ಮರೆತರೂ ಅದು ಸದಾ ಕಾಲ ಇರುವುದು. ಯಾವ ಕುರುಹುವಿಲ್ಲದ ದೇವರು ಎಲ್ಲಾ ಕಡೆಗೂ ಅಗಮ್ಯ, ಅಗೋಚರ, ಅಪ್ರತಿಮನಾಗಿ ಇರುತ್ತಾನೆಂದು ಹೇಳುತ್ತಾ ಮತ್ತೊಂದು ಕಡೆ

"ಅಂತಾಯಿತ್ತಿಂತಾಯಿತ್ತೆಂತಾಯಿತ್ತೆನಬೇಡ,
ಅನಂತನಿಂತಾತನೆಂದರಿಯಾ ಬಿಡಾಡಿ."

–ಬೊಂತಾದೇವಿ

ಈ ವಚನದಲ್ಲಿನ ಅಕ್ಷರಗಳನ್ನು ನೋಡಿದಾಗ, ಬೊಂತಾದೇವಿಯವರು ಎಷ್ಟು ಸಹಜವಾಗಿ ಅಕ್ಷರ ಪುನರಾವರ್ತನೆ ಮಾಡಿದ್ದು ಭಾಷಾಸಾಮರ್ಥ್ಯದ ಪ್ರತೀಕವಾಗಿದೆ. 'ಶಬ್ದವೆ ಬ್ರಹ್ಮ, ಶಬ್ದವೆ ಸಿದ್ಧ, ಶಬ್ದವೆ ಶುದ್ಧ ಕಾಣಿರೆ, ಬಿಡಾಡಿ. ಎಂದು ಬೊಂತಾದೇವಿಯವರ ಅನುಭವದಿಂದ ಬಂದ ನುಡಿಗಳು ಅವರ ಸಿದ್ಧಾಂತ ಮತ್ತು ಭಾಷಾ ಪ್ರಭುತ್ವವನ್ನು ಎತ್ತಿ ತೋರಿಸುತ್ತವೆ.

"ಘಟಪಟನಾದಾ, ಓ ಎಂಬಾತ ಲಿಂಗ
ತರಗೆಲೆಗಳಿಗೊಂದೆ ಗಾಳಿ;
ಹಾರುತ್ತಿಪ್ಪವು. ಒಂದೆ ಅನಿಲ,
ನಿಂದ ದೇಹಪಟ್ಟೆಗಳೊಳಗೆಲ್ಲ.
ಕರೆದಡೆ, ಓ ಎಂಬಾತನೆ ಬಿಡಾಡಿ."

–ಬೊಂತಾದೇವಿ

ಈ ವಚನದಲ್ಲಿ ಬೊಂತಾದೇವಿಯವರು ದೇಹದೊಳಗಿನ ಚೈತನ್ಯ ಬಯಲಾದ ನಂತರ ದೇಹವು ಒಣಗಿದ ಎಲೆಯಂತಾಗುವುದು. ಮಾನವ ದೇಹ ಮಣ್ಣಾಗುವ

ಮುನ್ನ ಲಿಂಗದ ವಶದಲ್ಲಿ ಬೆಳಗುವವನೇ ಶರಣ. ಶರಣನ ಅಂಗಾಂಗಗಳು ಲಿಂಗದ ಜೊತೆ ಸಾಮರಸ್ಯ ಹೊಂದಿದ ಬಳಿಕ 'ನಾನು ತಾನು' ಎಂಬುದರ ಕುರುಹಿಲ್ಲ. ಅಹಂ ಇಲ್ಲದ ಮಹಿಮರೇ ಶರಣರು. ಶರಣಸ್ಥಲದ ಸೀಮೆಗೆ ಹತ್ತಿರವಿರುವುದೇ ಐಕ್ಯಸ್ಥಲ.

ಕಲ್ಯಾಣದಲ್ಲಿ ಕಗ್ಗೊಲೆಯಿಂದಾಗಿ ಶರಣರೆಲ್ಲ ದಿಕ್ಕಾಪಾಲಾಗಿ ಚೆದರಿಹೋದರು. ಬೊಂತಾದೇವಿ ಕೊನೆಯವರೆಗೆ ಕಲ್ಯಾಣದಲ್ಲಿಯೇ ಉಳಿದು ಆ ಭಿಕರತೆಗೆ ಬೇಸತ್ತು ಶಿವನು ಕೊಟ್ಟ ಬೊಂತೆಯನ್ನು (ಕೌದಿ) ಆಕಾಶಕ್ಕೆ ತೂರುತ್ತಾಳೆ. ಅದು ಹಾರಾಡುತ್ತಾ ಬಯಲೊಳಗೆ ಬಯಲಾದಂತೆ ಪರಮವೈರಾಗ್ಯ ತಾಳಿದ ಬೊಂತಾದೇವಿಯ ಅಂಗದೊಳಗಿನ ಚೈತ್ಯನ್ಯವು ಲಿಂಗದೊಳಗೆ ಒಡಗೂಡಿ ಒಂದಾಯಿತು.

ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನಲ್ಲಿ ಮೊಳಕೇರಾ ಎಂಬ ಗ್ರಾಮವಿದೆ. ಇದು ಬಸವಕಲ್ಯಾಣದಿಂದ 25 ಕಿ.ಮೀ. ಮತ್ತು ಹುಮನಾಬಾದ ಪಟ್ಟಣದಿಂದ 5 ಕಿ.ಮೀ ದೂರದಲ್ಲಿ ಬರುವುದು. ರಾಷ್ಟೀಯ ಹೆದ್ದಾರಿ 9ರ ಮಗ್ಗಲಲ್ಲಿ ಬರುವ ಈ ಗ್ರಾಮದಲ್ಲಿ ಮೋಳಿಗೆ ಮಾರಯ್ಯನವರ ಮತ್ತು ಮಹಾದೇವಮ್ಮನವರ ಗವಿಗಳಿವೆ. ಮೋಳಿಗೆ ಮಾರಯ್ಯನವರ ಗವಿಯ ಎಡಗಡೆ ಮಾಹಾದೇವಮ್ಮನವರ ಮೂರ್ತಿ ಮತ್ತು ಗವಿಯಿದೆ. ಬಲಗಡೆಯಲ್ಲಿ ಒಂದು ಚಿಕ್ಕ ಕೋಣೆ ನಿರ್ಮಿಸಿ ಇತ್ತೀಚೆಗಷ್ಟೇ ಬೊಂತಾದೇವಿಯವರ ಒಂದು ಶಿಲಾಮೂರ್ತಿಯನ್ನು ತಯಾರಿಸಿ ಪ್ರತಿಷ್ಠಾಪಿಸಿದ್ದಾರೆ. ಕಾಶ್ಮೀರದಿಂದ ಬಂದಿರುವ ಮಹಾದೇವ ಭೂಪಾಲರ ಸಹೋದರಿಯೇ ನಿಜದೇವಿಯಾಗಿದ್ದು ಅವರೇ ಬೊಂತಾದೇವಿ ಇರಬಹುದೆಂಬ ನಂಬಿಕೆಗಳಿಂದ ಇಲ್ಲಿ ಬೊಂತಾದೇವಿಯ ಮೂರ್ತಿ ಪ್ರತಿಷ್ಠಾಪಿಸಲಾಗಿದೆ ಎನ್ನತ್ತಾರೆ. ಆದರೆ ಇದುವರೆಗೂ ಮೋಳಿಗೆ ಮಾರಯ್ಯನವರ ಸಹೋದರಿಯೇ ಇವರು ಎಂಬುದಾಗಲಿ ಅಥವಾ ಅವರ ಐಕ್ಯಸ್ಥಳದಲ್ಲಿಯ ಸಮಾಧಿ(ಗದ್ದುಗೆ)ಯ ಬಗ್ಗೆಯಾಗಲಿ ನಿಖರವಾದ ಮಾಹಿತಿ ದೊರೆತಿಲ್ಲ. ಅದೇನೇ ಇದ್ದರೂ ಶರಣೆ ಬೊಂತಾದೇವಿ ತನ್ನ ಪ್ರಖರ ವೈಚಾರಿಕತೆ ಸಾರುವ ವಚನಗಳಲ್ಲಿ ಅಮರವಾಗಿದ್ದಾರೆ.

****

ಇಷ್ಟಲಿಂಗ ಜನಕ ಬಸವಣ್ಣ

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಲಿಂಗಾಯತ ಆಕಾಶದಲ್ಲಿ ಅತ್ಯಂತ ಪ್ರಕಾಶಮಾನವಾದ ನಿತ್ಯಸೂರ್ಯರಾಗಿ ಬೆಳಗುತ್ತಿದ್ದವರು. ಬಸವೇಶಾ, ಬಸವಣ್ಣ, ಬಸವ, ಬಸವರಾಜ, ಸಂಗನಬಸವಣ್ಣಾ ಎಂದು ಮುಂತಾಗಿ ಕರೆಯಲ್ಪಡುತ್ತಿದ್ದ ಬಸವಣ್ಣನವರು ಲಿಂಗಾಯತ ಚಳವಳಿಯ ಸಂಸ್ಥಾಪಕರೂ, ಮುಖಂಡರೂ ಆಗಿದ್ದರು. ಲಿಂಗಾಯತ ಧರ್ಮ ಸ್ಥಾಪನೆ ಮಾಡುವ ಪೂರ್ವದಲ್ಲಿ ಸ್ಥಾವರಲಿಂಗಗಳು ಮತ್ತು ಅವುಗಳ ಚಿಕ್ಕ ಮಾದರಿಗಳಾದ ಚರಲಿಂಗಗಳು ಬಳಕೆಯಲ್ಲಿದ್ದವು. ಬಸವಣ್ಣನವರು ಚಳವಳಿ ರೂಪದ ಜಾತ್ಯತೀತ ಲಿಂಗಾಯತ ಧರ್ಮವು ಇಷ್ಟಲಿಂಗವನ್ನೂ ಸೃಷ್ಟಿಸುವುದರ ಜೊತೆಗೆ ಸ್ಥಾಪನೆ ಮಾಡಿದರು. ನಡೆ-ನುಡಿ ಒಂದಾಗಿಸಿಕೊಂಡ ಬಸವಣ್ಣನವರು ಅದ್ಭುತ, ಆಕರ್ಷಕ ವ್ಯಕ್ತಿತ್ವದ ಪ್ರಭಾವದಿಂದಾಗಿ ತಮ್ಮ ಸಮಕಾಲೀನರು ಹಾಗೂ ವಚನಕಾರೆಲ್ಲರಿಗೂ ಅಂದಿನಿಂದ ಇಂದಿನವರೆಗೂ ಮಹಾನ್ ಆದರ್ಶಪ್ರಿಯರಾಗಿದ್ದಾರೆ.

ಕನ್ನಡ ನಾಡಿನ ಹನ್ನೆರಡನೆಯ ಶತಮಾನ ದಣಿದ ಶತಮಾನವಾಗಿತ್ತು. ಹಿಂದಿನ ಶತಮಾನಗಳ ನಿರಂತರ ಯುದ್ಧಗಳಿಂದಾಗಿ, ಧರ್ಮಗಳು ನಿಷ್ಕ್ರೀಯವಾಗುತ್ತ ಎಲ್ಲೆಡೆ ಹಿಂಸೆ ತಾಂಡವವಾಡುತ್ತಿತ್ತು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜ್ಯಶಕ್ತಿಯಿಂದಾಗಿ ನಿರಂತರ ಶೋಷಣೆಗೆ ಒಳಗಾಗಿದ್ದ ಬಹುಪಾಲು ಕಾಯಕಜೀವಿಗಳ ಬದುಕು ದುರ್ಬರವಾಗಿತ್ತು. ಹಿಂಸೆ ಮತ್ತು ಸ್ವಯಂ ಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದವು. ಅಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳು ಹಿಂಸೆಯ ವಿರುದ್ಧ ಧ್ವನಿ ಎತ್ತುವ ಸ್ಥಿತಿಯಲ್ಲಿ ಇರಲಿಲ್ಲ. ಇಂಥ ವಿಷಮ ವಾತಾವರಣದಲ್ಲಿ ಕರ್ತನೆಂಬ ಕಲಾವಿದನ ಸುಂದರ ಕುಂಚದಿಂದ ಅತ್ಯದ್ಭುತವಾಗಿ ರಚಿಸಿದ ಒಂದು ಭವ್ಯ ಮನೋಹರ ಮೂರ್ತಿ ಬಸವಣ್ಣನವರ ಜನನವಾಯಿತು.

ಬಾಲಕನಾಗಿ:

ಬಸವಣ್ಣನವರು ಅಗ್ರಹಾರಗಳ ಅಗ್ರಹಾರವಾಗಿದ್ದ ಬಾಗೇವಾಡಿಯ ಪುರವರಾಧೀಶ ಮಾದರಸ ಮತ್ತು ಮಾದಲಾಂಬಿಕೆಯ ಮಗನಾಗಿ ಜನಿಸಿದರು. ಬಾಲಕ ಬಸವರಸ ಕೇವಲ ತೀಕ್ಷ್ಣಮತಿಯಷ್ಟೇ ಅಲ್ಲ, ಗುರುಹಿರಿಯರಲ್ಲಿ ಶ್ರದ್ಧೆ, ದೇವನಲ್ಲಿ ಭಕ್ತಿಯನ್ನು ಇರಿಸಿ ಅಧ್ಯಯನಕ್ಕೆ ತೊಡಗಿದ ಎಳೆಯ ಚೇತನವಾದರೂ ಬಾಲಸೂರ್ಯನಂತೆ ಪ್ರಖರ ಮತಿಯುಳ್ಳವ ಸ್ನೇಹಶೀಲ ಬಾಲಕ ಬಸವಣ್ಣ ಅಸಾಮಾನ್ಯ ಧೈರ್ಯಶಾಲಿ. ಪರಮಾತ್ಮನ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಮೇಲು ಕೀಳೆಂಬ ಪಾಶದಿಂದ ಬಿಡುಗಡೆಯಾಗಬೇಕು ಎಂಬುದೇ ಅವರ ಎಳೆಯ ಮನದಲ್ಲಿ ಕಾಡುತ್ತಿತ್ತು.

ಬಸವಣ್ಣನವರು ಹುಟ್ಟಿದ್ದು ಉನ್ನತಕುಲ ಎಂದು ಕರೆಯಿಸಿಕೊಳ್ಳುವ ಬ್ರಾಹ್ಮಣ ಕುಲದಲ್ಲಿ, ಧಾರ್ಮಿಕ ಅಧಿಕಾರ, ವೇದಾಗಮಗಳ ಜ್ಞಾನ ಸಂಪತ್ತು ತುಂಬಿದ್ದ ಮನೆತನದಲ್ಲಿ ! ಆದರೆ ಬಸವಣ್ಣನವರಿಗೆ ಇದಾವುದರ ಪರಿವೆ ಇರಲಿಲ್ಲ. ಶೂದ್ರರ ಮತ್ತು ಪಂಚಮರ ಸಾಮಾಜಿಕ ನ್ಯಾಯದ ಪ್ರಶ್ನೆ ಮಾತ್ರ ಅವರನ್ನು ಬಾಧಿಸುತ್ತಿತ್ತು. ಅದಕ್ಕೆ ಅವರು ಉತ್ತರ ಕಂಡುಕೊಳ್ಳಲೇ ಬೇಕಾಗಿತ್ತು. ಅದಕ್ಕಾಗಿ ಅವರು ಬ್ರಾಹ್ಮಣ್ಯವನ್ನು, ಸಂಪತ್ತನ್ನು ಮತ್ತು ನಂತರ ಕಲ್ಯಾಣದ ಪ್ರಧಾನಿ ಪದವಿಯನ್ನು ಬಿಟ್ಟುಕೊಡಬೇಕಾಯಿತು. ಬದುಕಿನ ಎಲ್ಲ ಸ್ತರಗಳಲ್ಲಿನ ಶೋಷಣೆಯನ್ನು ನಿರ್ನಾಮಗೊಳಿಸಿ, ಕೌರ್ಯದ ವಿರುದ್ಧ ಹೋರಾಡುತ್ತ, ದಯಾಸಂಸ್ಕೃತಿಯನ್ನು ಸಾಮಾಜೀಕರಣಗೊಳಿಸುವುದೇ ಬಸವಣ್ಣನವರ ಮುಖ್ಯ ಗುರಿಯಾಗಿತ್ತು.

ಏಕದೇವೋಪಾಸನಾ ಧರ್ಮ:

ಭಾರತದಲ್ಲಿ ಸಹಸ್ರಾರು ವರ್ಷಗಳಿಂದ ವಿವಿಧ ಜೀವನ ವಿಧಾನಗಳಿಂದ ಕೂಡಿದ ಸಮಾಜವನ್ನು ಸೃಷ್ಟಿಸಿದರೂ ಏಕದೇವೋಪಾಸನೆಯ ಧರ್ಮದ ಸ್ಥಾಪನೆಯಾಗಿರಲ್ಲಿಲ್ಲ. ಬಹುದೇವೋಪಾಸನೆಯ ಸನಾತನ ಧರ್ಮ, ತೀರ್ಥಂಕರರ ಜೈನಧರ್ಮ, ಅಜ್ಞೇಯವಾದಿ ಬೌದ್ಧಧರ್ಮ ಮತ್ತು ಆದಿವಾಸಿಗಳ ವಿವಿಧ ಸಂಪ್ರದಾಯಗಳು ಇದ್ದವು. ಅದ್ವೈತದ ಪ್ರತಿಪಾದಕರಾದ ಶಂಕರಾಚಾರ್ಯರು, ವಿಶಿಷ್ಟಾದ್ವೈತದ ಪ್ರತಿಪಾದಕರಾದ ರಾಮಾನುಜಾಚಾರ್ಯರು ಮತ್ತು ದ್ವೈತದ ಪ್ರತಿಪಾದಕರಾದ ಮಧ್ವಾಚಾರ್ಯರು ದಕ್ಷಿಣ ಭಾರತದಲ್ಲಿ ಜನಿಸಿ ತ್ರಿಮತಗಳ ಸ್ಥಾಪನೆ ಮಾಡಿದರೆ ಹೊರತು ಹೊಸ ಧರ್ಮ ಸ್ಥಾಪನೆ ಮಾಡಲಿಲ್ಲ. ಈ ಮತಗಳು ಪ್ರಸ್ಥಾನತ್ರಯಗಳೆಂದು ಕರೆಯಲಾಗುವ ಪ್ರಮಾಣ ಗ್ರಂಥಗಳಾದ ಬ್ರಹ್ಮಸೂತ್ರ, ಉಪನಿಷತ್ ಮತ್ತು ಭಗವದ್ಗೀತೆಗಳ ಅಧೀನದಲ್ಲೇ ಇರುವುದರಿಂದ ಇವು ಸ್ವತಂತ್ರ ಧರ್ಮಗಳಾಗುವುದಿಲ್ಲ. ಆದ್ದರಿಂದ ಈ ಮೂವರು ಆಚಾರ್ಯರನ್ನು ಮತಸ್ಥಾಪಕರೆಂದೇ ಕರೆಯಲಾಗುತ್ತಿದೆ.

ಬಸವಣ್ಣನವರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಯಾವುದೇ ಧರ್ಮ ಹುಟ್ಟಿರಲಿಲ್ಲ. ವೈದಿಕ, ಶೈವ, ಜೈನ, ಬೌದ್ಧಧರ್ಮಗಳು ದಕ್ಷಿಣ ಭಾರತದಲ್ಲಿ ಹಬ್ಬಿದ್ದರೂ ಅವುಗಳ ಉಗಮ ಸ್ಥಾನ ಉತ್ತರ ಭಾರತವಾಗಿತ್ತು. ಲಿಂಗವಂತ ಧರ್ಮ ಎಂದು ಕರೆಯಿಸಿಕೊಳ್ಳುವ ಬಸವಧರ್ಮ ಕನ್ನಡದ ನೆಲದಲ್ಲಿ ಜನ್ಮತಾಳಿದೆ. ದಕ್ಷಿಣ ಭಾರತದಲ್ಲಿ ಜನಿಸಿದ ಮೊದಲ ಧರ್ಮ ಇದಾಗಿದೆ. ದೇಶದ ಮೊದಲ ಏಕದೇವೋಪಾಸನೆಯ ಧರ್ಮವಾಗಿದೆ. ಕನ್ನಡವನ್ನು ಧರ್ಮದ, ದರ್ಶನದ, ಶಾಸ್ತ್ರದ, ಕಾಯಕಜೀವಿಗಳ ಸಾಹಿತ್ಯದ ಮತ್ತು ಚಳವಳಿಯ ಭಾಷೆಯಾಗಿ ರೂಪಿಸಿದ ಕೀರ್ತಿ ಬಸವಾದಿ ಶರಣರಿಗೆ ಸಲ್ಲುತ್ತದೆ.

ಇಷ್ಟಲಿಂಗ ಜನಕ:

ಬಸವಣ್ಣನವರು ಸೃಷ್ಟಿಸಿದ ಇಷ್ಟಲಿಂಗವು ಮಠದಲ್ಲಿ, ಮಂದಿರದಲ್ಲಿ, ಮೂರ್ತಿಯಲ್ಲಿ ಅಥವಾ ಹಿಮಾಲಯದಲ್ಲಿ, ಕೈಲಾಸದಲ್ಲಿ ಇಲ್ಲ. ಚೈತನ್ಯ ಸ್ವರೂಪಿ ದೇವರು ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣನಾದ ದೇವರ ದೇವಸ್ಥಾನವು ಅಂಗದಲ್ಲಿದೆ ಎಂದು ತಿಳಿಸಿದರು. ಬಸವಣ್ಣನವರು ಅನೇಕ ಗುರಿಗಳ ಸಾಧನೆಗಾಗಿ ಇಷ್ಟಲಿಂಗದ ಸೃಷ್ಟಿ ಮಾಡಿದರು. ಕಾಯಕಜೀವಿಗಳನ್ನು ಮಂದಿರ ವ್ಯವಸ್ಥೆಯಿಂದಾಗುವ ಶೋಷಣೆಯಿಂದ ವಿಮೋಚನೆಗೊಳಿಸುವುದು, ಮೂಢನಂಬಿಕೆಗಳಿಂದ ಹೊರತರುವುದು, ಕರ್ಮಸಿದ್ಧಾಂತದ ತೊಡಕುಗಳಿಂದ ಬಿಡಿಸಿಕೊಳ್ಳುವುದು, ಅಸ್ಪೃಶ್ಯತೆ, ಜಾತಿಯತೆ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಶೋಷಣೆಯನ್ನು ತಡೆಗಟ್ಟುವುದು ಮುಖ್ಯ ಉದ್ದೇಶವಾಗಿತ್ತು. ಈ ಎಲ್ಲ ವೈರುಧ್ಯಗಳನ್ನು ಎದುರಿಸಲು ಬೇಕಾದ ಮಾನಸಿಕ ಸ್ಥಿರತೆ ಮತ್ತು ವೈಚಾರಿಕ ಶಕ್ತಿಯನ್ನು ಇಷ್ಟಲಿಂಗಯೋಗದಿಂದ ಪಡೆಯಬೇಕೆಂಬುದು ಅವರ ಆಶಯವಾಗಿತ್ತು.

ಬಸವಣ್ಣನವರ ವಿಚಾರವಂತಿಕೆ ವಯಸ್ಸಿಗೆ ಮೀರಿ ಬೆಳೆಯುತ್ತಿತ್ತು. ತನ್ನ ತಂದೆ ತಾಯಿ, ಬಂಧು ಬಳಗ, ಸುತ್ತಮುತ್ತಲಿನ ಜನರ ವಿಚಾರಗಳು ಮತ್ತು ಅವರು ಅನುಸರಿಸುತ್ತಿರುವ ಆಚಾರಗಳು ಬಸವಣ್ಣನವರ ಮನದಾಳದಲ್ಲಿ ಸಂದೇಹ ಸಂಶಯಗಳ ಬಿರುಗಾಳಿ ಎಬ್ಬಿಸುತ್ತಿದ್ದವು. ಸಮಾಜದಲ್ಲಿ ರೂಢಿಸಿಕೊಂಡಿದ್ದ ಜಾತಿಪದ್ಧತಿ, ಬಹುದೇವೋಪಾಸನೆ, ಯಜ್ಞಯಾಗ ಪ್ರಾಣಿವಧೆ ಇತ್ಯಾದಿಗಳ ಆಚರಣೆಗೆ ಬಸವಣ್ಣನವರ ವಿವೇಕವು ತಿರಸ್ಕರಿಸಿ ಪ್ರತಿಭಟಿಸಲು ಪ್ರೇರಣೆ ನೀಡುತ್ತಿತ್ತು. ಅದಕ್ಕಾಗಿ ಅವರು ಪೂಜೆಯೆಂಬುದು ಮನುಷ್ಯನ ಒಳಗನ್ನು ಬೆಳಗುವಂಥ ಪ್ರಜ್ಞೆಯನ್ನು ವಿಕಸನಗೊಳಿಸಿ, ದೃಢಸಂಕಲ್ಪಶಕ್ತಿಯನ್ನು ಕೊಡುವಂಥ ಅರುಹಿನ ಕುರುಹು ಇಷ್ಟಲಿಂಗವನ್ನು ಸೃಷ್ಟಿಸಿದರು. "ಬಸವಣ್ಣನ ಉದರದಲ್ಲಿ ಹುಟ್ಟಿತ್ತು ಲಿಂಗ" ಎಂದು ಚನ್ನಬಸವಣ್ಣನವರು ತಮ್ಮ ವಚನದಲ್ಲಿ ಹೇಳಿದ್ದಾರೆ.

ಅಲ್ಲಮಪ್ರಭುದೇವರು ತಮ್ಮ ವಚನದಲ್ಲಿ ಗುರು, ಲಿಂಗ, ಜಂಗಮ, ಪ್ರಸಾದ ಮತ್ತು ಪಾದೋದಕಕ್ಕೆ ಸಂಬಂಧಿಸಿದ ಹೊಸ ಅಚಾರಗಳು ಬಸವಣ್ಣನವರಿಂದಾಗಿ ಪ್ರಾರಂಭವಾದವು ಎನ್ನುತ್ತಾರೆ.

"ಆದಿಯಲ್ಲಿ ನೀನೆ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ.
ಆದಿಯಲ್ಲಿ ನೀನೆ ಲಿಂಗವಾದ ಕಾರಣ ನಿನ್ನಿಂದ ಹುಟ್ಟಿತ್ತು ಜಂಗಮ.
ಆದಿಯಲ್ಲಿ ನೀನೆ ಜಂಗಮವಾದ ಕಾರಣ ನಿನ್ನಿಂದ ಹುಟ್ಟಿತ್ತು ಪ್ರಸಾದ.
ಆದಿಯಲ್ಲಿ ನೀನೆ ಪ್ರಸಾದಿಯಾದ ಕಾರಣ ನಿನ್ನಿಂದ ಹುಟ್ಟಿತ್ತು ಪಾದೋದಕ.
ಇಂತೀ–ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ ಸ್ವರೂಪ
ನೀನೆಯಾದ ಕಾರಣ;
ಜಂಗಮ ಪ್ರಾಣಿಯಾಗಿ ಸದಾಚಾರಿಯಾದೆ,
ಅದು ಕಾರಣ ನೀನೆ ಸರ್ವಾಚಾರಸಂಪನ್ನನಾಗಿ,
ಪೂರ್ವಾಚಾರಿಯೂ ನೀನೆಯಾದೆ,
ಅದು ಕಾರಣ, ಗುಹೇಶ್ವರಲಿಂಗದಲ್ಲಿ ಚಂದಯ್ಯಂಗೆ,
ಲಿಂಗದ ನಿಜವ ತಿಳುಹಾ ಸಂಗನಬಸವಣ್ಣಾ !

–ಅಲ್ಲಮಪ್ರಭುದೇವರು

ಬಸವಣ್ಣನವರನ್ನು ವರ್ಣಿಸಲು 'ಪ್ರಥಮಾಚಾರಿ, ಪೂರ್ವಾಚಾರಿ' ಎಂಬ ವಿಶೇಷಣಗಳಿಂದ ವಿಶ್ವಗುರು ಬಸವಣ್ಣನವರೇ ಮೊಟ್ಟಮೊದಲ ಬಾರಿಗೆ ಸಾಮಾನ್ಯ ಜನರೆಲ್ಲರಿಗೆ ಗುರು, ಲಿಂಗ, ಜಂಗಮಾದಿಗಳ ಬಗ್ಗೆ ತಿಳಿಸಿಕೊಟ್ಟು ಪೂರ್ವಾಚಾರಿಯಾದರು ಎನ್ನುತ್ತಾರೆ ಅಲ್ಲಮಪ್ರಭುಗಳು. ಅಂತೆಯೆ ಅನೇಕ ಶರಣರು ಸಿದ್ಧರಾಮೇಶ್ವರರು, ಅಕ್ಕಮಹಾದೇವಿ ಮುಂತಾದವರ ವಚನಗಳಲ್ಲೂ ಬಸವಣ್ಣನವರೇ ಇಷ್ಟಲಿಂಗದ ಜನಕರು ಎಂದು ಸೂಚಿಸಿದ್ದಾರೆ.

ಬಸವಣ್ಣನವರಿಗೆ ಇಷ್ಟಲಿಂಗವೆಂಬುದು ಬರಿ ಅಂಗೈಯಲ್ಲಿಟ್ಟು ಪೂಜಿಸುವ ವಸ್ತುವಲ್ಲ. ಅದು ವಿಶ್ವಾತ್ಮನ ಕುರುಹುವಾಗಿದೆ. ಕೂಡಲಸಂಗಮದೇವನು ಅಗೋಚರನಾಗಿದ್ದಾನೆ. ಉತ್ಕಟ ಭಕ್ತಿಭಾವದಿಂದ ತುಂಬಿದ ಒಳಗಣ್ಣುಗಳಿಂದ ಮಾತ್ರ ಆತನ ದಿವ್ಯ ಪ್ರಭೆಯನ್ನು ಕಾಣಬಹುದು. ಆದರೆ ಆತ ಕುರುಹಾಗಿ ಕರಸ್ಥಲಕ್ಕೆ ಬರುತ್ತಾನೆ. ಈ ಇಷ್ಟಲಿಂಗದೇವನ ಬಲದಿಂದ ಮನುಷ್ಯರು ಬದಲಾಗುತ್ತಾರೆ ಎಂಬುದರಲ್ಲಿ ಅಚಲವಾದ ನಂಬಿಕೆಯಿದೆ.

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ;
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ;
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮುಕುಟ.
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ."

ಬಸವಣ್ಣನವರಿಗೆ ಅಗಮ್ಯ, ಅಗೋಚರನಾದ ಅರುಹಿನ ಕುರುಹಾಗಿ ಹೊಸ ದೇವಸಂಕೇತ ಇಷ್ಟಲಿಂಗವೆಂಬುದು ಐತಿಹಾಸಿಕ ತಿರುವಿನ ಸಂದರ್ಭದಲ್ಲಿ ಸೃಷ್ಟಿಸುವ ಅವಶ್ಯಕತೆಯಾಯಿತು. ಕಾಯಕಜೀವಿಗಳಿಗೆ ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದರ ಮೂಲಕ ತಮ್ಮೊಳಗಿನ ಅಂತಃಶಕ್ತಿಯೆಂಬ ಮಹಾಘನದೊಡನೆ ಒಂದಾಗುವ ಕ್ರಮ ಗೊತ್ತಾಯಿತು. ಇಂಥ ಶಕ್ತಿಯನ್ನು ಪಡೆದ ಕಾಯಕಜೀವಿಗಳು ಸ್ವತಂತ್ರಧೀರರಾದರು. ತಾವು ಏಕಾತ್ಮ, ತಮ್ಮೊಳಗಿರುವಾತ ಪರಮಾತ್ಮ, ತಮ್ಮ ಮುಂದೆ ಇರುವುದು ಸಕಲಜೀವಾತ್ಮರಿಂದ ಕೂಡಿದ ಲೋಕಾತ್ಮ, ಎಂಬ ಇಷ್ಟಲಿಂಗದ ಮಹತ್ವದ ಅರಿವು ಮೂಡಿಸಿ ಪೂಜಿಸುವ ಕ್ರಮ ತಿಳಿಸಿದರು ಬಸವಣ್ಣನವರು. ಮಾನವರು ಈ ಇಷ್ಟಲಿಂಗದ ಮಹತ್ವ ಅರಿತು ಸಕಲಜೀವಾತ್ಮರೊಂದಿಗೆ ತನುಮನಧನದೊಂದಿಗೆ ಒಂದಾದಾಗ ಮಾತ್ರ ದೇವರ ಜೊತೆ ಒಂದಾಗಬಲ್ಲರು ಇದುವೆ ಲಿಂಗಾಂಗಸಾಮರಸ್ಯ. ಸಾಮಾಜಿಕ ಪ್ರಜ್ಞೆ ಇಲ್ಲದ ಪೂಜೆ ಬರಿ ಪೂಜೆಯಾಗಿ ಉಳಿಯುವುದು. ಅಂಥ ಪೂಜೆಯನ್ನು ಕೂಡಲಸಂಗಮದೇವರು ಮೆಚ್ಚುವುದಿಲ್ಲ ಎನ್ನುತ್ತಾರೆ.

ಬಸವಣ್ಣನವರ ಸಮಾಜಮುಖಿ ಮನಸ್ಸು ಇಡೀ ಲೋಕದ ಅನುಪಮ ಆಸ್ತಿಯಾಗಿದೆ. ತುಳಿತಕ್ಕೊಳಗಾದವರ ಪರ ಅವರು ಎಷ್ಟು ತೀವ್ರವಾಗಿ ಬದುಕಿದ್ದರೆಂದರೆ ಅಸ್ಪೃಶ್ಯರಿಂದಲೂ ಮಹೋನ್ನತ ಸಾಧನೆ ಸಾಧ್ಯ ಎಂಬುದರಲ್ಲಿ ನಂಬಿಕೆ ಉಳ್ಳವರಾಗಿದ್ದರು. ಅವರು ಸಮಾಜ ಬದಲಾವಣೆಯ ದೃಢಸಂಕಲ್ಪದಿಂದ, ಸಮಾಜವನ್ನು ಸದಾ ಜಾಗ್ರತ ಅವಸ್ಥೆಯಲ್ಲಿಡಲು ಶ್ರಮಿಸಿದ್ದಾರೆ.

ಇಷ್ಟಲಿಂಗದಿಂದಾಗಿ ಕಾಯಕಜೀವಿಗಳಿಗೆ ಮಂದಿರಗಳಲ್ಲಿ ಆಗುವ ಅವಮಾನ ತಪ್ಪಿತು. ದೇವಸ್ಥಾನಗಳಲ್ಲಿ ಬಿಟ್ಟಿಕೂಲಿ ಮಾಡುವುದು ತಪ್ಪಿತು. ರೈತಾಪಿ ಜನರು ದವಸ ಧಾನ್ಯಗಳನ್ನು, ಗಾಣಿಗರು ಎಣ್ಣೆಯನ್ನು ಬಿಟ್ಟಿಯಾಗಿ ಕೊಡುವುದು ನಿಲ್ಲಿಸಿದರು. ದೇವರಿಗೆ ಹರಕೆ ಹೊರುವುದರ ಮೂಲಕ ಜೀವನವಿಡಿ ಉಳಿಸಿದ್ದನ್ನು ಕಳೆದುಕೊಳ್ಳುವುದು ನಿಂತಿತು. ಇಷ್ಟಲಿಂಗ ಪೂಜೆಗೆ ಯಾವುದೇ ಖರ್ಚು ಇಲ್ಲದ ಕಾರಣ ದೇವರ ಹೆಸರಿನಲ್ಲಿ ಪೂಜಾರಿಗಳೂ, ಮಾಂತ್ರಿಕರು, ಭವಿಷ್ಯಗಾರರು ಮತ್ತು ಇತರೆ ಮೂಢ ನಂಬಿಕೆ ಪಸರಿಸುತ್ತಾ ಮೋಸ ಮಾಡುವುದು ನಿಂತಿತು. ಹೀಗಾಗಿ ಕಾಯಕಜೀವಿಗಳ ಆರ್ಥಿಕ

ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಯಾಯಿತು. "ಕಲ್ಯಾಣದಲ್ಲಿ ನೀಡುವವರುಂಟು ಬೇಡುವವರಿಲ್ಲ" ಎಂಬ ಹೊಸ ವಾತಾವರಣ ಸೃಷ್ಟಿಯಾಯಿತು. ಇಷ್ಟಲಿಂಗವು ಆತ್ಮಗೌರವದ ಪ್ರತೀಕವಾಗಿತು. ಹೀಗೆ ಇಷ್ಟಲಿಂಗವು ಮಾನಸಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಕಾಯಕಜೀವಿಗಳನ್ನು ವಿಮೋಚನೆಗೊಳಿಸಿ ಹೊಸ ಜೀವನವಿಧಾನಕ್ಕೆ ಕಾಲಿರಿಸಿತು.

ಕಾಯಕದ ನಾಯಕ:

ಬಸವಧರ್ಮಯೆಂದರೆ ಕಾಯಕಜೀವಿಗಳ ಧರ್ಮ. ಬಸವಣ್ಣನವರು ಅನುಭವ ಮಂಟಪದಲ್ಲಿ ಕಾಯಕದ ಮಹತ್ವದ ಬಗ್ಗೆ ಅರಿವು ಮೂಡಿಸಿದ್ದರಿಂದ ದೇಶದ ನಾನಾ ಭಾಗಗಳಿಂದ ತಂಡೋಪ ತಂಡವಾಗಿ ಜನರು ಕಲ್ಯಾಣದ ಕಡೆಗೆ ಧಾವಿಸಿ ಬಂದರು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಂದ ಕೂಡಿದ್ದ ಶರಣಸಂಕುಲವೆಂಬ ಸಮಾಜ ಹೊಸ ಜೀವನವಿಧಾನದಿಂದ ಕೂಡಿತ್ತು. ಬಡವರ ಮತ್ತು ಉಳ್ಳವರ ಎರಡು ಬದುಕಿನ ಕ್ರಮಗಳನ್ನು ಗುರುತಿಸಿದ ಬಸವಣ್ಣನವರು ಬಡವರ ಉದ್ಧಾರಕ್ಕಾಗಿ ಪಟ್ಟ ಪರಿಶ್ರಮ ಅನನ್ಯವಾದುದಾಗಿದೆ. ಬಸವಧರ್ಮದಲ್ಲಿ ಸಂಕುಲವೆಂಬುದು ವಿಶಿಷ್ಟವಾದ ಪಾರಿಭಾಷಿಕ ಪದವಾಗಿದೆ. ಸಂಕುಲದಲ್ಲಿ ಕುಲಭೇದವಿರುವುದಿಲ್ಲ ಸರ್ವಸಮತ್ವವೇ ಸಂಕುಲದ ಜೀವಾಳವಾಗಿದೆ. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳನ್ನು ನಿರಾಕರಿಸುವ ಶರಣ ಸಂಕುಲವೆಂಬ ವಿಶಿಷ್ಟ ಸಮಾಜವನ್ನು ಬಸವಣ್ಣನವರು ರೂಪಿಸಿದರು. ಇಲ್ಲಿ ಬಡವ-ಶ್ರೀಮಂತ, ಹೆಣ್ಣು-ಗಂಡು ಎಂಬ ಹಲವಾರು ಭೇದಗಳಿಂದ ಶರಣಸಂಕುಲ ಮುಕ್ತವಾಗಿತ್ತು. ಎಲ್ಲ ಕಾಯಕಜೀವಿಗಳು ಸಮಾನ ಗೌರವವನ್ನು ಹೊಂದಿದ್ದರು.

ಮಹಾನುಭಾವಿ ಬಸವಣ್ಣನವರು ಎಲ್ಲ ಪ್ರಕಾರದ ಕಾಯಕಜೀವಿಗಳನ್ನು ಒಂದುಗೂಡಿಸಿ ಶರಣಸಂಕುಲವೆಂಬ ನವಸಮಾಜ ನಿರ್ಮಾಣ ಮಾಡಿದರು. ದುಡಿಯುವ ಜನರನ್ನು ಒಂದುಗೂಡಿಸಿದ್ದರಿಂದ ಜಾತಿಗಳು ನಿರ್ನಾಮವಾಗಿ ಕಾಯಕಗಳು ಉಳಿದುಕೊಂಡವು. ಯಾವುದೇ ಕಾಯಕವಿರಲಿ ಆ ಕಾಯಕಗಳಲ್ಲಿ ಭೇದ ಎಣಿಸಬಾರದು. ಬಸವಣ್ಣನವರ ಪ್ರಧಾನಿ ಕಾಯಕ ಹೆಚ್ಚಿನದಲ್ಲ, ಹರಳಯ್ಯನವರ ಸಮಗಾರ ಕಾಯಕ ಕಡಿಮೆಯಲ್ಲ ಎಂಬ ಸತ್ಯದ ಅರಿವನ್ನು ಬಸವಣ್ಣನವರು ಲೋಕಕ್ಕೆ ಸಾರಿದರು. ಎಲ್ಲಾ ಕಾಯಕಜೀವಿಗಳ ಬದುಕಿನಲ್ಲಿ ಅರಿವು ಮೂಡಿಸಿ ಅಕ್ಷರಕ್ರಾಂತಿಯಿಂದ ಜ್ಞಾನದಜ್ಯೋತಿ ಹೊತ್ತಿಸಿದ್ದಕ್ಕಾಗಿ ಅವರೆಲ್ಲಾ ಅಕ್ಷರ ಕಲಿತು ತಮ್ಮ ತಮ್ಮ ಕಾಯಕದಿಂದ ಬಂದ ಅನುಭವವನ್ನು ಅನುಭಾವದ ಮಟ್ಟಕ್ಕೇರಿಸಿ ಅತ್ಯಮೂಲ್ಯವಾದ ವಚನಗಳು ರಚಿಸಿದವರಲ್ಲಿ 33 ವಚನಕಾರ್ತಿಯರ ವಚನಗಳು ಸೇರಿದಂತೆ ಒಟ್ಟು 221 ವಚನಕಾರರ

ವಚನಗಳೂ ಮಾತ್ರ ಲಭ್ಯವಾಗಿವೆ. ಇವರಲ್ಲಿ ಬಹಳಷ್ಟು ವಚನಕಾರರು ಬಸವಣ್ಣನವರ ಮಾರ್ಗದರ್ಶನದಲ್ಲಿ ಅಕ್ಷರಕಲಿತು ಸಾಕ್ಷರಸ್ಥರಾಗಿ ವಚನ ರಚನೆ ಮಾಡಿದವರಾಗಿದ್ದಾರೆ. ಇಂಥ ಅದ್ಭುತ ಸಾಧನೆಯಾಗಿದ್ದು 12 ನೇ ಶತಮಾನದಲ್ಲಿ ಮಾತ್ರ ಎಂದು ಹೇಳಬಹುದು.

ಅನುಭವ ಮಂಟಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು. ಬದುಕಿನ ಎಲ್ಲ ಆಗುಹೋಗುಗಳ ಚರ್ಚೆಯಾಗುತ್ತಿತ್ತು. ಶರಣರ ವಚನಗಳು ಅನುಭವ ಮಂಟಪದ ಮೂಸೆಯಲ್ಲಿ ಹಾಯ್ದು ಹೊರಬರುತ್ತಿದ್ದವು. ಅಂದರೆ 770 ಅಮರಗಣಂಗಳ ಒಪ್ಪಿಗೆ ಪಡೆದು ಮಸೂದೆಗಳು ಕಾಯ್ದೆಗಳಾಗುವ ಹಾಗೆ ವಚನಗಳು ಹೊರಬರುತ್ತಿದ್ದವು. ಈ ಕಾರಣದಿಂದಲೇ ವಚನಗಳನ್ನು 'ವಚನ ಸಂವಿಧಾನ' ಎಂದು ಕರೆಯಾಲಾಯಿತು..

ಬಸವಣ್ಣನವರು ಕಾಯಕ ತತ್ವದ ಕ್ರಾಂತಿ ಮಂತ್ರಪುರುಷ ಕನ್ನಡ ನೆಲದಲ್ಲಿ ಉದ್ಭವಿಸಿದ ಸಹಸ್ರಮಾನ ನವ ಸಮಾಜದ ಮುನ್ಸೂಚಕರಾಗಿದ್ದರು. ಎಲ್ಲವನ್ನೂ ತ್ಯಾಗ ಮಾಡುತ್ತ ತಮ್ಮ ನಡೆ–ನುಡಿಗಳಲ್ಲಿ ಏಕತೆ ಸಾಧಿಸುವುದರ ಮೂಲಕ ಸರ್ವರ ಬಾಳಿಗೆ ಬೆಳಕಾಗುತ್ತಿದ್ದ ಜಗಜ್ಯೋತಿ ಬಸವಣ್ಣನವರನ್ನು ಜನಪದರು ತಮ್ಮ ನುಡಿಗಳಲ್ಲಿ ಹಾಡಿ ಹೋಗಳಿದ್ದಾರೆ.

"ಕಾಯಕವ ಕಲಿಸುದಕ ನಾಯಕನು ಬಸವಯ್ಯ
ಜೀಯ ಹೊಸ ಮತಕೆ ಶಿವಭಕ್ತಿ । ಸಾರುದಕೆ
ರಾಯ ಜೀವನದ ಹೊಸ ನುಡಿಗೆ"

ಕಾಯಕಜೀವಿಗಳನ್ನು ಸಂಘಟಿಸುವುದರ ಮೂಲಕ ಬಸವಣ್ಣನವರು ದುಡಿಯುವ ವರ್ಗದ ಮೊದಲ ನಾಯಕರಾದರು. ಆದರೆ ಅವರು ತಮ್ಮ ನಾಯಕತ್ವವನ್ನು ಸಮೂಹ ನಾಯಕತ್ವವಾಗಿ ಪರಿವರ್ತಿಸಿದರು. ರಾಜರುಗಳಿಂದ ತುಂಬಿದ್ದ ಜಗತ್ತಿನಲ್ಲಿ ಸಮೂಹ ನಾಯಕತ್ವದ ಪ್ರಶ್ನೆಯೆ ಇರಲಿಲ್ಲ. ರಾಜ ಹೇಳಿದ್ದೇ ಅಂತಿಮವಾಗಿತ್ತು. ಆದರೆ ಬಸವಣ್ಣನವರು ವಿಶ್ವದಲ್ಲಿ ಮೊದಲ ಬಾರಿಗೆ ಸಮೂಹ ನಾಯಕತ್ವದ ಪರಿಕಲ್ಪನೆಯನ್ನು ಸಾಕಾರಗೊಳಿಸಿದರು. ಅಲ್ಲಿಯವರೆಗೆ ಜಗತ್ತಿನ ಯಾವ ದಾರ್ಶಕರಿಗೂ ಸಮೂಹ ನಾಯಕತ್ವದ ಕಲ್ಪನೆ ಮೂಡಿರಲಿಲ್ಲ. ಅನುಭವ ಮಂಟಪದ 770 ಅಮರಗಣಂಗಳೇ ಆ ಸಮೂಹ ನಾಯಕರು. ಇಲ್ಲಿನ ಬಹುಪಾಲು ನಾಯಕರೆಲ್ಲ ವಿವಿಧ ಸಾಮಾಜಿಕ ಸ್ತರಗಳಿಂದ ಬಂದ ಕಾಯಕಜೀವಿಗಳಾದ ಶರಣ ಶರಣೆಯರಾಗಿದ್ದರು.

ಬಸವಣ್ಣನವರು ಅರಿವಿನ ಮೂಲಕ ಆತ್ಮವು ಸಕಲಜೀವಾತ್ಮರ ಜೊತೆ ಸಂಪರ್ಕ ಹೊಂದುವಂತೆ ಮಾಡುವುದರೊಂದಿಗೆ ಒಳಹೊರಗಿನ ಜಗತ್ತಿನ ಮಧ್ಯೆ ಸಂಬಂಧ ಕಲ್ಪಿಸಿದರು. ಒಳಗಿನ ಸ್ವಾತಂತ್ರ್ಯದ ಅರಿವು ಮತ್ತು ಹೊರಗಿನ ಕರ್ತವ್ಯ ಪ್ರಜ್ಞೆಯನ್ನು ಮೂಡಿಸಿದರು. ರಾಜಪ್ರಭುತ್ವ ಅಳಿದು ಪ್ರಜಾಪ್ರಭುತ್ವ ಉದಯವಾಗುವುದರ ಕನಸು

ಕಂಡರು. ಅಂತೆಯೇ ಕಾಶ್ಮೀರದಲ್ಲಿನ ಸವಾಲಕ್ಷದ ದೊರೆ ಮಹಾದೇವ ಭೂಪಾಲ, ಬಸವಣ್ಣನವರ ನವಸಮಾಜದ ಪರಿಕಲ್ಪನೆಗೆ ಮನಸೋತು, ಪತ್ನಿ ಗಂಗಾದೇವಿ ಜೊತೆ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕ ಕೈಗೊಂಡ ಕಾರಣ ಮೋಳಿಗೆ ಮಾರಯ್ಯ ಮೋಳಿಗೆ ಮಹಾದೇವಿ ಎಂದು ಪ್ರಸಿದ್ಧರಾದರು. ರಾಜ ರಾಣಿಯರು ಅರಮನೆ ಬಿಟ್ಟು ಗುಡಿಸಲಿನಲ್ಲಿ ವಾಸಿಸುವಷ್ಟು ಮಾನಸಿಕವಾಗಿ ಬೆಳವಣಿಗೆ ಹೊಂದಿದ್ದರು.

ಕಾಯಕ ತತ್ವದ ಮೇಲೆ ಬೆಳಕು ಚೆಲ್ಲಿದ ಬಹುಪಾಲು ಶರಣರಲ್ಲಿ ಒಬ್ಬರಾದ ಆಯ್ದಕ್ಕಿ ಮಾರಯ್ಯಾ, ಲಕ್ಕಮ್ಮ ದಂಪತಿಯರು. ಇವರು ನಿಸರ್ಗಪರವಾದ ಕಾಯಕದ ಮೇಲೆ ನಿಂತ ಬಸವದರ್ಶನವನ್ನು ಅಪ್ಪಿಕೊಂಡರು. ಶಿವಾನುಭವ ಗೋಷ್ಠಿಯಲ್ಲಿ ತಲ್ಲೀನನಾಗಿದ್ದ ಮಾರಯ್ಯನವರನ್ನು ಕಾಯಕಕ್ಕೆ ಹೋಗುವುದಕ್ಕೆ ತಡವಾಗುತ್ತದೆ. "ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ" ಎಂದು ಲಕ್ಕಮ್ಮ ಎಚ್ಚರಿಸುತ್ತಾಳೆ. ಆಯ್ದಕ್ಕಿ ಮಾರಯ್ಯನವರು ಎಚ್ಚರಗೊಂಡು ಸತಿ ಲಕ್ಕಮ್ಮಳಿಂದ ಕಾಯಕದ ಮಹತ್ವ ಅರಿತರು. ಈ ಕಡುಬಡವ ದಂಪತಿಯರ ಮಧ್ಯೆ ಅನ್ಯೋನತೆ, ವೈಚಾರಿಕ ಸ್ವಾತಂತ್ರ್ಯ, ನ್ಯಾಯನಿಷ್ಠುರತೆ, ಸಾಮರಸ್ಯ ಮತ್ತು ಏಕೋಭಾವವಿತ್ತು. ಅವರಿಗೆ ಕಾಯಕವೇ ಎಲ್ಲದಕ್ಕೂ ಆಧಾರ ಕಾಯಕವಿಲ್ಲದಿದ್ದರೆ ಇಡೀ ಲೋಕ ನಿಷ್ಕ್ರೀಯವಾಗುವುದರಿಂದ ಗುರು, ಲಿಂಗ, ಜಂಗಮರು ಆಧಾರವಿಲ್ಲದಂತಾಗುತ್ತಾರೆ. ಬಸವಣ್ಣನವರು ನೀಡಿದ ಕಾಯಕದ ಪ್ರಜ್ಞೆಯಿಂದ ಅರಿವಿನೊಡನೆ ಆಚರಣೆಯಲ್ಲಿ ತೊಡಗಿದ ಮಾರಯ್ಯನವರ ಅನುಭವದ ಹಿನ್ನಲೆಯಲ್ಲಿ ರಚಿಸಿದ ಈ ವಿಶಿಷ್ಟವಾದ ವಚನದಲ್ಲಿ ಕಾಣಬಹುದು.

"ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು,

ಲಿಂಗಪೂಜೆಯಾದಡೂ ಮರೆಯಬೇಕು,

ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು.

ಕಾಯಕವೇ ಕೈಲಾಸವಾದ ಕಾರಣ.

ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು."

–ಆಯ್ದಕ್ಕಿ ಮಾರಯ್ಯ

ಆಯ್ದಕ್ಕಿ ಮಾರಯ್ಯನವರ ಈ ವಚನದಲ್ಲಿ ಸರ್ವರ ಸಂರಕ್ಷಣೆಗಾಗಿ ಕಾಯಕ ಎಷ್ಟೊಂದು ಮಹತ್ವದ್ದಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ಮಾತ್ರ ಈ ಸ್ಪಷ್ಟವಾದವನ್ನು ಮುಂದಿಡುತ್ತಾರೆ. ಏಕೆಂದರೆ ಕಾಯಕದ ಪರಿಣಾಮವು ಗುರು, ಲಿಂಗ, ಜಂಗಮಕ್ಕಾಗಿಯೇ ಎಂದು. ಕಾಯಕದಲ್ಲಿ ನಿರತರಾದಾಗ ಗುರುದರ್ಶನ, ಲಿಂಗಪೂಜೆ ಮತ್ತು ಜಂಗಮಸೇವೆಯ ಯೋಚನೆಯನ್ನು ಮಾಡಬಾರದು. ಇಲ್ಲಿ ಅವರು ಗುರು, ಲಿಂಗ, ಜಂಗಮರ ಅವಹೇಳನ ಮಾಡುವುದಿಲ್ಲ. ನಾವು ಕಾಯಕದಲ್ಲಿ ಮಗ್ನರಾದಾಗ ದೇವರಿಗೆ

ಪ್ರಿಯವಾದುದನ್ನೇ ಮಾಡುತ್ತ ಸ್ವಾವಲಂಬಿಯಾಗುತ್ತೇವೆ. ನಂತರ ದಾಸೋಹದ ಮೂಲಕ ಅಖಿಲುಸೇವೆ ಸಲ್ಲಿಸುತ್ತೇವೆ. ಗುರು ಲಿಂಗ ಜಂಗಮ ಮತ್ತು ಸ್ವರ್ಗಸಮಾನವಾದ ಬದುಕಿನ ಒಳ್ಳೆಯದೆಲ್ಲ ಆ ಕಾಯಕದೊಳಗೇ ಅಡಗಿದೆ ಎಂಬ ಭಾವವನ್ನು ಮಾರಯ್ಯನವರ ಈ ಸೂಕ್ಷ್ಮತೆಯನ್ನು ಹೊಂದಿದ ವಚನವಾಗಿದೆ. ಅಂತೆಯೇ ಬಸವಧರ್ಮದ ಘೋಷವಾಕ್ಯವಾಗಿ " ಕಾಯಕವೇ ಕೈಲಾಸ " ಎಂಬುದು ಜನಮನದಲ್ಲಿ ಅಚ್ಚೊತ್ತಿದೆ.

ಬಸವಾದಿ ಶರಣರ ದರ್ಶನದಲ್ಲಿ ದಾಸೋಹಂಭಾವದ ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದವರಾಗಿದ್ದರು. ಬೆಳಕು ಕೊಡುವುದು ಸೂರ್ಯನ ಕಾಯಕ. ಬೆಳದಿಂಗಳು ತರುವುದು ಚಂದ್ರನ ಕಾಯಕ, ಹೊಳೆಯುವುದು ತಾರೆಗಳ ಕಾಯಕ, ಸೃಷ್ಟಿಕ್ರಿಯೆ ಭೂಮಿಯ ಕಾಯಕ, ಜೀವಜಾಲದ ಕೊಂಡಿಗಳಾಗುವುದು ಪಶು ಪಕ್ಷಿಗಳ ಕಾಯಕ, ಪರಾಗಸ್ಪರ್ಶ ಕೀಟಗಳ ಕಾಯಕ, ಹೀಗೆ ಕಾಯಕ–ದಾಸೋಹ ನಿಸರ್ಗ ತತ್ವಗಳಾಗಿವೆ. ಮಾನವನು ನಿಸರ್ಗದ ಭಾಗವಾಗಿದ್ದಾನೆ.

ಬಸವಣ್ಣನವರ ಘನವ್ಯಕ್ತಿತ್ವ:

ವಿನಯ ಕರುಣೆಗಳ ಮಹಾಸಾಗರವಾಗಿದ್ದ ಬಸವಣ್ಣನವರ ಘನವ್ಯಕ್ತಿತ್ವವನ್ನು ಸಮಕಾಲೀನ ಶರಣರು ಹೃದಯತುಂಬಿ ಕೊಂಡಾಡಿದ್ದಾರೆ. ಬಸವ ಶಬ್ದವು ಧ್ವನಿಯಾಗಿ, ಮಂತ್ರವಾಗಿ ಅವರ ಅಂತರಾಳದಲ್ಲಿ ಮಿಡಿಯುತ್ತಿತ್ತು.

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ!
ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತರಿದ್ದ ಕ್ಷೇತ್ರವೇ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ ?
ಶಿವಭಕ್ತರಿದ್ದ ದೇಶ ಪಾವನವೆಂಬುದು ಹುಸಿಯೇ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ
ಕಂಡು ಬದುಕಿದೆನು ಕಾಣಾ ಸಿದ್ಧರಾಮಯ್ಯಾ."

ವ್ಯೋಮಮೂರುತಿ, ಶೂನ್ಯಸಿಂಹಾಸನಾಧೀಶ್ವರ ಅಲ್ಲಮಪ್ರಭುಗಳು ಬಸವಣ್ಣನವರನ್ನು ಗುಹೇಶ್ವರ ಲಿಂಗದಲ್ಲಿ ಕಂಡು ಬದುಕುವ ಪರಿಯನ್ನು ಅರಿತಾಗ ಬಸವಣ್ಣನವರ ವ್ಯಕ್ತಿತ್ವದ ಕಲ್ಪನೆ ಮೂಡುವುದು. ಇಲ್ಲಿ ಅಲ್ಲಮಪ್ರಭು ಶಿಷ್ಟ ಸಮಾಜದ ಕಲ್ಪನೆಯನ್ನು ಕೊಡುತ್ತಾರೆ. ಅದೇ ಪವಿತ್ರ ಕ್ಷೇತ್ರವೆನ್ನುತ್ತಾರೆ. ಅಂಥ ಸಮಾಜವನ್ನು

ಒಳಗೊಂಡ ದೇಶದ ಕಲ್ಪನೆ ಮೂಡಿಸುತ್ತಾರೆ. ಬಸವಣ್ಣನೆಂಬ ಜ್ಯೋತಿಯಿಂದಾಗಿ ಇದೆಲ್ಲ ಸಾಧ್ಯ ಎಂಬುದನ್ನು ಸೂಚಿಸುತ್ತಾರೆ.

"ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತೊ
ಮಾದಲಾಂಬಿಕಾನಂದನನು ?
ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ ನೋಳ್ಪನೆಂತೊ
ಮಾದರಸನ ಮೋಹದ ಮಗನು ?
ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ವನೆಂತೊ
ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನ?"

ಬಸವಣ್ಣನವರ ಪತ್ನಿ ಗಂಗಾಂಬಿಕೆಯ ಈ ವಚನ ಬಸವಣ್ಣನವರ ಚರಿತ್ರೆ ಮತ್ತು ಚಾರಿತ್ರ್ಯದ ಔನತ್ಯವನ್ನು ಅರಿತುಕೊಳ್ಳುವಲ್ಲಿ ಬಹು ಮುಖ್ಯವಾಗಿದೆ. ಬಸವಣ್ಣನವರು ಉತ್ಕಟ ದಾಸೋಹಂ ಭಾವದಿಂದ ಶಿವಶರಣರ ಸೇವೆಯನ್ನು ಮಾಡುತ್ತಿದ್ದರು. ಪ್ರಧಾನಿಯಾಗಿ ಬಿಜ್ಜಳನ ಅರಮನೆಯಲ್ಲಿ ನ್ಯಾಯನಿಷ್ಠುರತೆಯಿಂದ ಮತ್ತು ಉತ್ಕಟ ಕಾರ್ಯತತ್ಪರತೆಯಿಂದ ಸೇವೆ ಸಲ್ಲಿಸುತ್ತಿದ್ದರು. ಹೃದಯದುಂಬಿ ಭಕ್ತಿಭಾವದಿಂದ ಲಿಂಗಾರ್ಚನೆ ಮಾಡುತ್ತಿದ್ದರು. ಅತ್ಯನ್ನತವಾದ ಲಿಂಗಾಂಗ ಸಾಮರಸ್ಯದ ಆನಂದವನ್ನು ಅನುಭಾವಿಸುತ್ತಿದ್ದರು. ಇದನ್ನೆಲ್ಲ ಏಕಕಾಲಕ್ಕೆ ಅದು ಹೇಗೆ ಸಾಧಿಸುತ್ತಾರೆ ಎಂದು ಸತಿಯಾದ ಗಂಗಾಂಬಿಕೆ ಆಶ್ಚರ್ಯಾನಂದವನ್ನು ವ್ಯಕ್ತಪಡಿಸುತ್ತಾಳೆ.

ಬಸವಣ್ಣನವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ ಚನ್ನಬಸವಣ್ಣನವರ ಈ ವಚನ ಬಸವಣ್ಣನವರು ದೇಶ ಕಾಲ ಮೀರಿ ಅದು ಹೇಗೆ ಜಗಜ್ಯೋತಿಯಾದರು ಎಂಬುದನ್ನು ಸಾರುತ್ತದೆ.

"ಕವಿತ್ವ ಸಾಧಕರೆಲ್ಲ ಕಳವಳಿಸಿ ಹೋದರು;
ವಿದ್ಯಾಸಾದಕರೆಲ್ಲ ಬುದ್ಧಿಗೆಟ್ಟರು.
ತತ್ವಸಾಧಕರೆಲ್ಲ ಭಕ್ತಿಹೀನರಾದರು;
ಲಿಂಗಸಾಧಕರೆಲ್ಲ ಭೂಭಾರಕರಾದರು.
ಕೂಡಲಚೆನ್ನಸಂಗಮದೇವಾ ನಿಮ್ಮ ಬಸವಣ್ಣ
ಜಂಗಮಸಾಧಕನಾಗಿ ಸ್ವಯಂಲಿಂಗವಾದನು."

–ಚನ್ನಬಸವಣ್ಣ

ಬಸವಣ್ಣನವರ ಕಾಲದಲ್ಲಿ ಕೂಡ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಅಂಥ ಸ್ಥಿತಿಯಲ್ಲಿ ಬಸವಣ್ಣನವರು ಅನನ್ಯವಾದುದನ್ನು ಹೇಗೆ ಸಾಧಿಸಿದರು. ಎಂಬುದಕ್ಕೆ ಈ ವಚನ

ಸಾಕ್ಷಿಯಾಗಿದೆ. ಸೃಜನಶೀಲತೆ, ಬುದ್ಧಿಮತ್ತೆ, ತತ್ವಸಾಧನೆ ಮತ್ತು ಧಾರ್ಮಿಕ ವಿಧಿವಿಧಾನಗಳ ಸಾಧನೆ ಲೋಕಹಿತಾರ್ಥವಾಗದೆ ಇದ್ದರೆ ನಿರುಪಯುಕ್ತವಾಗುತ್ತವೆ ಎಂಬುದು ಚನ್ನಬಸವಣ್ಣನವರ ನಿಲುವಾಗಿದೆ. ಜಂಗಮಸಾಧಕನಾಗುವುದೆಂದರೆ ಜಗದ ದುಃಖವನ್ನು ನಿವಾರಣೆ ಮಾಡುವುದು. ಬಸವಣ್ಣನವರು ಜಗದ ದುಃಖವನ್ನು ನಿವಾರಣೆ ಮಾಡುತ್ತ ಸ್ವಯಂ ದೇವರೇ ಆದರು ಎಂದು ಚನ್ನಬಸವಣ್ಣನವರು ಕೊಂಡಾಡಿದ್ದಾರೆ.

ಮಹಾನುಭಾವಿ ಬಸವಣ್ಣನವರು ಆರ್ಥಿಕ ತಜ್ಞರೂ ಆಗಿದ್ದರು. ಅಂತೆಯೆ ರಾಜ ಬಿಜ್ಜಳನ ಭಂಡಾರಿಯೂ ಆಗಿದರು. ಕಾಯಕ ತತ್ವದಿಂದ ಮಾನವಶಕ್ತಿಯನ್ನು ಬಳಸುತ್ತ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ಜನರ ಬದುಕು ಸಮೃದ್ಧವಾಗುವಂತೆ ಬಸವಣ್ಣನವರು ನೋಡಿಕೊಂಡರು. ಅವರ ಆರ್ಥಿಕ ಸಿದ್ಧಾಂತ ಬಿಜ್ಜಳನ ಭಂಡಾರವನ್ನು ತುಂಬಿಸುವುದರ ಜೊತೆಗೇ ಜನರ ಜೀವನ ಮಟ್ಟವನ್ನು ಹೆಚ್ಚಿವಲ್ಲಿ ಸಫಲವಾಯಿತು.

"ಬಸವ ರಾಜ್ಯದ ಸಿರಿಯು, ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ ನಿಜದೀಪ
ಬಸವನೇ ಸಗ್ಗಸೋಪಾನ."

ಬಸವಣ್ಣನವರ ಪ್ರತಿಭೆಯನ್ನು ಜನಪದ ಕವಿಯೊಬ್ಬ ತ್ರಿಪದಿಯೊಂದರಲ್ಲಿ ಹಿಡಿದಿಟ್ಟ ರೀತಿ ಅನುಪಮವಾಗಿದೆ.

ಅಹಂಕಾರ ಅಳಿಸಿ ಸಮರ್ಪಣಾ ಭಾವ ಬೆಳೆಸುವುದು, ವೈಯಕ್ತಿಕವಾದುದನ್ನು ಸಾರ್ವತ್ರಿಕಗೊಳಿಸುವುದು ಬಸವಾದ್ವೈತ. ಅವುಗಳಲ್ಲಿ ಅಭೇದ್ಯ ಕಲ್ಪಿಸುವುದು. ಕನಿಷ್ಠ ಅವಶ್ಯಕತೆಗಳ ಜೊತೆ ಬದುಕುವುದು. ಸರಳ ಬದುಕಿನ ವಿರುದ್ಧವಾದ ವಸ್ತುಗಳನ್ನು ತ್ಯಜಿಸುವುದು. ದೇಹ ಮತ್ತು ಮನಸ್ಸಿಗೆ ಒಳ್ಳೆಯದಲ್ಲದ ಹವ್ಯಾಸಗಳಿಂದ ಹೊರಬರುವುದು. ಅಹಂಕಾರದಿಂದ ವಿಶ್ವ ನಾಶ. ದಯೆಯಿಂದ ವಿಶ್ವ ರಕ್ಷಣೆ. ಇದೇ ಬಸವಣ್ಣನವರು ಸಾರಿದ ಸತ್ಯದ ಸಂದೇಶವಾಗಿದೆ.

****

ಕಾಯಕನಿಷ್ಠೆ ಆಯ್ದಕ್ಕಿ ಲಕ್ಕಮ್ಮ

ಕರ್ನಾಟಕವು ಸುವರ್ಣಯುಗವನ್ನು ಕಂಡಿದ್ದೇ 12ನೆಯ ಶತಮಾನದ ಬಸವಾದಿ ಶರಣರು ಒಟ್ಟುಗೂಡಿ ಮಾನವೀಯ ಮೌಲ್ಯಗಳನ್ನು ಬಿತ್ತಿಬೆಳೆದ ಮಹಾಮಣಿಹದಲ್ಲಿ. ವ್ಯಕ್ತಿ ಸಾಧನೆಯಿಂದ ಸಮಷ್ಟಿ ಚೇತನವನ್ನು ಹಿಡಿದೆತ್ತಿ ಬದುಕನ್ನು ಪ್ರೀತಿಸುತ್ತ ಎಲ್ಲರನ್ನು ನಮ್ಮವರೆಂದು ಆದರ್ಶ ಜೀವನ ನಡೆಸಿದ ಅಪರೂಪದ ಮಾನವತಾವಾದಿಗಳು ನಮ್ಮ ಶರಣರು.

ಆಯ್ದಕ್ಕಿ ಮಾರಯ್ಯ ಮತ್ತು ಆಯ್ದಕ್ಕಿ ಲಕ್ಕಮ್ಮ ದಂಪತಿ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲೂಕು ಯರಡೋಣಿ ಗ್ರಾಮದವರು. ಗ್ರಾಮಕ್ಕೆ ಸಮೀಪದ ದೇವರಭೂಪುರ ಗ್ರಾಮದ ಅಮರೇಶ್ವರಲಿಂಗದ ಭಕ್ತರಾಗಿದ್ದರು. ಕಲ್ಯಾಣದಲ್ಲಿ ಶರಣರು ನವಸಮಾಜ ನಿರ್ಮಾಣ ಮಾಡುತ್ತಿದ್ದ ಸುದ್ದಿ ಕೇಳಿ ಕಲ್ಯಾಣಕ್ಕೆ ಧಾವಿಸಿ ಬಂದು ಶರಣಸಂಕುಲದ ಭಾಗವಾದವರು.

ಬಸವಣ್ಣನವರ ಕಾಯಕ ಸಿದ್ಧಾಂತದ ಮೇಲೆ ಬೆಳಕು ಚೆಲ್ಲಿದ ದಂಪತಿ ಇವರು. ಮಹಾಮನೆಯ ಅಂಗಳ ಮುಂತಾದ ಕಡೆಗಳಲ್ಲಿ ಚೆಲ್ಲಿದ ಅಕ್ಕಿಯನ್ನು ಆಯ್ದು ತಂದು ದಾಸೋಹದೊಂದಿಗೆ ಜೀವನ ನಿರ್ವಹಣೆ ಮಾಡುತ್ತಿದ್ದರು. ಅನುಭವ ಮಂಥನದೊಂದಿಗೆ ಅನುಭಾವಿಗಳಾಗಿ, ವಚನಕಾರರಾಗಿ ಅಮರರಾದರು.

"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕರ."

–ಆಯ್ದಕ್ಕಿ ಲಕ್ಕಮ್ಮ

ಜೀವನದ ನಿರ್ವಹಣೆಗೆ ಒಂದು ಕೆಲಸ ಬೇಕು ನಿಜ. ಆದರೆ ಅದೇ ಜೀವನದ ಗುರಿ ಅಲ್ಲ. ಸತ್ಯ ಶುದ್ಧ ಕಾಯಕವನ್ನು ನಿರ್ವಹಿಸುತ್ತಲೇ ಸಕಲಜೀವಾತ್ಮರಿಗೆ ಲೇಸಾಗುವಂಥ ಕ್ರಿಯೆಯಲ್ಲಿ ತೊಡಗುವುದೇ ನಿಜವಾದ ಶರಣಧರ್ಮ. ಕಾಯಕ – ಪ್ರಸಾದ – ದಾಸೋಹ ಎಂಬವು ಬದುಕಿನ ಮಂತ್ರಗಳು. ಪಶು ಪಕ್ಷಿ ಮಾನವಕುಲ ಸೇರಿದಂತೆ ನಿಸರ್ಗಕ್ಕೆ ಹಾನಿ ಸಂಭವಿಸದ ಹಾಗೆ ಸತ್ಯ ಶುದ್ಧ ಕಾಯಕ ಮಾಡುವವರಿಗೆ ಲಕ್ಷ್ಮಿ ತಾನಾಗಿಯೆ ಒಲಿದು ಬರುವಳು. ಬಂದದ್ದನ್ನು ದೇವರು ಕೊಟ್ಟ ಪ್ರಸಾದ ಎಂಬ ಭಾವದೊಂದಿಗೆ ಸ್ವೀಕರಿಸಬೇಕು. ದಾಸೋಹಂ ಭಾವದೊಂದಿಗೆ ಲೋಕಸೇವೆ ಮಾಡುತ್ತ ಬದುಕಬೇಕು. ಇಂಥ ಚಿಂತನೆಯನ್ನು ಈ ವಚನ ಒಳಗೊಂಡಿದೆ.

ಮಾರಯ್ಯ ಮತ್ತು ಲಕ್ಕಮ್ಮ ಕಾಯಕ ಸಿದ್ಧಾಂತದ ನಿಜಸ್ವರೂಪ ತಿಳಿಸಿಕೊಟ್ಟರು. ಲಿಂಗಾಯತ ಧರ್ಮಕ್ಕೆ "ಕಾಯಕವೆ ಕೈಲಾಸ" ಎಂಬ ಘೋಷವಾಕ್ಯವನ್ನು ನೀಡಿದವರೇ ಆಯ್ದಕ್ಕಿ ಮಾರಯ್ಯನವರು.

ಒಮ್ಮೆ ಮಾರಯ್ಯನವರು ಅನುಭವ ಮಂಟಪದಲ್ಲಿ ಗಹನ ಚಿಂತನ ಮಂಥನವನ್ನು ಆಲಿಸುತ್ತ ಕುಳಿತಿದ್ದರು. ಶರಣರ ನುಡಿಗಳಿಂದ ಹೊರಹೊಮ್ಮುತ್ತಿದ್ದ ಜ್ಞಾನಾಮೃತವನ್ನು ಸವಿಯುತ್ತಿರುವಾಗ ಸಮಯ ಕಳೆದುದೇ ಗೊತ್ತಾಗಲಿಲ್ಲ. ಕಾಯಕಕ್ಕೆ ಹೋಗುವುದು ತಡವಾಯಿತು. ಇದನ್ನು ಗಮನಿಸಿದ ಲಕ್ಕಮ್ಮ. "ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ" ಎಂದು ಎಚ್ಚರಿಸಿದಳು. ಕಾಯಕಕ್ಕೆ ಹೊರಟ ಮಾರಯ್ಯ ಎಂದಿಗಿಂತಲೂ ಹೆಚ್ಚಿನ ಅಕ್ಕಿಯನ್ನು ಮನೆಗೆ ತಂದ. ಆಗ ಲಕ್ಕಮ್ಮ "ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ" ಎಂದು ಹೆಚ್ಚಿಗೆ ತಂದ ಅಕ್ಕಿಯ ಬಗ್ಗೆ ಬೇಸರ ವ್ಯಕ್ತಪಡಿಸಿದಳು. "ಅಲ್ಲಿಯೆ ಸುರಿದು ಬನ್ನಿ" ಎಂದು ತಿಳಿಸಿದಳು.

ಇಂದಿಂಗೆ ನಾಳಿಂಗೆ ಎಂದು ಸಂಗ್ರಹಿಸುವುದು ಬಸವತತ್ತ್ವಕ್ಕೆ ವಿರುದ್ಧವಾಗಿತ್ತು. ಲಕ್ಕಮ್ಮ ಇದನ್ನು ವ್ರತವಾಗಿ ಪಾಲಿಸುತ್ತಿದ್ದಳು. ಈ ಪರಿಗ್ರಹ ಪರಿಕಲ್ಪನೆಯಿಂದ ಮಾತ್ರ ಜಗತ್ತು ಸಮಾನತೆಯ ದಾರಿ ತುಳಿಯಬಲ್ಲುದು ಎಂಬುದನ್ನು ಆಕೆ ಮನಗಂಡಿದ್ದಳು. ಸಂಪತ್ತಿನ ಗುಲಾಮರು ಆಸೆ ರೋಷಗಳನ್ನು ಹೊಂದಿರುತ್ತಾರೆ. ಅವರಿಗೆ ಸಂಪತ್ತಿನ ಸಂಗ್ರಹವೆಂಬುದು ಎಂದೂ ತೀರದ ದಾಹ. ವಸ್ತುಮೋಹ ಎಂಬುದು ಬಲಾಢ್ಯರ, ಧನವಂತರ ಮತ್ತು ಸಾಮ್ರಾಜ್ಯಶಾಹಿಗಳ ಮನದಾಳದಲ್ಲಿ ಇರುತ್ತದೆ. ಸಂಪತ್ತು ಹೆಚ್ಚಿದಷ್ಟೂ ಸಾಮ್ರಾಜ್ಯ ವಿಸ್ತರಣೆಯಾದಷ್ಟೂ ಅವರ ದಾಹ ಹೆಚ್ಚಾಗುತ್ತಲೇ ಹೋಗುತ್ತದೆ. ಅವರು ಪರರನ್ನು ಶೋಷಿಸುವ ಮೂಲಕ ಸಂಪತ್ತಿನ ವಿಸ್ತರಣೆ ಮಾಡುತ್ತ ಹೋಗುತ್ತಾರೆ. ಆದರೆ ಶರಣರು ತಮ್ಮ ಕಾಯಕದ ಮೇಲೆ ಅವಲಂಬಿತರಾಗಿರುತ್ತಾರೆ. ಗಳಿಸಿದ್ದನ್ನು ದೇವರ ಪ್ರಸಾದ ಎಂದು ಸ್ವೀಕರಿಸುತ್ತಾರೆ. ಸಮಾಜವೆಂಬ ದೇವರಿಗಾಗಿ ದಾಸೋಹ

ನೀಡಿ ಉಳಿದುದನ್ನು ಸ್ವೀಕರಿಸುತ್ತಾರೆ. ಹೀಗೆ ಮಾಡುವುದರಿಂದ ಯಾರೊಬ್ಬರ ಬಳಿಯೂ ಸಂಪತ್ತಿನ ಸಂಗ್ರಹವಾಗುವುದಿಲ್ಲ.

ಸತಿ ಲಕ್ಕಮ್ಮಳಿಂದ ಮಾರಯ್ಯನವರು ಕಾಯಕದ ಮಹತ್ವ ಅರಿತರು. ಈ ಕಡು ಬಡವ ದಂಪತಿಯ ಮಧ್ಯೆ ಅನ್ಯೋನ್ಯತೆ, ವೈಚಾರಿಕ ಸ್ವಾತಂತ್ರ್ಯ, ನ್ಯಾಯನಿಷ್ಠುರತೆ, ಸಾಮರಸ್ಯ ಮತ್ತು ಏಕೋಭಾವವಿತ್ತು. ಲಕ್ಕಮ್ಮನ ಜ್ಞಾನಕ್ಕೆ ಮಾರಯ್ಯ ಬೆಲೆ ಕೊಟ್ಟರು. ಅದು ಜ್ಞಾನವಾಗಿ ಕಾಯಕತತ್ವಕ್ಕೆ ಉಜ್ವಲ ಉದಾಹರಣೆಯಾಗಿ ಉಳಿಯಿತು. ದಾಸೋಹವಿಲ್ಲದೆ ಕಾಯಕ ಸಿದ್ಧಾಂತ ಪರಿಪೂರ್ಣವಾಗಲಾರದು.

"ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ?

ದಾಸೋಹವೆಂಬ ಸೇವೆಯ ಬಿಟ್ಟು ನೀಸಲಾರದೆ

ಕೈಲಾಸವೆಂಬ ಆಸೆ ಬೇಡ.

ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ."

–ಆಯ್ದಕ್ಕಿ ಲಕ್ಕಮ್ಮ.

ಕಾಯಕವೆ ಕೈಲಾಸವಾದಾಗ ಶರಣರಿಗೆ ಇನ್ನೊಂದು ಕೈಲಾಸದ ಅವಶ್ಯಕತೆ ಇಲ್ಲ ಎಂದು ಲಕ್ಕಮ್ಮ ಹೇಳಿದ್ದಾಳೆ. ಮಾರಯ್ಯನವರು ಕೈಲಾಸಕ್ಕೆ ಹೋಗಬೇಕು ಎಂದನಿಸಿದಾಗ ಆಕೆ ಹೀಗೆ ಹೇಳಿರಬಹುದು. ಕೈಲಾಸದ ಆಸೆಯಿಂದ ಮುಕ್ತವಾಗುವ ಲಕ್ಕಮ್ಮನ ಕ್ರಮ ಅನನ್ಯವಾಗಿದೆ. ಕಾಯಕ ದಾಸೋಹದ ಮೂಲಕ ಸಿಗುವ ಮಾನಸಿಕ ತೃಪ್ತಿಯೆ ಕೈಲಾಸ ಎಂಬುದು ಅವಳ ಅಚಲ ನಂಬಿಕೆಯಾಗಿದೆ. "ಕೈಲಾಸವೆಂಬುದೇನೋ ಪೃಥಿಯ ಮೇಲೊಂದು ಮೊರಡಿ" ಎಂದು ಬಸವಣ್ಣನವರು ಹೇಳಿದ್ದಾರೆ. ಬಸವಣ್ಣನವರ ಪ್ರಕಾರ ಈ ಭೂಮಿ ಸಕಲ ಸಂಪತ್ತನ್ನು ಹೊಂದಿದ ತಾಣ. ಕೈಲಾಸ ಎಂಬುದು ಜೀವಜಲವಿಲ್ಲದ ಭೂಮಿ. ಆದ್ದರಿಂದ ಭೂಮಿಯ ನಿಸರ್ಗ ಸಂಪತ್ತನ್ನು ಪ್ರಸಾದ ಪ್ರಜ್ಞೆಯೊಂದಿಗೆ ಹಿತಮಿತದೊಂದಿಗೆ ಬಳಸುತ್ತ, ಅದನ್ನು ಕಾಯುತ್ತ, ಕಾಯಕದೊಂದಿಗೆ ಆ ಸಂಪತ್ತನ್ನು ಹೆಚ್ಚಿಸುತ್ತ ಸಾಗುವುದರಲ್ಲಿ ಸಿಗುವ ಆನಂದದಲ್ಲೇ ಕೈಲಾಸದ ಅನುಭವವಾಗುವುದು. ಲಕ್ಕಮ್ಮ ಈ ವಿಚಾರವನ್ನು ಮನೋಜ್ಞವಾಗಿ ತಿಳಿಸಿದ್ದಾಳೆ. ಕಾಯಕ ದಾಸೋಹದಲ್ಲೇ ತೊಡಗಿಕೊಂಡಿರಬೇಕು ಇದನ್ನು ನೀಗಿ ಕೈಲಾಸದ ಆಸೆ ಮಾಡುವುದು ಸಲ್ಲದು ಎಂದಿದ್ದಾಳೆ. ಕಾಯಕ ದಾಸೋಹವನ್ನು ನಂಬಿ ಬದುಕುವವರಲ್ಲಿ ದೇವರಿರುತ್ತಾನೆ. ಆದ್ದರಿಂದ ಬಸವಣ್ಣನವರು ಹೇಳಿದ ಹಾಗೆ ಕಾಯುವೇ ಕೈಲಾಸವಾಗುತ್ತದೆ. ಹೀಗೆ ಲಕ್ಕಮ್ಮ ತನ್ನ ಪತಿಯ 'ಕಾಯಕವೇ ಕೈಲಾಸ' ಮತ್ತು ಬಸವಣ್ಣನವರ 'ಕಾಯವೇ ಕೈಲಾಸ' ಘೋಷಣೆಗಳ ಮಧ್ಯೆ ಕೊಂಡಿಯಾಗಿ ನಿಲ್ಲುತ್ತಾಳೆ. ಈ ವಚನದ ಮೂಲಕ ಲಿಂಗಾಂಗಸಾಮರಸ್ಯದ ಮಹತ್ವವನ್ನೂ ತಿಳಿಸುತ್ತಾಳೆ.

ಬಸವಾದಿ ಶರಣರು ಮಹಿಳೆಯನ್ನು ಅರ್ಧ ಜಗತ್ತು ಎಂದು ಗೌರವಿಸಿದ್ದಾರೆ. ಅವಳಿಗೆ ಸಮಾನ ಅವಕಾಶ ಕಲ್ಪಿಸಿದ್ದಾರೆ. ಆ ಕಾಲದಲ್ಲಿ ಮಹಿಳೆಗೆ ಇಷ್ಟೊಂದು ಅವಕಾಶ ಕಲ್ಪಿಸಿದ ಸಮಾಜ ಇನ್ನೊಂದು ಇರಲಿಲ್ಲ. ಇದು ಶರಣ ಸಮಾಜದ ವೈಶಿಷ್ಟಗಳಲ್ಲಿ ಒಂದಾಗಿದೆ. ಶರಣರು ಇಂಥ ಸಮಾಜ ನಿರ್ಮಾಣ ಮಾಡುವ ಮೊದಲು ದೇಶದಲ್ಲಿ ಗಂಡ ಹೆಂಡಂದಿರ ಮಧ್ಯೆ ಅನುಚರಭಾವವಿತ್ತು. ಅಂದರೆ ಗಂಡ ಒಡೆಯ ಆಗಿದ್ದ, ಹೆಂಡತಿ ಸೇವಕಿ ಆಗಿದ್ದಳು. ಗಂಡ ಬಲ ಆದರೆ ಹೆಂಡತಿ ಎಡ ಆಗಿದ್ದಳು. ಇದೇ ಕಾರಣದಿಂದ ಮದುವೆ ಮಾಡಿಸುವಾಗ ಮದುಮಗಳು ಮದುಮಗನ ಎಡಕ್ಕೆ ಕೂಡಿಸುವ ಸಂಪ್ರದಾಯವಿದೆ. ಆದರೆ ಶರಣರು ಗಂಡ ಹೆಂಡಿರ ಮಧ್ಯೆ ಸಹಚರ ಭಾವ ತಂದರು. ಹೆಂಡತಿ ಮೊದಲ ಬಾರಿಗೆ ಗಂಡನನ್ನು ಪ್ರಶ್ನಿಸುವ, ತಿದ್ದುವ ಸಾಹಿತ್ಯ ದೇಶದಲ್ಲಿ ರಚನೆಯಾಯಿತು. ಅದುವೆ ವಚನಕಾರ್ತಿಯರು ಬರೆದ ವಚನ ಸಾಹಿತ್ಯ.

ಶರಣಸಂಕುಲ ಮೊದಲ ಬಾರಿಗೆ ಭಾರತೀಯ ಸಮಾಜದಲ್ಲಿ ಇಂಥ ಬದಲಾವಣೆಯನ್ನು ತಂದಿತು. ಸಮಾನತೆಯ ತಳಹದಿಯ ಮೇಲೆ ಕುಟುಂಬ ಸಂಸ್ಕೃತಿಯನ್ನು ಎತ್ತಿಹಿಡಿಯಿತು. ಶರಣಧರ್ಮ ಸಂಸಾರಧರ್ಮವಾಗಿ ಬೆಳೆಯಿತು. ಶರಣ ಚಳವಳಿಯಲ್ಲಿ ಮದುವೆಯಾಗದೆ ಉಳಿದವರು ಕೂಡ ಸಂಸಾರಧರ್ಮವನ್ನೇ ಎತ್ತಿ ಹಿಡಿದಿದ್ದಾರೆ. ವಿರಕ್ತರೆನಿಸಿದ ಶರಣರು ಸಂಸಾರ ಸಂಸ್ಕೃತಿಯ ಪರವಾಗಿಯೆ ಇದ್ದಾರೆ. "ಹೆಣ್ಣ ಬಯಸಿದರೆ ಮದುವೆಯಾಗಿ ಕೂಡುವುದು" ಎಂದು ಅಖಂಡ ಬ್ರಹ್ಮಚಾರಿ ಸಿದ್ಧರಾಮೇಶ್ವರರು ತಿಳಿಸಿದ್ದಾರೆ. "ಇಂದ್ರಿಯ ನಿಗ್ರಹ ಮಾಡಿದರೆ ಹೊಂದುವವು ದೋಷಂಗಳು" ಎಂದು ಬಸವಣ್ಣನವರು ಎಚ್ಚರಿಸಿದ್ದಾರೆ. ಲಿಂಗಾಯತ ಧರ್ಮದಲ್ಲಿ ಮದುವೆಯಾಗುವುದು ಅಥವಾ ಆಗದೆ ಇರುವುದು ಕಡ್ಡಾಯವಲ್ಲ. ಆದರೆ ಗೃಹಸ್ಥ ಧರ್ಮಕ್ಕೆ ಬೆಲೆ ಕೊಡುವುದು ಈ ಧರ್ಮದ ವೈಶಿಷ್ಯವಾಗಿದೆ. ಹೆಂಡತಿಯನ್ನು ಬಿಟ್ಟು ಬಂದವರು ಶರಣ ಚಳವಳಿಯಲ್ಲಿ ಕಾಣಸಿಗುವುದಿಲ್ಲ. ಪಣ್ಯಾಂಗನೆಯರನ್ನು (ವೇಶ್ಯೆಯರನ್ನು) ಪುಣ್ಯಾಂಗನೆಯರನ್ನಾಗಿ ಮಾಡಿದ ಕೀರ್ತಿ ಶರಣರಿಗೆ ಸಲ್ಲುತ್ತದೆ. ಗಂಡ ಹೆಂಡಿರ ಮಧ್ಯೆ ಸಮಾನತೆಯನ್ನು ಸಾಧಿಸಿದ ಕೀರ್ತಿಯೂ ಶರಣರಿಗೇ ಸಲ್ಲುತ್ತದೆ.

ಪತಿ ಪತ್ನಿಯರ ಮಧ್ಯದ ಸಹಚರ ಭಾವಕ್ಕೆ ಆಯ್ದಕ್ಕಿ ಮಾರಯ್ಯ ಮತ್ತು ಆಯ್ದಕ್ಕಿ ಲಕ್ಕಮ್ಮ ಅವರು ಉತ್ತಮ ಉದಾಹರಣೆಯಾಗಿದ್ದಾರೆ. ಶರಣ ಸಂಸ್ಕೃತಿ ವಿಶ್ವಸಂಸ್ಕೃತಿಯಾದಾಗ ಕುಟುಂಬಗಳು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಾಧ್ಯ ಎಂಬುದು ಮನವರಿಕೆಯಾಗುವುದು ಅವಶ್ಯಕವಾಗಿದೆ.

****

ಮೋಳಿಗೆ ಮಾರಯ್ಯ ಮಹಾದೇವಿ

ಕನ್ನಡ ಸಾಹಿತ್ಯ ಪ್ರಪಂಚದೊಳಗೆ ವಿಹರಿಸುತ್ತ ಬರುವಾಗ ಹನ್ನೆರಡನೆಯ ಶತಮಾನದ ವಚನಗಳ ದರ್ಶನ ಪಡೆಯಬಹುದು. ಅಲ್ಲಿ ಶರಣರ ಉದಾತ್ತ ಜೀವನ ಪರಸ್ಪರ ಪ್ರೇಮ, ಸಮತಾಭಾವ, ಸಹಜ ಶಾಂತಿ, ದಿವ್ಯವಾದ ಆನಂದದ ಅನುಭವವು ಸತ್ಯದ ಹಂಬಲ ಸಾಹಿತ್ಯವಾಗಿ, ಸಾಹಿತ್ಯ ರಂಗಗಳಲ್ಲಿ ಹೊಸ ಮೌಲ್ಯಗಳನ್ನು ಕಂಡು ಹಿಡಿದಂತೆ ತಾತ್ವಿಕ ಮಾರ್ಗದಲ್ಲೂ ಹೊಸ ಹಾದಿಯನ್ನು ಕಂಡು ಹಿಡಿದು ಆಚರಿಸಿದರು. ಅವರು ನುಡಿದಂತೆ ನಡೆದರು ಜಗ ಬದುಕಲಿ ಜನ ಬದುಕಲೆಂದು ಸನ್ಮಾರ್ಗಕ್ಕೆ ಕರೆದೊಯ್ಯುವ ವಚನಗಳು ಅತ್ಯಮೂಲ್ಯವಾದ ಬದುಕು ಕಲಿಸುವವು. ಜನಕ್ಕೆ ನಡೆಯಲು ಕಲಿಸಿದರು. ನುಡಿಯಲು ಕಲಿಸಿದರು ಕಲ್ಯಾಣದಲ್ಲಿ ಬಸವಾದಿ ಶರಣರು ಬೆಳಗಿದರು ಬೆಳಗಿಸಿದರು. ಬಸವ ಜ್ಯೋತಿಯ ಸ್ವಯಂಪ್ರಭೆ ಎಲ್ಲೆಡೆ ಪಸರಿಸುತ್ತಿದ್ದಂತೆ ಬಸವಣ್ಣನವರ ಕೀರ್ತಿ ವಾರ್ತೆ ಕೇಳಿ ಕಾಶ್ಮೀರದ ಮಹಾದೇವ ಭೂಪಾಲ, ಸತಿ ಗಂಗಾದೇವಿಯ ಜೊತೆಗೂಡಿ ಕಲ್ಯಾಣಕ್ಕೆ ಬಂದವರು.

ಕಾಶ್ಮೀರದಲ್ಲಿ ನಾಡನಾಳುವ ರಾಜದಂಪತಿಗಳಾಗಿದ್ದೂ ಬಸವಣ್ಣನವರ ಆಕರ್ಷಣೆಗೆ ಒಳಗಾಗಿ ಕಲ್ಯಾಣಕ್ಕೆ ಬಂದು, ಕಲ್ಯಾಣದಲ್ಲಿ ನೆಲೆ ನಿಂತು, ಕಟ್ಟಿಗೆ ಮಾರುವ ಕಾಯಕದಲ್ಲಿ ನಿರತರಾದ ಮಹಾಶರಣ ಜೀವಿಗಳಾದ ಮೋಳಿಗೆ ಮಾರಯ್ಯ ಮತ್ತು ಮೋಳಿಗೆ ಮಹಾದೇವಿ ಶರಣ ಸತಿ-ಪತಿಗಳು ಒಂದಾಗಿ ಅನ್ಯೋನ್ಯವಾದ ಆಧ್ಯಾತ್ಮ ಜೀವನ ಸಾಗಿಸಿ ಆದರ್ಶ ಶರಣ ದಂಪತಿಗಳಾದರು.

ಮಹಾದೇವ ಭೂಪಾಲರು ಮೋಳಿಗೆ ಮಾರಯ್ಯನಾದುದರ ಹಿನ್ನೆಲೆಯತ್ತ ಸ್ವಲ್ಪ ದೃಷ್ಠಿ ಹರಿಸಿದರೆ, ಇವರು ಕಾಶ್ಮೀರ ದೇಶದ ಮಾಂಡವ್ಯಪುರದ ಅರಸರಾಗಿದ್ದವರು ಮಹಾದೇವ ಭೂಪಾಲರೆಂದು ಶಿವಶರಣರ ಚರಿತ್ರೆಯಲ್ಲಿ ಬರುತ್ತದೆ. ಕಾಶ್ಮೀರದರಸು, ಕಾಶ್ಮೀರ ದೇಶಾಧಿಪತಿ, ಸವ್ವಾಲಕ್ಷ ದೇಶಾಧಿಪತಿ, ಹೀಗೆ ಅನೇಕ ರೀತಿಯಿಂದ ವರ್ಣಿಸಿದನ್ನು ಕಾಣಬಹುದು.

ಇತಿಹಾಸದ ಪುಟಗಳಲ್ಲಿ ನೋಡಿದಾಗ ತಾನೇ ಮಹಾಶಿವಭಕ್ತನೆಂಬ ಅಹಂಕಾರ ಮಹಾದೇವ ಭೂಪಾಲನಲ್ಲಿತ್ತು ಅವನು ತನ್ನ ರಾಜ್ಯದರ್ಬಾರಿನಲ್ಲಿ ಪ್ರತಿದಿನವೂ ಆರು ಸಾವಿರ ಜಂಗಮರಿಗೆ ದಾಸೋಹ ಮಾಡಿಸುತ್ತಿದ್ದ ಅತ್ಯಂತ ಭಕ್ತಿಯಿಂದ ಜಂಗಮಾರಾಧನೆ ಮಾಡುತ್ತಿದ್ದ ಮತ್ತು ತನ್ನ ಜೀವನದ ಸಾರ್ಥಕತೆ ಇರುವುದೇ ತನ್ನ ಈ ವ್ರತಕ್ಕೆ ಚ್ಯುತಿ ಬರದಂತೆ ಸಾಗಿಸಿಕೊಂಡು ಹೋಗುವದರಲ್ಲಿದೆ ಎಂದು ಬಲವಾಗಿ ನಂಬಿದ್ದ ಲೋಕದಲ್ಲಿ ತನ್ನಂತಹ ಮಹಾಶಿವಭಕ್ತ ಇನ್ನೆಲ್ಲೂ ಇಲ್ಲ ಎನ್ನುವ ಬರಿಯ ಭ್ರಮೆ ಅಭಿಮಾನ ಮನದಲ್ಲಿ ಮನೆಮಾಡಿತ್ತು.

ಮಹಾದೇವ ಭೂಪಾಲನ ಸಹಚರಣಿ ಗಂಗಾದೇವಿ ಪತಿಯು ಎಲ್ಲ ಕಾರ್ಯಗಳಲ್ಲೂ ಬೆಂಗಾವಲಾಗಿ ಇರುತ್ತಿದ್ದಳು. ಜಂಗಮದಾಸೋಹದ ನಂತರವೇ ದಂಪತಿಯರು ಪ್ರಸಾದ ಸ್ವೀಕರಿಸುತ್ತಿದ್ದ ಇವರ ರಾಜ್ಯವು ಅನ್ನಛತ್ರಗಳಿಂದಲೂ, ಅರವಟ್ಟಿಗೆಗಳಿಂದಲೂ ತುಂಬಿತುಳುಕುತ್ತಿತ್ತು. ಮಹಾದೇವ ಭೂಪಾಲರ ದಾಂಪತ್ಯ ಸಾಮರಸ್ಯದಿಂದ ಕೂಡಿ ಪತಿಯ ಇಚ್ಚೆಗೆ ತಲೆಬಾಗಿ ನಡೆಯುವ ಸತಿ, ಪತಿಯ ಮನದಿಚ್ಚೆಯನ್ನರಿತು ಗೌರವ ಪ್ರೀತಿಯಿಂದ ನಡೆಸಿಕೊಡುವ ಪತಿ ಹೀಗೆ ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ನಮ್ಮ ಶಿವನಿಗೆ ಎನ್ನುವ ಶರಣವಾಣಿಯಂತೆ ನಡೆದಿತ್ತು.

ಶತ ಶತಮಾನಗಳಿಂದಲೂ ಕರ್ನಾಟಕಕ್ಕೂ ಕಾಶ್ಮೀರಕ್ಕೂ ವಾಣಿಜ್ಯ ತಾತ್ವಿಕ ಸಾಂಸ್ಕೃತಿಕ ಸಂಬಂಧವಿತ್ತು. ವ್ಯಾಪಾರಿಗಳು ನೆಲ ಮತ್ತು ಜಲದ ಮಾರ್ಗಗಳಿಂದ ವ್ಯಾಪಾರಕ್ಕಾಗಿ ಮತ್ತು ರಾಜ್ಯಗಳೊಳಗೆ ಸಾಂಸ್ಕೃತಿಕ, ಧಾರ್ಮಿಕ, ಸಂಪ್ರದಾಯಗಳ ವಿನಿಮಯಯಕ್ಕೆ ರಾಯಭಾರಿಗಳಾಗಿ ಓಡಾಡುತ್ತಿರುವುದರಿಂದ ಕರ್ನಾಟಕದ ಕಲ್ಯಾಣದಲ್ಲಿನ ಆಗುಹೋಗುಗಳು ಕಾಶ್ಮೀರಕ್ಕೆ, ಕಾಶ್ಮೀರದ ಆಗುಹೋಗುಗಳು ಕಲ್ಯಾಣಕ್ಕೆ ಪರಿಚಯಿಸುತ್ತಿತ್ತು. ಕಲ್ಯಾಣದ ಅನೇಕ ಶರಣರು ಚರ ಜಂಗಮರಾಗಿ "ಬಸವಣ್ಣ ಮತ್ತು ವಚನಗಳು" ಭಾರತದಲ್ಲೆಡೆಯೂ ಇಷ್ಟಲಿಂಗಧಾರಿಗಳಾಗಿ, ಸಮಾಜ ಜಾಗೃತಿ, ನೈತಿಕ ಜವಾಬ್ದಾರಿಯಯನ್ನು ತಿಳಿಸುತ್ತ ಜನಜಾಗೃತಿಗೊಳಿಸುತ್ತಿದ್ದ ಜಂಗಮರು ತಂಡೋಪ ತಂಡವಾಗಿ ಎಲ್ಲಾ ಕಡೆಗಳಲ್ಲಿಯೂ ಹೋಗಿ ಬರುವದು ಸಾಮಾನ್ಯವಾಗಿತ್ತು. ಬಸವಣ್ಣನವರ ಜಂಗಮ ಪ್ರೀತಿ ಶರಣರ ದಾಸೋಹದ ಬಗ್ಗೆ ವಚನಗಳ ವಿವರಣೆ ಮಾಡಿಸುತ್ತಿದ್ದ ಎರಡೂ ರಾಜ್ಯಗಳಿಗೂ ಬಂದು ಹೋಗುತ್ತಿದ್ದ ಚರ ಜಂಗಮರಿಂದ ಶರಣರ ಬಗ್ಗೆ ಅರಿತ ಮಹಾದೇವ ಭೂಪಾಲನ ಮನ ಕಲ್ಯಾಣದೆಡೆಗೆ ಹಂಬಲಿಸುತ್ತದೆ.

ದಿನಕಳೆದಂತೆ ಮಹಾದೇವ ಭೂಪಾಲನಲ್ಲಿ ವೈರಾಗ್ಯ ಆವರಿಸುತ್ತದೆ. ಒಮ್ಮೆ ಸತಿ ಗಂಗಾದೇವಿಗೆ ತನಗೆ ಬಸವದರ್ಶನದ ಅಭಿಲಾಷೆ ತೀವ್ರವಾಗಿದೆ ಅಂತರಾತ್ಮವೂ ಕಲ್ಯಾಣದಕಡೆಗೆ ಹಾತೊರೆಯುತ್ತಿದೆ ಎಂದು ಪ್ರಸ್ತಾಪಿಸುತ್ತಾನೆ. ಆಗ ಸತಿ ಗಂಗಾದೇವಿ

ಎರಡು ಮಾತಿಲ್ಲದೇ ಸಂತೋಷದಿಂದ ತಾನು ಪತಿಯೊಂದಿಗೆ ಹೊರಡಲು ಸಿದ್ಧಳಾಗುತ್ತಾಳೆ. ಮಹಾದೇವ ಭೂಪಾಲ ಗಂಗಾದೇವಿಯನ್ನು ಕುರಿತು ರಾಣಿಯಾಗಿ ಮೆರೆದವಳು ಸಾಮಾನ್ಯ ಸ್ತ್ರೀಯಂತೆ ಇರಬಲ್ಲಳೆ? ಎಂಬುದೊಂದು ಅನುಮಾನದ ಎಳೆ, ರಾಜನಲ್ಲಿ ಹುಟ್ಟುತ್ತದೆ. ಶರಣರ ಬದುಕಿನ ಕಲ್ಯಾಣದ ಬದುಕಿನ ಕಷ್ಟನಷ್ಟಗಳನ್ನು ಅವಳಲ್ಲಿ ಹೇಳುತ್ತಾನೆ. ಆದರವಳು ಕ್ಷಣಕಾಲಕ್ಕೂ ವಿಚಲಿತಳಾಗದೆ "ಸುಧೆಯನ್ನು ಸವಿಯಲರಿಯದೆ ಕೆಚ್ಚಲಕಚ್ಚಿರುಧೀರನೀಂಟು ಉಣ್ಣೆಯೋಲು ಸದಮಲ ಮುಕ್ತಿಯ ಸುಖವಿರೆ ಬಿಟ್ಟುಮಾಯದ ಸಿರಿಯಲ್ಲಿ ನಾನಿಹನೆ" ಎಂದು ಹೇಳಿ ಪತಿಯನ್ನು ಅನುಸರಿಸಿ ರಾಜ ವೈಭೋಗವನ್ನು ತ್ಯಜಿಸಿ ಕಲ್ಯಾಣಕ್ಕೆ ಬರುತ್ತಾರೆ. ರಾಜ್ಯದಂಪತಿಗಳು ತಮ್ಮ ಪೂರ್ವಾಶ್ರಮ ಹೆಸರನ್ನು ಬಿಟ್ಟು ಕಲ್ಯಾಣಕ್ಕೆ ಬಂದು ಮೋಳಿಗೆ ಮಾರಯ್ಯ ಮಹಾದೇವಿಯಾದರು.

ಶರಣರು ಕಾಯಕ ಜೀವಿಗಳಾಗಿದ್ದರು. ಶರಣತ್ವವೆಂದರೆ ಕಾಯಕ ಜೀವಿಯಾಗುವುದು. ಹಾಗಾಗಿ ಮಾರಯ್ಯ ದಂಪತಿಗಳು ಸಹ ಕಲ್ಯಾಣಕ್ಕೆ ಬಂದು ಗುಡಿಸಲೊಂದನ್ನು ಕಟ್ಟಿಕೊಂಡು ದಿನನಿತ್ಯ ಕಾಡಿಗೆ ಹೋಗಿ ಕಟ್ಟಿಗೆಯನ್ನು ಆಯ್ದು ತಂದು ಕಟ್ಟಿಗೆಯ ಹೊರೆಯನ್ನು ಕಟ್ಟುವ ಮತ್ತು ಆ ಕಟ್ಟಿಗೆಯ ಕಟ್ಟುಗಳನ್ನು ಹೊತ್ತುಕೊಂಡು ಹೊಗಿ ಮಾರಾಟ ಮಾಡುವ ಕಾಯಕವನ್ನು ಕೈಗೊಂಡರು. ಕಟ್ಟಿಗೆ ಮಾರಾಟದಿಂದ ಬಂದ ಭತ್ತದಿಂದ ರುಚಿಯಾದ ಅಂಬಲಿ ತನಗೆಷ್ಟು ಬೇಕೋ ಅಷ್ಟು ಇರಿಸಿಕೊಂಡು ಉಳಿದುದರಲ್ಲಿ ಜಂಗಮದಾಸೋಹ ಮಾಡುತ್ತಾ ಕಾಯಕದ ಮಹತ್ವವನ್ನು ಅರಿತರು ಶರಣರು ಇಂದಿಗೆಂದು ನಾಳೆಗೆಂದು ಚಿಂತಿಸಲೇಕೆ? ರಾಜ ವೈಭೋಗವನ್ನು ತ್ಯಜಿಸಿ ಕಲ್ಯಾಣಕ್ಕೆ ಬಂದ ತಂದಿಕ್ಕುವ ಶಿವಂಗೆ ಬಡತನವೇ? ಎಂಬಂತೆ ಶರಣ ತತ್ವಕ್ಕೆ ಅನುಸಾರವಾಗಿ ಮಾರಯ್ಯ ದಂಪತಿಗಳು ಕಾಯಕ-ದಾಸೋಹದಲ್ಲಿ ನಿರತರಾಗಿ ಸಂತೃಪ್ತ ಜೀವನವನ್ನು ಸಾಗಿಸುತ್ತಿದ್ದರು.

ಮಹಾದೇವಮ್ಮ ಮಾಡುವ ಅಂಬಲಿ, ಅಮೃತದಷ್ಟು ರುಚಿಯಾಗಿರುತ್ತದೆಂಬ ವಿಷಯ ಜನಜನಿತವಾಯಿತು. ಅದು ಶರಣರ ಬಾಯಿಂದ ಬಾಯಿಗೆ ಹರಡಿ ಬಸವಣ್ಣನವರ ಕಿವಿಗೂ ಬಿದ್ದಿತೇನೋ ಆ ಸಂದರ್ಭದಲ್ಲಿನ ಒಂದು ಘಟನೆ ಚಿತ್ರಣವಾಗಿದೆ. ಅಡವಿಯಿಂದ ಸೌದೆಯನ್ನು ಕಟ್ಟಿಕೊಂಡು ಹೊತ್ತು ತಂದು ಮಾರಿ ಜಂಗಮ ದಾಸೋಹದಲ್ಲಿ ನಿರತರಾದ ಇವರ ಜೀವನ. "ಮನೆ ನೋಡಾ ಬಡವರು ಮನ ನೋಡಾ ಘನ" ಎನ್ನುವಂತಿತ್ತು. ಬಸವಣ್ಣನವರಿಗೆ ಮೋಳಿಗೆ ಮಾರಯ್ಯನವರ ಬಡತನ ನೊಡಿ ಸ್ವಲ್ಪ ಸಹಾಯ ಮಾಡಬೇಕೆಂಬ ಆಸೆಯಾಯಿತು. ತಡಮಾಡದೆ ಬಸವಣ್ಣನವರು ಅಂಬಲಿ ಸವಿಯಬೇಕೆಂದು ಬಂದಿರುವೆ ಎನ್ನುತ್ತಾ ಮಾರಯ್ಯನವರ ಗುಡಿಸಲಿಗೆ ಬಂದರು.

ಮಾರಯ್ಯ ದಂಪತಿಗಳಿಗೆ ಮನೆ ಎದುರಿಗೆ ಬಸವಣ್ಣನವರನ್ನು ಕಂಡು, ಅವರ ವಚನದಂತೆ "ಕಂಗಳೆ ಕರುಳಾಗಿ ಉರವಣಿಸಿ ಬಪ್ಪವನ ಬರವ ನೋಡಾ" ಎಂಬಂತೆ ಕಂಗಳೆರಡು ಹಳಚದೆ ನೋಡುತ್ತಾ ನಿಜವೋ ಸ್ವಪ್ನವೋ ಎನ್ನುಕೊಳ್ಳುತ್ತಾ ಆದರೂ ಇದು ಸತ್ಯ ಎಂದರಿತು, ಅತಿ ಸಂಭ್ರಮದಿಂದ ಅವರನ್ನು ಬರಮಾಡಿಕೊಂಡರು. ಬಸವಣ್ಣನವರು ಪೂಜೆ ಮುಗಿಸಿ ಒಳಗಿಂದ ಹೊರ ಬರುವಷ್ಟರಲ್ಲಿ ಮಹಾದೇವಮ್ಮ ಭಕ್ತಿಯಿಂದ ಅಂಬಲಿ ತಯಾರಿಸಿ ಶ್ರದ್ಧೆಯಿಂದ ಪ್ರಸಾದ ಎಡೆಮಾಡಿದಳು ಪೂಜೆಗೆ ಹೋದಾಗ ಬಸವಣ್ಣನವರು ಮಜ್ಜನ ಪಾತ್ರೆಯ ಮರೆಯಲ್ಲಿ ಎರಡು ಚಿಕ್ಕ ಚೀಲಗಳಲ್ಲಿ ತುಂಬಿಕೊಂಡು ಹೋಗಿದ್ದ ಬಂಗಾರದ ನಾಣ್ಯಗಳನ್ನು ಇರಿಸಿ ಬಂದ ಪ್ರಸಾದ ಸ್ವೀಕರಿಸಿ ಶರಣು ಶರಣಾರ್ಥಿ ಹೇಳಿ ನಡೆದರು. ಮಾರಯ್ಯನವರು ದಿನದ ಕಾಯಕಕ್ಕೆ ಹೋಗಿ ಕಾಯಕ ಮುಗಿಸಿಕೊಂಡು ಬರುವರು. ಪ್ರಸಾದಕ್ಕೆ ಮೊದಲು ಇಷ್ಟಲಿಂಗ ಪೂಜೆಗೆ ಹೋಗುವಾಗ ಅಲ್ಲಿದ್ದ ಹೊನ್ನಿನ ಚೀಲಗಳನ್ನು ಕಂಡು ಗರ ಬಡೆದಂತಾಗಿ ಬೆಚ್ಚಿ ಮಡದಿಯನ್ನು ಕೂಗಿದರು. ಮಹಾದೇವಮ್ಮನಿಗೆ ಮಾರಯ್ಯನವರು ವಿಚಾರಿಸಿದಾಗ ಏನು ಗೊತ್ತಿರಲಿಲ್ಲ. ಆಗ ನಿಧಾನವಾಗಿ ದಂಪತಿಯರು ಯೋಚನೆ ಮಾಡಿದಾಗ ಬಸವಣ್ಣನವರದೇ ಈ ಕೆಲಸವಿರಬಹುದೆಂದು, ಬಸವನು ನಾವು ಬಡವರೆಂದು ಹೊನ್ನಿತ್ತಿರಬಹುದೆಂಬುದು ಅವರ ಅರಿವಿಗೆ ಬರುತ್ತದೆ. ಅವುಗಳನ್ನು ಮಾರಯ್ಯ ಜಂಗಮರಿಗೆ ಕೊಡಲು ಜಂಗಮರು ಬಸವಣ್ಣನವರಲ್ಲಿ ಬಂದು ವಿಷಯವನ್ನು ತಿಳಿಸುತ್ತಾರೆ.

ಮೋಳಿಗೆ ಮಾರಯ್ಯನವರ ಗುಣ–ಧರ್ಮಗಳನ್ನು ಅರಿತ ಬಸವದೇವರ ಕೃಪೆಯ ಹೊರತು ಪಡಿಸಿ ಬೇರಾವದನ್ನು ಬಯಸದೇ ಇರುವ ಸತ್ಯಶುದ್ಧ ಕಾಯಕದಿಂದ ದುಡಿದು ಪಡೆದುದರಲ್ಲಿ ಸಿಗುವ ಆನಂದ ಇನ್ನಾವ ಭೋಗ ಭಾಗ್ಯಗಳಲ್ಲೂ ಇಲ್ಲ. ಚಿನ್ನಕ್ಕಿಂತಲೂ ಕಾಯಕದ ಕಟ್ಟಿಗೆಯೇ ಶ್ರೇಷ್ಠ ಎಂಬ ಮೋಳಿಗೆ ಮಾರಯ್ಯ ದಂಪತಿಗಳ ನಿಲುವಿಗೆ ಬಸವಣ್ಣನವರು ಕೂಡಲೆ ಮಾರಯ್ಯನವರಲ್ಲಿಗೆ ಬಂದು ಕ್ಷಮೆ ಯಾಚಿಸಿ ಮನ್ನಿಸಿರೆನ್ನುತ್ತಾರೆ. ಇದರ ಹಿನ್ನೆಲೆಯಲ್ಲಿರುವ ತತ್ವವೆಂದರೆ ಬಂಗಾರವು ಬಹು ಬೆಲೆಯುಳ್ಳ ವಸ್ತುವಾಗಿದೆಯೆಂದು ಅದನ್ನು ಯಾರೂ ಪ್ರಸಾದವಾಗಿ ಸ್ವಿಕಾರ ಮಾಡಲಿಕ್ಕೆ ಆಗುವುದಿಲ್ಲ. ಮೋಳಿಗೆ ಮಾರಯ್ಯನವರು ಹೇಳುವಂತೆ

"ಆನೆ ಕುದುರೆ ಭಂಡಾರ ವಿರ್ದಡೇನೋ
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು ಮಲಗುವದರ್ಥ ಮಂಚ
ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೇಡಬೇಡಮನುಜಾ
ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೋ?

ಕೈವಿಡಿದ ಮಡದಿ ಪರರ ಸಂಗ,
ಪ್ರಾಣವಾಯುವಿನ ಸಂಗ ಸಾವಿಂಗೆ ಸಂಗಡವಾರೂ ಇಲ್ಲಕಾಣಾ,
ನಿಃಕಳಂಕ ಮಲ್ಲಿಕಾರ್ಜುನ."

–ಮೋಳಿಗೆ ಮಾರಯ್ಯ

ಈ ವಚನದಲ್ಲಿ ಮೋಳಿಗೆ ಮಾರಯ್ಯನವರು ಅನುಭವ ಪೂರ್ಣವಾದ ಜೀವನದರ್ಶನದ ಪ್ರತಿಕವಾಗಿದೆ. ಸತ್ಯವಾಗಿರುವ ವಾಸ್ತವಿಕ ಬದುಕನ್ನು ಅರಿತು ಕೊಂಡವರು ಸತ್ಯಾನುಸಂದಾನಿಗಳು ನ್ಯಾಯನಿಷ್ಠುರ ಶರಣರಾದ ಮಾರಯ್ಯಾನವರು ತಮ್ಮ ವಚನದಲ್ಲಿ ಹೇಳ್ತಾರೆ. ಭಾರಿ ಅರಮನೆ ಆನೆಗಳು ಅಶ್ವಗಳಿಂದ ಕೂಡಿದ ಸೈನ್ಯ ಬೆಳ್ಳಿ ಬಂಗಾರ ಮುತ್ತು ರತ್ನ, ವಜ್ರ, ವೈಡೂರ್ಯ ಮತ್ತು ಚಿನ್ನದ ನಾಣ್ಯಗಳಿಂದ ತುಂಬಿದ ಖಜಾನೆ ಹಾಗೂ ಸಾವಿರಾರೂ ಎಕರೆ ಜಮೀನು ಹೀಗೆ ಏನೆಲ್ಲ ಇರಬಹುದು. ಆದರೆ ಇಷ್ಟೆಲ್ಲ ಇದ್ದವನಿಗೆ ಊಟಕ್ಕೆ ಬಹಳವಾದರೆ ಅರ್ಧಸೇರು ಅಕ್ಕಿ ಬೇಕು, ಒಂದು ಹಸುವಿನ ಹಾಲು ಸಾಕು, ಮಲಗಲು ಅರ್ಧ ಮಂಚ ಉಳಿದ ಸಂಪತ್ತು ಹೆಸರಿಗೆ ಮಾತ್ರ. ಆದ್ದರಿಂದ ಅರ್ಥಹಿನ ಶ್ರೀಮಂತಿಕೆಯನ್ನು ನಂಬದಿರು ನಂಬಿ ಕೆಡುವುದು ಬೇಡ ಎನ್ನುವ ಸಂದೇಶ ಮಾನವ ಜನಾಂಗಕ್ಕೆ ಸಾರಿದ್ದಾರೆ. ಸಾವಿನಲ್ಲಿ ಯಾರೂ ಸಂಗಾತಿಗಳಿರುವದಿಲ್ಲ ಎಂದು ಹೇಳುತ್ತಾ ಮಾರಯ್ಯನವರು ವಾಸ್ತವವನ್ನು ಬಿಚ್ಚಿಟ್ಟಿದ್ದಾರೆ. ಬದುಕಿನ ಅನಿವಾರ್ಯ ಸಮಸ್ಯೆಗಳನ್ನು ಯಾವ ಭ್ರಮೆಗಳಿಲ್ಲದೆ ಎದುರಿಸುವ ಕಲೆಯನ್ನು ತಮ್ಮ ವಚನದ ಮೂಲಕ ತಿಳಿಸುತ್ತಾರೆ.

ಮಾರಯ್ಯ ಮತ್ತು ಮಹಾದೇವಿಯರ ದಾಂಪತ್ಯ ತುಂಬಾ ಅನ್ಯೋನ್ಯವಾಗಿತ್ತು ಮಾರಯ್ಯನವರ ಸಾಧನೆಯಲ್ಲಿ ಸಮಪಾಲಿಗೆ ಮಹಾದೇವಮ್ಮನವರೂ ಅರ್ಹರಾಗಿದ್ರು ಅವರು ಪತಿಯ ಜೊತೆಯಾಗಿ ಸ್ಫೂರ್ತಿಶಕ್ತಿಯಾಗಿದ್ದರು. ಇಬ್ಬರೂ ಲಿಂಗ ಪೂಜೆ ಮುಗಿಸಿ ಕಾಯಕಕ್ಕೆ ಅಣಿಯಾಗಿ ಕಾಡಿಗೆ ಹೋಗಿ ಕಟ್ಟಿಗೆ ಆರಿಸಲು ಹೋಗುವಾಗಿನ ಘಟನೆಯೊಂದು ಬರುತ್ತದೆ.

ಮಾರಯ್ಯನವರು ಕಟ್ಟಿಗೆ ಆರಿಸುತ್ತಾ ಮುಂದೆ ಮುಂದೆ ಮಹಾದೇವಮ್ಮ ಹಿಂದೆ ಕಟ್ಟಿಗೆ ಆರಿಸುತ್ತಾ ಹೋಗುವಾಗ ದಾರಿಯಲ್ಲಿ ಒಂದು ಚಿನ್ನದ ನಾಣ್ಯ ಮಾರಯ್ಯನವರ ಕಣ್ಣಿಗೆ ಬಿಳುತ್ತದೆ. ಆಗ ಮಾರಯ್ಯನವರು ಒಮ್ಮೇಲೆ ಅದರ ಮೇಲೆ ಕಾಲ ಬೆರಳುಗಳಿಂದ ಮಣ್ಣನ್ನು ಆಚಿನ್ನದ ನಾಣ್ಯದ ಮೇಲೆ ಚಿಮ್ಮುಕಿಸುತ್ತಾರೆ, ಮತ್ತೆ ತಿರುಗಿ ನೊಡುತ್ತಾರೆ. ಆಗ ಮಹಾದೇವಮ್ಮ ಏನದು? ಎಂದು ಕೇಳುತ್ತಾಳೆ. ಮಾರಯ್ಯನವರು ಏನಿಲ್ಲ, ಆ ಚಿನ್ನದ ನಾಣ್ಯ ನೋಡಿ ನಿನ್ನಮನ ವಿಚಲಿತವಾಗಬಾರದೆಂದು ಹಾಗೆ ಮಾಡಿದೆ ಎನ್ನತ್ತಾರೆ. ಅದಕ್ಕೆ ಮಹಾದೇವಮ್ಮ ಮಾರಯ್ಯನವರ ನಿಲುವಿಗೆ ಬೆರಗಾಗಿ ನುಡಿಯುತ್ತಾರೆ.

"ಕಾಯಕವುಳ್ಳನ್ನಕ್ಕ ಲಿಂಗಪೂಜೆ,
ಆತ್ಮವುಳ್ಳನ್ನಕ್ಕ ಅರಿವಿನ ಭೇದ
ಪುರುಷನೀ ಸತಿ ನಾನೆಂಬಲ್ಲಿ ಉಭಯದ ಬೀಜ
ನಾನೀನೆಂಬನ್ನಕ್ಕ ಅಂಗದ ಲಿಂಗದಲ್ಲಿಯೆ ನಿರಂಗವಾಗಬೇಕು
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ."

–ಮೋಳಿಗೆ ಮಹಾದೇವಿ

ಪತಿ ಮಾರಯ್ಯನವರಿಗೆ ಮಹಾದೇವಮ್ಮ ಇನ್ನು ನಿಮಗೆ ಅದು ಹೊನ್ನಾಗಿ ಕಾಣುತಿದೆಯೇ? ಕಾಯದಲ್ಲಿ ಲಿಂಗಪೂಜೆಯಲ್ಲಿ ಬೆರೆತವರಿಗೆ ನಾನು ನೀನು ಎಂಬ ಉಭಯ ಭೇದವಿಲ್ಲ. ಇಬ್ಬರ ದೃಷ್ಠಿಯಲ್ಲೂ ಅದು ಮಣ್ಣೇ ಮತ್ತೆ ನಿಮಗ್ಯಾಕೆ ನಮ್ಮಿಬ್ಬರ ನಡುವೆ ಭೇದ ಭಾವ ಎಂಬ ತಾತ್ವಿಕ ಪ್ರಶ್ನೆ ಮಾಡುತ್ತಾಳೆ. ಶಿವಯೋಗದಿಂದ ಸಿಗುವ ಸುಖವು ನಿರಂತರವಾದದುದು ಎಂದು ತಿಳಿಸುತ್ತಾ ಪತಿಗೂ ಅನುಭಾವದ ಆಳವನ್ನು ಅರಿಯುವಂತೆ ಮಾಡುವ ಎತ್ತರಕ್ಕೆ ಬೆಳೆದಳು.

ಹೀಗೆ ತನ್ನ ಸಮಕಾಲೀನರ ಮೆಚ್ಚುಗೆಗೆ ಪಾತ್ರರಾಗಿ ಪರಸ್ಪರ ಅರಿತುಕೊಂಡು ಮೋಳಿಗೆ ಮಾರಯ್ಯನವರು 'ನಿಃಕಳಂಕ ಮಲ್ಲಿಕಾರ್ಜುನ' ಎಂಬ ವಚನಾಂಕಿತದಿಂದ ರಚಿಸಿದ ವಚನಗಳು 820 ಮಾತ್ರ ದೊರೆತಿವೆ. ಅದರಂತೆ ಮೋಳಿಗೆ ಮಹಾದೇವಮ್ಮನವರು ರಚಿಸಿದ 70 ವಚನಗಳು ಲಭ್ಯವಾಗಿವೆ. ಮೋಳಿಗೆ ಮಾಹಾದೇವಿಯವರು ಎನ್ನಯ್ಯಪ್ರೀಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಎಂಬ ವಚನಾಂಕಿತದಿಂದ ವಚನಗಳ ರಚನೆ ಮಾಡಿದ್ದಾರೆ. ಇವರ ವಚನಗಳಲ್ಲಿ ಪತಿಗೆ ಸತ್ಯದ ನಿಲವನ್ನು ತೋರಿಸುವ ವಚನಗಳೆ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ ಮತ್ತು ತಾತ್ವಿಕ ನೆಲೆಗಟ್ಟಿನ ಮೇಲೆ ನಿಂತವುಗಳಾಗಿವೆ. ಸಂಸಾರದ ದಂದುಗದಲ್ಲಿ ಸಿಕ್ಕಿ ತೊಳಲಿ ಬಳಲಿದಂತೆ ತೋರುವುದಿಲ್ಲ. ಹಾಗೆಯೇ ಮೋಳಿಗೆ ಮಾರಯ್ಯನವರ ವಚನಾಂಕಿತ ನಿಃಕಳಂಕ ಮಲ್ಲಿಕಾರ್ಜುನವೆಂದು ಇವರ ವಚನಗಳಲ್ಲಿ ಬೆಡಗಿನ ಶೈಲಿ ಬಳಕೆಯಾಗಿರುವಂತೆ, ತಾತ್ವಿಕ ವಿಷಯಗಳನ್ನು ಮನಮುಟ್ಟುವಂತೆ ಕಾವ್ಯಾಂಶ ಸೂಸುವ ಸಾಲುಗಳು, ಸೂತ್ರರೂಪದ ವಾಕ್ಯಗಳು ಅಧಿಕವಾಗಿ ವಚನಗಳ ಕಾವ್ಯ ಮೌಲ್ಯವನ್ನು ಹೆಚ್ಚಿಸಿವೆ.

ಇನ್ನು ಕಲ್ಯಾಣದಲ್ಲಿನ ಕೊನೆಯ ದಿನಗಳಲ್ಲಿ ಮಾರಯ್ಯನವರಲ್ಲಿ ದುಃಖದ ಛಾಯೆ ಆವರಿಸುತ್ತದೆ. ಮಾರಯ್ಯ ದಂಪತಿಗಳ ಕಣ್ಣೆದುರಿನಲ್ಲಿಯೇ ಶರಣರ ಹತ್ಯಾಕಾಂಡ ನಡೆಯಿತು. ಕೈಲಾಸವೇ ನಾಚುವಂತಿದ್ದ ಕಲ್ಯಾಣವು ರಾಶಿ ರಾಶಿ ಹೆಣಗಳ ಸ್ಮಶಾನ ಕಲ್ಯಾಣವಾಯಿತು. ಶರಣರೆಲ್ಲ ಚೆಲ್ಲಾಪಿಲ್ಲಿಯಾದರು. ಅದನ್ನು ಕಂಡ ಮಾರಯ್ಯನವರ ಕೊರಗು ಅಸಹನಿಯವಾಗಿತ್ತು.

"ಊರು ಕೆಟ್ಟು ಸೂರೆಯಾಡುವಲ್ಲಿ ಆರಿಗಾರೂ ಇಲ್ಲ
ಬಸವಣ್ಣ ಸಂಗಮಕ್ಕೆ ಚನ್ನಬಸವಣ್ಣ ಉಳುವೆಗೆ
ಪ್ರಭು ಕದಳಿಗೆ ಮಿಕ್ಕಾದ ಪ್ರಮಥರೆಲ್ಲರೂ
ತಮ್ಮ ತಮ್ಮ ಲಕ್ಷಭಾವಕ್ಕೆ ಮುಕ್ತಿಯನೆಯ್ದಿಹರು
ನನಗೊಂದು ಬಟ್ಟೆಯ ಹೇಳಾ ನಿಃಕಳಂಕ ಮಲ್ಲಿಕಾರ್ಜುನಾ."

–ಮೋಳಿಗೆ ಮಾರಯ್ಯ.

ಮಾರಯ್ಯನವರಿಗೆ ಬದುಕು ಸಾಕೆನಿಸಿತ್ತು. ನನಗೊಂದು ದಾರಿ ಹೇಳಾ ಎಂದು ಹಲಬುತ್ತಿದ್ದರು. ಕೈಲಾಸಕ್ಕೆ ಹೋಗಿ ಬಿಡಬೇಕೆನ್ನುವ ಬಯಕ್ಕೆ ತಲೆಯೆತ್ತಿತ್ತು. ಶರಣನಾಗಿ ದಾಸೋಹಿಯಾಗಿ ಕಾಯಕ ಜೀವಿಯಾಗಿ ಸಾರ್ಥಕ ಬದುಕು ನಡೆಸಿರುವ ನನಗೆ ಕೈಲಾಸದಲ್ಲಿ ಜಾಗ ಸಿಗುವುದೆಂಬ ನಂಬಿಕೆ ಅವರದಾಗಿತ್ತು. ತನ್ನಾಸೆಯನ್ನು ಮಡದಿಯಲ್ಲಿ ವ್ಯಕ್ತಪಡಿಸಿದರು. ಆಗವಳು ಎಚ್ಚರಿಕೆಯ ನುಡಿಗಳಲ್ಲಿ ತನ್ನ ಜ್ಞಾನದ ಬಲದಿಂದ ಬಗೆಹರಿಸಿದವಳು.

"ಕಾಷ್ಠವ ಸುವರ್ಣವ ಮಾಡಿದನೆಂಬ ಘಾತುಕತನವೇ ನಿಮ್ಮ ಭಕ್ತಿ ?
ಸಕಲ ದೇಶ, ಕೋಶ, ವಾಸ, ಭಂಡಾರ ಸವಾಲಕ್ಷ ಮುಂತಾದ ಸಂಭಂದ ಸ್ತ್ರೀಯರ
ಬಿಟ್ಟು ಬಂದೆನೆಂಬ ಕೈ ಕೂಲಿಯೆ ನಿಮ್ಮ ಭಕ್ತಿ?
ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮುಂತಾದ ಏಳುನೂರೆಪ್ಪತ್ತು
ಅಮರಗಣಂಗಳ ಭಾವವಿದ್ದಂತೆ ನಿಮ್ಮ ಅಗಡ ವೇಕಯ್ಯಾ ?
ನಿಮ್ಮ ಅರಿವಿಂಗೆ ಇದಿರಿನಲ್ಲಿ ಕೂಡಿಹೆನೆಂಬ ಭೀನ್ನಭಾವುಂಟೆ ಅಯ್ಯಾ ?
ಕರ್ಪೂರದ ಅರಣ್ಯವ ಕಿಚ್ಚು ಹತ್ತಿ ಬೆಂದಲ್ಲಿ
ಭಸ್ಮ ಇದ್ದಿತೆಂದು ಲಕ್ಷಿಸಲುಂಟೆ ?
ನಿಮ್ಮ ಭಾವವ ನಿಮ್ಮಲ್ಲಿಗೆ ತಿಳಿದುಕೊಳ್ಳಿ
ನಿಮ್ಮ ಕೂಟಕ್ಕೆ ಎನ್ನ ನಾಚಿಕೆಯ ಬಿಡಿಸಿದ ತೆರನತಿಳಿದುಕೊಳ್ಳಿ ಶಕ್ತಿಯ ಮಾತೆಂದು ಧಿಕ್ಕರಿಸಬೇಡಿ
ಹೊರಗೆ ಕೂಡಿಸಿಹೆನೆಂಬುದು ನಿಮ್ಮ ಅರಿವಿಂಗೆ ಹಾನಿ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ
ನಿಮ್ಮ ಶರಣರ ನೆಲೆಯ ನೀವೇ ನೋಡಿಕೊಳ್ಳಿ."

–ಮೋಳಿಗೆ ಮಹಾದೇವಿ.

ಈ ವಚನವು ಮೋಳಿಗೆ ಮಹಾದೇವಮ್ಮನವರು ಏರಿದ ಆಧ್ಯಾತ್ಮದ ನಿಲುವಿನ ಕನ್ನಡಿಯಂತಿದೆ. ಕಾಯವೆರಸಿ ಕೈಲಾಸಕ್ಕೆ ಹೋಗಬೇಕೇನ್ನುವವಿರಾ ? ಎಂದು ಪ್ರಶ್ನಿಸುತ್ತಾ ಈ ಮಾತು ಶರಣರಿಗೆ ಸಲ್ಲುವುದಿಲ್ಲ ಎನ್ನುತ್ತಾಳೆ. ಲಿಂಗಾಂಗ ಸಾಮರಸ್ಯದ ಪರಮಾನಂದ ಸಾಮ್ರಾಜ್ಯದಲ್ಲಿರುವಾಗ ಈ ಮಾತೇಕೆ ? ಸಕಲ ದೇಶಕೋಶ ಸಿರಿ ಸಂಪತ್ತನ್ನು ತ್ಯಜಿಸಿ ವೈರಾಗ್ಯ ತಾಳಿ ಕಲ್ಯಾಣಕ್ಕೆ ಬಂದ ಮೇಲೆ ಮತ್ತೆ ಕೈಲಾಸದ ಮಾತನಾಡುವುದು ಸರಿಯಲ್ಲ. ಹೀಗೆ ಪತಿಯನ್ನು ಪ್ರಶ್ನಿಸುತ್ತಾ ಉನ್ನತ್ತ ಶಿಖರಕ್ಕೇರಿದಳು ಮಹಾದೇವಮ್ಮ.

ತನ್ನ ಸತಿಯಾಡಿದ ತಾತ್ವಿಕ ಮಾತುಗಳಿಂದ ಮಾರಯ್ಯನವರಿಗೆ ಜ್ಞಾನೋದಯವಾಗುತ್ತದೆ. ತನ್ನ ಭಕ್ತಿಗೆ ಕೈಲಾಸವೆಂಬ ಕೈಕೂಲಿ ಕೇಳಿದೆನು ಎಂದು ತಮ್ಮ ಬಗ್ಗೆಯೆ ಆಸಹ್ಯ ಪಟ್ಟುಕೊಳ್ಳುತ್ತಾರೆ. ಕೊನೆಗೆ ಕಲ್ಯಾಣಪಟ್ಟಣಕ್ಕೆ ಸ್ವಲ್ಪ ದೂರದಲ್ಲಿರುವ ಈಗ ಹುಮನಾಬಾದ ತಾಲ್ಲೂಕಿನ ಬೀದರ ಜಿಲ್ಲೆಯಲ್ಲಿ ಬರುವ ಮೊಳಕೇರಿ ಎಂಬ ಗ್ರಾಮದಲ್ಲಿ ಅವರು ಕೆಲಕಾಲ ನೆಲೆಸಿದರು ಎಂಬ ಪ್ರತೀತಿ ಇದೆ. ಈಗಲೂ ಮೊಳಕೇರಿಯಲ್ಲಿ ಮೋಳಿಗೆ ಮಾರಯ್ಯನವರು ಗವಿಯ ಬಳಿ ಹೆಸರಿಲ್ಲದ ಮರವಿದೆ. ಹೀಗೆ ಬಸವಣ್ಣನೆಂಬ ಜ್ಯೋತಿ ಮುಟ್ಟಿ ಮೋಳಿಗೆ ಮಾರಯ್ಯ ಮೋಳಿಗೆ ಮಹಾದೇವಿಯವರ ಪರಂಜ್ಯೋತಿ ಮುಟ್ಟಿ ಜ್ಯೋತಿಯಾಗಿ ಬೆಳಗಿದರು.

****

ಅರುಹಿನ ತೆರಹು ಅಷ್ಟಾವರಣಗಳು

ಬಸವಾದಿ ಶರಣರ ವಚನಗಳಿಗೆ ಧರ್ಮ, ದರ್ಶನ ಮತ್ತು ಸಾಹಿತ್ಯದ ಹಿನ್ನೆಲೆಯಲ್ಲಿ ಮಹತ್ವದ ಸ್ಥಾನವಿದೆ. ವಚನಗಳಲ್ಲಿ ಶರಣರು ಕಂಡ ಅಧ್ಯಾತ್ಮದ ಆದರ್ಶಗಳು ಅವರ ಜೀವನದರ್ಶನ ಮತ್ತು ಶರಣರ ಅಂತಃಕರಣದ ಪರಿಶುದ್ಧ ಕರುಣೆ, ಪ್ರೀತಿಯ ಪ್ರವಾಹದಲ್ಲಿ ಜನರ ಮನಸ್ಸಿನ ಮಾಲಿನ್ಯ ತೊಳೆಯುವ ಅದ್ಭುತ ಶಕ್ತಿಯಿದೆ. ಶರಣರ ಜೀವನ ಬಹುಮುಖಿಯಾದುದು. ಅವರು ಒಂದೆಡೆ ಇಷ್ಟಲಿಂಗ ಪೂಜೆ, ಪ್ರಾಣಲಿಂಗ ಪೂಜೆ, ಭಾವಲಿಂಗ ಪೂಜೆಯೊಂದಿಗೆ ಸಾಧನೆಗೈವ ಸಾಧಕರಾದರೆ ಇನ್ನೊಂದೆಡೆ ವರ್ಗ, ವರ್ಣ, ಲಿಂಗ, ಭೇದವಿಲ್ಲದ ಮತ್ತು ಶೋಷಣೆಯಿಂದ ಮುಕ್ತವಾದ ಸಮಾಜವನ್ನು ಕಟ್ಟುವುದು, ಸಕಲ ಜೀವಾತ್ಮರಿಗೆ ಲೇಸನೆ ಬಯಸುವುದು ಬದುಕಿನ ದಾರಿಯಾಗಿಸಿಕೊಂಡಿದ್ದರು.

ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣ ಸಾಧಿಸಿದ ಬಸವಾದಿ ಶರಣರು ತಮ್ಮ ಗುರಿಯನ್ನು ಸಾಧಿಸಲು ಬಳಸಿಕೊಂಡಿರುವ ಮಾಧ್ಯಮವೇ ವಚನಗಳು. ಜನರಾಡುವ ಭಾಷೆಯಲ್ಲಿ ರಚಿಸಿರುವ ಈ ವಚನಗಳು ಧರ್ಮವನ್ನು ಬೋಧಿಸಿದ್ದರಿಂದ ಧರ್ಮಗ್ರಂಥಗಳಾಗಿ, ತತ್ವವನ್ನು ಒಳಗೊಂಡಿರುವುದರಿಂದ ತಾತ್ವಿಕ ಗ್ರಂಥಗಳಾಗಿ, ಸಾಹಿತ್ಯಿಕ ಮೌಲ್ಯಗಳನ್ನು ಪ್ರತಿಪಾದಿಸುವುದರಿಂದ ಉತ್ತಮ ಸಾಹಿತ್ಯ ಕೃತಿಗಳಾಗಿ ಕನ್ನಡ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದವು.

ಅಷ್ಟಾವರಣಗಳು ಸಾಕ್ಷಾತ್ ಪರಮನ ಸ್ವರೂಪವೇ ಆಗಿವೆ. ಅವುಗಳನ್ನು ಅರಿತು ಆಚರಿಸುವವರು ಶಿವಸ್ವರೂಪಿಗಳಾಗುವರು ಎಂಬ ಸತ್ಯದ ಬೆಳಕನ್ನು ನೀಡುವ ಅಷ್ಟಾವರಣಗಳು ಮಾರ್ಗದರ್ಶಿಸುವ ವಚನ ಸಂಪತ್ತನ್ನು ಬಸವಾದಿ ಶರಣರು ನೀಡಿದ್ದಾರೆ. ಶಿವಯೋಗ ಸಾಧಕರಿಗೆ ವಚನಗಳ ಅಂತರ್ಯವನ್ನು ಅರಿಯಲು ಅತಿ ಮುಖ್ಯವಾದವು.

ಶರಣರ ವಚನಗಳಲ್ಲಿ ಅಷ್ಟಾವರಣಗಳ ಬಗ್ಗೆ ಒಂದು ಒಳನೋಟದಲ್ಲಿ ಅಷ್ಟಾವರಣಗಳ ತಾತ್ವಿಕ ಸ್ವರೂಪವೇನು? ಮತ್ತು ಅಷ್ಟಾವರಣಗಳು ಸಾಧಕನಿಗೆ ಶ್ರೀರಕ್ಷೆ ಹೇಗೆ? ಎನ್ನುವುದರ ಜೊತೆಗೆ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವುಗಳನ್ನು ಯಾವ ಸಾಧಕನು ಮುನ್ನವೇ ಅರಿತು ಆಚರಿಸುವನೋ ಅವನು ಶಿವಾಚಾರ ಸಂಪನ್ನನೆನಿಸಿ ಗುರುವೆನಿಸುವನು. ಬಸವಾದಿ ಪ್ರಮಥರಿತ್ತ ಅಷ್ಟಾವರಣಗಳನ್ನರಿತು ರೂಢಿಸಿಕೊಂಡಾಗ ಬಹಿರಂಗದಾಚರಣೆಗೆ ಪಂಚಾಚಾರಗಳೂ, ಅಂತರಂಗದಲ್ಲಿ ಅನುಭಾವಿಯಾಗಲು ಷಟ್ಸ್ಥಲಗಳು ಮುಪ್ಪುರಿಗೊಂಡು, ಜೀವಿತ ಕಾಲದಲ್ಲಿಯೇ ಮುಕ್ತ ಜೀವನ ಸಾಗಿಸಬಹುದೆಂಬ ಸದಾಶಯವಾಗಿದೆ.

ಅಷ್ಟ ಎಂದರೆ ಎಂಟು. ಆವರಣ ಎಂದರೆ ಹೊದಿಕೆ, ಕವಚ, ತೋಟಕ್ಕೆ ಬೇಲಿ, ಶರೀರಕ್ಕೆ ಚರ್ಮ ಇದ್ದಂತೆ ಲಿಂಗ ಸಾಧಕನಿಗೆ ಅಷ್ಟಾವರಣವೇ ಶ್ರೀರಕ್ಷೆಯಾಗಿವೆ. ಇವು ಭಕ್ತನನ್ನು ಲೌಕಿಕ ಅಪಾಯದಿಂದ ರಕ್ಷಿಸುವ ಎಂಟು ರಕ್ಷಾಕವಚಗಳಾಗಿವೆ.

ಬಹಿರಂಗದ ಅಷ್ಟಾವರಣಗಳು: ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದ ಎಂಬ ಎಂಟು ತತ್ವದ ಆವರಣವಾಗಿ ಭಾವ, ಶರೀರ, ಮನ, ಇಂದ್ರಿಯಗಳಿಗಿದ್ದ ಮಾಯಾವರಣ ದೂರವಾಗಿ ಅಷ್ಟಾವರಣದ ರಕ್ಷಣೆಯ ಕವಚ ನಿರ್ಮಾಣವಾಗುವುದು. ಇಡೀ ಬ್ರಹ್ಮಾಂಡ ಹಾಗೂ ಪಿಂಡಾಂಡ, ಅಷ್ಟಾವರಣಗಳಿಂದಲೇ ಒಡಮೂಡಿದೆ. ಪ್ರತಿಯೊಬ್ಬ ಮಾನವನು ನಿರಾಕಾರ ಸೃಷ್ಟಿಕರ್ತನ ಸಾಕಾರ ಸ್ವರೂಪವೆಂಬುದನ್ನು ತಿಳಿಯದೆ ಅದರ ಪೂರ್ಣ ಅರಿವಿಲ್ಲದಕ್ಕಾಗಿ ಅಜ್ಞಾನ ವಶದಿಂದ ಅಹಂಕಾರ ರೂಪದಲ್ಲಿ ಮಾರ್ಪಟ್ಟು, ನಮ್ಮಲ್ಲಿರುವ ಮೂಲ ಅರಿವಿನ ಮೇಲೆ ಮಾಯೆಯಾಗಿ ಮುಸುಕಿದೆ. ಈ ಅಜ್ಞಾನದ ಅಂಧಕಾರವನ್ನು ಕಳೆದುಕೊಳ್ಳಲೆಂದೇ ಗುರು ಬಸವಣ್ಣನವರು ಅಷ್ಟಾವರಣ ತತ್ವವನ್ನು ಅನುಗ್ರಹಿಸಿದ್ದಾರೆ. ಅವಗಳನ್ನು ಅರಿತು ಆಚರಿಸಿದಾಗ, ಅವು ಸಾಧಕನ ಮನವನ್ನು ಶುದ್ಧಗೊಳಿಸಿ, ಬದುಕನ್ನು ಉನ್ನತಿಯ ಮಾರ್ಗದಲ್ಲಿ ಕೊಂಡಯ್ಯುತ್ತವೆ ಎಂದು ತಿಳಿಸಿದ್ದಾರೆ.

ಅಂತರಂಗದ ಅಷ್ಟಾವರಣಗಳು:

ಈ ಅಂತರಂಗದ ಅಷ್ಟಾವರಣಗಳು ವಿಕಾಸಗೊಳ್ಳಬೇಕಾದರೆ ಬಹಿರಂಗದ ಅಷ್ಟಾವರಣಗಳಾದ ಗುರು ಲಿಂಗ ಜಂಗಮ ವಿಭೂತಿ ರುದ್ರಾಕ್ಷಿ ಮಂತ್ರ ಪಾದೋದಕ ಪ್ರಸಾದವೆಂಬ ತತ್ವಗಳನ್ನು ನಾವು ಆಶ್ರಯಿಸಿಕೊಂಡು ತನ್ನೊಳಗಿನ ಗುರು ಲಿಂಗ ಜಂಗಮವನ್ನು ಅನುಭವಕ್ಕೆ ತಂದುಕೊಳ್ಳಬೇಕು. ಬಹಿರಂಗದಲ್ಲಿ ಅಷ್ಟಾವರಣಗಳ ಧಾರಣೆ ಮಾಡುತ್ತ ಹೋದಂತೆ ಶರೀರದ ಅಂತರಂಗದಲ್ಲಿ ಶುದ್ಧ ಜ್ಞಾನದಿಂದ

ಕೂಡಿದ ಅಷ್ಟಾವರಣಗಳು ತಲೆದೋರುವುದು. ಅಂತರಂಗದ ಅಷ್ಟಾವರಣವೆಂದರೆ ಸತ್ಕ್ರಿಯೆ, ಸಮ್ಯಕ್ಜ್ಞಾನ, ಸಮ್ಯಕ್ಭಾವ, ಸುಜ್ಞಾನ, ನಿರಹಂಕಾರ, ಸುಬುದ್ಧಿ, ಸುಚಿತ್ತ ಈ ಎಂಟು ತತ್ವ ಪ್ರತಿಜೀವಿಗಳಲ್ಲಿ ಅಡಗಿರುವ ಸತ್ವಪೂರ್ಣ ಶಕ್ತಿಯನ್ನು ನಿರ್ದೇಶಿಸುತ್ತದೆ.

ಅಂತರಂಗದ ಅಷ್ಟಾವರಣ ಶರಣ ತತ್ವ ಪ್ರತಿಪಾದನೆಯಲ್ಲಿ ವಿವಿಧ ಆಯಾಮ ಹೊಂದಿದೆ. ಅರಿವೇ ಗುರು, ಆಚಾರವೇ ಲಿಂಗ, ಅನುಭಾವವೇ ಜಂಗಮ, ಚಿತ್ತಭೆಯೇ ವಿಭೂತಿ, ಚಿತ್ ಕ್ರಾಂತಿಯೇ ರುದ್ರಾಕ್ಷಿ, ಚಿದಾನಂದವೇ ಮಂತ್ರ. ಪರಮಾನಂದವೀವ ಚಿದ್ರಸವೇ ಪಾದೋದಕ, ಪರಿಪೂರ್ಣ ಪ್ರಸನ್ನತೆಯೇ ಪ್ರಸಾದ ಎಂದು ಅಷ್ಟಾವರಣ ತತ್ವದ ಸಂಪೂರ್ಣ ಪರಿಣಾಮವನ್ನು ವಿವರಿಸುತ್ತದೆ. ಸಾಧಕನು ತನ್ನನ್ನು ತನ್ನೊಳಗೆ ತಾನರಿಯಲು ಅಷ್ಟಾವರಣಗಳ ಅರಿವು ಅತ್ಯಾವಶ್ಯಕವಾದುದು. ಅರಿವು, ಆಚಾರ, ಚಿದ್ಬೆಳಗು, ಸುಜ್ಞಾನ, ಚಿನ್ನಾದ, ಅಂತಃಕರುಣೆ ಹಾಗೂ ಪ್ರಸನ್ನತೆಗಳು ನಮ್ಮೊಳಗೆ ಅವ್ಯಕ್ತ ರೂಪದಲ್ಲಿವೆ. ಈ ಅವ್ಯಕ್ತರೂಪದ ಸದ್ಗುಣಗಳು ವ್ಯಕ್ತಗೊಂಡು ಪ್ರಕಾಶಿಸದಿದ್ದಲ್ಲಿ ವ್ಯಕ್ತಿತ್ವವಿಕಸನ ಸಾಧ್ಯವಾಗದು.

ಅಷ್ಟಾವರಣದ ಮೂರ್ತಿವೆನಿಸುವ ಬ್ರಹ್ಮಾಂಡದ ಅಷ್ಟಾವರಣಗಳಾದ ಪ್ರಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ, ಸೂರ್ಯ, ಚಂದ್ರ ಎಂದು ಎಂಟು ತತ್ವಗಳು. ಇದರ ಸೂಕ್ಷ್ಮಾತಿಸೂಕ್ಷ್ಮ ತತ್ವಾಂಶಗಳು ಕೂಡಿ ಪಿಂಡಾಂಡವೆನಿಸಿವೆ. ಇವುಗಳ ಬಗ್ಗೆ ಸರಿಯಾಗಿ ಅರಿತಿರುವವನೇ ಲಿಂಗಸ್ವರೂಪಿ ಸಾಧಕನೆನಿಸುವನು.

ಭಕ್ತನಂಗದಲ್ಲಿಯೇ ಅಷ್ಟಾವರಣಗಳು ಇರುತ್ತವೆಂದು ಶರಣರಾದ 'ಗಣದಾಸಿ ವೀರಣ್ಣ'ನವರ ವಚನವೊಂದರಲ್ಲಿ ಕಾಣಬಹುದು. "ಭಕ್ತನ ಮನವೇ ಲಿಂಗ, ತನ್ಮನದ ಜ್ಞಾನವೇ ಜಂಗಮ, ಆ ಜ್ಞಾನದ ಪರಿಪೂರ್ಣವೇ ಗುರು. ಭಕ್ತನೇ ಶೇಷ, ಆ ಜ್ಞಾನದ ಸಾರವೇ ಪಾದೋದಕ. ಆ ಜ್ಞಾನದ ಪ್ರಕಾಶವೇ ವಿಭೂತಿ. ಆ ಮಾಯಾಕರಣಂಗಳ ಮೇಲೆ ಕರೆದ ಜ್ಞಾನ ಸಾರಾಮೃತ ದೃಷ್ಟಿಯೇ ರುದ್ರಾಕ್ಷಿ, ಭಕ್ತನ ನಾಮವೇ ಮಂತ್ರ, ಇಂತಪ್ಪ ಸದ್ಭಕ್ತನೇ ಪರಬ್ರಹ್ಮ, ಇಂತಪ್ಪ ಸದ್ಭಕ್ತಂಗೆ ಶರಣೆಂದವರು ಧನ್ಯರು ನೋಡಾ ಶಾಂತ ಕೂಡಲಸಂಗಮದೇವಾ.

ಗುರು:

ಚನ್ನಬಸವಣ್ಣನವರ ವಚನದಂತೆ "ಹರ ತನ್ನ ರೂಪ ತೋರಲೆಂದು ಗುರುವಾಗಿ ಬಂದ" ಎನ್ನುತ್ತಾರೆ. ಗುರುವು ದೇವರಿಗೆ ಸಮಾನ ಎಂದು ಪರಿಗಣಿಸಲಾಗುತ್ತದೆ. ಗುರು ಭಕ್ತರಿಗೆ ದೇವರು ಆತ್ಮ, ಮೋಕ್ಷ, ಸೃಷ್ಟಿ ಮುಂತಾದ ಜನಸಾಮಾನ್ಯರಿಗೆ ಗೊತ್ತಿಲ್ಲದ ಧಾರ್ಮಿಕ ಸತ್ಯಗಳನ್ನು ಅರಹುತ್ತಾರೆ. ಗುರುವಿನ ಕಾರ್ಯಗಳ ಆಧಾರದ

ಮೇಲೆ ಗುರುಗಳನ್ನು ದೀಕ್ಷಾಗುರು, ಶಿಕ್ಷಾಗುರು ಮತ್ತು ಮೋಕ್ಷಾಗುರು ಎಂದು ವಿಂಗಡಿಸುತ್ತಾರೆ. ಗುರುವಾದವರಿಗೆ ಅಂಗಲಿಂಗಗಳ ಐಕ್ಯತೆಯನ್ನು ಅನುಭವಿಸಿ ಪಡೆದ ಜ್ಞಾನ ಇರಬೇಕು. ಅಂಥವರಷ್ಟೇ ಮೋಕ್ಷ ಗುರುವಾಗಬಲ್ಲರು. ಗುರು ಎಂದರೆ ಲಿಂಗವನ್ನು ಅನುಭವಿಸಿದವರು ಅಥವಾ ಲಿಂಗವೇ ತಾವಾದವರು. ಕಾಣದ ದೇವರನ್ನು ಲಿಂಗವೇ ಆದ ಗುರವಿನಲ್ಲಿಯೆ ದೇವರನ್ನು ಕಾಣಬಹುದು.

ಅಷ್ಟಾವರಣದಲ್ಲಿ ಮೊದಲಿಗೆ ಗುರುವಿನ ಲಕ್ಷಣಗಳು ಹೇಗಿರಬೇಕು. ಲಿಂಗಾಯತ ಧರ್ಮದಲ್ಲಿ ಗುರುವಿಗೆ ಬಹಳ ಮಹತ್ವದ ಸ್ಥಾನವಿದೆ. ಕ್ರಿಯಾತತ್ವವುಳ್ಳ ಗುರುವು ಇತರರಿಗೆ ಇಷ್ಟಲಿಂಗ ದೀಕ್ಷೆ ನೀಡಿ ಸನ್ಮಾರ್ಗದಲ್ಲಿ ನಡೆಯುಬೇಕೆಂದು ಬೋಧಿಸಬೇಕಾದುದರಿಂದ ಗುರು ಘನತೆವೆತ್ತ ಆದರ್ಶ ವ್ಯಕ್ತಿತ್ವ ಇರಬೇಕು. ಗುರುವಿನ ತ್ರಿವಿಧ ಗುಣಗಳು ಹೇಗಿರಬೇಕೆಂಬುದನ್ನು ಅರಿವಿನ ಮಾರಿತಂದೆಗಳ ವಚನದಲ್ಲಿ ತಿಳಿಸಿದ್ದಾರೆ. “ದೀಕ್ಷಾಗುರುವಾದಲ್ಲಿ ತ್ರಿವಿಧದ ಆಸೆಯಿಲ್ಲದಿರಬೇಕು. ಶಿಕ್ಷಾಗುರುವಾದಲ್ಲಿ ಅರಿಗಳಿಗಂಜದೆ ಪ್ರಾಣತ್ಯಾಗ ನಿಶ್ಚಯನಾಗಿರಬೇಕು. ಮೋಕ್ಷಗುರುವಾದಲ್ಲಿ ಸರ್ವದೋಷ ಸರ್ವೇಂದ್ರಿಯ ನಾಶವಾಗಿರಬೇಕು.” ಶಿಷ್ಯರಿಗೆ ಆದರ್ಶವಾಗುವ ಗುರು ಅವರಿಗೆ ಪರಿಣಾಮಕಾರಿಯಾಗಿ ಮಾರ್ಗದರ್ಶನ ನೀಡಬೇಕು. ಏಕೆಂದರೆ ಗುರುವಾದವನು ಜಾತಿಭೇದ, ವರ್ಗಭೇದ ಮಾಡಬಾರದು. ‘ಲಿಂಗದೀಕ್ಷೆ ಪಡೆದವರೆಲ್ಲರೂ ಸಮಾನರು’ ಎಂದು ಬೋಧಿಸಬೇಕು. ಬಸವ ಧರ್ಮದಲ್ಲಿ ಜ್ಯೋತಿ ಮುಟ್ಟಿದ ಬತ್ತಿ ಮತ್ತೊಂದು ಜ್ಯೋತಿಯಾಗುವಂತೆ ಸದ್ಗುರುವಿನಿಂದ ಕ್ರಿಯಾಜ್ಞಾನವನ್ನು ಪಡೆದುಕೊಂಡ ಶಿಷ್ಯನು ಗುರುವಾಗುವನು.

ಲಿಂಗ:

ಲಿಂಗವಂತರ ಶಿವ ಪೌರಾಣಿಕ ಶಿವ ಅಲ್ಲ. ಪೌರಾಣಿಕ ಶಿವನ ಚಿತ್ರ ಬರೆಯಬಹುದು. ಆದರೆ ಲಿಂಗವಂತರ ನಿರಾಕಾರ ಶಿವನನ್ನು ಚಿತ್ರಿಸಲಾಗದು. ಆಧ್ಯಾತ್ಮಿಕ ಸಾಧನೆಯ ಮೊದಲಲ್ಲಿ ಭಕ್ತನು ಶಿವ ತನ್ನಿಂದ ಭಿನ್ನವೆಂದು ತಿಳಿಯುತ್ತಾನೆ. ಅವನು ತನ್ನ ಆತ್ಮದ ಕುರುಹಾದ ಇಷ್ಟಲಿಂಗವನ್ನು ಪೂಜಿಸುತ್ತಾ, ಸಾಧನೆ ವಿಕಾಸಗೊಳ್ಳುತ್ತ ಹೋದಂತೆ ಶಿವನು ತನ್ನೊಳಗೆ ಇರುವನೆಂದು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ, ಸರ್ವಶಕ್ತನಾದ ಸೃಷ್ಟಿಕರ್ತನ ಇರವು ತನ್ನ ಅಂಗದ ಮೇಲೆ ಧರಿಸಿ, ಕರಸ್ಥಲದಲ್ಲಿ ಪೂಜಿಸುವ ಇಷ್ಟಲಿಂಗವು ವಿಶ್ವಾತ್ಮನಾದ ನಿರಾಕಾರ ಪರಶಿವನ ಕುರುಹಾಗಿದೆ.

ಲಿಂಗ ಎಂಬ ಪದ ವಚನಗಳಲ್ಲಿ ಮೂರು ಅರ್ಥಗಳಲ್ಲಿ ಪ್ರಯೋಗವಾಗಿದೆ. ಒಂದರ್ಥದಲ್ಲಿ ಸ್ಥಾವರಲಿಂಗಕ್ಕೂ, ಮತ್ತೊಂದರ್ಥದಲ್ಲಿ ಇಷ್ಟಲಿಂಗಕ್ಕೂ ಮೂರನೆಯ

ಅರ್ಥದಲ್ಲಿ ಪರಶಿವನಿಗೂ ಅನ್ವಯಿಸುತ್ತದೆ. ಆದರೆ ಅಷ್ಟಾವರಣಕ್ಕೆ ಸಂಬಂಧಿಸಿದಂತೆ ಲಿಂಗ ಎಂದರೆ ಇಷ್ಟಲಿಂಗ. ಸಣ್ಣ ಸ್ಥಾವರಲಿಂಗವನ್ನು ಗುರು ಕೊಟ್ಟರೆ ಅಥವಾ ಮೈಮೇಲೆ ಧರಿಸಿದರೆ ಅದು ಇಷ್ಟಲಿಂಗವಾಗುವುದಿಲ್ಲ. ತನ್ನ ಲಿಂಗಕ್ಕೆ ಮಾಡುವ ಪೂಜೆಯನ್ನು ಸ್ವತಃ ತಾನೇ ಮಾಡಿಕೊಳ್ಳಬೇಕು. ಬೇರೆ ಮತ್ತೊಬ್ಬರ ಕೈಯಿಂದ ಮಾಡಿಸಲಾಗದು. ಈ ಇಷ್ಟಲಿಂಗವೆಂಬ ಕುರುಹನ್ನು ಹಿಡಿದು ಅರಿವನ್ನು ಪಡೆದುಕೊಳ್ಳಬೇಕು. ಜ್ಞಾನತತ್ವದಿಂದ ಕೂಡಿದ ಲಿಂಗವು ಸರ್ವವ್ಯಾಪಕವಾಗಿದೆ.

ಜಂಗಮ:

ಲಿಂಗವಂತ ಧರ್ಮದಲ್ಲಿ ಜಂಗಮ ಪದದ ಪರಿಕಲ್ಪನೆ ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. 'ಜಂಗಮ' ಪದವನ್ನು ಅನೇಕ ಅರ್ಥಗಳಲ್ಲಿ ಬಳಸಲಾಗಿದೆ. ಶರಣರು ಜಂಗಮ ಪದವನ್ನು ಅನೇಕ ಅರ್ಥಗಳಲ್ಲಿ ಬಳಸಿದ್ದಾರೆ.

ಅಷ್ಟಾವರಣಗಳಲ್ಲಿ ಬರುವ ಭಾವತತ್ವದಲ್ಲಿನ ಜಂಗಮ ಎಂದರೆ ಹುಟ್ಟಿನಿಂದ ಬರುವಂಥದ್ದಲ್ಲ. ಇಷ್ಟಲಿಂಗ ಧಾರಿಗಳಾದ ಸಮಸ್ತ ಸಮಾಜವೇ ಜಂಗಮವಾಗಿ ತೋರುತ್ತದೆ. ಲಿಂಗಾಯತ ತತ್ವವನ್ನು ಪ್ರಚಾರಮಾಡುವ ಮತ್ತು ಅನುಷ್ಠಾನದಲ್ಲಿ ತರಲು ಪ್ರಯತ್ನಿಸುವ ಹರಿಕಾರ ಜಂಗಮ. ಜಂಗಮನು ಒಬ್ಬ ಆದರ್ಶ ವ್ಯಕ್ತಿಯಾಗಿರಬೇಕು. "ಜಂಗಮಲಿಂಗ ಎಂತಿಹನು ಎಂದರೆ, ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಶಮೆ, ದಮೆ, ಸರ್ವಶಾಂತಿ ಎಡೆಗೊಂಡು, ತನ್ನ ನಂಬಿದ ಸದ್ಭಕ್ತರ ಭಾವಕ್ಕೆ ಜಂಗಮವಾಗಿ,.." ಇರಬೇಕು, ಎನ್ನವ ಮೂಲಕ ಹಡಪದ ಅಪ್ಪಣ್ಣನವರು ಜಂಗಮದ ಅರ್ಹತೆಯನ್ನು ಹೇಳಿದ್ದಾರೆ. ಅದರಂತೆ ನಾವು ಇನ್ನೂ ಅನೇಕ ವಚನಗಳಲ್ಲಿ ಕಾಣಬಹುದು. ಹೀಗೆ ಜಂಗಮ ಒಂದು ಕಡೆ ಸಮಾಜವನ್ನು ಇನ್ನೊಂದು ಕಡೆ ಕ್ರಿಯಾಶೀಲ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತಾನೆ. ಗುರು, ಲಿಂಗ, ಜಂಗಮ ಈ ಮೂರು ಒಂದೇ ವಸ್ತುವಿನಿಂದ ಬಂದವುಗಳಾಗಿವೆ. ಈ ಮೂರರಲ್ಲಿ ಭೇದವಿಲ್ಲ. ಜಂಗಮದಲ್ಲಿ ಗುರುಲಿಂಗಗಳೆರಡು ಸಮರಸಗೊಂಡಿರುತ್ತದೆ. ಭಕ್ತನಂಗದಲ್ಲಿಯೇ ಗುರು-ಲಿಂಗ-ಜಂಗಮ ತತ್ವವು ಅಡಗಿದೆ.

ಪಾದೋದಕ:

ಪಾದೋದಕವೆಂಬುದು ಶರಣನ ಸರ್ವಾಂಗವನೊಳಗೊಂಡು ಹೊಳೆವ ಚಿದ್ರಸವೇ ಪಾದೋದಕ. ಈ ಪಾದೋದಕವು ಜಲತತ್ವದ ಸಂಕೇತವಾಗಿದೆ. ನಮ್ಮ ಅಂತರಂಗದಲ್ಲಿನ ಕರುಣೆ, ವಿನಯ, ಸಮತೆಯ ಸಂಕೇತವಾಗಿಯೇ ಇಷ್ಟಲಿಂಗದ ಮೇಲೆ ನೀರನ್ನು ಎರೆಯಲಾಗುತ್ತದೆ. ಕರುಣಾ ಜಲವೇ ಗುರು ಪಾದೋದಕವಾಗಿ, ವಿನಯ ಜಲವೇ

ಲಿಂಗ ಪಾದೋದಕವಾಗಿ, ಸಮತಾ ಜಲವೇ ಜಂಗಮ ಪಾದೋದಕವಾಗಿ ಭಕ್ತನ ಅಂತರಂಗದಲ್ಲಿ ನೆಲೆಗೊಳ್ಳುತ್ತದೆ. ಅದರ ಫಲವಾಗಿ ಸಕಲ ಜೀವರಾಶಿಗಳಿಗೆ ಕರುಣೆ, ಸಕಲರೊಡನೆ ಮೃದುವಚನದಿಂದ ಸದುವಿನಯದ ಆಚರಣೆ, ಸರ್ವರಲ್ಲಿ ಸಮಾನತೆಯ ಭಾವ ನೆಲೆಗೊಂಡು ಭಕ್ತನು ಶುದ್ಧನಾಗುತ್ತಾನೆ.

ಪ್ರಸಾದ:

ಲಿಂಗವಂತರ ಪ್ರಸಾದದ ಪರಿಕಲ್ಪನೆಯು ಸಾಂಪ್ರದಾಯಿಕ ಹಿಂದೂ ವೈದಿಕರ ಪರಿಕಲ್ಪನೆಯಿಂದ ಭಿನ್ನವಾದುದು. ಪ್ರಸಾದದ ಪೂರ್ವಾಶ್ರವ ಕಳೆಯಲೆಂದು ಬಸವಣ್ಣನವರು ಮರ್ತ್ಯಕ್ಕೆ ಬಂದರು. ನಿಷ್ಠಾವಂತ ಲಿಂಗಾಯತನಿಗೆ ಪ್ರಸಾದವು ಗುರು, ಲಿಂಗ, ಜಂಗಮದಷ್ಟೇ ಪ್ರಾಮುಖ್ಯವಾದುದು. ಲಿಂಗವಂತ ಧರ್ಮದಲ್ಲಿ ಪ್ರಸಾದ ಪರಿಕಲ್ಪನೆಯು ಪರಮಾತ್ಮ, ಭಕ್ತಿ, ಜಂಗಮ, ಐಕ್ಯತೆ ಮುಂತಾದ ಪರಿಕಲ್ಪನೆಗಳೊಂದಿಗೆ ನಿಕಟವಾಗಿ ಸಂಬಂಧಿಸಿದೆ ಅದನ್ನು ಅರ್ಥಮಾಡಿಕೊಳ್ಳದೆ ಉಳಿದ ಪರಿಕಲ್ಪನೆಗಳನ್ನು ಸುಲುಭವಾಗಿ ಅರಿಯಲಾಗದು.

ಪ್ರಸಾದವೆಂದರೆ ಪ್ರಸನ್ನತೆಯಿಂದ ಪಡೆದುದು. ಪೃಥ್ವಿತತ್ವದಲ್ಲಿ ಬರುವ ಪ್ರಸಾದವು ಶರಣನು ತಾನು ಸ್ವೀಕರಿಸುವ ಪದಾರ್ಥವನ್ನು ವಿಶ್ವಚೇತನದ ಕುರುಹಾದ ಇಷ್ಟಲಿಂಗಕ್ಕೆ ಅರ್ಪಿಸಿ, ಸ್ವೀಕರಿಸುವ ಪ್ರಸನ್ನತ್ವ ಭಾವವಾಗುವುದೇ ಪ್ರಸಾದ. ಬಸವಾದಿ ಶರಣರು ತಾವು ತೆಗೆದುಕೊಳ್ಳುವ ಸಾತ್ವಿಕ ಆಹಾರವಷ್ಟೇ ಪ್ರಸಾದವೆನ್ನದೆ ವಿಶ್ವದ ಎಲ್ಲ ಪದಾರ್ಥವನ್ನು ಪ್ರಸಾದಮಯವಾಗಿ ಕಂಡರು. ಗುರು ಬಸವಣ್ಣನವರು ಈ ದೇಹವನ್ನೇ ಪ್ರಸಾದಕಾಯವಾಗಿ ಮಾಡಿಕೊಂಡು 'ಪ್ರಸಾದ ಕಾಯ ಕೆಡಿಸಲಾಗದು' ಎಂದರು. ಪ್ರಸಾದದ ಪರಿಕಲ್ಪನೆಯಲ್ಲಿ ಮುಖ್ಯವಾದುದು (ಅರ್ಪಣೆ) ಅರ್ಪಿಸುವುದು.

ವಿಭೂತಿ:

ಲಿಂಗಾಯತರು ಮೂರು ಗೆರೆಯ ವಿಭೂತಿಯನ್ನು ಕೆಲ ವಿಶಿಷ್ಟ ಭಾಗಗಳಿಗೆ ಧರಿಸಬೇಕೆಂಬ ಕಟ್ಟಳೆಯಿದೆ. ವಿಭೂತಿಯು ಪವಿತ್ರವಾದುದರಿಂದ ಅದನ್ನು ಧರಿಸಿದವನು ಪವಿತ್ರನಾಗುತ್ತಾನೆ ಎಂಬ ನಂಬಿಕೆಯಿದೆ. ಆದರ ಮೂರು ಗೆರೆಯ ವಿಭೂತಿಧಾರಣೆ ಒಂದು ಸಾಂಕೇತಿಕ ಕ್ರಿಯೆಯಾಗಿದೆ. ಮನುಷ್ಯನ ಶರೀರದಲ್ಲಿ ಆತ್ಮವೂ ತ್ರಿಪುರದಲ್ಲಿ ಬಂಧಿಸಲ್ಪಟ್ಟಿದೆ. ಯಾವುವೆಂದರೆ, ಸ್ಥೂಲ, ಸೂಕ್ಮ ಮತ್ತು ಕಾರಣ ಮಾನವರು ಈ ಮೂರು ಶರೀರತ್ರಯಗಳ ದೋಷಗಳನ್ನು ಸುಡಬೇಕು. ಇದರ ಹಿಂದೆ ದಾರ್ಶನಿಕ ಸಿದ್ಧಾಂತವಿದೆ ಎಂಬುದು ಶರಣರ ವಚನಗಳಲ್ಲಿ ಸೂಕ್ಷ್ಮವಾಗಿ ಅಡಗಿರುವುದನ್ನು ಕಾಣುತ್ತೇವೆ.

ಅಷ್ಟಾವರಣದ ಶರಣತತ್ತ್ವದಲ್ಲಿ ಬರುವ ಚಿತ್ತಭೆಯೇ ವಿಭೂತತತ್ತ್ವವಾದ ವಿಭೂತಿಯನ್ನು ಧರಿಸಿದ ಮೇಲೆ ಮನುಷ್ಯ ಇರುವಂತೆ ಇರಲಾರದೆ ವಿಶೇಷವಾಗಿ ಆ ವಿಭೂತಿಯು ಯಾವ ರೀತಿ ಸಂಸ್ಕಾರಕ್ಕೆ ಒಳಪಟ್ಟು ಇರುವಂತೆ ಇರಲಾರದೆ ಪರಿವರ್ತನೆ ಹೊಂದುತ್ತದೆಯೋ ಹಾಗೆಯೇ ಮನುಷ್ಯನ ದೇಹದಲ್ಲಿರುವ ಎಲ್ಲ ಅಂಗಾಂಗಗಳು ಭಸ್ಮ ಧರಿಸುವ ಮುಖಾಂತರ ಅಂಗ ಲಿಂಗವಾಗಿ ಪರಿವರ್ತನೆ ಹೊಂದುವ ವ್ಯವ್ಯಸ್ಥೆಯೇ ವಿಭೂತಿ ತತ್ತ್ವ. ಶ್ರೀ ವಿಭೂತಿಯನ್ನು ಗುರು, ಲಿಂಗ, ಜಂಗಮದ ಸಂಕೇತವಾಗಿ ಧರಿಸಲು ಭಾವದ ಭ್ರಮೆ, ಮನದ ಮರವೆ, ತನುವಿನ ದುರಾಚಾರವೆಲ್ಲವು ಸದ್ಭಾವ, ಸುಜ್ಞಾನ, ಸದಾಚಾರವೆಂಬ ಅಗ್ನಿಯಲ್ಲಿ ದಹಿಸಿ ಹಣೆಯಲ್ಲಿ ಮೂರು ಎಳೆಯಾಗಿ ಧರಿಸಬೇಕು. 'ಕೂಡಲಸಂಗನ ಶರಣರ ನೊಸಲಿಗೆ ಶ್ರೀ ವಿಭೂತಿಯೇ ಶ್ರಂಗಾರ' ಎಂದು ಗುರು ಬಸವಣ್ಣನವರು ಹೇಳಿದ್ದಾರೆ.

ರುದ್ರಾಕ್ಷಿ:

ರುದ್ರಾಕ್ಷಿಯು ಅಗ್ನಿತತ್ತ್ವದ ಪ್ರತೀಕವಾಗಿದೆ. ಬಸವ ಧರ್ಮದಲ್ಲಿ ರುದ್ರಾಕ್ಷಿಯನ್ನು ಸದಾಕಾಲ ಅಂತರಂಗದ ಅರಿವು, ಆಚಾರ, ಸದ್ಭಾವವು ಜಾಗೃತವಾಗಿ ಸದಾ ಎಚ್ಚರಿಕೆಯಿಂದಿರಲು ಸಂಕೇತವಾಗಿ ರುದ್ರಾಕ್ಷಿ ಧರಿಸಬೇಕು ಎನ್ನಲಾಗಿದೆ. ರುದ್ರಾಕ್ಷಿ ಬೀಜದಲ್ಲಿ ಅಗ್ನಿತತ್ತ್ವದ ರಜೋ ತಮೋ ಗುಣಗಳನ್ನು ಮಾತ್ರ ಬೆಳೆಸುವ ಶಕ್ತಿಯಿದೆ. ರುದ್ರಾಕ್ಷಿಯು ಧರಸಿದರೆ ಏಕಾಗ್ರತೆಗೆ ಅನುಕೂಲವಾಗಿ ಲಿಂಗ ಸಾಧಕನಿಗೆ ತುಂಬಾ ಉಪಯೋಗ ಎನ್ನಲಾಗಿದೆ. ಗುರು ಬಸವಣ್ಣನವರು "ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಪಾವನವು.. .. .. .. ಎನ್ನ ಮುಕ್ತಿಪಥಕ್ಕೆ ಶ್ರೀ ಮಹಾ ರುದ್ರಾಕ್ಷಿಯೆ ಸಾಧನವಯ್ಯಾ." ಎಂದು ವಚನದಲ್ಲಿ ತಿಳಿಸಿದ್ದಾರೆ.

ಮಂತ್ರ:

ಆಕಾಶತತ್ತ್ವವಾದ ಮಂತ್ರ ಮನಸಿನ ಚಂಚಲತೆಯನ್ನು ಹೋಗಲಾಡಿಸಿ ಒಂದು ನಿಯಂತ್ರಣಕ್ಕೆ ತರುತ್ತದೆ. ಮಂತ್ರವು ಪರವಸ್ತುವಿನ ಕುರುಹು. ಗುರುವು ಲಿಂಗದೀಕ್ಷಾ ಸಮಯದಲ್ಲಿ ಭಕ್ತನ ಕಿವಿಯಲ್ಲಿ ಮಂತ್ರವನ್ನು ಉಸುರುತ್ತಾರೆ. 'ನಾಮರೂಪುಕ್ರಿಯೆಗಳೇನೂ ಇಲ್ಲದ ನಿತ್ಯ ನಿರಂಜನ ಪರವಸ್ತುವೇ ತಾನೆ ನೋಡಾ' ಎಂದ ಶರಣರು ಅರಿಯದೆ ಅಜ್ಞಾನದಿಂದ ಮಾಡಿದ ಪಂಚ ಮಹಾಪಾತಕಗಳೆಲ್ಲವು ಪರಶಿವನ ಸ್ವಯಂಪ್ರಕಾಶದ ಪ್ರಭೆಯನ್ನು ಬೀರುವ 'ಓಂ ನಮಃ ಶಿವಾಯ' ಎಂಬ ನಾಮಕ್ಕಂಜಿ ನಷ್ಟವಾಗುವುದೆಂದರು. ಶಿವಯೋಗಿ ಸಿದ್ಧರಾಮೇಶ್ವರರು 'ನಮಃ ಶಿವಾಯ' ಎಂಬ ಪಂಚಾಕ್ಷರಿಯ ಮಂತ್ರವು ರಾಜ ಮಂತ್ರವಾದರೆ, ಪಂಚಾಕ್ಷರಿಯ ಗುಣದ ಬಸವಾಕ್ಷರತ್ರಯವು ಆ ಪ್ರಣವ

ಪಂಚಾಕ್ಷರಕ್ಕೆ ತಾಯಿಬೇರಾಗಿದೆ. ಎಂದು ಗುರು ಬಸವ ಮಂತ್ರದ ಶ್ರೇಷ್ಠತೆಯನ್ನು ಹೇಳಿದ್ದಾರೆ. ಬಸವಗುರು ಮಂತ್ರದಲ್ಲಿ ಶಿವಮಂತ್ರವು ಅಡಗಿದೆ ಎಂದಿದ್ದಾರೆ.

ಅಷ್ಟಾವರಣದ ಅರಿವಿನಿಂದಾದ ಪರಿವರ್ತನೆಗಳು ಒಂದನ್ನು ಬಿಟ್ಟು ಒಂದು ವ್ಯಕ್ತವಾಗಲಾರವು. ಎಲ್ಲವನ್ನೂ ಧರಿಸಿದ ಸಾಧಕನು ಅಷ್ಟಾವರಣಗಳನ್ನು ಅಳವಡಿಸಿಕೊಂಡು ಆಚರಿಸಿದಾಗ ಲಿಂಗಾಂಗ ಸಾಮರಸ್ಯ ಹೊಂದಿ, ಶಿವಸ್ವರೂಪಿಯಾಗುತ್ತಾನೆ. ಎಲ್ಲರ ಹೃದಯದಲ್ಲಿ ನಿರಂತರವಾಗಿ ನೆಲೆಸಿರುವ ಭಕ್ತಿ ಭಂಡಾರಿ ಶ್ರೀ ಮಹಾತ್ಮ ಬಸವೇಶ್ವರರು, ಬಸವಾದಿ ಶರಣರ ವಚನಗಳು ನವನವೀನ ಮಾದರಿಯಾಗಿವೆ. ಅಷ್ಟಾವರಣವನ್ನು ಸಾರುವ ಕಳಶಪ್ರಾಯವಾದ ವಚನವೆಂದು "ಬಸವಣ್ಣನೆ ಗುರುವೆನಗೆ, ಬಸವಣ್ಣನೆ ಲಿಂಗವೆನಗೆ, ಬಸವಣ್ಣನೆ ಜಂಗಮವೆನಗೆ, ... ಬಸವಣ್ಣನ ಚಿದ್ಗರ್ಭದೊಳಗೆ ಕುಳ್ಳಿರ್ದು, ನಾನು ಬಸವ ಬಸವ ಬಸವಾ ಎನುತಿರ್ದೆನಯ್ಯಾ ಅಖಂಡೇಶ್ವರಾ." ಎಂಬ ಷಣ್ಮುಖ ಶಿವಯೋಗಿಗಳು ತಮ್ಮ ವಚನದಲ್ಲಿ ಉಲ್ಲೇಖಿಸಿದ್ದಾರೆ. ಮಾನವರನ್ನು ಐಹಿಕ ಆಸೆಗಳಿಂದ ಮುಕ್ತಗೊಳಿಸುವ 'ಅಷ್ಟಾವರಣಗಳು', ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ 'ಷಟಸ್ಥಲಗಳು', ಅರಿವನ್ನು ಆಚರಣೆಗೆ ತರುವ 'ಪಂಚಾಚಾರಣೆಗಳು', ಸಾಧಕರಿಗೆ ಉಪಯೋಗವಾಗುವ ಅಷ್ಟಾವರಣ (ತನುಶುದ್ಧಿಗಾಗಿ) ಪಂಚಾಚಾರ (ಮನಶುದ್ಧಿಗಾಗಿ) ಷಟ್‌ಸ್ಥಲ (ಆತ್ಮಶುದ್ಧಿಗಾಗಿ) ಎಂಬ ಮೂರು ವಿಧವಾದ ಕ್ರಮಗಳನ್ನು ಅನುಸರಿಸಬೇಕು.

****

ಶರಣರ ದೃಷ್ಟಿಯಲ್ಲಿ ಮಹಿಳೆಯರು

ಜಗತ್ತಿನಲ್ಲಿ ಐತಿಹಾಸಿಕ ಸಾಧನೆಯಾಗಿದ್ದು ಶರಣರ ಚಳವಳಿಯಲ್ಲಿ. ಮಹಿಳೆಯರು ಅಕ್ಷರ ಕಲಿತದ್ದು, ಶೇಕಡಾ 90 ರಷ್ಟು ಹೆಣ್ಣುಮಕ್ಕಳು ಅಕ್ಷರ ಜ್ಞಾನವಿಲ್ಲದ ಸಾಮಾಜಿಕ ಕೆಳಸ್ಥರದಿಂದ ಬಂದವರಿದ್ದರು. ಬಸವಣ್ಣನವರ ಸಮಾನತೆ, ಸ್ವಾತಂತ್ರ್ಯದ ವಚನ ಚಳವಳಿಯು ಮಾನವನ ಸರ್ವಾಂಗೀಣ ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಯಿತು.

ಹನ್ನೆರಡನೆಯ ಶತಮಾನದ ಪೂರ್ವದಲ್ಲಿ ಹೆಣ್ಣುಮಗಳ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಆಕೆ ಈ ನಯವಂಚಕ ಸಮಾಜದಲ್ಲಿ ದನಿಯಿಲ್ಲದವಳಾಗಿ ಅಬಲೆಯೆನಿಸಿ ಕೀಳರಿಮೆಯನ್ನು ಮೈಗೂಡಿಸಿಕೊಂಡು ಉಸಿರುಗಟ್ಟುವ ವಾತಾವರಣದಲ್ಲಿ ಬದುಕುತ್ತಾ ಇದ್ದಳು. ಅಂಥ ಸಂದರ್ಭದಲ್ಲಿ ಹುಟ್ಟಿ ಬಂದವರು ಬಸವಾದಿ ಶರಣರು. ಸ್ತ್ರೀಯರನ್ನು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಸ್ತ್ರೀ–ಪುರುಷ ಭೇದವಿಲ್ಲದಂಥ ಕುಟುಂಬ ಪದ್ಧತಿ ಅಸ್ತಿತ್ವಕ್ಕೆ ತರಲು ಪ್ರಯತ್ನಿಸಿದವರು. ಆ ಕಾಲಘಟ್ಟದಲ್ಲಿಯೂ ಪುರುಷಪ್ರಧಾನ ವ್ಯವಸ್ಥೆ ಇದ್ದರೂ ಕೂಡ ವ್ಯವಸ್ಥೆಯ ಅಂಶಗಳು ಸುಳಿಯದ ಹಾಗೆ ನೋಡಿಕೊಳ್ಳುವಂಥ ಸಾಮರ್ಥ್ಯ ಹೊಂದಿದವರಾಗಿದ್ದರು ಶರಣರು.

ಬಸವಣ್ಣನವರು ನಡೆಸಿದ ಚಳವಳಿಯಿಂದಾಗಿ ಮಹಿಳೆಯರಿಗೆ ಮಾತನಾಡುವ, ಪ್ರಶ್ನೆ ಮಾಡುವ, ವಚನಗಳನ್ನು ರಚಿಸುವ ಶಕ್ತಿಯಿಂದ ಅವರು ಅನ್ಯಾಯದ ವಿರುದ್ಧ ಧ್ವನಿ ಎತ್ತುವಂತೆ ಮಾಡಿತು. ಅವರು ಎಂಥ ಅಮೂಲ್ಯವಾದ ವಚನಗಳು ರಚಿಸಿದರೆಂದರೆ ಒಬ್ಬರು ಜಾತಿಯ ವಿರುದ್ಧ ಪ್ರಶ್ನಿಸಿದರೆ, ಮತ್ತೊಬ್ಬರು ಪತಿಯನ್ನು ಪ್ರಶ್ನಿಸುತ್ತಾರೆ, ಇನ್ನೊಬ್ಬರು ದೇವರನ್ನೇ ಪ್ರಶ್ನೆ ಮಾಡುತ್ತಾರೆ. ಅದಕ್ಕಾಗಿಯೇ ಇದು ವಿಶ್ವದ ಮೊದಲ ಮಹಿಳಾ ಸಾಹಿತ್ಯವಾಗಿ ಹೊರಹೊಮ್ಮಿದ ಸಾಹಿತ್ಯವಾಯಿತು.

ಕಲ್ಯಾಣದಲ್ಲಿ ಬಸವಣ್ಣನವರು ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಸ್ಥಾನಮಾನಗಳನ್ನು ಕಲ್ಪಿಸಿ ಕೊಟ್ಟಿದ್ದು ಹೆಣ್ಣುಮಕ್ಕಳಿಗೆ ಅತ್ಯಂತ ಮಹತ್ವಪೂರ್ಣವಾದದ್ದು.

ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಅಕ್ಕಮಾಹಾದೇವಿ, ಬೊಂತಾದೇವಿ, ಮುಕ್ತಾಯಕ್ಕ, ಅಮುಗಿರಾಯಮ್ಮ, ಸತ್ಯಕ್ಕ, ಅಕ್ಕಮ್ಮ, ಮೋಳಿಗೆಮಹಾದೇವಿ, ಧೂಪದ ಗೊಗ್ಗವ್ವೆ, ಸೋಮವ್ವೆ, ಕಾಳವ್ವೆ , ವರದಾನಿ ಗುಡ್ಡವ್ವೆ ಮೊದಲಾದ ಶರಣರಲ್ಲಿ ಮಹಿಳೆಯರು ಅನುಭವ ಮಂಟಪದ ಚರ್ಚೆಯಲ್ಲಿ ಭಾಗವಹಿಸಿ ಸಮಾಜೋದ್ಧಾರಕ ಮನ್ವಂತರವನ್ನೇ ಸೃಷ್ಟಿಸಿದರು. ಜಗತ್ತಿನ ಇತರ ಯಾವುದೇ ಧರ್ಮದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಸ್ತ್ರೀಯರು ಏಕಕಾಲಕ್ಕೆ ಧರ್ಮದ ಕಾರ್ಯಕಲಾಪಗಳಲ್ಲಿ ಭಾಗವಹಿಸಿಲ್ಲವೆಂದೇ ಹೇಳಬಹುದು. ಶರಣೆಯರಲ್ಲಿ ಹಲವರು ಅಧ್ಯಾತ್ಮ ಜೀವಿಗಳಾಗಿದ್ದರೆ, ಕೆಲವರು ಕ್ರೀಯಾಶೀಲರಾಗಿದ್ದರು.

ಶರಣರ ದೃಷ್ಟಿಯಲ್ಲಿ ಶರಣಸತಿ–ಲಿಂಗಪತಿ ಯಾರ ಎದೆಯ ಮೇಲೆ ಇಷ್ಟಲಿಂಗ ಇದೆಯೊ ಎಲ್ಲರೂ ಸತಿಯರು. ಆ ಪರಾತ್ಪರ ಪರಮಾತ್ಮನೊಬ್ಬನೆ ಪತಿ. ಎಂದು ಸಾರುವುದರ ಮೂಲಕ ಜಗದೊಡೆಯ ಒಬ್ಬನೇ ಎಲ್ಲರಿಗೂ ಒಡೆಯ ಎಂದು ಹೇಳುತ್ತಾ, ಹೆಣ್ಣು ಭೋಗದ ವಸ್ತುವಲ್ಲ ಎಂದು ತಿಳಿಸುವ ಪರಿ ಇದು. ಕೂಡಲಸಂಗಮದೇವರಿಗೆ ನಾನು ಸತಿ ನನ್ನ ಸತಿಯು ಸತಿ ಎಂದು ಹೇಳುವುದರಲ್ಲಿ ಬಸವಣ್ಣನವರು ಸಾಂಕೇತಿಕವಾಗಿ ಅತಿ ಸೂಕ್ಷ್ಮವಾಗಿ ಲಿಂಗಭೇದವಿಲ್ಲ ಎಂಬ ಸಂದೇಶ ನೀಡಿದ್ದಾರೆ. **"ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ, ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ. ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನ್ನಾಗಿ."** ಹೆಣ್ಣನ್ನು ಒಂದು ವಸ್ತುವಾಗಿ ಭಾವಿಸುವ ಪರಿಯನ್ನು ವಿರೋಧಿಸುತ್ತಾರೆ. ಎಲ್ಲರೂ ಸಮಾನರು ಸಾಧನೆಯ ಹಂತಕ್ಕೇರಿದಾಗ ತಾವು ಸತಿ–ಪತಿಗಳೆಂಬ ಭಾವ ಸಂಪೂರ್ಣವಾಗಿ ಅಳಿದು 'ಶರಣ ಸತಿ ಲಿಂಗಪತಿ' ಭಾವ ಮೂಡಿ ಇಲ್ಲಿ ಇಬ್ಬರೂ ಲಿಂಗಪತಿಯ ಸತಿಯರಾಗುತ್ತಾರೆ.

ಬಸವಣ್ಣನವರು ಅನುಭವ ಮಂಟಪದಲ್ಲಿ ವರ್ಗ, ವರ್ಣ,ಜಾತಿ ಮತ್ತು ಲಿಂಗಭೇದಗಳಿಲ್ಲದೆ ಸಮಾನತೆಯೆಂಬ ಅದ್ಭುತ ಶಕ್ತಿ ನೀಡಿದರು. ಅದರಿಂದಾಗಿ ಹೆಣ್ಣು ಮಕ್ಕಳು ಮುಕ್ತವಾಗಿ ತಮ್ಮ ಅನುಭವದಿಂದ ಬಂದ ನುಡಿಗಳನ್ನು ವಚನಗಳನ್ನಾಗಿ ರಚಿಸಿದರು. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ಹೇಳ್ತಾರೆ "ಅಜಕೋಟಿ ಕಲ್ಪ ವರುಷದವರೆಲ್ಲರೂ ಹಿರಿಯರೆ?" .. ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರು ಹಿರಿಯರೆ? ಅನುವನರಿದು, ಘನವ ಬರೆಸಿ ಹಿರಿದು ಕಿರಿದೆಂಬ ಭೇದವ ಮರೆದು, ಕೂಡಲಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ, ನಮ್ಮ ಮಹಾದೇವಿಯಕ್ಕಂಗಾಯಿತು." ಹೀಗೆ ಶರಣರು ಸ್ತ್ರೀಯರನ್ನು ವಿದ್ಯಾದೇವತೆಯನ್ನಾಗಿ ಮಾಡಿ, ಶಿಕ್ಷಣದಿಂದ ವಂಚಿತಳಾಗಿ ಇರುವಂತೆ ಮಾಡಲಿಲ್ಲ.

ಶೋಷಣೆಗೊಳಗಾದ ಹೆಣ್ಣುಮಕ್ಕಳಿಂದಲೆ ವಚನಗಳನ್ನು ರಚಿಸುವಂತೆ ಮಾಡಿದರು. ಶರಣ ಸಂಕುಲದಲ್ಲಿ ಕಂಗೊಳಿಸುವ ವೈರಾಗ್ಯನಿಧಿ ಅಕ್ಕಮಹಾದೇವಿಯವರು ತಮ್ಮ ವಚನದಲ್ಲಿ ಹೇಳ್ತಾರೆ.

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ, ಶಿವನ ನೆನೆಯಿರೆ ಈ ಜನ್ಮ ಬಳಿಕಿಲ್ಲ.
ಚೆನ್ನಮಲ್ಲಿಕಾರ್ಜುನದೇವರ ನೆನೆದು
ಪಂಚಮಹಾಪಾತಕರೆಲ್ಲರು ಮುಕ್ತಿವಡೆದರಂದು.

–ಅಕ್ಕಮಹಾದೇವಿ

ಮಾನವರೆಲ್ಲರೂ ಕಾಲದ ಕಟ್ಟಳೆಯಲ್ಲೇ ಬದುಕುತ್ತಿದ್ದಾರೆ. ಜನಿಸಿದ ಪ್ರತಿಯೊಂದು ಜೀವಿ ಪ್ರತಿಕ್ಷಣ ಸಾವಿನ ದವಡೆಯ ಕಡೆಗೇ ಸಾಗುತ್ತಿರುತ್ತದೆ. ಅದಕ್ಕಾಗಿ ಸಕಲ ಜೀವರಾಶಿಗೆ ಒಳ್ಳೆಯದನ್ನೆ ಬಯಸುವದೇ ನಮ್ಮ ಕರ್ತವ್ಯ ಎನ್ನತ್ತಾರೆ. ಆಯುಷ್ಯವನ್ನು ಅಳೆಯಲು ಸೂರ್ಯ ಹುಟ್ಟುವ ಮತ್ತು ಮುಳುಗುವ (ಬೆಳಗು–ಸಂಜೆ) ಎಂಬ ಎರಡು ಕೊಳಗಗಳಿವೆ. ಈ ಕೊಳಗಗಳು ನಮಗೆ ಸಂಬಂಧಿಸಿದ ತಮ್ಮ ಕರ್ತವ್ಯವನ್ನು ಮುಗಿಸುವ ಮೊದಲೇ, ಅಂದರೆ ನಮ್ಮ ಆಯುಷ್ಯ ತೀರುವ ಮೊದಲೇ ನಾವು ನಮ್ಮ ಕರ್ತವ್ಯನ್ನು ಮುಗಿಸಬೇಕಾಗಿದೆ. ವಚನದಲ್ಲಿ ಈ 'ಜನ್ಮ ಬಳಿಕಿಲ್ಲ' ಎಂದು ಹೇಳುವುದರ ಮೂಲಕ ಸದ್ಭಕ್ತರಾಗಿ ಬಾಳಿ ಮುಕ್ತಿ ಪಡೆಯಿರೆಂದು ತಿಳಿಸುತ್ತಾರೆ. ಪುನರ್ಜನ್ಮವನ್ನು ಧಿಕ್ಕರಿಸಿದ ದಿಟ್ಟ ಶರಣೆ ಮತ್ತೊಂದು ವಚನದಲ್ಲಿ "ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ?" ಎನ್ನುತ್ತಾರೆ. ಜಗದ ಜಂಜಾಟದಿಂದ ಪಲಾಯನ ಮಾಡುವವರನ್ನು ಪ್ರಶ್ನಿಸಿ, ಬದುಕನ್ನು ಪ್ರೀತಿಸುವ ಕಲೆಯನ್ನು ಕಲಿಸುತ್ತಾರೆ. ಸಂಸಾರದಲ್ಲಿದ್ದು ಸಮಾಧಿ ಸ್ಥಿತಿ ಹೊಂದಲು ಸಾಧ್ಯ. ಏಕಾಂತಕ್ಕಾಗಿ ಹಿಮಾಲಯಕ್ಕೆ ಹೋಗಬೇಕಾಗಿಲ್ಲ. ಅಕ್ಕನ ವಚನದಲ್ಲಿ ವ್ಯಷ್ಟಿ ಪ್ರಜ್ಞೆಯ ಪದಗಳು ಸಮಷ್ಟಿ ಪ್ರಜ್ಞೆಯ ಪ್ರತೀಕವಾಗಿ ಮಾನವೀಯ ಚಿಂತನೆಯ ಕಡೆಗೆ ಕೊಂಡೊಯ್ಯುತ್ತವೆ.

ಸಾಮಾನ್ಯ ಮಹಿಳೆಯಾಗಿ ಕಾಯಕಜೀವಿ ಎನಿಸಿಕೊಂಡ ಆಯ್ದಕ್ಕಿ ಲಕ್ಕಮ್ಮನವರ ಧೈರ್ಯ ನೋಡಬೇಕು. ಅನುಭವ ಮಂಟಪದಲ್ಲಿ ಮಗ್ನರಾಗಿ ಕುಳಿತ ಪತಿಯನ್ನು ಎಚ್ಚರಿಸುತ್ತಾಳೆ. "ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ" ಎಂದು. ಕಾಯಕ ಮುಗಿಸಿ ಹೆಚ್ಚಿನ ಅಕ್ಕಿಯನ್ನು ತೆಗೆದುಕೊಂಡು ಬಂದಾಗ "ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ?....... ಈಸಕ್ಕಿಯಾಸೆ ನಿಮಗೇಕೆ?" ಅಲ್ಲಿಯೇ ಸುರಿದು ಬನ್ನಿ ಮಾರಯ್ಯಾ ಎನ್ನತ್ತಾಳೆ. ಪತಿಯನ್ನು ಒಂದಡೆ ಪ್ರಶಿಸುತ್ತಾ ರಾಜನಿಗೂ ಸವಾಲು

ಒಡ್ಡುವ ಹೆಣ್ಣುಮಗಳು. ರಾಜಪ್ರಭುತ್ವದ ವ್ಯವಸ್ಥೆಯಲ್ಲಿದ್ದು ಅರಸನಿಗೂ ತರಾಟೆಗೆ ತೆಗೆದುಕೊಳ್ಳುವುದರೊಂದಿಗೆ ಶರಣಧರ್ಮದ ಶ್ರೇಷ್ಠತೆಯನ್ನು ಸಾರುತ್ತಾಳೆ. ಆಸೆಬುರುಕರನ್ನು ದೇವರು ಮೆಚ್ಚುವುದಿಲ್ಲ ಎನ್ನೋದು ಒಂದುಕಡೆಯಾದರೆ ದುಡಿಯುವ ಕಾಯಕ ಜೀವಿಗಳಿಗೆ ಧೈರ್ಯ ತುಂಬುವದು ಇನ್ನೊಂದು ವಚನದಲ್ಲಿ.

ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?

ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ?

ಘನ ಶಿವಭಕ್ತರಿಗೆ ಬಡತನವಿಲ್ಲ, ಸತ್ಯರಿಗೆ ದುಷ್ಕರ್ಮವಿಲ್ಲ.

ಎನಗೆ ಮಾರಯ್ಯಪ್ರಿಯ ಅಮಲೇಶ್ವರಲಿಂಗವುಳ್ಳನ್ನಕ್ಕ

ಆರ ಹಂಗಿಲ್ಲ ಮಾರಯ್ಯ.

–ಆಯ್ದಕ್ಕಿಲಕ್ಕಮ್ಮ

ದುಡಿಯುವ ವರ್ಗದ ಒಗ್ಗಟ್ಟನ್ನು ಒತ್ತಿ ಹೇಳುವ ಮಹತ್ವದ ವಚನವಿದು. ಬಡವರಲ್ಲಿ ಆತ್ಮಶಕ್ತಿ ತುಂಬಿ, ಬಡತನವು ನಮ್ಮ ದೈನಂದಿನ ಭೌತಿಕ ಜೀವನಕ್ಕಿದೆ ಆದರೆ ದೃಢಮನಸ್ಸಿಗೆ ಬಡತನವಿರಲಾರದು. ಶೋಷಕರ ಸಂಖ್ಯೆ ಕಡಿಮೆಯಿದೆ ಬಡವರು ಬಹುಸಂಖ್ಯೆಯಲ್ಲಿದ್ದಾರೆ. ಶೋಷಕರ ವ್ಯವಸ್ಥೆ ಎಷ್ಟೇ ದೊಡ್ಡ ಏಕಶಿಲಾ ಬೆಟ್ಟದಂತಿರಲಿ ಬಡವರು ಒಂದೊಂದು ಉಳಿಯಂತಾಗಿ ಒಗಟ್ಟಾದರೆ ಬೆಟ್ಟದಂತಿರುವ ಶೋಷರರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ ಎಂಬದನ್ನು ಆಯ್ದಕ್ಕಿ ಲಕ್ಕಮ್ಮ ದುಡಿಯುವವರಿಗೆ ಆತ್ಮವಿಶ್ವಾಸ ತುಂಬುತ್ತಾಳೆ. ಕಾಯಕ ಜೀವಿಗಳಾದ ಶರಣರು ಆರ್ಥಿಕವಾಗಿ ಬಡವರಾಗಿರಬಹುದು. ಆದರೆ ಆತ್ಮಿಕವಾಗಿ ಶ್ರೀಮಂತರಾಗಿದ್ದಾರೆ. ತಮ್ಮೊಳಗೆ ದೇವರನ್ನೇ ಪ್ರತಿಷ್ಠಾಪಿಸಿಕೊಂಡವರು ಅದು ಹೇಗೆ ಬಡವರಾಗುತ್ತಾರೆ? ಎಂದು ಪ್ರಶ್ನಿಸುತ್ತಾಳೆ.

ಕಾಶ್ಮೀರದ ಮಹಾರಾಣಿಯಾಗಿದ್ದ ಮೋಳಿಗೆ ಮಹಾದೇವಿ ಕಲ್ಯಾಣದಲ್ಲಿ ಶರಣರ ಸಂಘದಲ್ಲಿ ಬೆರೆತು ಆ ಸಂಘ ಪ್ರಜ್ಞೆಯನ್ನು ಆವರಿಸಿಕೊಂಡು ಪತಿಯನ್ನು ಪ್ರಶ್ನಿಸುವ ಪರಿ ಹೇಗಿತ್ತೆಂದರೆ, ಮಾರಯ್ಯನವರಿಗೆ ಬದುಕು ಸಾಕೆನಿಸಿತ್ತು. ನನಗೊಂದು ದಾರಿ ಹೇಳಾ ಎಂದು ಹಲಬುತ್ತಿದ್ದರು. ಕೈಲಾಸಕ್ಕೆ ಹೋಗಿ ಬಿಡಬೇಕೆನ್ನುವ ಬಯಕೆ ತಲೆಯೆತ್ತಿತ್ತು. ಶರಣನಾಗಿ ದಾಸೋಹಿಯಾಗಿ ಕಾಯಕ ಜೀವಿಯಾಗಿ ಸಾರ್ಥಕ ಬದುಕು ನಡೆಸಿರುವ ನನಗೆ ಕೈಲಾಸದಲ್ಲಿ ಜಾಗ ಸಿಗುವುದೆಂಬ ನಂಬಿಕೆ ಅವರದಾಗಿತ್ತು. ತನ್ನಾಸೆಯನ್ನು ಮಡದಿಯಲ್ಲಿ ವ್ಯಕ್ತಪಡಿಸಿದರು.

"ಕಾಷ್ಟವ ಸುವರ್ಣವ ಮಾಡಿದೆನೆಂಬ ಘಾತುಕತನವೆ ನಿಮ್ಮ ಭಕ್ತಿ?
ಸಕಲ ದೇಶ ಕೋಶ ವಾಸ ಭಂಡಾರ ಸವಾಲಕ್ಷ ಮುಂತಾದ ಸಂಬಂಧ,
ಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂಲಿಯೆ ನಿಮ್ಮ ಭಕ್ತಿ?...........
ಶಕ್ತಿಯ ಮಾತೆಂದು ಧಿಕ್ಕರಿಸಬೇಡಿ.
ಹೊರಗೆ ಕೂಡಿಹೆನೆಂಬುದು ನಿಮ್ಮ ಅರಿವಿಂಗೆ ಹಾನಿ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ,
ನಿಮ್ಮ ಶರಣರ ನೆಲೆಯ ನೀವೇ ನೋಡಿಕೊಳ್ಳಿ."

–ಮೋಳಿಗೆ ಮಹಾದೇವಿ

ಈ ವಚನವು ಮೋಳಿಗೆ ಮಹಾದೇವಮ್ಮನ ಏರಿದ ಅಧ್ಯಾತ್ಮದ ನಿಲುವಿಗೆ ಕನ್ನಡಿಯಂತಿದೆ. ಕಾಯವೆರಸಿ ಕೈಲಾಸಕ್ಕೆ ಹೋಗಬೇಕೇನ್ನುವವಿರಾ? ಎಂದು ಪತಿ ಮೋಳಿಗೆ ಮಾರಯ್ಯನವರಿಗೆ ಪ್ರಶ್ನಿಸುತ್ತಾಳೆ. ಈ ಮಾತು ಶರಣರಿಗೆ ಸಲ್ಲುವುದೇ ಲಿಂಗಾಂಗ ಸಾಮರಸ್ಯದ ಪರಮಾನಂದ ಸಾಮ್ರಾಜ್ಯದಲ್ಲಿರುವಾಗ ಈ ಮಾತೇಕೆ? ಸಕಲ ದೇಶ ಕೋಶ ಸಿರಿ ಸಂಪತ್ತನ್ನು ತ್ಯಜಿಸಿ, ವೈರಾಗ್ಯ ತಾಳಿ ಕಲ್ಯಾಣಕ್ಕೆ ಬಂದ ಮೇಲೆ ಮತ್ತೆ ಕೈಲಾಸದ ಮಾತೇಕೆ? ಎನ್ನತ್ತಾ ಉನ್ನತ್ತ ಶಿಖರಕ್ಕೇರಿದಳು ಮಹಾದೇವಮ್ಮ. "ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯೆನಲೇತಕ್ಕೆ? ಪರುಷರಸ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ?" ದೇವರು ಎಲ್ಲಿದ್ದಾನೆಂದು ಎಲ್ಲೆಲ್ಲಿಯೋ ಹುಡಕಾಡುವವರಿಗೆ ಏನು ಹೇಳಬೇಕು? ಅವನಿರುವುದು ನಮ್ಮೊಳಗೆ, ನಮ್ಮನ್ನು ನಾವು ಅರಿತರೆ ಅವನ ದರ್ಶನವಾಗುತ್ತದೆ. ಅಂಗದಲ್ಲಿರುವ ಗುರುಕೊಟ್ಟ ಇಷ್ಟಲಿಂಗದಿಂದ ಆತ್ಮಸಾಕ್ಷಾತ್ಕಾರವಾಗುತ್ತದೆ. ತಮ್ಮ ಭಾವನೆಗಳನ್ನು ಶುದ್ಧವಾಗಿರಿಸಿಕೊಂಡು ಸನ್ಮಾರ್ಗದಲ್ಲಿ ನಡೆದರೆ ಅದೆ ಮುಕ್ತಿಪಥದ ಮಾರ್ಗವೆಂದ ಮೋಳಿಗೆ ಮಹಾದೇವಿ ಧೀಮಂತ ಶರಣಪತಿಗೆ ದಾರಿದೀಪವಾದಳು. ತನ್ನ ನಿಜಭಕ್ತಿಯಿಂದ ಶರಣ ಸಂಕುಲಕ್ಕೆ ಬೆರಗುಗೊಳಿಸಿ ವಿನಯದ ಸಾಕಾರಮೂರ್ತಿಯಾಗಿ ಅರಿವನ್ನು ಅರಹುವ ಮಹಾಮಣಿಹದಲ್ಲಿ ಭಾಗಿಯಾದವಳು.

ಕಸಗೂಡಿಸುವ ಕಾಯಕದ ಸತ್ಯಕ್ಕ ಆತ್ಮಗೌರವದ ಪ್ರತೀಕವಾಗಿದ್ದಾಳೆ. ದೇವರನ್ನೇ (ಪೌರಾಣಿಕ ಶಿವ) ಪ್ರಶ್ನಿಸುತ್ತಾಳೆ. "ಹಿರಿಯತನಕ್ಕಿದು ಪಥವೆ, ಬಾಣನ ಮನೆಯ ಬಾಗಿಲ ಕಾಯ್ವುದು? ನಿಮ್ಮ ಹಿರಿಯತನಕ್ಕಿದು ನಾರಿಯರಿಬ್ಬರೊಡನೆ ಇಪ್ಪದು? ಶಿವಾ ಶಿವಾ ನಿಮ್ಮ ನಡವಳಿ! ಹೀಗೆ ಇದೇನಯ್ಯಾ ನಿಮ್ಮ ನಡವಳಿಕೆ ಎಂದು ಸಿರಿಯಾಳನ ಮಗನ ಕೊಲ್ಲುವುದು? ದಾಸನ ವಸ್ತ್ರವ ಸೀಳುವುದು? ಎಂದು ಕೇಳುವುದು ಎಂಥ ಧೈರ್ಯವಿದ್ದಿರಬಹುದು. ನಾವು ಯಾವುದಾದರೂ ಒಂದು ಕಲ್ಲಿನ ಮೂರ್ತಿಯಗೆ

ಏನಾದರೂ ಹೇಳಿದರೆ. ತಪ್ಪಾಯಿತೆನ್ನಿ ಇಲ್ಲದಿದ್ದರೆ ದೇವರು ಕಣ್ಣು ಕಳೆಯುತ್ತಾನೆ ಎಂಬ ಭಯದ ಭ್ರಮೆಯಲ್ಲಿ ಅಂಜಿಕೊಂಡು ಬದುಕುತ್ತೇವೆ. ಆದರೆ ಶರಣೆಯರ ಸತ್ಯದ ಬದುಕನ್ನು ನೋಡಿದರೆ ಅರಿವು ಮೂಡಬಹುದು.

ಶರಣ ಸಂಕುಲದ ಕಾಯಕಜೀವಿಗಳು ಸ್ವತಂತ್ರರು ಎಂಬುದನ್ನು ಸತ್ಯಕ್ಕ ಎತ್ತಿ ತೋರಿಸುತ್ತಾಳೆ. ಕಾಯಕದ ಮಹತ್ವವನ್ನು ಅರಿತವರ ಬದುಕು ಸ್ವಾವಲಂಬದಿಂದ ಕೂಡಿ ಆನಂದಮಯವಾಗುತ್ತದೆ. ನಮ್ಮೊಳಗಿನ ಆತ್ಮಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಬೇಕಾದರೆ ದುರಾಸೆಗಳನ್ನು ಬೀಡಬೇಕು. "ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ನಾನು ಕೈಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ, ನೀನಾಗಲೆ ಎನ್ನ ನರಕದಲ್ಲಿ ಅದ್ದಿ ನಿನೇದ್ದು ಹೋಗಾ ಶಂಭುಜಕ್ಕೇಶ್ವರಾ." ಭ್ರಷ್ಟಾಚಾರದ ಬದುಕು ಎಲ್ಲ ಕಾಲದಲ್ಲಿಯೂ ಇದೆ. ಸತ್ಯಕ್ಕ ದೇವರಿಗೆ ನಿರ್ಭೀಡೆಯಿಂದ ಹೇಳುತ್ತಾಳೆ 'ನಾನು ಅನ್ಯಾಯದ ಹಣದಿಂದ ದೂರವಿದ್ದೇನೆ' ನನ್ನ ಕಾಯಕದ ಸಂದರ್ಭದಲ್ಲಿ ಬೆಲೆಯುಳ್ಳ ವಸ್ತುಗಳಾದ ಬಂಗಾರದ ಆಭರಣ, ರೇಷ್ಮೆ ವಸ್ತ್ರ ಮುಂತಾದವುಗಳು ಬೀದಿಯಲ್ಲೇ ಬಿದ್ದಿದ್ದರೂ ನನಗೆ ಅವುಗಳು ಕಸವಿದ್ದಂತೆ ಕೈಯಿಂದ ಮುಟ್ಟುವುದಿಲ್ಲ. ನನಗೆ ಬಸವಾದಿ ಶರಣರ ಪರಂಪರೆಯಿದೆ. ಅಂಥ ಶರಣರ ಆಣೆ ಮಾಡುತ್ತ ದೃಢನಿಶ್ಚಯದಿಂದ, ತನ್ನ ಕಾಯಕದ ಮೂಲಕವೇ ಬದುಕುವುದಾಗಿ ವಚನ ನೀಡುತ್ತಾಳೆ.

ಕಾಯಕವೆಂಬುದು ಸತ್ಯದ ನೆಲೆಗಟ್ಟಿನ ಮೇಲೆ ಶುದ್ಧವಾಗಿ ಇರುವಂಥದ್ದು. ಎಂದು ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಹೇಳುತ್ತಾಳೆ. "ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು ಜಾತಿಗಳೆ ನೀವೇಕೆ ಕೀಳಾದಿರೋ? ಎಂದು ಈ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸವುದರಲ್ಲಿ ಅತ್ಯಂತ ಪ್ರಖರ ವಿಚಾರಧಾರೆಯನ್ನು ಗುರುತಿಸಬಹುದು. ಶೂದ್ರರು ವಿದ್ಯೆ ಕಲಿಯಬಾರದು, ದಲಿತರು ವೇದಮಂತ್ರಗಳನ್ನು ಕಿವಿಯಿಂದ ಕೇಳಬಾರದು. ನಾಲಿಗೆಯಿಂದ ಉಚ್ಚರಿಸಬಾರದು ಎಂಬ ಸಮಾಜದ ಕಟ್ಟು ಕಟ್ಟಳೆಯಿದ್ದ ಕಾಲದಲ್ಲಿ ಪುರೋಹಿತಶಾಹಿಗಳ ಅಹಂಕಾರ ಮತ್ತು ಅಟ್ಟಹಾಸಕ್ಕೆ ಮಟ್ಟಹಾಕಿ, ಸನಾತನವಾದಿಗಳ ಕರ್ಮವನ್ನೇ ಜಾಲಾಡಿದ ಕಾಳವ್ವೆಯ ಮಹತ್ವರವಾದ ವಚನವಿದಾಗಿದೆ.

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಮಸಣಮ್ಮನ ವಿಚಾರ ವಾಸ್ತವದ ತಳಹದಿಯ ಮೇಲೆ ನಿಂತಿದೆ. ಹೆಣ್ಣು ಗಂಡಿನ ಮಧ್ಯ ಸಮಾನತೆಯನ್ನು ಸಾರುವುದಲ್ಲಿ ಎಚ್ಚರಿಕೆ ನೀಡುತ್ತಾಳೆ. "ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು, ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ? ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆಯೂ

ವಿರುದ್ಧವೆ?........ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು, ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ?.......ಅರಿವಿಂದ ಕಂಡೊದಗಿದ ಸುಖವು ಮಸಣಯ್ಯಪ್ರಿಯ ಗಜೇಶ್ವರಾ." ಸರಳ ಸಹಜ ಶಬ್ದಗಳ ಮೂಲಕ ಮಸಣಮ್ಮ ಶಕ್ತಿಶಾಲಿಯಾದ ವಚನ ರಚಿಸಿದ್ದಾಳೆ. ಹೆಣ್ಣು, ಹೊನ್ನು, ಮಣ್ಣು ಮತ್ತು ಇಂದ್ರಿಯ ಸುಖಗಳನ್ನು ಬಿಟ್ಟು ದೇವರನ್ನು ಒಲಿಸಿಕೊಳ್ಳಲು, ಜಗತ್ತಿಗೆ ವಿಮುಖವಾಗಿ ಹಿಮಾಲಯಕ್ಕೆ ಹೋಗುವವರಿಗೆ ಪ್ರಶ್ನಿಸುವುದರ ಮೂಲಕವೇ ತಿಳಿಸುವ ಕ್ರಮ ಅವಳ ಜೀವನಾನುಭವಕ್ಕೆ ಸಾಕ್ಷಿಯಾಗಿದೆ. ಪರಂಜ್ಯೋತಿ, ಪರಮಕರುಣಾಳು ಮತ್ತು ಪರಮಶಾಂತ ದೇವರು ಹೊನ್ನು ಹೆಣ್ಣು ಮತ್ತು ಮಣ್ಣನ್ನು ವಿರೋಧಿಸುವುದಿಲ್ಲ. ತಮ್ಮ ಆತ್ಮಸಾಕ್ಷಿಯಂತೆ ನಡೆದುಕೊಂಡರೆ ದೇವರ ದರ್ಶನವಾದಂತೆಯೆ ಎಂದು ಸಂದೇಶ ಸಾರುತ್ತಾಳೆ.

ಹೀಗೆ ಪ್ರಶ್ನೆ ಮಾಡುವ ದೈರ್ಯ ಯಾವಾಗ ಬರುತ್ತದೆ ಅಂದರೆ ನಮ್ಮ ಅಮುಗೆ ರಾಯಮ್ಮನವರು ಹೇಳುವ ವಚನವನ್ನು ಅರಿತುಕೊಂಡು ಆಚರಿಸಿದಾಗ.

ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿವವರಾರನೂ ಕಾಣೆ.
ಎನ್ನ ಕಾಲೊಳಗಣ ಮುಳ್ಳ ತೆಗೆವವರನಾರನೂ ಕಾಣೆ.
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವರನಾರನೂ ಕಾಣೆ.
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ
ಕೆಡಿಸುವವರನಾರನೂ ಕಾಣೆನಯ್ಯಾ.
ಆದ್ಯರ ವೇದ್ಯರ ವಚನಗಳಿಂದ
ಅರಿದೆವೆಂಬವರು ಅರಿಯಲಾರರು ನೋಡಾ.
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ಮುರಿಯಬೇಕು.
ಎನ್ನ ಕಾಲೊಳಗಣ ಮುಳ್ಳ ನಾನೆ ತೆಗೆಯಬೇಕು.
ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೆ ಸುಡಬೇಕು.
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ ನಾನೆ ಕಳೆಯಬೇಕು.
ಅಮುಗೇಶ್ವರ ಲಿಂಗವ ನಾನೆ ಅರಿಯಬೇಕು.

–ಅಮುಗೆ ರಾಯಮ್ಮ

ಅಮುಗೆ ರಾಯಮ್ಮನು ಈ ಜಗತ್ತಿಗೆ 'ಮಾಯಾಪ್ರಪಂಚ' ಎಂದು ಕರೆದಿಲ್ಲ. ಒಳಗಿನ ಜಗತ್ತೇ ಇಷ್ಟಲಿಂಗವಾದಾಗ, ಹೊರಗಿನ ಜಗತ್ತು ಜಂಗಮಲಿಂಗವಾಗಿ ಗೋಚರಿಸುತ್ತದೆ. ನಮ್ಮೊಳಗಿನ ಮಾಯಾಪ್ರಪಂಚವನ್ನು ನಿರ್ನಾಮ ಮಾಡಿದಾಗ ಹೊರಗಿನ ಮಾಯಾಪ್ರಪಂಚ ತನ್ನಿಂದ ತಾನೇ ಬಯಲಾಗುತ್ತದೆ. ಅಂದರೆ ನಮ್ಮ

ಕಣ್ಣೊಳಗಿನ ಬಯಕೆಯೆಂಬ ಕಸವನ್ನು ಬೇರೆಯವರಿಂದ ತೆಗೆಯಲು ಸಾಧ್ಯವಿಲ್ಲ. ನಾವು ಬಯಕೆಗಳನ್ನು ಮೀರಿ ಬೆಳೆಯುವುದರ ಮೂಲಕವೇ ಕಸವನ್ನು ತೆಗೆಯಲು ಸಾಧ್ಯವಾಗುತ್ತದೆ. ಅಂದರೆ ನಮ್ಮೊಳಗೆ ಅಡಗಿರುವ ದ್ವೇಷ, ಅಸೂಯೇ, ಅಹಂಕಾರ, ಭ್ರಮೆಯೆಂಬ ಎಲ್ಲ ಅವಗುಣಗಳು ನಾವೇ ಕಳೆದುಕೊಳ್ಳಬೇಕು. ಅವುಗಳು ಹೊರಗಿನಿಂದ ಬೇರೆಯವರು ಬಂದು ತೆಗೆಯಲಿಕ್ಕಾಗಲ್ಲ. ನಮ್ಮೊಳಗಿನ ಎಲ್ಲ ಒಳ್ಳೆಯತನವನ್ನು ಸುಡುವ ಅಹಂಕಾರವನ್ನು ಸುಡುವ ಸಾಮರ್ಥ್ಯ ಯಾರಿಗೂ ಇರುವುದಿಲ್ಲ. ಅದು ನಮ್ಮಿಂದ ಮಾತ್ರ ಸಾಧ್ಯ. ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ ನಾನೆ ಕಳೆಯಬೇಕು, ಅಮುಗೇಶ್ವರ ಲಿಂಗವ ನಾನೆ ಅರಿಯಬೇಕು. ಎಂಬ ಮಹತ್ವದ ಸಂದೇಶ ಮಹಿಳಾ ಲೋಕಕ್ಕಷ್ಟೇ ಅಲ್ಲದೆ ಸರ್ವರಿಗೂ ಇದು ಆದರ್ಶವಾಗುವಂತೆ ಹೇಳಿದ್ದಾರೆ ಅಮುಗೆರಾಯಮ್ಮನೆಂಬ ವಚನಕಾರ್ತಿ. ಅದಕ್ಕಾಗಿ ನಾವು ನಮ್ಮಳೊಗಿನ ಕೀಳರಿಮೆಯನ್ನು ಕಳೆದುಕೊಂಡು, ಮತ್ತೊಬ್ಬರನ್ನು ಕೀಳರಿಮೆಯೊಳಗೆ ನೂಕದೆ ನಮ್ಮಗೆ ಸಿಗುವ ಅವಕಾಶಗಳು ಕಳೆದುಕೊಳ್ಳದೆ ವ್ಯಕ್ತಿಪ್ರತಿಷ್ಠೆಗೆ ಮಾರುಹೋಗದೆ ತತ್ವದ ಕಡೆಗೆ ಸಾಗುವುದು ಅತ್ಯಂತ ಅವಶ್ಯಕವಾಗಿದೆ.

ಆದರೆ ನಮ್ಮ ದೈನಂದಿನ ಬದುಕಿನಲ್ಲಿ ಹೆಣ್ಣು ಮಕ್ಕಳ ಪಾಲ್ಗೊಳ್ಳವಿಕೆ, ಇಡೀ ವ್ಯವಸ್ಥೆಯೊಳಗೆ ಸಮಾನವಾದ ಚಿಂತನ ಮಂಥನವಾಗಬೇಕಾಗಿದೆ. ಏಕೆಂದರೆ ಇನೂ ಈ ಇಪ್ಪತ್ತೊಂದನೆ ಶತಮಾನದಲ್ಲಿಯೂ ಕೂಡ ಹೆಣ್ಣು ಮಕ್ಕಳ ಸ್ಥಿತಿ ಸುಧಾರಣೆಯಲ್ಲಿಯೇ ತೇಲಾಡುತ್ತಿದೆ. ಸಾಮಾನ್ಯವಾಗಿ ಒಬ್ಬ ಗೃಹಿಣಿಯಾಗಿ ಹೇಳಬೇಕಾದರೆ ಎಂಥ ಮಹತ್ವದ ವಿಚಾರ ಹೇಳಿದರೂ ಅವಳಿಗೇನು ತಿಳಿಯುತ್ತದೆ. ನೀನು ಸುಮ್ಮನಿರು ನಿನಗೇನು ಗೊತ್ತಾಗುವುದಿಲ್ಲ ಎನ್ನುವುದೇ ಆಗಿರುತ್ತದೆ. ಈ ಸಮಾನತೆ ಎನ್ನೂದು ಬರೀ ಕಾಟಾಚಾರಕ್ಕಾಗದೆ. ಮಹಿಳೆಯರ ವ್ಯಕ್ತಿತ್ವದ ಅರಿವು ಮೂಡಬೇಕಾಗಿದೆ. ಆದ್ದರಿಂದ ಹೆಣ್ಣು ಮಕ್ಕಳು ತಮ್ಮನ್ನು ತಾವು ಕೀಳರಿಮೆಯ ಬೇಗೆಯಲ್ಲಿ ಬೀಳದೆ "ಛಲಬೇಕು ಶರಣಂಗೆ" ಎನ್ನುವ ಹಾಗೆ ಬಸವಾದಿ ಶರಣರ ಆದರ್ಶಗಳನ್ನು ಮೈಗೂಡಿಸಿಕೊಂಡು ಬದುಕುವ ಕಲೆಯನ್ನು ಕಲಿಸಿದ ಶರಣೆಯರನ್ನು ಅನುಸರಿಸೋಣ.

******

ವಚನಕಾರರ ಆರ್ಥಿಕ ಚಿಂತನೆ

ಪ್ರಜಾಪ್ರಭುತ್ವವಾದಿ ನೆಲೆಯ ಚಿಂತನ ಮಂಥನಕ್ಕಾಗಿ ಬೇಕಾದ ಅನುಭವ ಮಂಟಪ. ಈ ಅನುಭವ ಮಂಟಪ ಎಂಬುದು ವಿಶಿಷ್ಟವಾದ ಸಮಾಜೋಧಾರ್ಮಿಕ ಸಂಸತ್ ಆಗಿತ್ತು. ಬಸವಣ್ಣನವರು ಅಂಥ ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ಜನರಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸಿದ್ದರು. ವಿವಿಧ ಜಾತಿಯ ಜನರು ಅನುಭವ ಮಂಟಪದಲ್ಲಿದ್ದರು. 770 ಅಮರಗಣಂಗಳಲ್ಲಿ ವಿವಿಧ ರೀತಿಯಿಂದ ಕೂಡಿದ ಕಾಯಕ ಜೀವಿಗಳಿದ್ದರು ಶರಣರಲ್ಲಿ ಯಾವುದೇ ಕಾಯಕವಾಗಲಿ ಆ ಕಾಯಕದಲ್ಲಿ ಭೇದವಿರಲಿಲ್ಲ. ಪ್ರಜಾಪ್ರಭುತ್ವದ ಆಶಯಗಳಿಗೆ ಪೂರಕವಾದ ವಿಚಾರಗಳನ್ನು ವಚನಕಾರರೆಲ್ಲ ಹೊಂದಿದ್ದರು ಎಂಬುದಕ್ಕೆ ಅವರ ಚಳವಳಿ ಮತ್ತು ವಚನಗಳು ಸಾಕ್ಷಿಯಾಗಿವೆ.

ಅರ್ಥಶಾಸ್ತ್ರದಲ್ಲಿ 1998ರ ನೊಬೆಲ್ ಪ್ರಶಸ್ತಿ ವಿಜೇತರು ಮಾನವತಾವಾದಿ ಅಮರ್ತ್ಯಸೇನ್ ಎಂಬ ಅರ್ಥಶಾಸ್ತ್ರಜ್ಞರ ಸಿದ್ಧಾಂತವೆನೆಂದರೆ "ನಿಜವಾದ ಪ್ರಜಾಪ್ರಭುತ್ವದಲ್ಲಿ ಬರಗಾಲ ಕಾಲಿಡುವುದಿಲ್ಲ" ಎಂದು. ಆದರೆ ಒಬ್ಬ ನಿರಕ್ಷರಿ ಜನಪದ ಕವಿ ಬಸವಣ್ಣವರ ಆರ್ಥಿಕ ವ್ಯವಸ್ಥೆಯ ಕಂಡು ಅವರ ಪ್ರತಿಭೆಯನ್ನು ತ್ರಿಪದಿಯೊಂದರಲ್ಲಿ ಹಿಡಿದಿಟ್ಟ ರೀತಿ ಅನುಪಮವಾಗಿದೆ.

"ಬಸವ ರಾಜ್ಯದ ಸಿರಿಯು, ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ ನಿಜದೀಪ
ಬಸವನೇ ಸಗ್ಗಸೋಪಾನ.

ಬಸವಣ್ಣನವರು ಕಾಯಕ ತತ್ತ್ವದಿಂದ ಮಾನವಶಕ್ತಿಯನ್ನು ಬಳಸುತ್ತ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ಜನರ ಬದುಕು ಸಮೃದ್ಧವಾಗುವಂತೆ ನೋಡುಕೊಳ್ಳುವ ಪ್ರಯತ್ನದಿಂದಾಗಿ ಬಿಜ್ಜಳನ ಭಂಡಾರವು ಸಹಜವಾಗಿಯೇ ತುಂಬಿತು.

ಕಲ್ಯಾಣದಲ್ಲಿ ನೀಡುವವರಿದ್ದರು ಆದರೆ ಬೇಡುವವರಿರಲಿಲ್ಲ ಎಂಬಂಥ ವಾತಾವರಣ ಸೃಷ್ಟಿಸಿದ ಬಸವಣ್ಣನವರು 'ರಾಜ್ಯದ ಸಿರಿ' ಆದಂತೆಯೇ 'ಬಡವರ ನಿಧಿ'ಯೂ ಆದರು. ಒಂದು ದೇಶ ಸ್ವಾವಲಂಬನೆ ಸಾಧಿಸುವುದು ಹೇಗೆ ಎಂಬುದನ್ನು ಜನಪದ ಕವಿಯು ಬಸವಣ್ಣನವರ ಶಕ್ತಿಯನ್ನು ಅರಿಯುವುದರ ಮೂಲಕ ಮೊದಲನೆ ಸಾಲಿನಲ್ಲಿ ತಿಳಿಸುತ್ತಾ ಮುಂದೆ "ಬಸವ ಮಳೆ ಬೆಳೆಯು ನಾಡೊಳಗೆ "ಎಂದು ನಮ್ಮ ನಿರಕ್ಷರಿ ಜನಪದ ಕವಿಯ ಹೇಳಿಕೆಗೂ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಅವರ ಸಿದ್ಧಾಂತಕ್ಕೂ ಎಷ್ಟೊಂದು ಸಾಮ್ಯವಿದೆ ! ಪ್ರಜಾಪ್ರಭುತ್ವವಾದಿ ನಿಲುವನ್ನು ಬಿಜ್ಜಳರಾಜನ ಆಸ್ಥಾನದಲ್ಲಿ ಪ್ರಶ್ನಿಸಿದಾಗಲೇ ಬಸವಣ್ಣನವರು "ಊರಮುಂದೆ ಹಾಲಹಳ್ಳ ಹರಿಯುತ್ತಿರಲು. ಒರೆಯಾವಿನ ಬೆನ್ನಹರಿಯಲೇಕಯ್ಯಾ ...... .ಬಿಜ್ಜಳನ ಭಂಡಾರವೆನಗೇಕಯ್ಯಾ" ಎಂದು ಹೇಳುವಲ್ಲಿ ಕಾಯಕ ಜೀವಿಗಳ ಶ್ರಮದ ಮೂಲಕ ಒಂದು ದೇಶದ ಖಜಾನೆ ತುಂಬಿರುತ್ತದೆ.

ಕಾಯಕಜೀವಿಗಳ ಸಂಪತ್ತು ಹಾಲಿನಂತೆ ಹರಿಯುವ ಸಂದರ್ಭದಲ್ಲಿ ಬಿಜ್ಜಳನ ಭಂಡಾರ ಏಕೆ ಬೇಕು ಈ ಜನರಿಂದಾಗಿ ರಾಜಭಂಡಾರ ತುಂಬಿದೆ. ಅಂತೆಯೆ ಬಿಜ್ಜಳನ ಭಂಡಾರವು ರಾಜಪ್ರಭುತ್ವದ ಪ್ರತೀಕವಾದರೆ, ಕಾಯಕ ನಿಷ್ಠೆಯ ಜನಸಮುದಾಯವು ಪ್ರಜಾಪ್ರಭುತ್ವದ ಪ್ರತೀಕವಾಗಿದೆ ಎಂದು ಸಾರುತ್ತಾರೆ. ಅದಕ್ಕಾಗಿ ಜನಪದ ಕವಿ ಬಸವಣ್ಣನೆಂದರೆ ಬರಗಾಲವಲ್ಲ ಮಳೆ ಬೆಳೆ ಜನಜೀವನಕ್ಕೆ ದಾರಿ ದೀಪ ಎಂದು ಕೊಂಡಾಡಿದ್ದಾನೆ. ಪ್ರಕೃತಿ ಸಮೇತವಾಗಿ ಸಕಲ ಜೀವಾತ್ಮರಿಗೆ ಲೇಸು ಬಯಸುವುದೇ ಪ್ರಜಾಪ್ರಭುತ್ವ, ಅದನ್ನೇ ಬಸವಾದಿ ಶರಣರು ಪ್ರತಿಪಾದಿಸಿದರು. ಅಮರ್ತ್ಯ ಸೇನ್ ಅವರ ಸಿದ್ಧಾಂತವು ಅಂಥ ಪ್ರಜಾಪ್ರಭುತ್ವದಲ್ಲಿ ಬರಗಾಲವಿರದು ಎಂಬುದಾಗಿದೆ.

12ನೇ ಶತಮಾನದಲ್ಲಿ ಬಸವಣ್ಣನವರು ಮಾನವನ ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸರ್ವೋದಯಕ್ಕೆ ಖಾಸಗಿ ಆಸ್ತಿಯು ಬಹುದೊಡ್ಡ ಅಡೆತಡೆಯಾಗಿದೆ ಎನ್ನುದನ್ನು ಕಂಡುಹಿಡಿದು ಅದರ ವಿರುದ್ಧ ಚಳವಳಿ ರೂಪಿಸಿದರು. ಬಸವಣ್ಣನವರು ಸ್ಥಾಪಿಸಿದ ಶರಣ ಸಂಕುಲ ಈ ಚಳವಳಿಯನ್ನು ತನ್ನ ಕಾಲದ ಇತಿಮಿತಿಗಳೊಂದಿಗೆ ಯಶಸ್ವಿಗೊಳಿಸುತ್ತಾ ಎಲ್ಲ ತರಹದ ಶೋಷಣೆಯನ್ನು ಕೊನೆಗಾಣಿಸಲು ಭಾವನಾತ್ಮಕವಾಗಿ ಹೋರಾಡಿದರು.

19ನೇ ಶತಮಾನದಲ್ಲಿ ಕಾರ್ಲ್ಮಾರ್ಕ್ಸ್ ಅವರು 'ಕಮ್ಯೂನಿಸ್ಟ್ ಸಿದ್ಧಾಂತವನ್ನು ಒಂದೇ ಸಾಲಿನಲ್ಲಿ ಖಾಸಗಿ ಆಸ್ತಿಯನ್ನು ರದ್ದುಗೊಳಿಸುವುದು' ಎಂದು ಹೇಳಿದರು. ಆದರೆ ಖಾಸಗಿ ಆಸ್ತಿಯನ್ನು ಶಾಶ್ವತಗೊಳಿಸುವುದೇ ಬಂಡವಾಳಶಾಹಿ ಸಿದ್ಧಾಂತವಾಗಿದೆ.

ಮಿಗುತಾಯ ಮೌಲ್ಯವನ್ನು ಬಂಡವಾಳಶಾಹಿಗಳ ಹಿಡಿತದಲ್ಲಿಡುವುದೇ ಸುಲಿಗೆ ವ್ಯವಸ್ಥೆಯ ಪರಮ ಉದ್ದೇಶವಾಗಿದೆ. ಮಿಗುತಾಯ ಮೌಲ್ಯವನ್ನು ಸಾಮಾಜಿಕರಣಗೊಳಿಸುವುದೇ ಕಮ್ಯೂನಿಸಂನ ಗುರಿಯಾಗಿದೆ ಎಂದು ಕಾರ್ಲ್‌ಮಾರ್ಕ್ಸ್ ಅವರು 19ನೇ ಶತಮಾನದಲ್ಲಿ ಈ ಶೋಷಣೆಯ ವಿರುದ್ಧ ವೈಜ್ಞಾನಿಕವಾಗಿ ಹೋರಾಡುವುದನ್ನು ಕಲಿಸಿದರು.

ಮನುವಾದಿಗಳು ಚಾತುರ್ವರ್ಣ ಪದ್ಧತಿಯ ಮೂಲಕ ಧರ್ಮದ ಹೆಸರಿನಲ್ಲಿ ವಿಚಿತ್ರವಾದ ಆರ್ಥಿಕ ವ್ಯವಸ್ಥೆ ನಿರ್ಮಿಸಿದರು. ಈ ಆರ್ಥಿಕ ವ್ಯವಸ್ಥೆಯು ಕೇವಲ ಸವರ್ಣೀಯ ಪುರುಷರ ಹಿತವನ್ನು ಕಾಪಾಡುವಂಥ ಆರ್ಥಿಕ ವ್ಯವಸ್ಥೆಯಾಗಿತ್ತು. ದಲಿತರು, ಹಿಂದುಳಿದವರು, ಹೆಣ್ಣುಮಕ್ಕಳು, ಒಟ್ಟಾರೆ ಶೂದ್ರರು ಆರ್ಥಿಕ ವ್ಯವಸ್ಥೆಯಿಂದ ವಂಚಿತರಾಗಿದ್ದರು. ಮನುಧರ್ಮ ಶಾಸ್ತ್ರದ ಪ್ರಕಾರ ಯಾರಿಗೆ ಜನಿವಾರವಿಲ್ಲವೊ ಅವರೆಲ್ಲರೂ ಶೂದ್ರರೆ ಎಂಬುದು ಧಾರ್ಮಿಕ ಕಟ್ಟಳೆ ಎನ್ನುತ್ತಾ ಈ ವಂಚಿತ ಜನಸಮುದಾಯಕ್ಕೆ ಮನವರಿಕೆ ಮಾಡುವುದರಲ್ಲೆ ವೈದಿಕರು ತಲ್ಲೀನರಾಗಿದ್ದರು. ಇದರ ಲಾಭ ಕ್ಷತ್ರಿಯರಿಗೂ, ವೈಶ್ಯಯರಿಗೂ ಆಗುತ್ತಿತ್ತು. ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ರಾಗಿದ್ದರೂ ಕೂಡ ಅವರು ಬಹುಸಂಖ್ಯಾತರನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟು ಕೊಂಡಿದ್ದರು.

ಮಹಾನ್ ಅರ್ಥಶಾಸ್ತ್ರಜ್ಞರಾದ ಬಸವಣ್ಣನವರು ಈ ಮನುವಾದಿಗಳ ವಿಚಿತ್ರವಾದ ಆರ್ಥಿಕ ವ್ಯವಸ್ಥೆಯ ಎಲ್ಲ ರಹಸ್ಯವನ್ನು ಕಂಡುಕೊಂಡಿದ್ದರು. ಅದಕ್ಕಾಗಿ ಅವರು ಕಾಯಕ ಪ್ರಧಾನವಾದ ಮತ್ತು ಕಾಯಕ ಜೀವಿಗಳಿಗೆ ಘನತೆ ತರುವಂಥ ವ್ಯವಸ್ಥೆಯನ್ನು ನಿರ್ಮಿಸಿದರು. ಕಾಯಕವು ಹಣವನ್ನು ಸಂಪಾದಿಸಬೇಕೆ ಹೊರತು ಹಣವು ಹಣವನ್ನು ಹಡೆಯಬಾರದು ಎಂಬುದು ಬಸವಣ್ಣನವರ ದೃಢ ನಿರ್ಧಾರವಾಗಿತ್ತು.

"ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ
ಕಡಬಡ್ಡಿಯ ಕೊಡಲಾಗದು.
ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು.
ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ, ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ.
ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದುಃಖವಿಲ್ಲ.
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು."

–ಬಸವಣ್ಣನವರು

ಬಸವಣ್ಣನವರು ಈ ವಚನದಲ್ಲಿ ಸಂಪಾದಿಸಿದ ಸಂಪತ್ತನ್ನು ಶರಣಸಂಕುಲದ ಶಿವಶರಣರಿಗೆ ದಾಸೋಹಂ ಭಾವದಿಂದ ಕೊಡಬೇಕೆ ಹೊರತಾಗಿ ಕಡ ಅಥವಾ ಬಡ್ಡಿಯ ರೂಪದಲ್ಲಿ ಕೊಡುತ್ತಾ ಸಂಪತ್ತಿನ ಸಂಗ್ರಹಣೆ ಸಲ್ಲದೆಂಬ ಎಚ್ಚರಿಕೆ ಕೊಡುತ್ತಾರೆ. ಶಿವನ ಸೊಮ್ಮು ಶಿವನಿಗೆ ಸಂದಿತ್ತೆಂದು ಸಂತೃಪ್ತರಾಗಿ ತಾವು ಪಡೆದದ್ದನ್ನು ಸ್ವಾರ್ಥಕ್ಕೆ ಬಳಸದೆ ಸಾಮಾಜಿಕ ನಿಧಿಗೆ ಅರ್ಪಿಸಿ ಸತ್ಕಾರ್ಯಗಳಿಗೆ ವಿನಿಯೋಗಿಸಿದ್ದಾಗ ಅದು ಗುರು, ಲಿಂಗ, ಜಂಗಮರಿಗೆ ಪ್ರಸಾದವಾಗುತ್ತದೆ. ಹೀಗಾಗಿ ಕೊಟ್ಟದ್ದು ಹಿಂದಿರುಗಿ ಬಂದಿತ್ತೆಂಬ ಸಂತೋಷವಾಗಲಿ, ಬರಲಿಲ್ಲ ಎಂಬ ದುಃಖವಾಗಲಿ ಇರುವುದಿಲ್ಲ. ಶರಣರ ನೀತಿ ಎಂಥದ್ದು ಎಂದರೆ ಬಂದದ್ದರಲ್ಲಿ ತನಗೆ ಎಷ್ಟು ಬೇಕೊ ಅಷ್ಟು ತೆಗೆದುಕೊಂಡು ಉಳಿದದ್ದು ಶಿವನಿಧಿಗೆ ಸಲ್ಲಿಸುವ ಸದ್ಗುಣ ಸಂಪನ್ನರಾಗಿದ್ದರು.

"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮರೇಶ್ವರ ಲಿಂಗದ
ಸೇವೆಯುಳ್ಳನ್ನಕ್ಕರ."

–ಆಯ್ದಕ್ಕಿ ಲಕ್ಕಮ್ಮ

ಆಯ್ದಕ್ಕಿ ಲಕ್ಕಮ್ಮನವರು ಹೇಳ್ತಾರೆ ಮನಸ್ಸು ಶುದ್ಧವಿಲ್ಲದವರಿಗೆ ಬಡತನವೇ ಹೊರತು, ಚಿತ್ತಶುದ್ಧಿಯಾಗಿ ಮಾಡುವ ಕಾಯಕವು ನಮ್ಮ ದೈಹಿಕ ಮತ್ತು ಬೌದ್ಧಿಕ ಶಕ್ತಿಯನ್ನು ಕಾಪಾಡುತ್ತಾ ಮಾನಸಿಕ ಒತ್ತಡಗಳಿಂದ ರಕ್ಷಿಸುವುದು. ಪರಾವಲಂಬಿಗಳಾಗದೆ ಕಾಯಕಶೀಲರಿಗೆ ಯಾವ ಕೊರತೆಯಾಗುವುದಿಲ್ಲ ಆದ್ದರಿಂದ ಕಾಯಕವು ವಿಶ್ವಮಾನ್ಯವಾಗಿದೆ.

ಬಸವಾದಿ ಶರಣರ ಪ್ರಕಾರ ಭಕ್ತಿ ಎಂಬುದು ಬದುಕಿನ ಎಲ್ಲ ಸ್ತರಗಳಲ್ಲಿ ಸಮಾನತೆಯನ್ನು ಸಾಧಿಸುವ ಕ್ರಿಯೆ. ಶರಣರು ಸ್ವಇಚ್ಛೆಯಿಂದ ಬಡವರಾಗುವ ಮೂಲಕ ಶ್ರೀಮಂತ ಸಮಾಜವನ್ನು ಸೃಷ್ಟಿಸಿದರು! ಕೇಲವೇ ಜನರು ಶ್ರೀಮಂತರಾಗಿರುವ ಸಮಾಜ ಬಡ ಸಮಾಜವಾಗಿರುತ್ತದೆ. ಆದರೆ ನಮಗಿಂದು ಬೇಕಾಗಿರುವುದು ಶ್ರೀಮಂತ ಸಮಾಜವೇ ಹೊರತು ಶ್ರೀಮಂತರಲ್ಲ. ಶ್ರೀಮಂತರಿದ್ದಲ್ಲಿ ವಸ್ತುಮೋಹದಿಂದಾಗಿ ಕೊಳ್ಳುಬಾಕತನವೇ ಸಂಸ್ಕೃತಿಯಾಗಿ ಬೆಳೆಯುತ್ತದೆ. ಅರಣ್ಯ ನಾಶವಾಗುತ್ತದೆ. ಬಡವರನ್ನು ಜಾತಿ, ಮತ ಮತ್ತು ಧರ್ಮಗಳಲ್ಲಿ ವಿಂಗಡಿಸುವ ಮೂಲಕ ಅವರ ಮಧ್ಯೆ ಘರ್ಷಣೆಗಳಾಗುವಂತೆ ನೋಡಿಕೊಳ್ಳಲಾಗುತ್ತದೆ. ಆದರೆ ವ್ಯಕ್ತಿಗಳ ಬದಲಿಗೆ ಇಡೀ ಸಮಾಜವೇ ಶ್ರೀಮಂತವಾದಲ್ಲಿ ಎಲ್ಲ ತೆರನಾದ ಅಹಂಕಾರ ನಿರ್ನಾಮವಾಗುತ್ತದೆ. ಅಹಂಕಾರ ಇಲ್ಲವಾದ ಬಳಿಕ ಮಾಡುವ ಸತ್ಯಶುದ್ಧ ಕಾಯಕದಿಂದ ಮನಸ್ಸು ಪವಿತ್ರವಾಗುತ್ತದೆ.

ಸಾಮ್ರಾಜ್ಯಶಾಹಿಗಳು ಬೀಸಿದ ಜಾಗತೀಕರಣದ ಜಾಲದಲ್ಲಿ ಜಗತ್ತು ಸಿಕ್ಕಿಕೊಂಡು ಒದ್ದಾಡುತ್ತಿದೆ. ವಚನ ಸಾಹಿತ್ಯ ಸಾರುವ ಭಕ್ತಿಸಾಮ್ರಾಜ್ಯದ ಸ್ಥಾಪನೆಯಾದಾಗ ಮಾತ್ರ ಜಗತ್ತು ಎಲ್ಲ ರೀತಿಯ ಹಿಂಸೆ, ಸುಲಿಗೆ, ಗಲಭೆ ಮತ್ತು ಕ್ರೌರ್ಯದಿಂದ ಮುಕ್ತವಾಗುವುದು. ಬಸವಾದಿ ಶರಣರ ಬಡ್ಡಿರಹಿತ ಅರ್ಥಶಾಸ್ತ್ರದಲ್ಲಿ ಕಾಯಕ, ಪ್ರಸಾದ, ದಾಸೋಹ, ಅಂದರೆ ಯೋಗ್ಯ ಉತ್ಪಾದನೆ , ಯೋಗ್ಯ ಬಳಕೆ ಮತ್ತು ಯೋಗ್ಯ ವಿತರಣೆ ಇವು ಮೂರು ಪ್ರಮುಖ ಅಂಶಗಳಾಗಿವೆ. ಈ ಮೂರು ಆರ್ಥಿಕ ಪ್ರಕ್ರಿಯೆಗಳನ್ನು ಜಾಗತಿಕರಣದ ಮೂಲಕ ಹಾಳುಗೆಡವಿ ಭಾರತದಂಥ ಬಡರಾಷ್ಟ್ರಗಳನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಳ್ಳುವುದೇ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮುಖ್ಯ ಉದ್ದೇಶವಾಗಿದೆ. ರೈತರು, ಕೃಷಿಕಾರ್ಮಿಕರು, ದಲಿತರು, ಮಹಿಳೆಯರು ಮತ್ತು ಎಲ್ಲ ವಿಧವಾದ ಕಾಯಕಜೀವಿಗಳ ಧರ್ಮವಾದ ಈ ಬಸವಧರ್ಮ ಇಂಥ ಜಾಗತಿಕ ಬಿಕ್ಕಟ್ಟನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿದೆ.

ವಚನಕಾರರ ಅರ್ಥಶಾಸ್ತ್ರದ ಆಧಾರಸ್ತಂಭಗಳೆಂದರೆ ನಿಸರ್ಗ ಸಂಪತ್ತನ್ನು ಉಳಿಸುವುದು, ಖಾಸಗಿ ಆಸ್ತಿಯನ್ನು ತ್ಯಜಿಸುವುದು ಮತ್ತು ನೈತಿಕ ಶಕ್ತಿಯನ್ನು ಹೊಂದುವುದು.ಈ ಕಾರಣದಿಂದಲೇ ಜಗತ್ತಿನ ಎಲ್ಲ ಅರ್ಥಶಾಸ್ತ್ರಗಳು ಸೋತರೂ ಶರಣರ ಅರ್ಥಶಾಸ್ತ್ರ ಸೋಲುವುದಿಲ್ಲ. ಅವರ ಉತ್ಪಾದನಾ ವ್ಯವಸ್ಥೆ ನೈತಿಕತೆಯ ಮೇಲೆ ನಿಂತಿದೆ. ಉತ್ಪಾದನೆಯ ಬಳಕೆಯು ಪ್ರಸಾದ ಪ್ರಜ್ಞೆಯ ಮೇಲೆ ನಿಂತಿದೆ. ಮತ್ತೇ ಉತ್ಪನ್ನಗಳ ಸಾಮಾಜಿಕ ವಿತರಣೆ ದಾಸೋಹಂ ಭಾವದ ಮೇಲೆ ನಿಂತಿದೆ. ಹೀಗೆ ಕಾಯಕ ಎಂಬುದು ಏನನ್ನು ಉತ್ಪಾದಿಸಬೇಕು ಎಂಬದೇ ನೈತಿಕತೆಯಾದರೆ ಉತ್ಪಾದಿಸಿದನ್ನು ಯಾವುದೇ ದುಂದುಗಾರಿಕೆ ಇಲ್ಲದೇ ಹೇಗೆ ಸದ್ಬಳಕೆ ಮಾಡಬೇಕು ಎಂಬುದು ಆರ್ಥಿಕತೆಯಾಗುತ್ತದೆ ಇನ್ನೂ ಮಿಗುತಾಯವನ್ನು ಹೇಗೆ ಸಾಮಾಜಿಕ ವಿತರಣೆಗೆ ಒಳಪಡಿಸಬೇಕು ಎಂಬುದು ವೈಚಾರಿಕತೆ ಈ ರೀತಿಯಾಗಿ ಆರ್ಥಿಕ ಸಂಸ್ಕಾರವನ್ನು ಒಳಗೊಂಡ ವಚನಗಳು ಶರಣರದ್ದಾಗಿವೆ. ಬಸವಣ್ಣನವರು ಶರಣರ ವ್ಯಕ್ತಿತ್ವವನ್ನು ಕುರಿತು ಬಹು ಸುಂದರವಾಗಿ ವರ್ಣಿಸಿದ್ದಾರೆ.

"ಮನೆ ನೋಡಾ ಬಡವರು; ಮನ ನೋಡಾ ಘನ.

ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು.

ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕುಂಟು

ಕೂಡಲಸಂಗನ ಶರಣರು ಸ್ವತಂತ್ರಧಿರರು.

–ಬಸವಣ್ಣನವರು

ನವಸಮಾಜವಾಗಿ ಕಂಗೊಳಿಸುತ್ತಿದ್ದ ಶರಣಸಂಕುಲದಲ್ಲಿ ಶರಣರ ಮನೆ ನೋಡಿದರೆ ಬಡವರ ಮನೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತಿತ್ತು. ಆದರೆ ಅವರ ಮನಸ್ಸು ದೇವಸಾನಿಧ್ಯದಿಂದ ಸಂಪದ್ಭರಿತವಾಗಿತ್ತು. ಶರಣರು ಎಲ್ಲ ಬಾಹ್ಯ ಆಕಷಣೆಗಳಿಂದ ಮುಕ್ತರಾಗಿದ್ದು ಪಂಚೇಂದ್ರಿಯಗಳ ಮೇಲೆ ವಿಜಯ ಸಾಧಿಸಿದ ವೀರರಾಗಿದ್ದರು. ಅವರು ಸರ್ವಾಂಗ ಕಲಿಗಳೆಂದರೆ ಎಲ್ಲ ರೀತಿಯ ನೈಪುಣ್ಯದೊಂದಿಗೆ ಗಂಡಾಂತರವನ್ನು ಎದುರಿಸುವ ಕಾಯಕಜೀವಿಗಳಾಗಿದ್ದರು. ಈ ಲೌಕಿಕ ಅರ್ಥವನ್ನು ಮೀರಿದ ತಾತ್ವಿಕ ಅರ್ಥವನ್ನೂ ಈ ಸಾಲು ಒಳಗೊಂಡಿರುತ್ತದೆ. 'ಪಸರಕ್ಕನುವಿಲ್ಲ; ಸಂಪತ್ತಿನ ಸಂಗ್ರಹಣೆಗೆ ಹಾತೊರೆಯದೇ ಸ್ವಾವಲಂಬಿಗಳಾಗಿದ್ದ ಶರಣರು ತಮ್ಮ ಮನೆಗೆ ಬಂದ ಅತಿಥಿ ಸತ್ಕಾರದಲ್ಲಿ ಯಾವ ಕೊರತೆ ಇರುತ್ತಿರಲಿಲ್ಲ. ಅದು ಹೇಗೆ ಸಾಧ್ಯ ಎಂದರೆ ಅವರ ನಿಜವಾದ ಭಂಡಾರ ಅವರ ದೇಹ ಮತ್ತು ಮನಸ್ಸೇ ಆಗಿತ್ತು. ಅವರಿಗೆ ತಮ್ಮ ಸಾಮರ್ಥ್ಯದ ಮೇಲೆ ಅಷ್ಟೊಂದು ವಿಶ್ವಾಸವಿತ್ತು. ದುಡಿದು ತಿನ್ನುವವರ ಧೈರ್ಯವೇ ಧೈರ್ಯ ಆ ಧೈರ್ಯದಿಂದಾಗಿಯೇ ಅವರು ನಾಳೆಯ ಬಗ್ಗೆ ಯೋಚನೆ ಮಾಡುತ್ತಿರಲಿಲ್ಲ. ಯಾರಿಗಾದರೂ ಆರ್ಥಿಕ ಅಡಚಣೆಯಾದಲ್ಲಿ ಬಸವಣ್ಣನವರು ಸ್ಥಾಪಿಸಿದ ಸಾಮೂಹಿಕ ಶಿವನಿಧಿಯಂತೂ ಇದ್ದೇ ಇತ್ತು. ಕಾಯಕಜೀವಿಗಳು ತಾವು ಗಳಿಸಿದುದ್ದನ್ನು ಶಿವನ ಪ್ರಸಾದವೆಂದು ಭಾವಿಸಿ ಸಂಗ್ರಹವಾಗುವಂಥದ್ದನ್ನೆಲ್ಲ ಶಿವನಿಧಿ ಎಂಬ ಸಾಮೂಹಿಕ ನಿಧಿಗೆ ಅರ್ಪಿಸುತ್ತಿದ್ದರು. ಶರಣರು ಬಹುತೇಕವಾಗಿ ಆರ್ಥಿಕ ಸಮಸ್ಯೆಯಿಂದ ಬಳಲುತ್ತಿರಲಿಲ್ಲ. ಅಂತೆಯೇ ಅವರು ಮಾನಸಿಕ ಗುಲಾಮಗಿರಿಗೆ ಒಳಗಾಗದೆ ಕೂಡಲಸಂಗನ ಶರಣರು ಸ್ವತಂತ್ರ ಧೀರರಾಗಿದ್ದವರು.

ಶರಣಸಮಾಜದಲ್ಲಿ ವಿಶಿಷ್ಟವಾದ ಆರ್ಥಿಕ ವ್ಯವಸ್ಥೆಯಿತ್ತು. ಅಲ್ಲಿ ದುಂದುವೆಚ್ಚಕ್ಕೆ ಅವರು ಅವಕಾಶ ಕೊಡಲಿಲ್ಲ. ಸಂಪತ್ತಿನ ಶೇಖರಣೆಗೆ ಆಸ್ಪದವಿಲ್ಲ. ಇಲ್ಲಿ ಉಳಿತಾಯವೇ ಆದಾಯ ಆ ಆದಾಯ ಸಾಮಾಜಿಕ ಶಿವನಿಧಿಗೆ ಸಲ್ಲುವಂಥದ್ದು! ಯಾರ ಹಂಗಿಲ್ಲದೆ ಉನ್ನತ ವಿಚಾರಗಳೊಂದಿಗೆ ಸರಳವಾದ ಜೀವನ ನಡೆಸುತ್ತಾ ಸ್ವತಂತ್ರ ಮತ್ತು ಉದಾತ್ತ ವ್ಯಕ್ತಿತ್ವವನ್ನು ಹೊಂದಿದ್ದ ಶರಣರು ಯಾವುದೇ ರೀತಿಯ ಮೂಢನಂಬಿಕೆಗೆ ಒಳಗಾಗಲ್ಲಿಲ್ಲ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಸೈದ್ಧಾಂತಿಕ ಮತ್ತು ವಿಶ್ವದ ಎಲ್ಲರನ್ನೂ ಒಳಗೊಳ್ಳುವ ಧಾರ್ಮಿಕ ಚಳವಳಿಯ ಮೂಲಕ ಬಸವಣ್ಣನವರು ಇಷ್ಟಲಿಂಗವನ್ನು ಸೃಷ್ಟಿಸಿದ್ದಾರೆ. ಈ ಇಷ್ಟಲಿಂಗ ಪೂಜೆಗೆ ಯಾವುದೇ ರೀತಿಯ ಖರ್ಚು ವೆಚ್ಚಗಳಿಲ್ಲದೇ ತಮ್ಮೊಳಗಿನ ಮಹಾಘನದೊಡನೆ ಬೆರೆಯುವ ಕ್ರಮವನ್ನು ಶರಣರು ಅರಿತುಕೊಂಡಿದ್ದರು. ಹೀಗೆ ಲಿಂಗವಂತ ಧರ್ಮದ ಪ್ರತಿಯೊಂದು ಅಂಶ ಮಾನವಕುಲದ ಏಕತೆಯ ಸಂಕೇತವಾಗಿದೆ.

ಈ ವಸ್ತು ನನ್ನದು ಎಂಬುದು ಮನುವಾದಿಗಳ ಅರ್ಥಶಾಸ್ತ್ರವಾದರೆ ಈ ವಸ್ತು ನಮ್ಮೆಲ್ಲರದು ಎಂಬುದು ವಚನಕಾರರ ಅರ್ಥಶಾಸ್ತ್ರವಾಗಿದೆ. ಶರಣನಾದವನು "ಧನದಲ್ಲಿ

ಶುಚಿ ಪ್ರಾಣದಲ್ಲಿ ನಿರ್ಭಯ: ಇದಾವಂಗಳವಡುವುದಯ್ಯಾ ?..... ಕೂಡಲಸಂಗಮದೇವಾ ನೀನೊಲಿದ ಶರಣಂಗಲ್ಲದಿಲ್ಲ" ಎಂದು ಬಸವಣ್ಣನವರು ಹೇಳೀದ್ದಾರೆ. ಅಂತೆಯೇ ಈ ಕಾಯಕತತ್ವಕ್ಕೆ ಮನಸೆಳೆದು ಕಾಶ್ಮೀರದಿಂದ ರಾಜ ಮಾಹಾದೇವ ಭೂಪಾಲ ಸತಿ ಗಂಗಾದೇವಿಯೊಡನೆ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕದಿಂದಾಗಿ ಮೊಳಿಗೆ ಮಾರಯ್ಯ ಮಹಾದೇವಿ ದಂಪತಿ ಎನಿಸಿಕೊಂಡರು.

"ಆನೆ ಕುದುರೆ ಭಂಡಾರವಿರ್ದಡೇನೋ ?

ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಥ ಮಂಚ.

ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ.

ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೋ ?

ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ.

ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ.

–ಮೋಳಿಗೆ ಮಾರಯ್ಯ

ರಾಜ್ಯವನ್ನು ತ್ಯಜಿಸಿ ಕಾಯಕವನ್ನು ಮೈಗೂಡಿಸಿಕೊಂಡ ಮೋಳಿಗೆ ಮಾರಯ್ಯನವರು ಖಾಸಗಿ ಆಸ್ತಿಯನ್ನು ತಿರಸ್ಕರಿಸುತ್ತಾರೆ. ಆನೆ, ಅಶ್ವಗಳಿಂದ ಕೂಡಿದ ಸೈನ್ಯವಿದ್ದು, ಮುತ್ತು, ರತ್ನ. ಚಿನ್ನದ ನಾಣ್ಯಗಳಿಂದ ತುಂಬಿದ ಖಜಾನೆ ಏನೆಲ್ಲಾ ಇರಬಹುದು. ಆದರೆ ಇಷ್ಟೆಲ್ಲಾ ಇದ್ದವನಿಗೆ ಊಟಕ್ಕೆ ಬಹಳವಾದರೆ ಅರ್ಧಸೇರು ಅಕ್ಕಿ ಬೇಕು. ಒಂದು ಹಸುವಿನ ಹಾಲು ಸಾಕು. ಮಲಗಲು ಅರ್ಧ ಮಂಚ ಹೆಚ್ಚಾಯಿತು. ಉಳಿದ ಸಂಪತ್ತು ಹೆಸರಿಗೆ ಮಾತ್ರ. ಆದ್ದರಿಂದ ಈ ಅರ್ಥಹೀನ ಶ್ರೀಮಂತಿಕೆಯನ್ನು ನಂಬಿ ಹಾಳಾಗಬೇಡ ಎಂದು ಮೊಳಿಗೆ ಮಾರಯ್ಯನವರು ಮಾನವ ಜನಾಂಗಕ್ಕೆ ಸಾರಿದ್ದಾರೆ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಹೇಳುತ್ತಾಳೆ "ಆಸೆಯೆಂಬುದು ಭವದ ಬೀಜ. ನಿರಾಸೆಯೆಂಬುದು ನಿತ್ಯ ಮುಕ್ತಿ" ಎಂದು. ಮನುಷ್ಯ ಈ ವಸ್ತುಮೋಹದಿಂದಾಗಿ ಎಲ್ಲವೂ ತನಗೆ ಬೇಕೆಂಬ ಬಯಕೆಯಿಂದ ಕಾಯಕದಲ್ಲಿ ತೊಡಗಬಾರದು. ಏಕೆಂದರೆ ಆ ಬಯಕೆಯೆ ಭವದ ಬೀಜವಾಗುತ್ತದೆ. ವಸ್ತುಗಳ ಮೇಲಿನ ಮೋಹ ಕಳೆದುಕೊಂಡು ಸಮಾಜಪ್ರೇಮಿಯಾಗಿ ಬದುಕಿದಾಗ ಮಾತ್ರ ಗುಲಾಮಗಿರಿಯಿಂದ ಮುಕ್ತಿ ಕಾಣಲು ಸಾಧ್ಯವೆಂದು ಕಾಳವ್ವೆ ಸೂಚಿಸಿದ್ದಾಳೆ. ಇದೇ ಅರ್ಥದಲ್ಲಿ ಡಕ್ಕೆ ಭಾರಿಸುತ್ತ ತತ್ವ ಸಾರುತ್ತಿದ್ದ ಡಕ್ಕೆಯ ಬೊಮ್ಮಣ್ಣನವರು ಕೂಡ ಹೇಳುತ್ತಾರೆ "ಆಸೆಯೆಂಬುದೆ ಮಾರಿ, ನಿರಾಸೆಯೆಂಬುದೆ ದೇವಪದ" ಎನ್ನುತ್ತಾ ಸಂಪತ್ತಿನಲ್ಲಿ ನಿರಾಶೆ ತೋರುವುದಕ್ಕೆ ದೇವಪದ ಎಂದರು.

ಹುಲ್ಲು ಕೊಯ್ದು ಹಗ್ಗ ಹೊಸೆದು ಅವುಗಳನ್ನು ಮಾರಿ ಜೀವನ ಸಾಗಿಸುತ್ತಿದ್ದ ನೂಲಿಯ ಚಂದಯ್ಯನವರು "ನೇಮದ ಕೂಲಿಯ ಬಿಟ್ಟು, ಹೇಮದಾಸೆಗೆ ಕಾಮಿಸಿ

ದ್ರವ್ಯವ ಹಿಡಿದಡೆ ತಾ ಮಾಡುವ ಸೇವೆ ನಷ್ಟವಯ್ಯಾ" ಎನ್ನುವರು. ಚಂದಯ್ಯನವರು ಲಿಂಗಯ್ಯನಿಗೆ ಕಾಯಕಮಾಡುವುದಾದರೆ ಸ್ವೀಕರಿಸುವೆನೆಂದಾಗ ಲಿಂಗಯ್ಯನು ಹಗ್ಗ ಹೊಸೆದು ಮಾರಿ ಹೆಚ್ಚಿನ ಆದಾಯವನ್ನು ತಂದು ಚಂದಯ್ಯನವರಿಗೆ ಕೊಟ್ಟಾಗ, ಹೆಚ್ಚಿನ ಹಣವನ್ನು ನೋಡಿ ಸಿಡಿಮಿಡಿಗೊಳ್ಳುತ್ತಾ ನಮ್ಮ ಕಾಯಕದ ಕೂಲಿ ಎಷ್ಟು ಇದೆಯೋ ಅಷ್ಟು ತರುವುದನ್ನು ಬಿಟ್ಟು ಹೆಚ್ಚಿನದ್ಯಾಕೆ? ಎಂದು ಲಿಂಗಯ್ಯನಿಗೆ ಪ್ರಶ್ನಿಸುತ್ತಾರೆ. ಇದೇ ಅರ್ಥದಲ್ಲಿ "ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ ?...... ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ" ಎಂದು. ಆಯ್ದಕ್ಕಿ ಲಕ್ಕಮ್ಮ ಪತಿ ಆಯ್ದಕ್ಕಿ ಮಾರಯ್ಯನವರು ಹೆಚ್ಚಿನ ಅಕ್ಕಿಯನ್ನು ಆಯ್ದು ತಂದಾಗ ಪ್ರಶ್ನಿಸುವುದರ ಮೂಲಕ ಶಿವಭಕ್ತರು ತಮ್ಮ ಸ್ವಕಾಯಕದಿಂದ ಗಳಿಸಿದ್ದರಲ್ಲಿ ತಮಗೆ ಬೇಕಾದಷ್ಟನ್ನು ಮಾತ್ರ ಪ್ರಸಾದವೆಂದು ಸ್ವೀಕರಿಸಿ ಉಳಿದೆಲ್ಲವನ್ನೂ ದಾಸೋಹ ರೂಪದಲ್ಲಿ ಶರಣಸಂಕುಲಕ್ಕೆ ಅರ್ಪಿಸಿ ಸಾತ್ವಿಕ ಬಾಳನ್ನು ಬಾಳುತ್ತಾ ಶರಣಧರ್ಮದ ಶ್ರೇಷ್ಠತೆಯನ್ನು ಸಾರುತ್ತಾಳೆ. ಆಸೆಬುರುಕರನ್ನು ದೇವರು ಮೆಚ್ಚುವುದಿಲ್ಲ ಎನ್ನುತ್ತಾಳೆ.

"ಲಂಚವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.

–ಸತ್ಯಕ್ಕ

ಕಸಗುಡಿಸುವ ಕಾಯಕದ ಶರಣೆ ಸತ್ಯಕ್ಕ ಆತ್ಮಗೌರವದ ಪ್ರತೀಕವಾಗಿದ್ದಾಳೆ. ಅವಳಲ್ಲಿ ಎಂಥ ಆತ್ಮಬಲ, ಪ್ರಾಮಾಣಿಕತೆ, ತತ್ವನಿಷ್ಠೆ, ಕಾಯಕಶ್ರದ್ಧೆ ಮತ್ತು ಪರಮಾತ್ಮನಲ್ಲಿ ಅಚಲವಾದ ನಂಬಿಕೆಯಿತ್ತೆಂದು ಈ ವಚನದಿಂದ ಮನವರಿಕೆಯಾಗುತ್ತದೆ. ಕಸಗುಡಿಸುವ ಕಾಯಕದ ಸಂದರ್ಭದಲ್ಲಿ ಬೀದಿಯಲ್ಲಿ ಬಂಗಾರ, ರೇಷ್ಮೆವಸ್ತ್ರ ಬಿದ್ದಿದ್ದರೂ ಅವುಗಳನ್ನು ಮುಟ್ಟುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತಾಳೆ. ಶರಣಪರಂಪರೆಯಲ್ಲಿದ್ದ ಸತ್ಯಕ್ಕ ಪ್ರಮಥರಾಣೆ ಎಂದು ದೃಢನಿಶ್ಚಯದಿಂದ ನುಡಿಯುತ್ತಾಳೆ. ಭ್ರಷ್ಟಚಾರದ ಬದುಕು ಎಲ್ಲ ಕಾಲದಲ್ಲಿಯೂ ಇದೆ. ದೇವರ, ಧರ್ಮದ, ದಾರ್ಶನಿಕರ, ಸಮಾಜದ ಮತ್ತು

ಅಧಿಕಾರದ ಹೆಸರಿನಲ್ಲಿ ಈ ಭಷ್ಟಾಚಾರ ಎಂಬುದು ತನ್ನ ಕರಾಳ ಸ್ವರೂಪ ತೋರಿಸುತ್ತಲೆ ಇರುತ್ತದೆ. ಜನರು ಎಲ್ಲವನ್ನೂ ಸಹಿಸಿಕೊಳ್ಳುತ್ತಾ ಜೀವನ ಸಾಗಿಸುತ್ತಿದ್ದಾರೆ. ಆದರೆ ಸತ್ಯಕ್ಕ 'ನಾನು ಅನ್ಯಾಯದ ಧನದಿಂದ ದೂರವಿದ್ದೇನೆ' ಎಂದು ಹೇಳುವುದಲ್ಲದೆ ನಾನೇನಾದರೂ ಪರಧನಕ್ಕೆ ಆಸೆಮಾಡಿದರೆ ನನ್ನನ್ನು ನರಕಕ್ಕೆ ತಳ್ಳಿ ನನ್ನಿಂದ ದೂರ ಹೋಗು ಎಂದು ದೇವರಿಗೆ ನಿರ್ಭಿಡೆಯಿಂದ ಹೇಳುತ್ತಾಳೆ.

ವಚನಕಾರರು ಸಾಮಾಜಿಕ ಆರೋಗ್ಯ ಕಾಪಾಡಲು ಆರ್ಥಿಕ ಸ್ವಾವಲಂಬನೆ ಅತ್ಯವಶ್ಯಕ ಎಂದು ಭಾವಿಸಿದ ಅವರು ಸಂಪತ್ತನ್ನು ಸಂಪಾದಿಸುವುದು, ಸಂಪಾದಿಸಿದ್ದನ್ನು ಸದ್ವಿನಿಯೋಗ ಮಾಡುವ ವಿಧಾನಗಳನ್ನು ಕಂಡುಕೊಂಡರು. ಆದ್ದರಿಂದ ಅವರು ವ್ಯಕ್ತಿಗತವಾಗಿ ಹಣಕ್ಕೆ ಮಹತ್ವ ನೀಡಬೇಡಿರೆಂದರು. ಆದರೆ ಸ್ವಸ್ಥಸಮಾಜ ನಿರ್ಮಾಣಕ್ಕಾಗಿ ಹಣಕ್ಕೆ ಮಹತ್ವ ನೀಡಿರೆಂದು ಅನೇಕ ವಚನಕಾರರು ತಮ್ಮ ವಚನಗಳಲ್ಲಿ ವಿಧ ವಿಧವಾಗಿ ಹೇಳಿದ್ದಾರೆ.

ಸಾಮಾಜಿಕ ಸಂಪತ್ತಿನ ಪ್ರತಿಪಾದನೆ ಮಾಡುವ ಕಾಯಕಧರ್ಮ ಮತ್ತು ಇಂಥ ಚಿಂತನೆಯನ್ನು ಮಾನ್ಯ ಮಾಡುವ ಸಿದ್ಧಾಂತಗಳಿಂದ ಮಾತ್ರ ಈ ಪ್ರಥ್ವಿಯನ್ನು ಮುಂದಿನ ಜನಾಂಗಕ್ಕಾಗಿ ರಕ್ಷಿಸಿಡಲು ಸಾಧ್ಯವೆಂಬ ಕಳಕಳಿಯಿಂದ ಕೂಡಿದ ವಚನಗಳು ಶರಣರದ್ದಾಗಿವೆ. ಅಂತೆಯೇ ಬಸವಣ್ಣನವರು "ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬರು ನೀವೆಲ್ಲಾ ಕೇಳಿರಣ್ಣಾ:........ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು. ಕೂಡಲಸಂಗನ ಶರಣರಿಗೆ ಸವೆಸಲೇಬೇಕು" ಎಂದು ಹೇಳುತ್ತಾ ಮನುಷ್ಯ ಎಲ್ಲಿಯವರೆಗೆ ಧನದಾಸೆ ಬಿಡುವುದಿಲ್ಲವೊ ಈ ಸಾಮಾಜಿಕ ಅನಿಷ್ಟಗಳು ಹೋಗಲಾಡಿಸುವುದ್ದಕ್ಕೆ ಸಾಧ್ಯವಾಗುವುದಿಲ್ಲವೆಂದು ವಿಷಾದ ವ್ಯಕ್ತಪಡಿಸುತ್ತಾರೆ.

ಕಾಯಕ–ದಾಸೋಹ ತತ್ವಗಳು ಯಾಂತ್ರಿಕ ಕ್ರಿಯೆಗಳಲ್ಲ ಅರಿವು, ಆಚಾರದೊಂದಿಗೆ ದೇಹ ಬುದ್ಧಿ ಮನಸ್ಸುಗಳೊಂದಾಗಿ ಕ್ರಿಯೆಯಲ್ಲಿ ತಲ್ಲೀನವಾಗಬೇಕು. ಮನುಷ್ಯನು ಸರಳ ಸಹಜವಾದ ಬದುಕಿನಿಂದ ಮಾತ್ರ ಬಹುಕಾಲ ಬದುಕಬಲ್ಲನು. ಅದಕ್ಕಾಗಿ ಬಸವಣ್ಣನವರು ಮಾನವನ ಮನವೂಲಿಸಲು ಪ್ರಯತ್ನಿಸುತ್ತಾ "ಎಲೆ ಎಲೆ ಮಾನವಾ, ಅಳಿಯಾಸೆ ಬೆಡವೋ, ಕಾಳ ಬೆಳದಿಂಗಳು ಸಿರಿ ಸ್ಥಿರವಲ್ಲ!"ಎನ್ನುತ್ತಾರೆ. "ಕಲ್ಯಾಣವೆಂಬುದಿನ್ನಾರಿಗೆ ಹೋಗಬಹುದು ? ಹೊಗಬಾರದು, ಅಸಾಧ್ಯವಯ್ಯಾ. ಆಸೆ ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು" ಎಂಬ ಅಕ್ಕಮಾಹಾದೇವಿಯವರ ವಚನದಂತೆ, ಮತ್ತು ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಂತೆ ನಡೆಯುವ ಪ್ರಯತ್ನ ನಮ್ಮದಾಗಬೇಕಾಗಿದೆ.

******

ಶರಣರ ವೈಚಾರಿಕತೆ

ಬಸವಾದಿ ಶರಣರ ವಚನ ಸಂದರ್ಭ ಎನ್ನೋದು ಒಂದು ವಿಶಿಷ್ಟವಾದ ಘಟ್ಟವಾಗಿದೆ. ವಚನಕಾರರೆಂದರೆ ವೈಚಾರಿಕ ಪರಂಪರೆಯೊಂದರ ನಿರ್ಮಾತೃಗಳೆನ್ನಬಹುದು. ಶರಣರ ವೈಚಾರಿಕತೆಯ ಪ್ರತಿ ಹಂತದಲ್ಲೂ ಮಾನವೀಯ ಮೌಲ್ಯಗಳ ಅನಾವರಣವಿದೆ. ಸಾರ್ವಕಾಲಿಕವಾದ ಮೌಲ್ಯಗಳ ಅನುಸಂದಾನವಿದೆ. ಇಂತಹ ನೆಲೆಯಲ್ಲಿ ವಿಶಿಷ್ಟವಾಗಿರುವ ಆಯಾಮವೇ ವೈಚಾರಿಕತೆ ಎನ್ನಬಹುದು. ಆಧುನಿಕ ಕಾಲದ ಸಂದರ್ಭದ ಮಾನದಂಡಗಳ ಅನ್ವಯದ ಬದಲು ಸಾಮಾಜಿಕ, ಸಾಂಸ್ಕೃತಿಕ, ಮತ್ತು ಚಾರಿತ್ರಿಕ ಚೌಕಟ್ಟಿನಲ್ಲಿಯ ವಿಶ್ಲೇಷಣೆ ಕೈಗೊಂಡಲ್ಲಿ ವೈಚಾರಿಕತೆ ತಾತ್ವಿಕತೆಯ ನೆಲೆಯಾಗಿದೆ. ಶರಣರು ಅನುಭವಿಸಿ ಅನುಭಾವಕ್ಕಿಳಿಸಿದ ವಚನ ಚಳವಳಿಯ ಮೌಲ್ಯಗಳನ್ನು ಪ್ರತಿಪಾದಿಸಿದ, ವಚನಕಾರರು ವೈಚಾರಿಕತೆಯನ್ನು ರೂಪಸಿರುವುದನ್ನು ಹಲವಾರು ಬಗೆಯಲ್ಲಿ ಕಾಣಬಹುದು.

ಶರಣರ ಚಿಂತನೆಯಲ್ಲಿ ಅವರ ವೈಚಾರಿಕ ನಿಲುವಿಗೆ ಸಂಬಂದಿಸಿದಂತೆ ಬಹುಮುಖ್ಯವಾದ ಪ್ರಶ್ನೆಯೊಂದನ್ನು ನಾವು ಎದುರಿಸಬೇಕಾಗುತ್ತದೆ. ಬ್ರಹ್ಮ, ವಿಷ್ಣು, ಎಂದು ತೇತ್ತೀಸಕೋಟಿ ದೇವರುಗಳನ್ನು ಪೂಜಿಸುವುದಾಗಲಿ, ಮರ, ಮಡಕೆ, ಹಣಿಗೆ, ಕೊಳಗಗಳನ್ನು ಪೂಜಿಸುವುದಾಗಲಿ ಮೌಢ್ಯವೆನಿಸಿದರೆ ಕರದೊಳಗಿನ ಕಂತೆ ಕಟ್ಟಿದ ಇಷ್ಟಲಿಂಗವೆಂದು ಪೂಜಿಸುವುದೂ ಮೂಢತನವಾಗದೆ ? ಎಂಬುದು ಪ್ರಶ್ನೆಯಾದರೆ, ಅದಕ್ಕೆ ಉತ್ತರ ಏನು ಎಂದರೆ ಇದರಲ್ಲಿ ಯಾವುದೇ ಮೌಢ್ಯತೆಯಾಗಲಿ, ಮೂಢತನವಾಗಲಿ ಇಲ್ಲ ಎಂದು ಖಡಾಖಡಿಂತವಾಗಿ ಹೇಳಬಹುದು. ಏಕೆಂದರೆ ಶರಣರ ದೃಷ್ಟಿಯಲ್ಲಿ ಇಷ್ಟಲಿಂಗವೆಂಬುದು ದೇವರ ಸಂಕೇತವೇ ಹೊರತು ಅದೇ ದೇವರಲ್ಲ. ವಿಶ್ವವ್ಯಾಪಿ ದೇವರು "ಜಗದಗಲ, ಮುಗಿಲಗಲ, ಮಿಗೆಯಗಲ" ವಾಗಿ ಸರ್ವತೋಮುಖವಾಗಿ ವ್ಯಾಪಿಸಿರುವ ಆ ಪರಾತ್ಪರ ಪರವಸ್ತುವೆಂಬ ಘನತೇಜ

ಚೈತನ್ಯದ ಸಂಕೇತವಾಗಿದೆ. ಅದು ಬರೀ ಕಲ್ಲಾಗಿ ಉಳಿದರೆ ಉಳಿದ ದೈವಗಳಿಗೂ ಅದಕ್ಕೂ ವ್ಯತ್ಯಾಸವಿಲ್ಲ. ಹಾಗೆ ಮಾಡುವವರನ್ನು ವಚನಕಾರರು ಅಲ್ಲಗಳೆದಿದ್ದಾರೆ.

"ಬಂಡಿ ತುಂಬ ಪತ್ರೆಯ ತಂದು ಕಂಡ ಕಂಡಲ್ಲಿ ಮಜ್ಜನಕೆರೆವಿರಿ :

ತಾಪತ್ರಯವ ಕಳೆದು ಪೂಜಿಸಿ :

ತಾಪತ್ರಯವ ಲಿಂಗವನೊಲ್ಲ

ಕೂಡಲಸಂಗಮದೇವ ಬರಿಯುದಕದಲ್ಲಿ ನೆನೆವನೆ ? "

–ಬಸವಣ್ಣನವರು.

ಶರಣರು ಅರಿಯದೆ ಆಚರಿಸುವ ವೈದಿಕ– ಅವೈದಿಕ ಆಚರಣೆಗಳನ್ನು ಖಂಡಿಸಿದಂತೆಯೆ ವೃಥಾ ಆಚರಣೆಗಳಿಂದ ಇಷ್ಟಲಿಂಗ ಪೂಜೆಮಾಡುವವರ ಮೌಢ್ಯವನ್ನು ಖಂಡಿಸಿದ್ದಾರೆ. ತಮ್ಮಗೆ ಬಂದಿರುವ ತಾಪತ್ರಯ ನೀಗಿಸೆಂದು ಕಂಡ ಕಂಡಲ್ಲಿಂದ ನೀರು ಪತ್ರೆ, ಪುಷ್ಪಗಳನ್ನು ಪರಚಿಕೊಂಡು ಬಂದು ಪೂಜೆಮಾಡುವುದಲ್ಲ ಎನ್ನುತ್ತಾರೆ. ದೇವರು ಉದಕದಲ್ಲಿ ನೆನೆಯ ಅವನನ್ನು ನೆನೆಹಿನಲ್ಲಿ ನೆನೆಯಿಸಬೇಕು, ಅಂತರಂಗದ ಅರಿವಿನಿಂದ ಪೂಜಿಸಬೇಕು. ಮಾನವನ ದೇಹ ಇಂದ್ರಿಯ ಕರಣ, ನಿಜವಸ್ತುವಿನ ಚಿಚ್ಚೈತನ್ಯದ ಭಿತ್ತಿಯಲ್ಲಿ ಆ ಚೈತನ್ಯವೆ ರೂಪುಗೊಂಡು ಬೇರೆ ಬೇರೆ ನಾಮ ರೂಪ ಕ್ರಿಯೆಯಾಗುತ್ತದೆ. ಸುಜ್ಞಾನ ವಿಕಾಸವಾಗಿ ಸದ್ಭಕ್ತಿ ಪುಷ್ಪವಾದರೆ ಲಿಂಗದ ದಿವ್ಯ ಪರಿಮಳ, ಲಿಂಗಾನಂದದ ದಿವ್ಯ ಮಕರಂದ, ಲಿಂಗವಿಸ್ತಾರದ ದಿವ್ಯರೂಪ ಸೌಂದರ್ಯ ಹೀಗೆ ಮರ್ತ್ಯದ ಮಹಾದಾನಂದವನ್ನು ದಿವ್ಯತೆಯಿಂದ ಅಲಂಕಾರಗೊಳಿಸುತ್ತದೆ. ಅದಕ್ಕೆ ಸಿದ್ಧರಾಮೇಶ್ವರರು ವಚನವೊಂದರಲ್ಲಿ ಹೇಳ್ತಾರೆ.

"ನೀರಿಲ್ಲದಲ್ಲಿ ಜಳಕವ ಮಾಡಿ,

ತರುವಿಲ್ಲದಲ್ಲಿ ಪುಷ್ಪವನ್ನೆತ್ತಿ,

ಕರವಿಲ್ಲದೆ ಪೂಜಿಸಬಲ್ಲಡೆ ಜಂಗಮವೆಂಬೆ ಕಾಣಾ,

ಕಪಿಲಸಿದ್ಧಮಲ್ಲಿಕಾರ್ಜುನದೇವಾ, ತ್ರಿಕರಣಶುದ್ಧನಾಗಿ."

–ಸಿದ್ಧರಾಮೇಶ್ವರರು.

ಶಿವಯೋಗಿ ಸಿದ್ಧರಾಮೇಶ್ವರರು ಮನದ ಸಂಕಲ್ಪ ಮನದ ವಿಕಲ್ಪವಳಿದು, ಕಪಿಲಸಿದ್ಧಮಲ್ಲಿಕಾರ್ಜುನನೇ ಅಂತರಂಗದೊಳಗೆ ತುಂಬಿಕೊಂಡಾಗ ಸಿದ್ಧರಾಮಯ್ಯನವರ ಕರಸ್ಥಲದಲ್ಲಿ ಪ್ರಾಣದ ಅಂಗೈಯಲ್ಲಿ ಜ್ಞಾನದ ಮೊನೆಯಲ್ಲಿ ಹಿಡಿದು ಪೂಜಿಸುವ ಇಷ್ಟ, ಪ್ರಾಣ, ಭಾವಲಿಂಗಗಳು ಮನಸ್ಥಲದ ಅರಿವು ಭೇದಿಸಿಕೊಂಡು ತನು ಮನ ಭಾವಗಳಲ್ಲಿ ತ್ರಿಕರಣಶುದ್ಧನವಾಗಿ ಸರ್ವಾಂಗ ಲಿಂಗಿಯಾದೆನು. ಕರ್ಮಯೋಗದಿಂದ ಶಿವಯೋಗದ ಕಡೆ, ಕ್ರಿಯೆಯಿಂದ ಜ್ಞಾನದ

ಕಡೆಗೆ ಮಹೋನ್ನತ ಸಾಧಕರಾಗಿದ್ದ ಶಿವಯೋಗಿ ಸಿದ್ಧರಾಮೇಶ್ವರರು ವಚನ ಚಳವಳಿಯಲ್ಲಿ ವಿಶಿಷ್ಟ ವಚನಕಾರರಾಗಿ ಕಾಣುತ್ತಾರೆ.

ನಾದ ಬಿಂದು ಕಳೆ ಮೊಳೆದೋರದಂದು, ದೇಹ ದೇಹಿಗಳ ಉತ್ಪತ್ತಿಯಾಗದಂದು, ಜೀವಾತ್ಮ ಪರಮಾತ್ಮ ಭೇದ ಇಲ್ಲದಂದು, ಸಕಲ ಸಚರಾಚರಗಳು ಸುಳಿಯದಂದು ಇರುವ ಒಂದು ದಿವ್ಯ ವಸ್ತುವೇ ಸ್ವಯಂಭು. ಏನೆಂದನಲಿಲ್ಲದ ಆ ಮಹಾಘನವು ತನ್ನ ಲೀಲೆಯಿಂದ ತಾನೇ ಸ್ವಯಂಭು ಲಿಂಗವಾಯಿತು. ಒಂದೇ ವಸ್ತುವು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮವಾಯಿತು. ಆ ಚಿತ್ಘನ ಸಾನಿಧ್ಯ ಪ್ರಭೆಯನ್ನು ಗ್ರಹಿಸಿಯೇ ಸಕಲ ವಿಶ್ವ ಪ್ರಕಾಶಿಸುತ್ತಿದೆ. ವಿಶ್ವಪ್ರಪಂಚದ ಜನ್ಮಸ್ಥಿತಿ ಲಯಕ್ಕೆ ತಾನೆ ಮೂಲ ಕಾರಣವಾಗಿ, ವಿಶ್ವಚೈತನ್ಯಕ್ಕೆ ತಾನೆ ರಸರಕ್ತವಾಗಿ, ವಿಶ್ವದ ಒಳಹೊರಗೆಲ್ಲ ತುಂಬಿ ತುಳುಕಿ, ಹರಿವ ಪರಾತ್ಪರ ಪರಮಾತ್ಮನ ಅದ್ಭುತ ಲೀಲಾರಂಗದ ಮಹಿಮೆಯನ್ನು ವರ್ಣಿಸಲಾಗದು. ಆ ಸೂತ್ರಧಾರಿಯ ಜಗದಾಟವನ್ನು ಅರಿತು ಬಾಳಿ ಬೆಳಗಿದವರು ಶರಣರು.

"ಅವನಿ ಅಂಬರ ಉದಯಿಸದಂದು
ಒಂದು ತುಂಬಿದ ಕೊಡನ ಕಂಡೆ
ಆ ಕೊಡನ ನೆತ್ತಿದವರಿಲ್ಲ, ಇಳುಹಿದವರಿಲ್ಲ.
ಆ ಕೊಡ ತುಳುಕಿದಲ್ಲಿ ಒಂದು ಬಿಂದು ಕೆಳಕ್ಕೆ ಸಿಡಿಯಿತ್ತ ಕಂಡೆ
ಆ ಬಿಂದುವಿನಲ್ಲಿ ಅನಂತ ದೇವತಾ ಮೂರ್ತಿಗಳು ಹುಟ್ಟಿತ್ತ ಕಂಡೆ
ಇದು ಕಾರಣ, ಚಿಕ್ಕಯ್ಯಪ್ರಿಯ
ಸಿದ್ಧಲಿಂಗನ ಲೀಲಾಮೂಲವ ಕಂಡು ಇಲ್ಲ ಇಲ್ಲವೆನುತಿರ್ದೆನು."

–ಘಟ್ಟಿವಾಳಯ್ಯ

ಘಟ್ಟಿವಾಳಯ್ಯನವರು ಹೇಳ್ತಾರೆ ಭೂಮಿ ಆಕಾಶ ಏನೇನು ಇಲ್ಲದೇ ಇರುವಾಗ ಬಟ್ಟ ಬಯಲಿನೊಳಗೆ ಏನೂ ಎನಲ್ಲಿಲ್ಲದ ಶೂನ್ಯಲಿಂಗದಲ್ಲಿ ನಾದಬಿಂದು ಕಳೆಚಿತ್ ಮೂಲ ಸೇರಿ ಘನೀಭವಿಸಿ ಶಿವಶಕ್ತ್ಯಾತ್ಮಕವಾಗಿ ತುಳುಕಿ ಒಂದು ಬಿಂದು ಸಿಡಿಯಿತ್ತು. ಅದರಿಂದ ಒಂದು ಎರಡಾಗಿ ಹೊರಹೊಮ್ಮಿ ಪ್ರಕಾಶ ರೂಪವಾಯಿತು. ಅಖಂಡ ತೇಜೋಮೂರ್ತಿಯಪ್ಪ ಮಹಾಲಿಂಗದ ಚೈತನ್ಯವುಳ್ಳ ಚಿತ್ಶಕ್ತಿಯು ತನ್ನ ಲೀಲೆಯಿಂದ ಸೃಷ್ಟಿಯಾಗಿ ವಿಸ್ತರಿಸಿ ಪಂಚಭೂತಗಳಿಂದ ಕೂಡಿದ ಜೀವರಾಶಿಗಳು ಮತ್ತು ಪ್ರಕೃತಿಯ ಉದಯವೇ ಈ ಬ್ರಹ್ಮಾಂಡವಾಯಿತು ಎನ್ನುತ್ತಾರೆ. ಆ ಬ್ರಹ್ಮಾಂಡದ ಆಂತರ್ಯದ ಒಳತಿರುಳಿನ ರಹಸ್ಯ ಅರಿತು "ಜೀವಜಾಲದಲ್ಲಿದೆ ಚರಾಚರವೆಲ್ಲಾ" ನಾವು ಮತ್ತು ನಮ್ಮೊಳಗಿನ ದೇವರು, ನಮ್ಮ ಸಮಾಜ ಮತ್ತು ಇಡೀ ನಿಸರ್ಗ ಈ ಜೀವಜಾಲದಲ್ಲಿದೆ ಎಂದು ಬಸವಣ್ಣನವರು ಹೇಳಿದ್ದಾರೆ.

ಮಾನವರಲ್ಲಿ ಬದಲಾವಣೆ ಆಗಬೇಕಾದರೆ ವೈಚಾರಿಕತೆ ಎಂಬುದೇ ಮೂಲನೆಲೆಯಾಗಿದೆ. ತನ್ನಲ್ಲಡಗಿರುವ ಅಜ್ಞಾನದ ಬೇರುಗಳನ್ನು ಕಿತ್ತೆಸೆದು, ಅರಿವಿನಿಂದ ಜ್ಞಾನದ ಬೆಳಕು ಮೂಡಿಸಿಕೊಳ್ಳದೆ ಇದ್ದರೆ ಬದಲಾವಣೆಗಳು ತರಲು ಸಾಧ್ಯವಿಲ್ಲ. ವಚನಕಾರರು ವೈಚಾರಿಕತೆಯ ಮೂಲಕವೆ ಕ್ರಾಂತಿಗೈದವರು. ತಮ್ಮ ನಡೆ– ನುಡಿಯ ಅರಿವಿನಿಂದ ಸ್ವಾನುಭವದಿಂದ ಮತ್ತು ಅನುಭವ ಮಂಟಪದಲ್ಲಿ ದಿನನಿತ್ಯ ನಡೆಯುವ ವೈಚಾರಿಕ ಚರ್ಚೆಗಳ ಮೂಲಕ ಕಲ್ಯಾಣದಲ್ಲಿ ಅಸಂಖ್ಯಾತ ವಿಚಾರವಾದಿಗಳು ಕೂಡಿ ವೈಚಾರಿಕ ನೆಲೆಯತ್ತ ತಾವು ನಡೆದು ಬಂದ ದಾರಿಯನ್ನು ತಾವೇ ಪ್ರಶ್ನಾತಿರ್ಥವಾಗಿ ನೋಡಿದರು. ಗೊಡ್ಡು ಆಚರಣೆಗಳನ್ನು ತಿರಸ್ಕರಿಸಿದರು. ವಚನಕಾರರ ವೈಚಾರಿಕ ಪ್ರಜ್ಞೆ ಕೇವಲ ವಚನ ರಚನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅದನ್ನು ಆಚರಣೆಗೆ ತಂದಿರುವುದಕ್ಕಾಗಿಯೇ ಕಲ್ಯಾಣದಲ್ಲಿ ಹತ್ಯಾಕಾಂಡವಾಯಿತು.

ಶರಣರು ವೈಜ್ಞಾನಿಕ, ವೈಚಾರಿಕತೆಯೊಂದಿಗೆ ಅನೇಕ ಮತಗಳ ಸಾರವನ್ನು ಒಟ್ಟಾಗಿಸಿ ತಮ್ಮ ಪ್ರತಿಭೆ ರಾಸಾಯನಿಕ ಕ್ರಿಯೆಗೆ ಅಳವಡಿಸಿ ನವನವೀನವಾದ 'ಅನುಭಾವ ದರ್ಶನ'ವನ್ನು ಜಗತ್ತಿಗೆ ಅನನ್ಯವಾದ ಕಾಣಿಕೆ ನೀಡಿದರು. ಅವರ ಚಿಂತನೆ ಕೇವಲ ಆಧ್ಯಾತ್ಮಿಕತೆಗೆ ಮಾತ್ರ ಸೀಮಿತವಾಗಿರದೆ ಎಲ್ಲಾ ಕ್ಷೇತ್ರಗಳಲ್ಲಿಯೂ ಜನಸಾಮಾನ್ಯರ ಮನಕ್ಕೆ ಮುಟ್ಟುವಂತೆ ಆಡುಭಾಷೆಯಲ್ಲಿಯೇ ವಚನಗಳನ್ನು ರಚಿಸಿ ಬದುಕಿಗೆ ದಾರಿ ದೀಪಗುವಂತೆ ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣವಾಗಲೆಂದು ಬಯಸಿ ಸಮಾನತೆಯ ಜೀವನ ದರ್ಶನ ಮಾಡಿಸಿದ್ದಾರೆ. ಹೆಣ್ಣಿಗೆ ಅಸ್ಪೃಶ್ಯತನದಿಂದ ಹೊರತೆಗೆದು ಸುಂದರ ಸ್ಥಾನಮಾನವನ್ನು ನೀಡಿದ ಪರಿಣಾಮವಾಗಿ ಇಂದು ಹೆಣ್ಣು ಪುರುಷರಿಗೆ ಸರಿಸಮಾನವಾಗಿ ಎಲ್ಲಾ ರಂಗಗಳಲ್ಲಿಯೂ ತನ್ನ ಪ್ರತಿಭೆಯನ್ನು ತೋರುತ್ತಿದ್ದಾಳೆ.

ಸ್ತ್ರೀ_ಕುಲಕ್ಕೆ ಅಂಟಿದ್ದ ಹೆಣ್ಣು ಎಂದರೆ ಮಾಯೆ, ಮಿಥ್ಯ, ಮಲಿನ, ರಜಸೂತಕ ಎಂಬ ಮಾಯಾವಾದದ ಹುಸಿನಂಬಿಕೆಗಳನ್ನು ಶರಣರು ನಿರಾಕರಿಸುತ್ತಾರೆ. ಅಂತೆಯೆ ಅಕ್ಕಮಹಾದೇವಿಯವರು ತಮ್ಮ ವಚನದಲ್ಲಿ ಹೇಳತಾರೆ.

"ಪುರುಷನ ಮುಂದೆ ಮಾಯೆ

ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.

ಸ್ತ್ರೀಯ ಮುಂದೆ ಮಾಯೆ

ಪುರುಷನೆಂಬ ಅಭಿಮಾನವಾಗಿ ಕಾಡುವುದು.

ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ

ಮರುಳಾಗಿ ತೋರುವುದು.

ಚನ್ನಮಲ್ಲಿಕಾರ್ಜುನನೊಲಿದ ಶರಣರಿಗೆ

ಮಾಯೆಯಿಲ್ಲ , ಮರಹಿಲ್ಲ, ಅಭಿಮಾನವೂ ಇಲ್ಲ."

–ಅಕ್ಕಮಹಾದೇವಿ

ಅಕ್ಕಮಹಾದೇವಿಯವರು ಪುರುಷನ ಸಾಧನೆಗೆ ಸ್ತ್ರೀಯನ್ನು ಮಾಯೆ ಎನ್ನವುದಾದರೆ ಸ್ತ್ರೀಯ ಆಧ್ಯಾತ್ಮ ಸಾಧನೆಗೆ ಪುರುಷನು ಏಕೆ ಮಾಯೆಯಾಗಬಾರದು ? ಎಂದು ಪ್ರಶ್ನಿಸುತ್ತಾರೆ. ಬಸವಾದಿ ಶರಣರ ಪೂರ್ವದಲ್ಲಿ ಸ್ತ್ರೀ ಎಂದರೆ ಮಾಯೆ, ಅವಳು ಪುರುಷನ ಸಾಧನೆಯಲ್ಲಿ ಅಡ್ಡಿ, ಆತಂಕ, ಭಾದೆ, ಬಂಧನಕಾರಿ ಎಂಬ ಭ್ರಮಾಧೀನ ಮೂಢನಂಬಿಕೆ ಬೆಳೆಸಿಕೊಂಡಿದ್ದ ಪುರುಷ ಪ್ರಧಾನ ಸಮಾಜೋ-ಧಾರ್ಮಿಕ ವ್ಯವಸ್ಥೆಯನ್ನು ನಿಷ್ಠುರವಾಗಿ ಖಂಡಿಸುತ್ತಾರೆ. ಈ ಮಾಯಾವಾದದ ಭ್ರಮೆಯ ಹುಸಿನಂಬಿಕೆಯನ್ನು ಹೋಗಲಾಡಿಸಿ ನಿಜವಾದ ದೇವನೊಲಿದ ಶರಣರಿಗೆ ಮಾಯೆ, ಮರಹು, ಅಭಿಮಾನ ಎಂಬವುಗಳು ಯಾವುದು ಇರುವುದಿಲ್ಲ ಎಂದು ಸತ್ಯದ ದರ್ಶನ ಮಾಡಿಸುತ್ತಾರೆ.

ವಚನಕಾರ್ತಿಯರಲ್ಲಿ ಮಹಾದೇವಿಯಕ್ಕನ ತರುವಾಯ ಗರಿಷ್ಠ ಸಂಖ್ಯೆಯ ವಚನಗಳು ನೀಲಾಂಬಿಕೆ ಅವರ ವಚಗಳು ದೊರೆತಿವೆ. ಕರ್ನಾಟಕ ಮಹಿಳಾ ಸಾಹಿತ್ಯದಲ್ಲಿಯೇ ನೀಲಾಂಬಿಕೆಯವರ ವ್ಯಕ್ತಿತ್ವ ವಿಶಿಷ್ಟವಾಗಿದೆ. ಅವರ ವೈಚಾರಿಕ ನಿಲವು, ಅನುಭಾವದ ಎತ್ತರ ಬಿತ್ತರಗಳಲ್ಲಿ ವಾಸ್ತವದ ನಿಲುವನ್ನು ಕಾಣುತ್ತೇವೆ. "ಆಡಲಿಲ್ಲವಯ್ಯ ನಾನು ಹೆಣ್ಣು ರೂಪ ಧರಿಸಿ; ನುಡಿಯಲಿಲ್ಲವಯ್ಯ ನಾನು ಹೆಣ್ಣು ರೂಪ ಧರಿಸಿ; ನಾನು ಹೆಣ್ಣಲ್ಲದ ಕಾರಣ, ನಾನು ಇಹಪರ ನಾಸ್ತಿಯಾದವಳಯ್ಯಾ." ನೀಲಾಂಬಿಕೆಯವರ ವಚನಗಳಲ್ಲಿ ಹೆಣ್ಣುತನದ ಮಾತನಳಿದು ಎಂಬುದನ್ನು ಗಮನಿಸಿದರೆ ಹೆಣ್ಣು-ಗಂಡು ಭೇದವಿಲ್ಲವೆಂಬುದು ಸ್ಪಷ್ಟವಾಗಿದೆ.

"ಮಡದಿ ಎನ್ನಲಾಗದು ಬಸವಂಗೆ ಎನ್ನನು.

ಪುರುಷನೆನಲಾಗದು ಬಸವನ ಎನಗೆ.

ಉಭಯದ ಕುಳವ ಹರಿದು ಬಸವಂಗೆ ಶಿಶುವಾನಾದೆನು,

ಬಸವನೆನ್ನ ಶಿಶುವಾದನು.

ಪ್ರಮಥರು ಪುರಾತರು ಸಾಕ್ಷಿಯಾಗಿ

ಸಂಗಯ್ಯನಿಕ್ಕಿದ ದಿಬ್ಬುವ ಮೀರದೆ ಬಸವನೊಳಗಾನಡಗಿದೆ."

–ನೀಲಾಂಬಿಕೆ

ನೀಲಾಂಬಿಕೆಯವರು ಏರಿದ ಎತ್ತರ, ಸಾಧಿಸಿದ ಸಾಧನೆಗೆ ಈ ವಚನವು ಉಜ್ವಲ ಉದಾಹರಣೆಯಾಗಿ ನಿಲ್ಲುತ್ತದೆ. ಗಂಡ–ಹೆಂಡತಿಯ ಸಂಬಂಧ ಲೌಕಿಕವಾದದ್ದು, ಸ್ತ್ರೀ–ಪುರುಷ ಸಂಬಂಧ ಸಾಮಾಜಿಕ ವ್ಯವಸ್ಥೆಗೆ ಸಂಬಂಧಿಸಿದ್ದು, ಸ್ತ್ರೀ–ಪುರುಷ ಅಥವಾ ಗಂಡ–ಹೆಂಡತಿ ಸಂಬಂಧ ಇಲ್ಲಿಲ್ಲ. ಅದನ್ನೆ ನೀಲಾಂಬಿಕೆಯವರು "ಉಭಯ ಕುಳವ ಹರಿದು ಬಸವಂಗೆ ಶಿಶುವಾದೆನು" ಹಾಗೂ "ಬಸವನೆನ್ನ ಶಿಶುವಾದನು" ಎನ್ನುವ ಮಾತು ಹೇಳಿದ್ದು ತುಂಬಾ ಮೌಲಿಕವಾಗಿದ್ದು. ತಾಯಿ ಮಗುವಿನ ಸಂಬಂಧವು ವಾತ್ಸಲ್ಯದ ಪ್ರತೀಕವಾದರೆ, ತಂದೆ ಮಗಳ ಸಂಬಂಧವು ಮಮತೆಗೆ ಸಾಕ್ಷಿಯಾಗುತ್ತದೆ. ಈ ವಾತ್ಸಲ್ಯ ಮತ್ತು ಮಮತೆಯಿಂದ ಒಡಗೂಡಿದ ಸಂಬಂಧ ಪತಿ– ಪತ್ನಿಯ ಸಂಬಂಧ ಸ್ತರವನ್ನು ಮೀರಿ ಉದಾತ್ತೀಕರಣಗೊಳ್ಳುತ್ತದೆ. ಹೀಗೆ ಶರಣಸಂಕುಲ ಮುನ್ನಡೆಸುವ ಧೀರೋದತ್ತ ನಿಲವು ಅನಾವರಣಗೊಂಡಿದೆ.

ಶರಣರು ವೈಚಾರಿಕ ಚಿಂತನೆಯನ್ನು ಕೇವಲ ವಚನ ರಚನೆಗೆ ಅಥವಾ ಉಪದೇಶಕ್ಕೆ ಮಾತ್ರ ಸೀಮಿತವಾಗಿಡಲಿಲ್ಲ. ವ್ಯಕ್ತಿತ್ವ ವಿಕಾಸಕ್ಕೆ ಅಡ್ಡಿಯಾಗುವ ಎಲ್ಲ ಅವೈಚಾರಿಕ ವಿಧಿ–ವಿಧಾನಗಳನ್ನು ನಂಬಿಕೆಗಳನ್ನು ನಿರಾಕರಿಸಿದಂತೆಯೆ ಸಾಮಾಜಿಕ ಅಸ್ವಸ್ಥ್ಯಕ್ಕೆ ಕಾರಣವಾಗುವ ಜೀವವಿರೋಧಿ ಅಂಶಗಳನ್ನು ವಚನಕಾರರು ಉಗ್ರವಾಗಿ ಖಂಡಿಸಿದರು. ಸಾಮಾಜಿಕ, ಅಸಮಾನತೆಗೆ ಜಾತಿ, ಲಿಂಗ, ವರ್ಗ, ವರ್ಣಭೇಧಗಳೆ ಕಾರಣವೆಂಬುದನ್ನು ಶರಣರು ಗುರುತಿಸಿದರು. ದೇವರ ಮತ್ತು ಭಕ್ತರ ನಡುವಿನ ಮಧ್ಯವರ್ತಿಗಳನ್ನು ವಿರೋಧಿಸಿದರು. ಶರಣರ ಇಷ್ಟಲಿಂಗದ ಪರಿಕಲ್ಪನೆಯೂ ದೇವಾಲಯ ಸಂಸ್ಕೃತಿಯನ್ನು ಬದಲಿಸಲು ಬಹಳಷ್ಟು ನೆರವಾಯಿತು. ದೇವ–ಭಕ್ತರ ನಡುವೆ ನೇರವಾಗಿ ಸಂಬಂಧ ಕಲ್ಪಿಸಿಕೊಟ್ಟರು. ದಾನ–ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ ತಪ್ಪಿಸಿದರು. ಲಿಂಗಧಾರಿಗಳೆಲ್ಲ ಸಮಾನರು ಎಂಬುದರಿಂದಾಗಿ ಜಾತಿ ಹಾಗೂ ಲಿಂಗ ತಾರತಮ್ಯ ದೂರವಾಗುವಂತಾಯಿತು. ಶರಣರ ವೈಚಾರಿಕ ನಿಲುವಿನಿಂದ ಪುರುಷಸತ್ತೆಯ ವಿರುದ್ಧ, ರಾಜಸತ್ತೆಯ ವಿರುದ್ಧ ಧ್ವನಿ ಎತ್ತಿದ್ದನ್ನು ಶರಣರ ವಚನಗಳಲ್ಲಿ ಧಾರಾಳವಾಗಿ ಕಂಡುಬರುತ್ತದೆ.

ಶರಣರ ಬದುಕು ಒಂದು ವೈಜ್ಞಾನಿಕ ನಿಲುವಿನಲ್ಲಿ ಬಂದದ್ದರಿಂದ ಅವರ ಜೀವನ ಕ್ರಮದಲ್ಲಿ ಇಷ್ಟಲಿಂಗ ಪೂಜೆ ಮಹತ್ವದಾಗಿತ್ತು. ಬಸವಾದಿ ಶರಣರು ಜೀವನವನ್ನು ಪೂರ್ಣ ದೃಷ್ಟಿಯಿಂದ ನೋಡಿದ ಫಲವಾಗಿ ಮೂಡಿಬಂದ ಸೊಬಗೇ ವಚನ ಸಾಹಿತ್ಯ. ಅದು ಎಂದೆಂದಿಗೂ ನಿರಂತರವಾಗಿ ಮಾನವರ ಜೀವನಕ್ಕೆ ಮಾರ್ಗದರ್ಶಿಯಾಗಿ ಬದುಕಿಗೆ ಬೆಳಕಾಗಿ ಬೆಳಗುವ ವಿಶ್ವಸಾಹಿತ್ಯವಾಗಿದೆ. ಅದಕ್ಕಾಗಿಯೆ ಬಸವಣ್ಣನವರು ಹೇಳುತ್ತಾರೆ.

"ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನುಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲಮೇಲೆ ಕೈಯನೂರಿ, ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ,
ಪೂಜಿಸು ಕೂಡಲಸಂಗಮದೇವನ."

–ಬಸವಣ್ಣನವರು

ಬಸವಣ್ಣನವರು ಈ ದೇಹ ಮುಪ್ಪಡರಿ ಕಾಲದ ಕೈವಶವಾಗದ ಮುನ್ನವೇ ಎಚ್ಚರಗೊಳ್ಳಬೇಕು ಎನ್ನುತ್ತಾರೆ. ಇಲ್ಲಿ ಬರುವ ವೃದ್ಧಾಪ್ಯದ ಚಿತ್ರ ಈ ನಶ್ವರ ಶರೀರದ ಅಸಾಹಾಯಕ ಸ್ಥಿತಿಯನ್ನು ಕಣ್ಣಮುಂದೆ ಕಟ್ಟುತ್ತದೆ. ದೇಹದಲ್ಲಿ ಬಲ, ಮನಸ್ಸಿನಲ್ಲಿ ಉತ್ಸಾಹ, ಬುದ್ಧಿಯಲ್ಲಿ ತೇಜಸ್ಸು ಇರುವಾಗಲೇ ಆ ದೇವರನ್ನು ಪೂಜಿಸಬೇಕು. ಲಿಂಗಧರಿಸುವಲ್ಲಿ, ಲಿಂಗಸಂಗದಲ್ಲಿ, ಲಿಂಗ ಪೂಜೆಯಲ್ಲಿ ವೈಜ್ಞಾನಿಕ ವಿವೇಚನೆ ಇದ್ದು ಸಾಧಕನ ಆರೋಗ್ಯ ಕಾಪಾಡಿಕೊಳ್ಳುವಲ್ಲಿ, ಆಯುಷ್ಯವನ್ನು ವೃದ್ಧಿಸುವಲ್ಲಿ, ಸುಖಜೀವನ ಸಾಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಜನರನ್ನು ಆವರಿಸಿರುವ ಮೂಢನಂಬಿಕೆಗಳು ಒಂದೆರಡಲ್ಲ; ಹುಟ್ಟಿನಿಂದ ಸಾಯುವರೆಗೂ ಜನರು ಅವೈಚಾರಿಕ ಸಂಕೋಲೆಯಲ್ಲಿ ಬಂಧಿತರಾಗಿದ್ದಾರೆ. ನಂಬಿಗೆಗೂ ಮೂಢನಂಬಿಕೆಗೂ ಮೂಲಭೂತವಾದ ವ್ಯತ್ಯಾಸವಿದೆ. ಯಾವುದೇ ಒಂದು ವಿಷಯವನ್ನು ವಿವೇಚನೆಗೆ, ವಿಶ್ಲೇಷಣೆಗೆ ಒಳಪಡಿಸಿ ಒಳಹೊರಗಿನ ಕ್ರಿಯೆಗಳ ತಳಹದಿಯನ್ನು ಗಮನಿಸಿ, ಯಾವುದು ಸತ್ಯ ಎಂಬುದು ವಿಚಾರಮಾಡಿ ಒಪ್ಪಿಕೊಳ್ಳುವುದು ನಂಬಿಕೆ. ಯಾವುದೆ ವಿವೇಚನೆಯಿಲ್ಲದೆ, ತರ್ಕದ ಒರೆಗಲ್ಲಿಗೊಡ್ಡದೆ, ವಿವೇಚನೆಗೆ ಒಳಪಡಿಸದೆ ಕುರುಡಾಗಿ ಒಪ್ಪಕೊಂಡು ಬಿಡುವುದು ಮೂಢನಂಬಿಕೆ. "ನೀರು ಕಂಡಲ್ಲಿ ಮುಳುಗುವುದು, ಮರವ ಕಂಡಲ್ಲಿ ಸುತ್ತುವುದು, ಹುತ್ತಕ್ಕೆ ಹಾಲನ್ನೆರೆಯುವುದು, ನಾಗ ಪ್ರತಿಷ್ಠೆ ಮಾಡುವುದು, ಗ್ರಹ, ತಿಥಿ, ವಾರ, ನಕ್ಷತ್ರಗಳನ್ನು ನೋಡಿ ಶುಭ ಕಾರ್ಯ ನಿಶ್ಚಯಿಸುವುದು, ಶಕುನಗಳನ್ನು ನಂಬುವುದು, ಕಂಡ ಕಂಡದುದಕ್ಕೆಲ್ಲ ಕೈ ಮುಗಿಯುವುದು, ಈ ಎಲ್ಲ ಅವೈಚಾರಿಕತೆಯ ಪರಿಣಾಮದಿಂದ ಮಾನವನ ವ್ಯಕ್ತಿತ್ವದ ಸಮಗ್ರ ವಿಕಾಸಕ್ಕೆ ಅಡ್ಡಿಯುಂಟಾಗುತ್ತದೆ.

ಮಾನವನ ಬದುಕಿಗೆ ನಂಬಿಕೆ, ಶ್ರದ್ಧೆ ಅವಶ್ಯವಾಗಿ ಬೇಕು. ನಂಬಿಕೆಯ ಮೇಲೆಯೇ ಧರ್ಮ, ದೇವರು, ಸಮಾಜ, ಕುಟುಂಬ, ವ್ಯಕ್ತಿಯ ಸಂಬಂಧಗಳು ನಿಂತಿವೆ. ಬಾಳಿನಲ್ಲಿ ನಂಬಿಕೆ ಬೇಕು ನಿಜ, ಅದರೆ ಎಂತಹ ನಂಬಿಕೆಗಳು ಬೇಕು ? ಎಂತಹ ನಂಬಿಕೆಗಳು

ಬೇಡಬೆಂಬುದು ಬಹಳ ಮುಖ್ಯವಾಗುತ್ತದೆ. ಮೂಢನಂಬಿಕೆ, ಅಂಧಶ್ರದ್ಧೆಗಳು ನಮ್ಮ ಪ್ರಗತಿಯನ್ನು ಕುಂಠಿತಗೊಳಿಸುವುದರಿಂದ ಅವು ನಮಗೆ ಬೇಕಾಗಿಲ್ಲ. ಆದರೆ ವೈಚಾರಿಕ ವೈಜ್ಞಾನಿಕ ಪ್ರಜ್ಞೆಯಿಂದ ಕೂಡಿದ ನಂಬಿಕೆ ಹಾಗೂ ಶ್ರದ್ಧೆಗಳು ನಮ್ಮಲ್ಲಿ ಆತ್ಮವಿಶ್ವಾಸ ತುಂಬಿ ಬದುಕನ್ನು ಸುಂದರ, ಸುಭದ್ರವಾದ ಜೀವನಕ್ಕೆ ವೈಚಾರಿಕ ತಳಹದಿ ಮೇಲೆ ಬಸವಾದಿ ಶರಣರು ರೂಪಿಸಿದ ವಚನ ಸಾಹಿತ್ಯದ ಚಿಂತನೆಯಲ್ಲಿ ಅಂದಿನಿಂದ ಇಂದಿನವರೆಗೂ ಪ್ರಸ್ತುತವಾಗಿದೆ.

****

ಅಂತಃಕರಣದ ತವನಿಧಿ

ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಶರಣರು ಕಟ್ಟಿಕೊಟ್ಟ ತತ್ವಗಳನ್ನು ಸಾಕಾರಗೊಳಿಸಲು ಶ್ರಮಿಸಿದ ಭಾವೈಕ್ಯದ ಜಗದ್ಗುರು. ತಮಗೆ ಮಾದರಿಯಾಗಿದ್ದ ಬಸವಣ್ಣನವರ ವೈಚಾರಿಕ ಮತ್ತು ಕ್ರಾಂತಿಕಾರಿ ನಡೆ-ನುಡಿಗಳನ್ನು ಬರೀ ಮಾತಿಗೆ ಸಿಮೀತವಾಗಿರಿಸದೇ ಆಚರಣೆಗೆ ತರಬೇಕೆಂಬುದೆ ಅವರ ಪರಮಗುರಿಯಾಗಿತ್ತು. ಅದರಂತೆ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠೀಯ ವ್ಯವಸ್ಥೆಯನ್ನು ಅದರ ಅನುಭಾವಿಕ ನೆಲೆಯನ್ನೊಳಗೊಂಡ ಹಾಗೆ, ಪ್ರಗತಿಪರ ವಿಚಾರಧಾರೆಗಳಿಂದ ಎಲ್ಲ ರೀತಿಯಲ್ಲೂ ಮಠವನ್ನು ಸಾರ್ವಜನಿಕವಾಗಿಸಿದ ಶ್ರೇಷ್ಠ ಕಾರ್ಯಸಾಧಕರಾಗಿದ್ದರು.

ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು 1974 ರಲ್ಲಿ ಗದುಗಿನ ತೋಂಟದಾರ್ಯ ಸಂಸ್ಥಾನಮಠದ 19ನೆಯ ಪೀಠಾಧಿಪತಿಗಳಾದರು. ಅಂದಿನಿಂದ ಮಠದ ಅಸ್ಥಿತ್ವವನ್ನು ಕಾಪಾಡಿಕೊಂಡು ಮನ್ನಡೆಸುವುದರ ಜೊತೆಗೆ ನಾಡಿನ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ, ಶೈಕ್ಷಣಿಕ ಸೇವೆಯಲ್ಲಿ ಕ್ರಿಯಾಶೀಲರಾಗಿ ದುಡಿದರು. ಸರಳ ಬದುಕಿನಲ್ಲಿ ಅವರಿಗೆ ಅಪಾರ ಆಸಕ್ತಿ ಇತ್ತು. ಸಾದಾ ಕಾವಿ ಕಪನಿ, ದಟ್ಟಿ ರುಮಾಲು, ಕೈಯಲ್ಲಿ ಒಂದು ಬೆತ್ತವನ್ನು ಹಿಡಿದ ಭವ್ಯವ್ಯಕ್ತಿತ್ವದ ಪೂಜ್ಯರು ಶಿಕ್ಷಣ ಮತ್ತು ಸಾಹಿತ್ಯದ ಪ್ರೇಮಿಯಾಗಿದ್ದರು.

ಗದುಗಿನ ಮಠದ ಜಗದುರುಗಳಾಗಿದ್ದ ಪೂಜ್ಯಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠವನ್ನು ಸಮಗ್ರ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದರು. ಹಲವಾರು ಹೋರಾಟಗಳ ಉಗಮಸ್ಥಾನವನ್ನಾಗಿ ಮಾಡಿ, ಎಲ್ಲ ಜನಾಂಗದ ಜನರು ಒಂದೆ ಕಡೆಗೆ ಮುಕ್ತಮನಸ್ಸಿನಿಂದ ಕೂಡುವ ಸಮನ್ವಯದ ನೆಲೆಯನ್ನಾಗಿಸಿದರು. ಶೈಕ್ಷಣಿಕ ವಿಕಾಸಕ್ಕೆ ಅಂತರಂಗದ ಅರಿವನ್ನು ಜಾಗ್ರತಗೊಳಿಸುವುದರ ಮೂಲಕ ಧಾರ್ಮಿಕ ಸಂಸ್ಥೆಯೊಂದನ್ನು

ಸಾಮಾಜೀಕಣಗೊಳಿಸಿದರು. ಬದಲಾವಣೆ ಮತ್ತು ಪ್ರಗತಿಪರ ಚಿಂತನೆಗಳನ್ನು ಕಾರ್ಯರೂಪದಲ್ಲಿ ತರುವ ನಿಟ್ಟಿನಲ್ಲಿ ಕಾಳಜಿಯಿಂದ ಹೋರಾಟ ನಡೆಸಿದರು. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬೆರೆತು ಅವರ ಸುಖ-ದುಃಖಗಳಲ್ಲಿ ಭಾಗಿಯಾಗುತ್ತಿದ್ದ ಪೂಜ್ಯರನ್ನು 'ಸಾಮಾನ್ಯರ ಸ್ವಾಮೀಜಿ' ಎಂಬ ಬಿರುದು ಕೊಟ್ಟು ಜನ ಕೊಂಡಾಡಿತು.

ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮಾನವೀಯ ಅಂತಃಕರಣದ ತವನಿಧಿ ಆಗಿದ್ದರು. ಹಸಿದವರು, ನೊಂದವರು, ಶೋಷಿತರು, ವಿಕಲಚೇತನರು, ದೀನ-ದಲಿತರ ಮತ್ತು ಅಸಹಾಯಕರನ್ನು ಕಂಡರೆ ಅವರ ಮಾತೃಹೃದಯವು ಮನ ಸದಾ ಮಿಡಿಯುತ್ತಿತ್ತು. ಬಡವರ ದುಃಖಿತರ ಸಮಸ್ಯೆಗಳನ್ನು ದೂರ ಮಾಡಲು ಯಾವಾಗಲೂ ಅವರ ಸಹಾಯ ಹಸ್ತ ಚಾಚಿರುತ್ತಿತ್ತು. ನಿರಂತರವಾಗಿ ವಚನಸಾಹಿತ್ಯದ ಅಧ್ಯಯನದಲ್ಲಿ ಮುಳುಗುತ್ತಿದ್ದ ಅವರಿಗೆ 'ಜಂಗಮದಲ್ಲಿಯೇ ಲಿಂಗವನ್ನು ಕಾಣಬೇಕು' ಎಂಬ ನುಡಿಗೆ ಶ್ರೋತೃರಾದರು. ಅದೆಷ್ಟೋ ಕುಟುಂಬಗಳಿಗೆ ಶ್ರೀಮಠದಿಂದ ದವಸ, ಧಾನ್ಯ, ಬಟ್ಟೆ, ಔಷಧಿಗಳು ತಲುಪುತ್ತಿದ್ದವೂ ಲೆಕ್ಕವೇ ಇಲ್ಲ. ಅಲ್ಲಿ ಬಂದವರು ಮಕ್ಕಳಿಗೆ ಹಾಲಿಲ್ಲ ಎಂದರೆ ಹಾಲು ಕರೆವ ಹಸುವನ್ನೇ ಕೊಟ್ಟು ಹರಸಿದವರು.

ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ಕಾಯಕ ಜೀವಿಗಳು. ಯಾವಾಗಲೂ ಒಂದಿಲ್ಲೊಂದು ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ಕೃಷಿ ಅವರ ಅಚ್ಚು ಮೆಚ್ಚಿನ ಕಾಯಕವಾಗಿತ್ತು. ಡಂಬಳದಲ್ಲಿ ಸ್ವತಃ ಬೆವರು ಸುರಿಸಿ, ಬೆಂಗಾಡಾಗಿದ್ದ ನೆಲವನ್ನು ಕೃಷಿ ಭೂಮಿಯನ್ನಾಗಿ ಮಾಡಿದರು. ಆಧುನಿಕ ತಂತ್ರಜ್ಞಾನವನ್ನು ಬಳಸಿ ಅಲ್ಲಿ ದ್ರಾಕ್ಷಿ, ಬಾರಿ, ಬಾಳೆ, ತೆಂಗು ಮೊದಲಾದ ಪೈರು ಬೆಳೆಸಿದರು. ಗದುಗಿನಲ್ಲಿ ಬರಡಾಗಿ ಬಿದ್ದಿದ್ದ ಜಮೀನುಗಳನ್ನು ಆಧುನಿಕ ಕೃಷಿಯ ಅನುಕರಣೆಯಿಂದ ಹಸಿರಾಗಿ ಕಂಗೊಳಿಸುವಂತೆ ಮಾಡಿದರು.

'ಕನ್ನಡದ ಜಗದ್ಗುರು' ಎಂಬ ಅಭಿಧಾನಕ್ಕೆ ಪಾತ್ರರಾದ ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳ ಕಣ್ಣಲ್ಲಿ ಕನ್ನಡದ ಅಸಾಧಾರಣ ಹೊಳಪಿತ್ತು. ಕನ್ನಡ ನಾಡು, ನುಡಿ, ನೆಲ, ಜಲ-ಇವೆಲ್ಲವುಗಳ ಬಗ್ಗೆ ಅನನ್ಯ ಕಾಳಜಿಯುಳ್ಳ ಅವರು ಇಡುವ ಹೆಜ್ಜೆಯಲ್ಲಿ ಕನ್ನಡದ ಧೀರೋದಾತ್ತ ಸ್ಪಂದನವಿತ್ತು. ಅಂತೆಯೇ ಅವರು ಕರ್ನಾಟಕದಲ್ಲಿ ಅಷ್ಟೇ ಅಲ್ಲದೇ ದೇಶ ವಿದೇಶಗಳ ಪ್ರಯಾಣ ಬೆಳಸಿದಾಗ ಅವರು ಮಾಡುವ ಚಿಂತನೆಗಳಲ್ಲಿ ಕನ್ನಡದ ಸಮಗ್ರ ನೆಲ, ಜಲ, ಸಂಸ್ಕಾರ ಮತ್ತು ಸಂಸ್ಕೃತಿಯ ಬಗ್ಗೆ ಹೇಳುತ್ತಿದ್ದರು. 2009 ರಲ್ಲಿ ದುಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತಾಡುವಾಗ ಒಂದು ಕಾಲಕ್ಕೆ ಕನ್ನಡದ ಕಿರ್ತೀ ಶ್ರೀಲಂಕಾದವರೆಗೆ ಇದ್ದದ್ದಕ್ಕಾಗಿ ಲಕ್ಕಣ್ಣದಂಡೇಶ ಗೆದ್ದ ಎಂದು ಹೇಳಿದರು.

'ದುಡ್ಡೆ ದೊಡಪ್ಪ, ಆದರೆ ವಿದ್ಯೆ ಅದರಪ್ಪ' ಅಂದರೆ ನಿವೆಲ್ಲಾ ವಿದ್ಯೆ ಕಲಿತಿದ್ದಕ್ಕಾಗಿ ಭಾರತದಿಂದ ಹೊರ ದೇಶಗಳಲ್ಲಿ ಬಂದು ಇರಲು ಸಾಧ್ಯವಾಗುತ್ತಿದೆ. ಕರ್ನಾಟಕದವರು ಹೊರಗಡೆ ನೀವು ಇಂಗ್ಲಿಷ ಅಥವಾ ಇತರ ಯಾವುದೇ ಭಾಷೆ ಮಾತಾಡಿ, ನೀವೆಲ್ಲರೂ ಇನ್ನೂ ಹೆಚ್ಚು ಹೆಚ್ಚು ಮುಂದುವರೆಯಿರಿ, ಆದರೆ ನಿಮ್ಮ ಮಕ್ಕಳ ಜೊತೆಗೆ ಮನೆಯಲ್ಲಿ ಕನ್ನಡದಲ್ಲೇ ಮಾತಾಡಿ. ಏಕೆಂದರೆ ನಮ್ಮ ಬಸವಾದಿ ಶರಣರು ನೀಡಿದ ವಚನಗಳು ಕೂಡ ಕನ್ನಡದಲ್ಲೇ ಇವೆ. ಅವುಗಳು ನಮ್ಮ ಬದುಕಿನ ಪಯಣಕ್ಕೆ ಸರಿಯಾದ ಮಾರ್ಗದರ್ಶನ ಮಾಡಿಸುತ್ತವೆ ಎಂದು ಹೇಳುತ್ತಿದ್ದರು.

ಅಪ್ಪಟ ಬಸವವಾದಿಗಳಾಗಿದ್ದ ಪೂಜ್ಯಶ್ರೀ ತೋಂಟದ ಸಿದ್ಧಲಿಂಗ ಶ್ರೀಗಳು ಶರಣರ ತತ್ವಗಳನ್ನು ಪ್ರಖರ ಪ್ರತಿಪಾದಕರಾಗಿ ಪಾಲಿಸುತ್ತಿದ್ದರು. ಅವರು ಕೇವಲ ಭಾಷಣಕಾರರಾಗಿರಲಿಲ್ಲ. ತಾವು ಹೇಳುವ ಪ್ರತಿಮಾತಿಗೂ ಬದ್ಧರಾಗಿರುತ್ತಿದ್ದರು. " ನುಡಿದಂತೆ ನಡೆ" ಎಂಬ ಬಸವ ಪಥದ ಕಡೆಗೆ ಸಾಗುತ್ತಿದ್ದವರು. ಯುವ ಜನಾಂಗಕ್ಕೆ ಶರಣರ ವಚನಗಳು ಮತ್ತು ಅವರ ಜೀವನ ಸಂದೇಶವನ್ನು ಅವರದೆ ಆದ ಶೈಲಿಯಲ್ಲಿ ಹೇಳುತ್ತಿದರು.

ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಬೀದರದಲ್ಲಿ ಬಸವತತ್ವದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿತ್ತಿದ್ದರು. ಶ್ರೀಗಳು ಪ್ರತಿ ಸಲವೂ ತಮ್ಮ ಪ್ರವಚನದಲ್ಲಿ ತಪ್ಪದೆ ನೂಲಿಯ ಚಂದಯ್ಯನವರ ದೃಷ್ಟಾಂತವನ್ನು ಹೇಳುವದು ಅಪರೂಪದ ಶೈಲಿಯಾಗಿತ್ತು. 'ಈ ಘಟನೆ ನಡೆದಿದೆಯೋ ಇಲ್ಲವೂ ನನಗೆ ಗೊತ್ತಿಲ್ಲ. ಆದರೆ ಅದರ ಕಲ್ಪನೆಯಿದೆಯಲ್ಲ ಅದೇ ತುಂಬಾ ಅದ್ಭುತವಾಗಿದೆ ಎನ್ನುತ್ತಲೆ ಪ್ರಾರಂಭಿಸುತ್ತಿದ್ದರು. ನೂಲಿ ಚಂದಯ್ಯ ಕಾಯಕ ಮಾಡುವಾಗ ಕೊರಳಲ್ಲಿ ಕಟ್ಟಿಕೊಂಡಿದ್ದ ಇಷ್ಟಲಿಂಗ ಕೆಳಗೆ ಬೀಳುವುದು, ಬಿದ್ದರೆ ಬೀಳು ಮತ್ತೆ ಕಟ್ಟಿಕೊಳ್ಳುವುದಿಲ್ಲ ಎಂದು ಚಂದಯ್ಯ ಮುಂದೆ ಹೊರಡುವುದು. ಲಿಂಗಯ್ಯ ನನ್ನನ್ನು ಕಟ್ಟಿಕೊ ಎಂದು ಹಿಂದೆ ಬಂದರೂ ನಿರಾಕರಿಸುತ್ತಾರೆ. ಮಡಿವಾಳ ಮಾಚಿದೇವರು ಬಂದು ಲಿಂಗಯ್ಯನ ಪರವಾಗಿ ಮಡಿವಾಳ ಮಾಚಿದೇವರು ಮತ್ತು ನೂಲಿಯ ಚಂದಯ್ಯರ ನಡುವೆ ನಡೆದ ಸಂವಾದದಲ್ಲಿ ಚಂದಯ್ಯ ಮಡಿವಾಳ ಮಾಚಿದೇವರಿಗೆ ಹೇಳುವ ವಚನವೊಂದು ಪೂಜ್ಯರು ಹೇಳುವಾಗ ಎಲ್ಲರೂ ಮಂತ್ರಮುಗ್ಧರಾಗುತ್ತಿದ್ದರು.

"ನುಡಿದ ಮಾತಿಂಗೆ ತಡಬಡ ಬಂದಲ್ಲಿ
ನುಡಿದ ಭಾಷೆಗೆ ಭಂಗ ನೋಡಾ.
ಹಿಡಿದ ಕುಳಕ್ಕೆ ಹಾನಿ ಬಂದಲ್ಲಿ
ಒಡಲನಿರಿಸುವದೆ ಭಂಗ ನೋಡಯ್ಯಾ.

ಇದು ಕಾರಣ ನಡೆ ನುಡಿ ಶುದ್ಧವಿಲ್ಲದಿದ್ದಡೆ
ಚಂದೇಶ್ವರಲಿಂಗವಾದಡೂ ತಪ್ಪಿನೊಳಕೊಳ್ಳ ಕಾಣಾ
ಮಡಿವಾಳಯ್ಯಾ"

–ನೂಲಿಯ ಚಂದಯ್ಯ

ಮಡಿವಾಳ ಮಾಚಿದೇವರು ಚಂದಯ್ಯ ಮತ್ತು ಲಿಂಗಯ್ಯರ ಮಧ್ಯೆ ಒಪ್ಪಂದವನ್ನು ಮಾಡುತ್ತಾರೆ. ಲಿಂಗಯ್ಯನು ಚಂದಯ್ಯರ ಜೊತೆಗೆ ಕಾಯಕ ಮಾಡಬೇಕು. ಚಂದಯ್ಯ ಮಾಡುವ ಹಗ್ಗ–ಕಣ್ಣಿಗಳನ್ನು ಮಾರಿಕೊಂಡು ಬರಬೇಕು. ಕೊಟ್ಟ ಮಾತಿನಂತೆ ಲಿಂಗಯ್ಯ ಸರಿಯಾಗಿ ಕಾಯಕ ಮಾಡದಿದ್ದಲ್ಲಿ ನಾನು ಲಿಂಗಯ್ಯನನ್ನು ಕರೆದುಕೊಳ್ಳುವುದಿಲ್ಲ ಎಂದ ಚಂದಯ್ಯನ ಕಥೆ ಅನುಭವ ಮಂಟಪದಲ್ಲಿ ಎಲ್ಲ ಶರಣರ ನಡುವೆ ಲಿಂಗಯ್ಯನ ಸಮಸ್ಯೆ ಬಗೆ ಹರಿಯಿತೆಂದು ಹೇಳುವ ಪೂಜ್ಯರ ಕಳಕಳಿಯಲ್ಲಿ ಒಂದು ಬಲವಾದ ಸಂದೇಶವಿತ್ತು. 'ಕಾಯಕದ ಮಹತ್ವ ಮತ್ತು ಏಕದೇವೂಪಾಸನೆ' ದೇವರನ್ನು ಹುಡುಕಾಡುತ್ತಾ ತಿರುಗಾಡುವ ಜನಗಳಿಗೆ ಏನು ಹೇಳಬೇಕು. ಶರಣಧರ್ಮದಲ್ಲಿ ದೇವರೆ ಭಕ್ತನ ಹಿಂಬಾಲಿಸಿ ಬಂದ ಎಂದರೆ ಶರಣರು ದುಡಿಮೆಯ ಬಗೆಗೆ ತೆಗೆದುಕೊಂಡ ನಿಲುವು ಎಂಥದ್ದು ಎಂದು ನಮ್ಮ ಅರಿವಿಗೆ ಬರಬೇಕಾಗಿದೆ.

ಕಾರ್ಲ್ ಮಾರ್ಕ್ಸ್, ಲಿಂಕನ್, ಲೇನಿನ್ ಅವರು ಹೇಳುವಂಥ ದುಡಿಮೆ ಸಿದ್ಧಾಂತವನ್ನು ನಮ್ಮ ಶರಣರು ಒಂಬೈನೂರು ವರ್ಷದ ಹಿಂದೆ ಬಸವಣ್ಣನವರ ಪ್ರಭಾವದಿಂದ ಸಾಮಾನ್ಯ ಜನರು ಸಾಧಾರಣ ದೇಶಿಯ ಸಂಸ್ಕೃತಿಯಲ್ಲಿ ದುಡಿಮೆಯನ್ನು ಹ್ಯಾಂಗ ಜಾರಿಗೆ ತಂದರು ಎಂಬುದೇ ಒಂದು ಆಶ್ಚರ್ಯ. ಎಲ್ಲರೂ ದುಡಿದೆ ತಿನ್ನುತ್ತಿದ್ದರು. ಅದರ ಪರಿಣಾಮವಾಗಿಯೇ ಕಸಗೂಡಿಸುವವರು, ತೊಗಲು ಹದಮಾಡುವವರು, ಬಟ್ಟೆ ತೊಳೆಯುವವರು, ಹಾಗೆ ಈ ನಮ್ಮ ನೂಲಿಯ ಚಂದಯ್ಯ ಎಂದು ಹೇಳುತ್ತಿದ್ದರು. ಮಕ್ಕಳು ಕೂಡ ಗದಗಿನ ಪೂಜ್ಯರ ಪ್ರವಚನ ಎಂದರೆ ನೂಲಿಯ ಚಂದಯ್ಯನ ಕಥೆ ಕೇಳಬಹುದು ಎಂದು ಸಂತೋಷಪಡುತ್ತಿದ್ದರು. ಅವರು ಮಾತಾಡುತ್ತಿದ್ದರೆ ಏನೋ ಒಂದು ತರಹ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರುತ್ತಿತ್ತು.

ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಉದ್ದೇಶ ಹೊಂದಿದ್ದ ಶ್ರೀಗಳು ಸರ್ವ ಜಾತಿ–ಮತ ಬಾಂಧವರನ್ನು ಬಸವಣ್ಣನವರ ಆಶಯದಂತೆ ಎಲ್ಲರನ್ನೂ 'ಇವನಾರವ ಎನ್ನದೆ, ಇವ ನಮ್ಮವ' ಎಂದು ಅಪ್ಪಿಕೊಂಡರು. ಹರಿಜನ ಸಾಧಕರಿಗೆ ಸನ್ಮಾನ, ಆಗಾಗ ಹರಿಜನರಿಗೆ ಪ್ರಸಾದದ ವ್ಯವಸ್ಥೆ, ಹರಿಜನ ಕೇರಿಯಲ್ಲಿ ಪೂಜೆ ಪ್ರಸಾದ ಮೊದಲಾದವುಗಳಲ್ಲಿ ತೊಡಗಿದ್ದರು. ಹಿಂದೂ, ಮುಸ್ಲಿಂ, ಸಿಖ್, ಇಸಾಯಿ

ಮತ್ತು ಪರಿಶಿಷ್ಟ ಎಲ್ಲ ಪಂಗಡದವರಿಗೂ ಶ್ರೀಮಠದಲ್ಲಿ ಮುಕ್ತವಾದ ಪ್ರವೇಶವಿದ್ದಿತು. ಶ್ರೀಗಳು ಆಯಾ ಧರ್ಮೀಯರ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಬುದ್ಧ ಜಯಂತಿ. ಅಂಬೇಡ್ಕರ್ ಜಯಂತಿ, ಗಾಂಧಿ ಜಯಂತಿಗಳನ್ನು ಶ್ರೀಮಠದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿದ್ದರು.

ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪ್ರತಿಯೊಂದು ನುಡಿಗಳಲ್ಲಿ ಸ್ಪಷ್ಟವಾದ ವೈಚಾರಿಕತೆ ಇರುತ್ತಿತ್ತು. ಅವರ ಮಾತು ನೇರ ನಿಲುವು, ದಿಟ್ಟ ಎದೆಗಾರಿಕೆ ಮತ್ತು ಯಾರಿಗೂ ಹೆದರದೆ ಇರುವ ಅವರ ವ್ಯಕ್ತಿತ್ವ ಆಕರ್ಷಕವಾಗಿತ್ತು. ಮೂಢನಂಬಿಕೆ, ಗೊಡ್ಡು ಆಚರಣೆಗಳ ವಿರುದ್ಧ ಸಿಡಿದೇಳುತ್ತಿದ್ದರು. ಬಸವತತ್ವವನ್ನು ನಾಶಮಾಡಲು ನಿರಂತರ ಕುತಂತ್ರ ನಡೆಸಿದ ಪಂಚಪೀಠಗಳ ಪ್ರಯತ್ನವನ್ನು ಅರಿತ ಪೂಜ್ಯರು ಅವರನ್ನು ನೇರವಾಗಿಯೇ ಖಾರವಾಗಿ ವಿರೋಧಿಸುತ್ತಿದ್ದರು. 'ಬಸವಣ್ಣನವರನ್ನು ಒಪ್ಪಿ ಶರಣರ ತತ್ವಗಳನ್ನು ಪಾಲಿಸುವುದಾದರೆ ನಿಮ್ಮನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಇಲ್ಲದಿದ್ದರೆ ನಿಮ್ಮ ದಾರಿ ನಿಮಗೆ ನಮ್ಮ ದಾರಿ ನಮಗೆ' ಎಂದು ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟದ ಸಂದರ್ಭಗಳಲ್ಲಿ ನೇರವಾಗಿ ಹೇಳಿಬಿಟ್ಟರು.

ಡಾ. ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳು ನಡೆದು ಬಂದ ದಾರಿ ಹೂವಿನದಾಗಿರಲಿಲ್ಲ. ಅವರಿಗೆ ತೀವ್ರ ಬಡತನದ ಮತ್ತು ಅವಮಾನದ ಅನುಭವವಿತ್ತು. ಸ್ವಧರ್ಮೀಯರಿಂದಲೂ, ಅನ್ಯಧರ್ಮೀಯರಿಂದಲೂ ಅನುಭವಿಸಿದ ಎಷ್ಟೇ ಕಷ್ಟಗಳು ಬಂದರೂ ಎದೆಗಾರಿಕೆಯಿಂದ "ಲೋಕವಿರೋಧಿ, ಶರಣನಾರಿಗಂಜುವನಲ್ಲ" ಎಂಬಂತೆ ಶ್ರೀಗಳು ಎಂದೂ ಕುಗ್ಗಲಿಲ್ಲ. ನ್ಯಾಯ ನಿಷ್ಠುರವಾದ ಸತ್ಯವ ನುಡಿಯುವುದನ್ನು ನಿಲ್ಲಿಸಲಿಲ್ಲ. ಬಂದುದನ್ನೆಲ್ಲ ಎದುರಿಸಿ ಧೈರ್ಯದಿಂದ ಆಗುವ ಅವಮಾನಗಳನ್ನು ಬದಿಗೆ ಸರಿಸುತ್ತಾ ಶರಣರ ಸನ್ಮಾರ್ಗಪಥದ ಕಡೆಗೆ ಸಾಗಿದರು.

> **"ಎಮ್ಮವರಿಗೆ ಸಾವಿಲ್ಲ. ಎಮ್ಮವರು ಸಾವನರಿಯರು.**
> **ಸಾವೆಂಬುದು ಸಯವಲ್ಲ.**
> **ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ**
> **ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ.**
> **ಕೂಡಲಸಂಗಮದೇವರ ಶರಣ ಸೊಡ್ಡಳ ಬಾಚರಸರು**
> **ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ,**
> **ಉಪಮಿಸಬಲ್ಲವರ ಕಾಣೆನು."**

ಬಸವಣ್ಣನವರ ವಚನದಂತೆ ಶರಣರು ಉಪಮೆಗೆ ನಿಲುಕದವರು. ಬಸವತತ್ವವನ್ನೇ ಉಸಿರಾಗಿಸಿಕೊಂಡ ಪೂಜ್ಯಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಶರಣರ ದಾರಿಯಲ್ಲಿ ಜೀವನವನ್ನು ಸಾಗಿಸಿದರು. ಪೂಜ್ಯರು ಕಂಡ ಕನಸೆಂದರೆ ಬಸವತತ್ವವು ಯುವ ಜನಾಂಗಕ್ಕೆ ಮಾರ್ಗದರ್ಶನವಾಗಿ ವಿಶ್ವದ ತುಂಬೆಲ್ಲಾ ಹರಡಲಿ ಎನ್ನುವುದಾಗಿತ್ತು. ಅವರ ಅಂತಃಕರಣದ ಮತ್ತು ಸಾಮಾಜಿಕ ನ್ಯಾಯದ ಪ್ರಜ್ಞೆ ನವಸಮಾಜದ ನಿರ್ಮಾಣಕ್ಕೆ ದಾರಿದೀಪವಾಗಲಿ.

ಶ್ರೀಗಳ ಕಾರ್ಯಕ್ಷೇತ್ರ ಅತ್ಯಂತ ವಿಶಾಲವಾಗಿತ್ತು. ಪೂಜ್ಯರ ಆಸಕ್ತಿಯ ಕ್ಷೇತ್ರವೂ ವಿಸ್ತಾರವಾದುದು. ಪ್ರತಿಯೊಂದು ಕ್ಷೇತ್ರವನ್ನು ಅವರು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದರು. ಮೃದು ವಚನ, ಸದುವಿನಯ, ಮುಗಿದ ಕೈ, ಬಾಗಿದ ಶಿರದ ಮಹಾಚೇತನ 2018ರ ಅಕ್ಟೋಬರ್ 20ರಂದು ವಿಜಯದಶಮಿಯ ದಿನದಂದು ಸರ್ವರಿಗೂ 'ನಿಮ್ಮ ಬಾಳು ಬಂಗಾರವಾಗಲೆಂದು' ಹರಸಿದರು. "ಶರಣರಿಗೆ ಮರಣವೇ ಮಹಾನವಮಿ" ಎಂಬಂತೆ ಯಾರಿಗೂ ಏನೂ ಹೇಳದೆ ಯಾರ ಊಹೆಗೂ ನಿಲುಕದೆ ಲಿಂಗದಲ್ಲಿ ನಿಜೈಕ್ಯರಾದರು.

****

ಬಸವಣ್ಣನವರ ಅರಿವು ಸಿದ್ಧಗಂಗಾ ಶ್ರೀಗಳ ಆಚಾರ

ಹನ್ನೆರಡನೆಯ ಶತಮಾನದಲ್ಲಿ ವಿಶ್ವಗುರು ಜಗಜ್ಯೋತಿ ಬಸವಣ್ಣನವರು ಕಲ್ಯಾಣದಲ್ಲಿ ಸಕಲಜೀವಾತ್ಮರಿಗೆ ಲೇಸಾಗಲೆಂದು ನಡೆಸಿದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಚಳವಳಿ ಹಾಗೂ ಅಂದು ನಡೆಯುತ್ತಿದ್ದ ಮಹಾಮನೆಯ ದಾಸೋಹದ ವೈಭವವನ್ನು ನಾವು ಬಸವಾದಿ ಶರಣರ ವಚನಗಳಲ್ಲಿ ಕಾಣುತೇವೆ. ನಮಗೆ ಅಂಥ ದಾಸೋಹದ ವೈಭವವನ್ನು ಮತ್ತೆ ನೋಡುವ ಭಾಗ್ಯ ಕರುಣಿಸಿದೆ ತುಮಕೂರಿನ ಶ್ರೀ ಸಿದ್ಧಗಂಗಾ ದಿವ್ಯಕ್ಷೇತ್ರದಲ್ಲಿ ಎಂದು ಹೇಳಬಹುದು.

ಮಹಾನುಭಾವಿ ಬಸವಣ್ಣನವರು ಎಲ್ಲ ಪ್ರಕಾರದ ಕಾಯಕಜೀವಿಗಳನ್ನು ಒಂದುಗೂಡಿಸಿ ಶರಣಸಂಕುಲವೆಂಬ ನವಸಮಾಜ ನಿರ್ಮಾಣ ಮಾಡಿದರು. ದುಡಿಯುವ ಜನರನ್ನು ಮೊಟ್ಟಮೊದಲ ಬಾರಿಗೆ ಒಂದುಗೂಡಿಸಿದ್ದ ಬಸವಣ್ಣನವರ ಶರಣಸಂಕುಲದಲ್ಲಿ ಜಾತಿಗಳು ನಿರ್ನಾಮವಾಗಿ ಕಾಯಕಗಳು ಉಳಿದುಕೊಂಡವು. ಯಾವುದೇ ಕಾಯಕವಿರಲಿ ಆ ಕಾಯಕಗಳಲ್ಲಿ ಭೇದ ಎಣಿಸಬಾರದು ಬಸವಣ್ಣನವರ ಪ್ರಧಾನಿ ಕಾಯಕ ಹೆಚ್ಚಿನದಲ್ಲ, ಹರಳಯ್ಯನವರ ಸಮಗಾರ ಕಾಯಕ ಕಡಿಮೆಯಲ್ಲ ಎಂಬ ಸತ್ಯದ ಅರಿವನ್ನು ಬಸವಣ್ಣನವರು ಲೋಕಕ್ಕೇ ಸಾರಿದರು. ಎಲ್ಲಾ ಕಾಯಕಜೀವಿಗಳ ಬದುಕಿನಲ್ಲಿ ಅರಿವು ಮೂಡಿಸಿ ಅಕ್ಷರಕ್ರಾಂತಿಯಿಂದ ಜ್ಞಾನದಜ್ಯೋತಿ ಹೊತ್ತಿಸಿದ್ದಕ್ಕಾಗಿ ಅವರೆಲ್ಲಾ ಅಕ್ಷರ ಕಲಿತು ತಮ್ಮ ತಮ್ಮ ಕಾಯಕದಿಂದ ಬಂದ ಅನುಭವವನ್ನು ಅನುಭಾವದ ಮಟ್ಟಕ್ಕೇರಿಸಿ ಅತ್ಯಮೂಲ್ಯವಾದ ವಚನಗಳು ರಚಿಸಿದವರಲ್ಲಿ 33 ವಚನಕಾರ್ತಿಯರ ವಚನಗಳು ಸೇರಿದಂತೆ ಒಟ್ಟು 221 ವಚನಕಾರರ ವಚನಗಳು ಮಾತ್ರ ಲಭ್ಯವಾಗಿವೆ. ಇವರಲ್ಲಿ ಬಹಳಷ್ಟು ವಚನಕಾರರು ಬಸವಣ್ಣನವರ ಮಾರ್ಗದರ್ಶನದಲ್ಲಿ ಅಕ್ಷರಕಲಿತು ಸಾಕ್ಷರಸ್ಥರಾಗಿ ವಚನ ರಚನೆ ಮಾಡಿದವರಾಗಿದ್ದಾರೆ. ಇಂಥ ಒಂದು ಅದ್ಭತ ಸಾಧನೆಯಾಗಿದ್ದು 12ನೇ ಶತಮಾನದಲ್ಲಿ ಮಾತ್ರ, ಇದಕ್ಕಿಂತಲೂ

ಮುಂಚೆ ಜಗತ್ತಿನ ಯಾವ ಮೂಲೆಯಲ್ಲೂ ದುಡಿಯುವ ವರ್ಗವನ್ನು ಒಂದುಗೂಡಿಸಿ ಚಳವಳಿ ಮಾಡಿದ ದಾಖಲೆ ಇಲ್ಲವೆಂದು ಹೇಳಬಹುದು.

ಬಸವಧರ್ಮಯೆಂದರೆ ಕಾಯಕಜೀವಿಗಳ ಧರ್ಮ. ಬಸವಣ್ಣನವರು ಅನುಭವ ಮಂಟಪದಲ್ಲಿ ಕಾಯಕದ ಮಹತ್ವದ ಬಗ್ಗೆ ಅರಿವು ಮೂಡಿಸಿದ್ದರಿಂದ ದೇಶದ ನಾನಾ ಭಾಗಗಳಿಂದ ತಂಡೋಪ ತಂಡವಾಗಿ ಕಲ್ಯಾಣದ ಕಡೆಗೆ ಧಾವಿಸಿ ಬಂದರು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಂದ ಕೂಡಿದ್ದ ಶರಣಸಂಕುಲವೆಂಬ ಸಮಾಜ ಹೊಸ ಜೀವನವಿಧಾನದಿಂದ ಕೂಡಿತ್ತು. ಬಡವರ ಮತ್ತು ಉಳ್ಳವರ ಎರಡು ಬದುಕಿನ ಕ್ರಮಗಳನ್ನು ಗುರುತಿಸಿದ ಬಸವಣ್ಣನವರು ಬಡವರ ಉದ್ಧಾರಕ್ಕಾಗಿ ಪಟ್ಟ ಪರಿಶ್ರಮ ಅನನ್ಯವಾದುದಾಗಿದೆ.ಬಸವಧರ್ಮದಲ್ಲಿ ಸಂಕುಲವೆಂಬುದು ವಿಶಿಷ್ಟವಾದ ಪಾರಿಭಾಷಿಕ ಪದವಾಗಿದೆ. ಸಂಕುಲದಲ್ಲಿ ಕುಲಭೇದವಿರುವುದಿಲ್ಲ ಸರ್ವಸಮತ್ವವೇ ಸಂಕುಲದ ಜೀವಾಳವಾಗಿದೆ. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಂದ ಕೂಡಿದ್ದ ಈ ಸಮಾಜದಿಂದ ಜನಸಮುದಾಯವನ್ನು ಎತ್ತಿ ಸರ್ವಭೇದಗಳನ್ನು ನಿರಾಕರಿಸುವ ಶರಣ ಸಂಕುಲವೆಂಬ ವಿಶಿಷ್ಟ ಸಮಾಜವನ್ನು ಬಸವಾದಿ ಶರಣರು ರೂಪಿಸಿದರು. ಇಲ್ಲಿ ಬಡವ–ಶ್ರೀಮಂತ, ಹೆಣ್ಣು–ಗಂಡು, ಹೀಗೆ ಹಲವಾರು ಭೇದಗಳಿಂದ ಶರಣಸಂಕುಲ ಮುಕ್ತವಾಗಿತ್ತು. ಎಲ್ಲ ಕಾಯಕಜೀವಿಗಳು ಸಮಾನ ಗೌರವವನ್ನು ಹೊಂದಿದ್ದರು.

ಬಸವಣ್ಣನವರು ಅರಿವಿನ ಮೂಲಕ ಆತ್ಮವು ಸಕಲಜೀವಾತ್ಮರ ಜೊತೆ ಸಂಪರ್ಕ ಹೊಂದುವುಂತೆ ಮಾಡುವುದರ ಜೊತೆಗೆ ಒಳ ಮತ್ತು ಹೊರ ಜಗತ್ತಿನ ಮಧ್ಯೆ ಸಂಬಂಧ ಕಲ್ಪಿಸಿದರು.ಒಳಗಿನ ಸ್ವಾತಂತ್ರ್ಯದ ಅರಿವು ಮತ್ತು ಹೊರಗಿನ ಕರ್ತವ್ಯ ಪ್ರಜ್ಞೆಯನ್ನು ಮೂಡಿಸಿದರು. ರಾಜಪ್ರಭುತ್ವ ಅಳಿದು ಪ್ರಜಾಪ್ರಭುತ್ವ ಉದಯವಾಗುವುದರ ಕನಸು ಕಂಡರು. ಅಂತೆಯೇ ಕಾಶ್ಮೀರದಲ್ಲಿನ ಸವಾಲಕ್ಷದ ದೊರೆ ಮಹಾದೇವ ಭೂಪಾಲ, ಬಸವಣ್ಣನವರ ನವಸಮಾಜದ ಪರಿಕಲ್ಪನೆಗೆ ಮನಸೋತು, ಪತ್ನಿ ಗಂಗಾದೇವಿ ಜೊತೆ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕ ಕೈಗೊಂಡ ಕಾರಣ ಮೋಳಿಗೆ ಮಾರಯ್ಯ ಮೋಳಿಗೆ ಮಹಾದೇವಿ ಎಂದು ಪ್ರಸಿದ್ಧರಾದರು.ರಾಜ ರಾಣಿಯರು ಅರಮನೆ ಬಿಟ್ಟು ಗುಡಿಸಲಿನಲ್ಲಿ ವಾಸಿಸುವಷ್ಟು ಮಾನಸಿಕವಾಗಿ ಬೆಳವಣಿಗೆ ಹೊಂದಿದ್ದರು. ಅವರು ಅರಸೊತ್ತಿಗೆಗಿಂತ ಕಾಯಕದಲ್ಲಿ ಹೆಚ್ಚಿನ ಶಾಂತಿ ಸಮಾಧಾನ ಪಡೆದುಕೊಂಡು ಜೀವನದರ್ಶನದ ಪ್ರತೀಕವಾಗಿರುವ ಅಮೂಲ್ಯವಾದ ವಚನ ರಚಿಸಿದ ಶರಣ ದಂಪತಿಗಳಾದರು. ಬಸವಾದಿ ಶರಣರ ದರ್ಶನದಲ್ಲಿ ದಾಸೋಹಂಭಾವದ ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದವರಾಗಿದ್ದರು.

ಬಸವಣ್ಣನವರ ಕಾಯಕ ತತ್ವದ ಮೇಲೆ ಬೆಳಕು ಚೆಲ್ಲಿದ ಬಹುಪಾಲು ಶರಣರಲ್ಲಿ ಒಬ್ಬರಾದ ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ ದಂಪತಿಯರು. ಇವರು ಮಹಾಮನೆಯ ಅಂಗಳದಲ್ಲಿ ಮತ್ತು "ಶಿವಭಕ್ತರ ಮನೆಗೆ ಹೋಗಿ ಒರಳಕ್ಕಿಯನಾಯ್ದುತಂದು"ಎಂಬಂತೆ ಭತ್ತ ಕುಟ್ಟಿ ಅಕ್ಕಿ ಮಾಡುವಾಗ ಆಚೀಚೆ ಸಿಡಿದ ಅಕ್ಕಿಯನ್ನು ಮಾರಯ್ಯ ದಂಪತಿಯರು ಆಯ್ದು ತಂದು ಜೀವನ ನಿರ್ವಹಣೆ ಮತ್ತು ದಾಸೋಹ ಮಾಡುತ್ತಿದ್ದರು.ಪ್ರಸಾದ ಪ್ರಜ್ಞೆವುಳ್ಳ ಶರಣರು ಗಹನವಾದ ಅನುಭಾವದ ಚಿಂತನ ಮಂಥನದೊಂದಿಗೆ ಸಾತ್ವಿಕವಾದ ಜೀವನ ಅವರದಾಗಿತ್ತು.

ನಿಸರ್ಗಪರವಾದ ಕಾಯಕದ ಮೇಲೆ ನಿಂತ ಬಸವದರ್ಶನವನ್ನು ಮಾರಯ್ಯ ದಂಪತಿ ಅಪ್ಪಿಕೊಂಡರು. ಶಿವಾನುಭವ ಗೋಷ್ಟಿಯಲ್ಲಿ ತಲ್ಲೀನನಾಗಿದ್ದ ಮಾರಯ್ಯನನ್ನು ಕಾಯಕಕ್ಕೆ ಹೊಗುವುದಕ್ಕೆ ತಡವಾಗುತ್ತದೆ. "ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ" ಎಂದು ಲಕ್ಕಮ್ಮ ಎಚ್ಚರಿಸುತ್ತಾಳೆ. ಆಯ್ದಕ್ಕಿ ಮಾರಯ್ಯನವರು ಎಚ್ಚರಗೊಂಡು ಸತಿ ಲಕ್ಕಮ್ಮಳಿಂದ ಕಾಯಕದ ಮಹತ್ವ ಅರಿತರು. ಈ ಕಡುಬಡವ ದಂಪತಿಯರ ಮಧ್ಯೆ ಅನ್ಯೋನತೆ, ವೈಚಾರಿಕ ಸ್ವಾತಂತ್ರ್ಯ, ನಾಯನಿಷ್ಠುರತೆ, ಸಾಮರಸ್ಯ ಮತ್ತು ಏಕೋಭಾವವಿತ್ತು. ಅವರಿಗೆ ಕಾಯಕವೇ ಎಲ್ಲದಕ್ಕೂ ಆಧಾರ. ಕಾಯಕವಿಲ್ಲದಿದ್ದರೆ ಇಡೀ ಲೋಕ ನಿಷ್ಕ್ರೀಯವಾಗುವುದರಿಂದ ಗುರು, ಲಿಂಗ, ಜಂಗಮರು ಆಧಾರವಿಲ್ಲದಂತಾಗುತ್ತಾರೆ ಎಂಬ ಅರಿವಿನೊಡನೆ ಆಚರಣೆಯಲ್ಲಿ ತೊಡಗಿದ ಮಾರಯ್ಯನವರ ಅನುಭಾವದ ಹಿನ್ನಲೆಯಲ್ಲಿ ರಚಿಸಿದ ಈ ವಿಶಿಷ್ಟವಾದ ವಚನದಲ್ಲಿ ಕಾಣಬಹುದು.

ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು,

ಲಿಂಗಂಪೂಜೆಯಾದಡೂ ಮರೆಯಬೇಕು,

ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು.

ಕಾಯಕವೇ ಕೈಲಾಸವಾದ ಕಾರಣ.

ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.

–ಆಯ್ದಕ್ಕಿ ಮಾರಯ್ಯ

ಆಯ್ದಕ್ಕಿ ಮಾರಯ್ಯನವರ ಈ ವಚನದಲ್ಲಿ ಸರ್ವರ ಸಂರಕ್ಷಣೆಗಾಗಿ ಕಾಯಕ ಎಷ್ಟೊಂದು ಮಹತ್ವದ್ದಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ಮಾತ್ರ ಈ ಸ್ಪಷ್ಟವಾದವನ್ನು ಮುಂದಿಡುತ್ತಾರೆ. ಏಕೆಂದರೆ ಕಾಯಕದ ಪರಿಣಮವು ಗುರು, ಲಿಂಗ, ಜಂಗಮಕ್ಕಾಗಿಯೇ ಎಂದು. ಕಾಯುಕದಲ್ಲಿ ನಿರತರಾದಾಗ ಗುರುದರ್ಶನ, ಲಿಂಗಪೂಜೆ ಮತ್ತು ಜಂಗಮಸೇವೆಯ ಯೋಚನೆಯನ್ನು ಮಾಡಬಾರದು. ಇಲ್ಲಿ ಅವರು ಗುರು, ಲಿಂಗ, ಜಂಗಮರ ಅವಹೇಳನ ಮಾಡುವುದಿಲ್ಲ. ನಾವು ಕಾಯಕದಲ್ಲಿ ಮಗ್ನರಾದಾಗ ದೇವರಿಗೆ

ಪ್ರಿಯವಾದುದನ್ನೇ ಮಾಡುತ್ತ ಸ್ವಾವಲಂಬಿಯಾಗುತ್ತೇವೆ. ನಂತರ ದಾಸೋಹದ ಮೂಲಕ ಅಳಿಲುಸೇವೆ ಸಲ್ಲಿಸುತ್ತೇವೆ. ಗುರು, ಲಿಂಗ, ಜಂಗಮ ಮತ್ತು ಸ್ವರ್ಗಸಮಾನವಾದ ಬದುಕಿನ ಒಳ್ಳೆಯದೆಲ್ಲ ಆ ಕಾಯಕದೊಳಗೇ ಅಡಗಿದೆ ಎಂಬ ಭಾವವನ್ನು ಮಾರಯ್ಯನವರ ಈ ಸೂಕ್ಷ್ಮತೆ ಹೊಂದಿದ ವಚನವಾಗಿದೆ. ಅಂತೆಯೆ ಬಸವಧರ್ಮದ ಘೋಷವಾಕ್ಯವಾಗಿ "ಕಾಯಕವೇ ಕೈಲಾಸ" ಎಂಬುದು ಜನಮನದಲ್ಲಿ ಅಚ್ಚೊತ್ತಿದೆ. ಕಾಯಕ ದಾಸೋಹ ನಿಸರ್ಗತತ್ವಗಳಾಗಿವೆ. ಮಾನವನು ನಿಸರ್ಗದ ಭಾಗವಾಗಿದ್ದಾನೆ. ಆದ್ದರಿಂದ ಆತ ಕಾಯಕ ಮತ್ತು ದಾಸೋಹ ಬಿಟ್ಟು ಬದುಕುವಂತಿಲ್ಲ ಎಂದು ಬಸವಧರ್ಮ ಸಾರುತ್ತದೆ.

12ನೇ ಶತಮಾನದ ಶರಣರ ಶೂನ್ಯ ಸಿಂಹಾಸನ ಪರಂಪರೆಯ ಶ್ರೀ ಗೋಸಲ ಸಿದ್ಧೇಶ್ವರರಿಂದ ಪ್ರಾರಂಭವಾದ ಶ್ರೀಮಠವು ಮುಂದುವರೆಯುತ್ತಾ ಇಲ್ಲಿ ದಶಕ ದಶಕಗಳಿಂದ ಉರಿಯುತ್ತಿರುವ ಅಡುಗೆಯ ಒಲೆ ಆರಿಲ್ಲ. ಬೆಳಗುತ್ತಿರುವ ಜ್ಞಾನಜ್ಯೋತಿ ನಂದಿಲ್ಲ. ದುಡಿಯುವ ಕೈಗಳು ಕಾಯಕ ನಿಲ್ಲಿಸಿಲ್ಲ. ನಿರಂತರ ಕಾಯಕದೊಂದಿಗೆ ಸನ್ಯಾಸದ ಸೇವಾಮುಖಕ್ಕೆ ಹೊಸ ವ್ಯಾಖ್ಯಾನ ಬರೆದವರು ಪೂಜ್ಯ ಶ್ರೀ ಸಿದ್ಧಗಂಗಾ ಶ್ರೀಗಳವರು. ಮಾನವನ ಬದುಕಿಗೆ ಅಗತ್ಯವಾದ ನಿಜ ಆಧ್ಯಾತ್ಮವನ್ನು ಜನರ ನಡುವೆ ತಂದವರು. ಸನ್ಯಾಸಿ ಎಂದರೆ ಯಾವುದೋ ಲೋಕದಿಂದ ಧರೆಗಿಳಿದವನಲ್ಲ. ಸನ್ಯಾಸಿ ಜನರಿಂದ ದೂರವಾದವನೂ ಅಲ್ಲ ಎಂಬುದನ್ನು ಹನ್ನೆರಡನೇ ಶತಮಾನದಲ್ಲಿ ಅಲ್ಲಮಪ್ರಭು, ಸಿದ್ಧರಾಮೇಶ್ವರ, ಅಕ್ಕಮಾಹಾದೇವಿ, ಗೊಗ್ಗವ್ವೆ, ಬೊಂತಾದೇವಿ ಹೀಗೆ ಅನೇಕರು ಅನುಭವ ಮಂಟಪದಲ್ಲಿ ಕೂಡಿ ಬಾಳಿ ಬೆಳಗಿದ ಬಸವಾದಿ ಶರಣರು ಹಾಕಿಕೊಟ್ಟ ಆದರ್ಶಗಳನ್ನೆ ಆಚರಿಸಿಕೊಂಡು ಬಾಳಿದವರು ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಾಹಾಸ್ವಾಮಿಗಳು.

ತುಮಕೂರಿನ ಶ್ರೀ ಸಿದ್ಧಗಂಗಾ ಕ್ಷೇತ್ರದತ್ತ ಇಡೀ ವಿಶ್ವವೇ ನೋಡುವಂತಾಗಲು ಕಾರಣ ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರ ನಿರ್ಲಿಪ್ತ ಮನಸ್ಸು ಮತ್ತು ಪರಿಶುದ್ಧ ಭಾವ ಹೊಂದಿದ್ದ ಅವರು 'ನಾನು ಏನು ಅಲ್ಲ. ಬಸವಣ್ಣನವರು ತೋರಿದ ದಾರಿಯಲ್ಲಿ ನಡೆಯಲು ಪ್ರಯತ್ನಿಸುತ್ತಿದ್ದೆವಷ್ಟೆ ಎಂದ ಪೂಜ್ಯ ಶ್ರೀಗಳವರಿಗೆ ಕರ್ನಾಟಕ ಸರಕಾರ ಅತ್ಯುನ್ನತ 'ಕರ್ನಾಟಕ ರತ್ನ' ಪುರಸ್ಕಾರವನ್ನು ನೀಡಿರುವುದು ಸಹಜವಾಗಿ ಭಕ್ತಾದಿಗಳಿಗೆ ಅಪರಿಮಿತ ಸಂತೋಷವನ್ನು ತಂದಿತು. ಆದರೆ ಸ್ವಾಮೀಜಿ ಈ ವಿಷಯದಲ್ಲಿ ಮೌನವಾಗಿದ್ದರು. ಪ್ರಶಸ್ತಿ, ಪುರಸ್ಕಾರಗಳ ಬಗ್ಗೆ ಕಿಂಚಿತ್ತೂ ಒಲವಿರಲಿಲ್ಲ. ನನಗೇಕೆ ಈ ಪ್ರಶಸ್ತಿ ಪುರಸ್ಕಾರ ಎಂಬ ವಿನಮ್ರ ಭಾವದಿಂದ ಕಾಯಕದಲ್ಲಿ ತೊಡಗಿಸಿಕೊಂಡು, ಎಲ್ಲ ಪ್ರಶಸ್ತಿ ಪುರಸ್ಕಾರಗಳನ್ನು ಮೀರಿದವರಾಗಿದ್ದರು.

ಸಿದ್ಧಗಂಗೆಯನ್ನು ಬಸವತ್ವದ ಅನುಭವ ಮಂಟಪವನ್ನಾಗಿ ಮಾಡಿದ ಕಾಯಕಯೋಗಿ ನಾಡಿಗೆ ಮಾರ್ಗದರ್ಶಕರಾದರು.

ಪೂಜ್ಯ ಶ್ರೀ ಡಾ. ಶಿವಕುಮಾರ ಮಹಾಸ್ವಾಮೀಜಿಗಳ ದಿನಚರಿಯತ್ತ ನೋಡಿದರೆ ಅದೊಂದು ವಿಸ್ಮಯ ಎನಿಸುತ್ತದೆ. ದಿನಾಲೂ ಬೆಳಗಿನ ಜಾವ ಎರಡು ಗಂಟೆಗೆ ಏಳುವ ಸ್ವಾಮಿಗಳು ಬಸವಣ್ಣನವರ ವಚನದಂತೆ "ಗಾಂಧಾರಿ ಮಾಂಧಾರಿಯೆಂಬ ಅಹೋರಾತ್ರಿಯಲ್ಲಿ ಲಿಂಗವ ಪೂಜಿಸಬೇಕು" ಎನ್ನುವ ನುಡಿಯಂತೆ ಸ್ನಾನ, ಇಷ್ಟಲಿಂಗ ಪೂಜೆ, ಏಕಾಂತಧ್ಯಾನ, ಶರಣರ ವಚನಗಳು ಭಕ್ತಿಗೀತೆಗಳೊಂದಿಗೆ ಮಂಗಳದ ನಂತರ ಹತ್ತಾರು ಭಕ್ತರಿಗೆ ಗುರು, ಲಿಂಗ, ಜಂಗಮಾಚರಣೆಯ ಬಗ್ಗೆ ಅನುಭಾವ ನೀಡಿದ ಮೇಲೆ ಮಿತ ಆಹಾರ, ಒಂದಿಷ್ಟು ಹಣ್ಣು, ಎದುರಿಗಿದ್ದ ಭಕ್ತರೊಂದಿಗೆ ಪ್ರಸಾದ ಸ್ವೀಕರಿಸುವ ಪರಂಪರೆ. ನಸುಕಿನ 5.30 ರಿಂದ ಕೆಲಕಾಲ ಅಧ್ಯಯನದ ನಂತರ ದಿನನಿತ್ಯದ ಕಾಯಕದತ್ತ ಗಮನ. ಸಾಮೂಹಿಕ ಪ್ರಾರ್ಥನೆಯಲ್ಲಿ ನಿತ್ಯ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಆಶೀರ್ವಚನ ನೀಡಿ, ಕಾರ್ಯಾಲಯಕ್ಕೆ ಹೋಗಿ ಎಲ್ಲ ಕೆಲಸ ಕಾರ್ಯಗಳನ್ನು ಪರಿಶೀಲಿಸುವ ಪೂಜ್ಯರ ಆಚರಣೆಯನ್ನು ಕಂಡು ಕಾಯಕವೇ ಕೈಲಾಸ ಅಂದರು ಬಸವ, ಅದರಂತೆ ನಡೆದರು ನಡೆದಾಡೊ ದೈವ. ಸಿದ್ಧಗಂಗಾ ಕ್ಷೇತ್ರವೇ ಪೂಜ್ಯರ ಉಸಿರು ಪ್ರತಿ ಕಲ್ಲು ಹೇಳುತ್ತಿದೆ ಬುದ್ದಿಯ ಹೆಸರು ಎಂದು ಕವಿಯೊಬ್ಬರು ಮನತುಂಬಿ ಕೊಂಡಾಡಿದ್ದಾರೆ.

ಶ್ರೀಗಳು ಯಾವುದೇ ಪವಾಡ ಮಾಡಲಿಲ್ಲ. ಅಹಂಕಾರ, ಸ್ವಜಾತಿಪ್ರೇಮ, ಸ್ವಪ್ರತಿಷ್ಠೆಗಳೇ ಮೈತುಂಬಿ ನರ್ತಿಸುತ್ತಿರುವ ಈ ಕಾಲಘಟ್ಟದಲ್ಲಿ 'ನಾನು' ಎಂಬುದಿಲ್ಲದ ಸರ್ವಸಮತ್ವ ತುಂಬಿಕೊಂಡ ಸರ್ವರ ಮಹಾಮನೆಯನ್ನಾಗಿ ಮಾಡಿದರು. ವಿದ್ಯಾರ್ಥಿಗಳೊಂದಿಗೆ ಜೀವಿಸಿದರು. ಶಿಸ್ತು, ಪರಿಶ್ರಮ, ಧ್ಯಾನ, ಏಕಾಗ್ರತೆಯನ್ನೇ ಪಾಲಿಸಿದರು. ಬೆಳಗಿನಜಾವ ಶುರುವಾಗುತ್ತಿದ್ದ ಅವರ ದಿನಚರಿ ರಾತ್ರಿ 10 ಗಂಟೆವರೆಗೆ ನಿರಂತರ ಸಾಗುತ್ತಿತ್ತು. ಯಾವ ಕಾಯಕಕ್ಕೂ ಹಿಂಜರಿಯದೆ ಅಗತ್ಯ ಬಿದ್ದರೆ ತಾವೇ ಮುದ್ದೆ ತಿರುವುತ್ತಿದ್ದರು, ಅನ್ನ ಬಸಿಯುತ್ತಿದ್ದರು. ಮತ್ತು ಬೆಳಗಿನ ಹೊತ್ತು ಮಕ್ಕಳಿಗೆ ಇಂಗ್ಲಿಷ್ ಮತ್ತು ಸಂಸ್ಕೃತ ಪಾಠ ಮಾಡುತ್ತಿದ್ದರು. ಶ್ರೀ ಸಿದ್ಧಗಂಗಾ ಮಠದಲ್ಲಿ ಪೂಜ್ಯರೇ ಜೀವಕಳೆಯಾಗಿದ್ದರು. ಮಠಕ್ಕೆ ಬರುವ ಭಕ್ತರು ಸ್ವಾಮಿಜೀಗಳ ದರ್ಶನ ಪಡೆದು, ತಮ್ಮ ಕಷ್ಟಸುಖಗಳ ನೀವೆದನೆ, ಪೂಜ್ಯರಿಂದ ಸಾಂತ್ವನ, ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಶ್ರೀಗಳಿಗೆ ಆಸಕ್ತಿ ಮತ್ತು ತೃಪ್ತಿ ಸ್ವಾಮಿಗಳ ದರ್ಶನ ಪಡೆದಕೊಂಡ ಭಕ್ತರಿಗೆ ನೆಮ್ಮದಿ. ಮಠಕ್ಕೆ ಆಗಮಿಸುವ ಭಕ್ತರೆಲ್ಲರಿಗೂ ಪ್ರಸಾದ ಸ್ವೀಕರಿಸಿ ಎಂದು ಹೇಳುತ್ತಾ ಪ್ರಸಾದ ಮಂದಿರದ ಉಸ್ತುವಾರಿಯೂ ಶ್ರೀಗಳವರದೇ ಆಗಿತ್ತು. ಶರಣ ಸಂಸ್ಕೃತಿಯಿಂದ ಬಂದ ದಾಸೋಹ ಸಂಸ್ಕೃತಿ. ಪ್ರತ್ಯಕ್ಷ ರೂಪ ಶ್ರೀ ಸಿದ್ಧಗಂಗಾ ಮಠ.

ಪೂಜ್ಯರು ಶ್ರೀ ಮಠವನ್ನು ಅಭಿವೃದ್ಧಿಪಡಿಸಿ, ಪ್ರಗತಿಯತ್ತ ಸಾಗಿಸಿಕೊಂಡು ಬಂದದ್ದನ್ನು ಕಂಡರೆ ಎಂಥವರಲ್ಲೂ ಭಕ್ತಿ, ಗೌರವ, ಅಭಿಮಾನ ಮೂಡಿಸುತ್ತದೆ.

ಮನದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ.
ಆದಿವಿಡಿದು ಬಂದಾತನೆ ಭಕ್ತ :
ಅನಾದಿವಿಡಿದು ಬಂದಾತನೆ ಜಂಗಮ !
ಆದಿ ಗುರು : ಅನಾದಿ ಶಿಷ್ಯ !
ಈ ಉಭಯ ಕುಳಸ್ಥಳವ ಬಲ್ಲಡೆ ಆತ ಲಿಂಗಸಂಬಂಧಿ,
ಕೂಡಲಸಂಗಮದೇವಾ.

–ಬಸವಣ್ಣ

ಬಸವಣ್ಣನವರ ಈ ಮೇಲಿನ ವಚನದಂತೆ ಭಕ್ತರೆಲ್ಲರ ಮನದೊಳಗೆ ಮನೆಯ ಮಾಡಿಕೊಂಡವರು ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳವರ ಜೀವನ ಅನುಪಮವಾದುದ್ದು. ಮಾತು ಮನಗಳಿಂದತತ್ತ ಮೀರಿದ ವ್ಯಕ್ತಿತ್ವದ ದಿವ್ಯ ಮೂರುತಿ. ಕಾಯಕ ದಾಸೋಹವೇ ಅವರ ಜೀವನದ ಧ್ಯೇಯವಾಗಿಸಿಕೊಂಡು, ಶರಣರ ನಡೆಯಂತೆ 'ಉಭಯ ಕುಳಸ್ಥಳವ' ಅಂದರೆ ಪೂಜ್ಯರು ಇಷ್ಟಲಿಂಗ ಪೂಜೆ ಮತ್ತು ಜಂಗಮಲಿಂಗ ಪೂಜೆ ಈ ಎರಡನ್ನು ಚಾಚೂ ತಪ್ಪದೇ ಇಷ್ಟಲಿಂಗ ಪೂಜೆಗೆ ತಮಗೆ ಬೇಕಾದ ಪರಿಕರಗಳಿಂದ ನಿರಂತರ ಪೂಜೆಮಾಡಿಕೊಂಡು, ಜಂಗಮಲಿಂಗ ಪೂಜೆಯೆಂದರೆ ಅನ್ನದಾಸೋಹ, ಅಕ್ಷರ ದಾಸೋಹದೊಂದಿಗೆ ಹತ್ತಾರು ಸಾವಿರ ಮಕ್ಕಳಿಗೆ ಆಶ್ರಯ ಕೊಡುವುದರ ಮೂಲಕ ಸದ್ದುಗದ್ದಲವಿರದೆ ಸಾಧನೆ ಮಾಡುತ್ತಾ ಎಲ್ಲಾ ಕಡೆಗಳಲ್ಲೂ ಅವರಿಗೆ ತುಂಬಾ ಪ್ರಿಯವಾದ ಬಸವಣ್ಣನವರ "ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ" ಎಂಬ ಸಪ್ತ ಸೂತ್ರಗಳ ವಚನವನ್ನು ತಮ್ಮಗೆ ತಿಳಿದಿರುವ ಭಾಷೆಗಳಲ್ಲೆಲ್ಲ ಹೇಳಿಕೊಂಡು ಬದುಕಿದ ಪೂಜ್ಯ ಶ್ರೀಗಳು ಪರಮವನೊಳಗೊಂಡ ಪರಿಣಾಮಿಯಾದರು.

ಬಸವ ತತ್ವ ಎಂದರೆ ಸಕಲಜೀವಿಗಳಿಗೆ ಲೇಸನ್ನು ಬಯಸುವುದು. ಕಾಯಕ ಜೀವಿಗಳ, ಸ್ತ್ರೀ ಸ್ವಾತಂತ್ರ್ಯ, ಮೂರ್ತಿ ಮಂದಿರಗಳಿಲ್ಲದ, ದೇಹವೆ ದೆಗುಲವಾಗಿಸಿದ, ಬಿದ್ದವರನ್ನು ಹೊತ್ತುಕೊಂಡ, ಸಾಮಾಜಿಕ ನ್ಯಾಯದ, ಜಾತಿ–ಲಿಂಗಭೇದಗಳಿಲ್ಲದ, ಜ್ಞಾನ ರಕ್ಷಣೆಯು ಹೊತ್ತ, ಮಾನವ ಹಕ್ಕುಗಳ ಕುರಿತು ಚಿಂತನೆಗೈದ ಪರಿವರ್ತನಾ ಧರ್ಮ. ಇವೆಲ್ಲ ನಾನಾ ರೀತಿಯಿಂದ ಕೂಡಿದ 'ದಯವೇ ಧರ್ಮದ ಮೂಲ' ವಾಗಿರುವುದೇ ಬಸವತತ್ವ, ಇಂಥ ಅಮೂಲ್ಯ ತತ್ವಸಿದ್ಧಾಂತ ನೀಡಿದ ಜಗಜ್ಯೋತಿ,

ಮಾನವೀಯತೆ ಸಾರಿದ ಮಹಾಮಾನವತಾವಾದಿ ವಿಶ್ವಗುರು ಬಸವಣ್ಣನವರು ಯಾರ ಸೊತ್ತಲ್ಲ. 12ನೇ ಶತಮಾನದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಚರ್ಚೆಗಾಗಿ ಅನುಭವ ಮಂಟಪ ಎಂಬ ಜಗತ್ತಿನ ಮೊದಲ ಸಂಸತ್ ಸ್ಥಾಪಿಸಿದ ಬಸವಣ್ಣನವರು ನಟುವರ ಜನಾಂಗದಿಂದ ಬಂದ ವ್ಯೋಮಕಾಯ ಅಲ್ಲಮಪ್ರಭು ದೇವರನ್ನು ಅನುಭವ ಮಂಟಪದ ಶೂನ್ಯ ಸಿಂಹಾಸನಾಧೀಶರರನ್ನಾಗಿ ಮಾಡಿದರು. ವಿವಿಧ ಕಾಯಕಗಳನ್ನು ಮಾಡುವ ಸಮಾಜದಲ್ಲಿನ 770 ಪುರುಷ ಮತ್ತು ಮಹಿಳಾ ಪ್ರತಿನಿಧಿಗಳನ್ನು ಅನುಭವ ಮಂಟಪದ ಸದಸ್ಯರನ್ನಾಗಿ ಮಾಡಿ ಅವರನ್ನು ಅಮರಗಣಂಗಳೆಂದು ಕರೆದರು.

ಅನುಭವ ಮಂಟಪವು ಅಭಿವ್ಯಕ್ತಿ ಸ್ವಾತಂತ್ರ್ಯದ ತಾಣವಾಗಿತ್ತು. ಶರಣರ ವಚನಗಳು ಚರ್ಚೆಯ ನಂತರವೇ ಅವುಗಳು ಜನರ ಕೈಸೇರುತ್ತಿದ್ದವು. ಬಸವಣ್ಣನವರು ಕೇವಲ ತತ್ವ ಬೋಧಕರಾಗಿರಲಿಲ್ಲ. ತಾವು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು "ಭಕ್ತಿಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ, ನಡೆಯೊಳಗೆ ನಡಿಯ ಪೂರೈಸುವೆ. ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ; ಒಂದು ಜವೆ ಕೊರತೆಯಾದಡೆ ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ." ಎಂದು ಸರ್ವರನ್ನು ಪ್ರೀತಿಯಿಂದ ಕಾಣುತ್ತಾ ಬಡವರ ಉದ್ಧಾರಕ್ಕಾಗಿ ಪಟ್ಟ ಶ್ರಮ ಅನನ್ಯವಾದುದಾಗಿದೆ. ಸರ್ವ ಜನಾಂಗದ ಅಹವಾಲಗಳನ್ನು ಆಲಿಸಲು ಸಾಮಾಜಿಕ ನ್ಯಾಯದ ಪರುಷಕಟ್ಟೆಯನ್ನು ಸ್ಥಾಪಿಸಿದರು. ಪ್ರಧಾನಿಯಾಗಿದ್ದ ಬಸವಣ್ಣನವರು ರಾಜದರ್ಬಾರಕ್ಕೆ ಹೋಗುವ ಮುನ್ನ ಪರುಷಕಟ್ಟೆಯ ಮೇಲೆ ಕುಳಿತು ಜನರ ಕಷ್ಟನಷ್ಟಗಳಿಗೆ ಸ್ಪಂದಿಸುತ್ತಿದ್ದರು. ಇಷ್ಟಲಿಂಗ ಜನಕರಾದ ಬಸವಣ್ಣನವರು ಎಲ್ಲ ಕಾಯಕ ಜೀವಿಗಳು ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದರ ಮೂಲಕ ತಮ್ಮೊಳಗಿನ ಅಂತಃಶಕ್ತಿಯೆಂಬ ಮಹಾಘನದೊಡನೆ ಒಂದಾಗುವ ಕ್ರಮ ಕಂಡುಕೊಂಡರು. ಇಂಥ ಅದ್ಭುತವಾದ ಶಕ್ತಿಯನ್ನು ಪಡೆದ ಶರಣರು ಸ್ವತಂತ್ರ ಧೀರರಾದರು. ಮಾನವರು ಸಕಲಜೀವಾತ್ಮರೊಂದಿಗೆ ತನು, ಮನ, ಧನದೊಂದಿಗೆ ಒಂದಾದಾಗ ಮಾತ್ರ ತಮ್ಮೊಳಗಿನ ದೇವರ ಜೊತೆ ಒಂದಾಗಬಲ್ಲರು ಎಂಬ ಲಿಂಗಾಂಗ ಸಾಮರಸ್ಯದ ಮಹತ್ವವನ್ನು ಅರಿತುಕೊಂಡ ಶರಣರು 'ಇಂದಿಂಗೆ ನಾಳಿಂಗೆ' ಎಂದು (ಸಂಗ್ರಹಣೆ) ಕೂಡಿಸಿ ಇಡುತ್ತಿರಲಿಲ್ಲ. ಸರ್ವರೂ ದುಡಿದುಣ್ಣಬೇಕೆಂಬ ಅರಿವು ಮೂಡಿಸಿದ್ದರಿಂದ ಎಲ್ಲರೂ ದುಡಿದು ಗಳಿಸಿದ್ದನ್ನು ಶಿವನ ಪ್ರಸಾದ ಎಂದು ಭಾವಿಸುತ್ತಿದ್ದರು. ಶರಣರದು ಬಡತನದ ಜೀವನವಾಗಿತ್ತಾದರೂ ಆಂತರ್ಯದಲ್ಲಿ ಘನಮನ ಸಂಪನ್ನರಾಗಿದ್ದರು. ಅವರು ಬಂದದ್ದರಲ್ಲಿಯೇ ದಾಸೋಹಂಭಾವದಿಂದ ಶಿವನಿಧಿಗೆ ಅರ್ಪಿಸಿ ಉಳಿದದ್ದರಲ್ಲಿ ಉಪಜೀವನ ಸಾಗಿಸುತ್ತಿದ್ದರು. ಅವರೊಳಗಿನ ಶ್ರೀಮಂತಿಕೆಯನ್ನು ಮೀರುವ ಸಾಮರ್ಥ್ಯ

ಈ ಭೌತಿಕ ಜಗತ್ತಿನ ಯಾವ ಶ್ರೀಮಂತರಿಗೂ ಇರಲಿಕ್ಕಿಲ್ಲವೆಂದೇ ಹೇಳಬಹುದು. 'ಮನೆ ನೋಡಾ ಬಡವರು ಮನ ಘನಮನ ಸಂಪನ್ನರು' ಎಂಬಂತೆ ಬಸವಾದಿ ಶರಣರು ಬಾಳಿ ಬೆಳಗಿದರು.

ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ಬಡವರ ಬಂಧುವಾಗಿದ್ದರು. ಬಡತನವಿದ್ದರೆ ಕಠಿಣ ಪರಶ್ರಮದ ದುಡಿಮೆಯಿಂದ ದೂರಮಾಡಬಹುದು. ಆದರೆ ಈ ಹೃದಯ ದಾರಿದ್ರ್ಯವೆಂಬುದು ಇರಬಾರದು. ಮನುಷ್ಯನಾದವನು ತನ್ನನ್ನು ತಾನು ಸತ್ಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ನುಡಿಯುವ ಪೂಜ್ಯರು ಸಮಾಜದ ಸರ್ವ ಅನಿಷ್ಟಗಳ ನಾಶಕ್ಕೆ ದಿವ್ಯ ಔಷದವೆಂದರೆ ಶರಣರು ಕಲಿಸಿದ ಕಾಯಕ ಎಂದರು.

ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಂಹಕಾರ
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ
ವಿಷಯಂಗಳಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗವು ಬೇರಿಲ್ಲ ಕಾಣಿರೆ.

– ಆದಯ್ಯ

ಒಬ್ಬ ಪೂಜ್ಯನೀಯ ವ್ಯಕ್ತಿಯಲ್ಲಿರಬೇಕಾದ ಶ್ರೇಷ್ಠತೆ ಕುರಿತು ಈ ವಚನದ ವಿಶೇಷತೆ. ಮೋಹ, ಮದ, ಮತ್ಸರಗಳೆಂಬ ಅವಗುಣಗಳನ್ನು ಕಳೆದುಕೊಂಡು ಅಮೂಲ್ಯಗುಣಗಳನ್ನು ಹೊಂದಿ ನಡೆ ನುಡಿ ಒಂದಾಗಿಸಿ ಕೊಂಡಿರುವ ವ್ಯಕ್ತಿ ಮಹಾತ್ಮನಾಗುತ್ತಾನೆ, ದೇವತ್ವ ಹೊಂದುತ್ತಾನೆ.ಆಗ ಇಡೀ ಮಾನವ ಕುಲವೇ ತನಗೆ ಅರಿವಿಲ್ಲದಂತೆ ಆ ಮಹಾತ್ಮನನ್ನು ಪೂಜಿಸುತ್ತದೆ. ಎನ್ನುವ ವಿಶೇಷತೆ ಹೊಂದಿರುವ ಆದಯ್ಯ ಶರಣರ ವಚನ ಸಾರುತ್ತದೆ. ಅದರಂತೆ ಪೂಜ್ಯ ಶ್ರೀಗಳು ಜಾಗ್ರ, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಯಲ್ಲೂ ಸಮಾಜದ ಬಗ್ಗೆ ಚಿಂತೆ ತಮ್ಮ ಮಠಕ್ಕೆ ಬರುವ ಸಹಸ್ರ ಸಂಖ್ಯೆಯ ಭಕ್ತರೊಂದಿಗೆ ಚಿಂತನೆ. ಅವರಿಗೆ ಪ್ರಸಾದದ ಹಾಗೂ ಎಲ್ಲಾ ರೀತಿಯ ವವ್ಯಸ್ಥೆ ಸರಿಯಾಗಿ ಆಗಬೇಕು. ಮಠದಲ್ಲಿ ನಿರಂತರವಾಗಿ ನಡೆದುಕೊಂಡು ಬರುತ್ತಿರುವ ಧಾರ್ಮಿಕ ಕಾರ್ಯಕ್ರಮಗಳು ಯಾವ ಅಡೆತಡೆಗಳಿಲ್ಲದೆ ನಡೆಯಬೇಕು. ತಮ್ಮ ಮಠದಲ್ಲಿ ಓದುವ ವಿದ್ಯಾರ್ಥಿಗಳು ಅತ್ಯಂತ ಲವಲವಿಕೆಯಿಂದ ಉತ್ಸಾಹಿಗಳಾಗಿ ಓಡಾಡಬೇಕು. ಎಂಬ ಹಂಬಲದಿಂದ 'ಅಯ್ಯಾ ನಿಮ್ಮ ಶರಣರ ದಾಸೋಹಕ್ಕೆ ಎನ್ನ ತನು ಮನ ಧನವಲಸುವಂತೆ ಮಾಡಯ್ಯಾ' ಎನ್ನುತ್ತಾ ಪೂಜ್ಯರು.

"ಕಿಡೆ ನಡೆಯದೆ ಕೆಡೆ ನುಡಿಯದೆ, ಅನ್ಯರ ಪ್ರತಿಪಾದಿಸದಿದ್ದಡೆ
ಏನ ಮಾಡನಯ್ಯಾ ಲಿಂಗವು, ಏನ ಕೊಡನಯ್ಯಾ ಲಿಂಗವು?
ತಾನು ಏನ ಬೇಡಿದುದನೀವನಾಗಿ ನಂಬುಗೆವುಳ್ಳ ಶಿವಭಕ್ತಂಗೆ
ಇದೇ ದಿಬ್ಯ ಕೂಡಲಸಂಗಮದೇವಾ."

– ಬಸವಣ್ಣ

ಶರಣ ಸಂಸ್ಕೃತಿಯ ಜೀವಾಳವಾದ ಕಾಯಕ ದಾಸೋಹವನ್ನು ಸ್ವತಃ ತಮ್ಮ ನಡೆನುಡಿ, ಚಿಂತನೆಯಲ್ಲಿ ಅಳವಡಿಸಿಕೊಂಡ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ಸದ್ಭಾವನೆ, ಸಯಂಮ, ಶಿಸ್ತು, ಸಮತಾಭಾವಗಳನ್ನು ವಿದ್ಯಾರ್ಥಿಗಳಲ್ಲಿ ತುಂಬಿ ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸುವ ಹಂಬಲ ಅವರದಾಗಿತ್ತು. ಶ್ರೀಗಳ ಪ್ರಕಾರ, ಮಠವೆಂದರೆ ಕಲ್ಲಿನ ಕಟ್ಟಡಗಳಲ್ಲ, ಬೆಳ್ಳಿ ಸಂಹಾಸನ, ಬೆಳ್ಳಿ ಪಲ್ಲಕ್ಕಿಗಳಲ್ಲ, ವೈಭವದ ಜೀವನ ಕ್ರಮವಲ್ಲ. ಶರಣರಂತೆ ಸರಳವಾದ ಜೀವನ ನಡೆಸುತ್ತಾ ಶರಣ ಲೋಕದಿಚ್ಛೆಯಂತೆ ನಡೆವವನಲ್ಲ, ಲೊಕದಿಚ್ಛಗೆ ನುಡಿವವನಲ್ಲ, ಲೋಕವಿರಹಿತ ಶರಣನಾರಿಗಂಜುವವನಲ್ಲ. ಎಂಬಂತೆ ಶ್ರೀಗಳು ದಾಸೋಹ ನಿರಂತರವಾಗಿ ನಿಲ್ಲಿಸದೇ ನಡೆಸಿಕೊಂಡು ಬರಲು ಅವರು ಪಟ್ಟ ಪರಿಶ್ರಮವೇ ಸಾಕ್ಷಿ. ಜೋಳಿಗೆ ಬಗಲಿಗೇರಿಸಿಕೊಂಡು ಭಕ್ತರ ಮನೆ ಮನೆಗಳಿಗೆ ಹೋಗಿ ಬಿನ್ನಹ ಮಾಡಿ ದವಸ ಧಾನ್ಯಗಳು ತಂದು ದಾಸೋಹ ಸೇವೆಯನ್ನು ನಡೆಸುತ್ತಾ ವಿದ್ಯಾರ್ಥಿಗಳ ಹಸಿವು ನೀಗಿಸಿದರು. 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ' ಎಂಬುದನ್ನೆ ಮಂತ್ರವಾಗಿಸಿಕೊಂಡು ಬಂದ ಪೂಜ್ಯರ ನಡವಳಿಕೆ ಹೇಗೆಂದರೆ.

ಭಕ್ತನಾಯಿತ್ತೆ ಭಕ್ತಿ ದಾಸೋಹ; ಯುಕ್ತನಾಯಿತ್ತೆ ಯುಕ್ತಿ ದಾಸೋಹ;
ಐಕ್ಯನಾಯಿತ್ತೆ ಮಮಕಾರ ದಾಸೋಹ.
ಸರ್ವದಲೂ ದಾಸೋಹವೇ ಬೇಕು:
ಈ ದಾಸೋಹದ ಅನುವ ಕೂಡಲಸಂಗಯ್ಯ ತಾನೇ ಬಲ್ಲ.

–ಬಸವಣ್ಣ

ಎಂಬ ಬಸವ ವಾಣಿಯಂತೆ ಪೂಜ್ಯರ ಕಾಯಕ ದಾಸೋಹದ ಅನುವನ್ನು ಆ ಶಿವನು ತಾನೇ ಬಲ್ಲ ಹೊರತು ನಮಗರಿಯದು. ಪ್ರಾರಂಭದಲ್ಲಿ ಶ್ರೀಗಳಿಗೆ ದೇವರು ತನು, ಮನ, ಧನವನಲ್ಲಾಡಿಸಿ ಪರಿಕ್ಷೀಸಿದರೂ ಪೂಜ್ಯರು ಬೆದರದೆ ಬೆಚ್ಚದೆ ಮುಂದೆ ಸಾಗಿದುದರಿಂದ ಆ ದೇವರೆ ಒಲಿದು ಕೈ ಹಿಡಿದು ಮುನ್ನಡೆಸಿದಂತೆ 53 ವಿದ್ಯಾರ್ಥಿಗಳಿಂದ ಆರಂಭವಾದ ವಿದ್ಯಾರ್ಥಿನಿಲಯ ಇಂದು 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಎಲ್ಲಾ ಕಡೆಗಳಿಂದಲೂ ಧಾವಿಸಿ ಬರುವ ಸಾವಿರಾರು ಬಡವರು,

ದೀನ–ದಲಿತರು ಹಿಂದುಳಿದವರಿಗೆ ಆಶ್ರಯ ನೀಡಿ, ಅವರಿಗೆ ಶಿಕ್ಷಣದ ಮೂಲಕ ಅರಿವಿನ ಜ್ಯೋತಿ ಹೊತ್ತಿಸಿ ಜಾತಿ ಭೇದವಿಲ್ಲದೆ ಮಾನವೀಯ ಮೌಲ್ಯ ಸಾರಿದ ಪೂಜ್ಯರು ಬಸವಾದಿ ಶರಣರ ಸಂದೇಶದಂತೆ ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎನ್ನುತ್ತ ಇಂದು ಸಿದ್ಧಗಂಗಾ ಕ್ಷೇತ್ರ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆ ಊಹೆಗೂ ನಿಲಕದಷ್ಟು ಎತ್ತರಕ್ಕೆ ಬೆಳೆದಿದೆ. ನಾಡಿನ ಗಡಿ ದಾಟಿ ವಿಸ್ತಾರಗೊಂಡಿದೆ.

ಈಗ ಶ್ರೀ ಸಿದ್ಧಗಂಗಾ ಮಠದ ಶಿಕ್ಷಣ ಸಂಸ್ಥೆಯು ಎಲ್.ಕೆ.ಜಿ ಯಿಂದ, ಎಂ. ಟೆಕ್ ವರೆಗೂ ಶಿಕ್ಷಣ ನೀಡುವ ಅಕ್ಷಯ ಪಾತ್ರೆಯಾಗಿದೆ. ತುಮಕೂರಿನಲ್ಲಷ್ಟೇ ಅಲ್ಲದೇ ಇಡೀ ಕರ್ನಾಟಕದಾದ್ಯಂತ ಹಲವು ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣ ಕ್ರಾಂತಿಯನ್ನು ಮಾಡುತ್ತಾ ಸಾಗುತ್ತಿದೆ. ಸುಮಾರು 125 ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳ ಮುಖಾಂತರ ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನಧಾರೆಯನ್ನು ಹರಿಸುತ್ತಿದೆ. ಇಲ್ಲಿ ಅಂಧರು ಹಾಗೂ ಅಂಗವಿಕಲರಿಗಾಗಿ ಸಿದ್ಧಗಂಗಾ ಮಠದ ಆವರಣದಲ್ಲಿಯೆ ಒಂದು ಶಾಲೆಯನ್ನು ಸ್ಥಾಪಿಸಲಾಗಿದೆ. 1978 ರಲ್ಲಿ ಪ್ರಾರಂಭವಾದ ಈ ಶಾಲೆ ಸಾವಿರಾರು ಮಕ್ಕಳಿಗೆ ಊಟ ಹಾಗೂ ವಸತಿಯನ್ನೂ ನೀಡುವುದರ ಜೊತೆಗೆ ದಿವ್ಯಂಗರಿಗೆ ವಿಶೇಷವಾದ ಸೌಲಭ್ಯವನ್ನು ಒದಗಿಸುತ್ತಿದೆ. ಶ್ರೀ ಸಿದ್ಧಗಂಗಾ ಮಠದ ಪ್ರಮುಖ ಆಕರ್ಷಣೆ ಎಂದರೆ ಇಲ್ಲಿರುವ ಸಂಸ್ಕೃತ ಪಾಠಶಾಲೆ. ಇದು ಭಾರತದಲ್ಲೇ ಅತಿ ದೊಡ್ಡ ವಿದ್ಯಾರ್ಥಿ ಸಮೂಹವಿರುವ ಏಕೈಕ ಸಂಸ್ಕೃತಶಾಲೆ. ಇಲ್ಲಿ ಮಹಾಗ್ರಂಥಗಳ ಅಧ್ಯಯನ ನಡೆಯುತ್ತದೆ ಎನ್ನುವುದು ವಿಶೇಷವಾಗಿದೆ.

ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ವರ್ಷದುದ್ದಕ್ಕೂ ಧಾರ್ಮಿಕ, ಶೈಕ್ಷಣಿಕ, ಕ್ರೀಡಾ ಶಿಬಿರಗಳು, ವಿಚಾರ ಸಂಕೀರಣಗಳು ನಡೆಯುತ್ತಲೇ ಇರುತ್ತವೆ. ವಿಶೇಷವಾಗಿ ಶರಣರ ನಾಟಕಗಳನ್ನು ಅತಿ ಸಂತೋಷದಿಂದ ವಿಕ್ಷೀಸುವ ಶ್ರೀಗಳವರದು ಶುದ್ಧಾಂತಃಕರಣ. ನಿಜವನರಿತ ನಿಶ್ಚಿಂತ, ನೂರಾ ಹನ್ನೆರಡು ವರ್ಷ ಸಾರ್ಥಕ ಸೇವೆ ಸಲ್ಲಿಸಿ ಬಸವ ತತ್ವವೇ ಮೈಗೂಡಿಸಿಕೊಂಡಿದ್ದ ಮಹಾಚೇತನ ಪರಮ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳವರು.

ಬಸವಣ್ಣನವರ "ದಯವೇ ಧರ್ಮದ ಮೂಲವಯ್ಯಾ" ಎಂಬ ಸಂದೇಶದಂತೆ ಪೂಜ್ಯರು ವೈಜ್ಞಾನಿಕವಾಗಿ ಮಾನವೀಯತೆ ದೃಷ್ಟಿಯಿಂದ ವಿಚಾರಿಸಿದರು. ಜೀವಿಗಳಿಗೆ ಬದುಕಲು ಮೂಲಭೂತವಾಗಿ ಬೇಕಾಗಿದ್ದು ಆಹಾರ. ಹಾಗಾಗಿ ಹಸಿವು ಮನುಷ್ಯನ ಆದಿ ಸಮಸ್ಯೆಯಾಗಿದೆ. ಹಸಿವು ನೀಗಿದ ಮೇಲೆ ನಮ್ಮೊಳಗಿನ ಅಜ್ಞಾನದ ಕತ್ತಲೆ ಸರಿದು ಸಮಾಜವನ್ನು ಸರಿದಾರಿಗೆ ತರಲು ಜ್ಞಾನಾರ್ಜನೆ ಬಹಳ ಅವಶ್ಯಕವಾದುದು.

ಜ್ಞಾನವನ್ನು ಬಯಸುವವರಿಗೆ ಅನ್ನ ಹಾಗೂ ವಸತಿಯ ಸೌಲಭ್ಯ ಬೇಕೆಂದು ಅರಿತ ಪೂಜ್ಯರು ಸಿದ್ಧಗಂಗಾ ಮಠದಲ್ಲಿ ತ್ರಿವಿಧ ದಾಸೋಹಿಯಾಗಿದ್ದ ಶ್ರೀಗಳು ದೀನರ ಬಂಧುವಾಗಿದ್ದವರು. ಅಂಗವಿಕಲ ದನಕರುಗಳನ್ನು ಸಾಕುತ್ತಾ ಪ್ರಾಣಿಗಳ ಮೇಲೆಯೂ ಅಪಾರ ದಯೆವುಳ್ಳವರಾಗಿದ್ದವರು.

ಶ್ರೀ ಸಿದ್ಧಗಂಗಾ ಕ್ಷೇತ್ರ ಶುರುವಾಗಿದ್ದೇ ತ್ರಿವಿಧ ದಾಸೋಹದ ಸಂಕಲ್ಪವನಿಟ್ಟುಕೊಂಡು. ಗುರು-ಲಿಂಗ-ಜಂಗಮ ಎನ್ನುವ ನಿಟ್ಟಿನಲ್ಲಿ. ಅರಿವೇ ಗುರುವಾಗಿಸುತ್ತಾ ಜ್ಞಾನದ ಜೊತೆಗೆ ಮನಸ್ಸಿಗೆ ಸಂಸ್ಕಾರ ನೀಡಿ ಆ ಮನವೇ ಲಿಂಗವಾಗಿಸುತ್ತಾ ಧನದಿಂದ ಸಮಾಜಕ್ಕೆ ಸೇವೆ ಸಲ್ಲಿಸುವುದರ ಮೂಲಕ ಜಂಗಮವಾಗಿಸುತ್ತಾ, ಅನ್ನ, ಅಕ್ಷರ, ಆಶ್ರಯಕೊಡುತ್ತಾ ಪೂಜ್ಯ ಶ್ರೀಗಳು "ಬ್ರಹ್ಮ ಪದವಿಯನ್ನೊಲ್ಲೆ. ವಿಷ್ಣುಪದವಿಯನ್ನೊಲ್ಲೆ. ರುದ್ರಪದವಿಯನೊಲ್ಲೆ. ನಾನು ಮತ್ತಾವ ಪದವಿಯನೊಲ್ಲೆನಯ್ಯಾ. ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ" ಎಂಬ ಗುರು ಬಸವಣ್ಣನವರ ವಚನ ಪಾಲಿಸುತ್ತಾ ಶ್ರೀಗಳು ಬದುಕಿದರು. 'ನಡೆಚಂದ ನುಡಿಚೆಂದ ಪ್ರಮಥರೊಳಗೆ ಚೆಂದ' ಅನ್ನುವ ಹಾಗೆ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಲೋಕದಲ್ಲಿ ಬೆಳಗುವ ಜ್ಯೋತಿಯಾದರು.

****

(ಎಸ್. ಐ. ಟಿ. ತುಮಕೂರಿನಲ್ಲಿ 2019ನೇ ಜೂನ್ 8 ರಂದು ನಡೆದ ಬಸವ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮಾಡಿದ ಭಾಷಣ)

-ಶ್ರೀಮತಿ ಜಯಶ್ರೀ ಸುಕಾಲೆ

"ಬಸವ ಪ್ರಕಾಶ ನಿಲಯ"

ರೋಡ್ ನಂ.1 ಶರಣನಗರ ಬೀದರ.

Ph. No.9481633463

Email : jayshreesukale12@gmail.com



ಶರಣರದು ನಿಸರ್ಗಧರ್ಮ. ನಿಸರ್ಗವು ವೈವಿಧ್ಯಮಯವಾಗಿದೆ. ಆದರೆ ಅದು ಒಂದೇ ಸೂತ್ರದಲ್ಲಿ ಆವಿರ್ಭವಿಸಿದ ಕಾರಣ ಆ ವೈವಿಧ್ಯದಲ್ಲಿ ಪ್ರತಿಯೊಂದೂ ವಿಶಿಷ್ಟವಾಗಿದೆ ಹೊರತಾಗಿ ಮೇಲುಕೀಳುಗಳಿಲ್ಲ. ಮಾನವರು ಈ ನಿಸರ್ಗಧರ್ಮ ಪಾಲಿಸಿದರೆ, ಅವರ ಮಧ್ಯೆ ಕೂಡ ಮೇಲು ಕೀಳುಗಳು ಇಲ್ಲವಾಗುವವು. ಮಾನವರಲ್ಲಿನ ಮೇಲು ಕೀಳಿಗೆ ಸಂಪತ್ತಿನ ಸಂಗ್ರಹವೇ ಮುಖ್ಯ ಕಾರಣವಾಗಿದೆ. ದಾಸೋಹದ ಮೂಲಕ ಆ ಸಂಪತ್ತಿನ ಸಮಾನ ಹಂಚಿಕೆಯಾದರೆ ಸಹಜವಾಗಿಯೆ ಸಮಾನತೆ ಬರುವುದು. ಇದೇ ಶರಣರು ನಮಗೆ ಕಲಿಸಿದ ಪಾಠ ಎಂಬುದನ್ನು ಶ್ರೀಮತಿ ಜಯಶ್ರೀ ಸುಕಾಲೆ ಅವರು ಮನಂಬುಗುವಂತೆ ಹೇಳಿದ್ದಾರೆ.

ಶರಣರ ಇಂಥ ಚಿಂತನೆಗಳು ಮಾನವೀಯತೆಯ ಸೌರಭವಾಗಿ ನಮ್ಮ ಅಂತರಾತ್ಮಕ್ಕೆ ಮುದ ನೀಡುತ್ತವೆ. ಮಾನವರು ಮತ್ತು ನಿಸರ್ಗದ ಮಧ್ಯೆ ಹಾಗೂ ಮಾನವರ ಮಧ್ಯೆ ಇಂಥ ಸಹಬಾಳ್ವೆಯ ಕನಸು ನನಸಾದಾಗ. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳು ಮಾಯವಾಗಿ ಇಡೀ ಮನುಕುಲವೆ ಮಹಾಮನೆಯಾಗುತ್ತದೆ ಎಂಬ ಆಶಯವನ್ನು ಇಲ್ಲಿಯ ಎಲ್ಲ ಲೇಖನಗಳು ಹೊತ್ತಿವೆ. ಅಕ್ಕಮಹಾದೇವಿ ಹೇಳುವಂತೆ ಬದುಕೆಂಬುದು ಸರಸ ಸಮ್ಮೇಳನವಾಗಬೇಕಾದರೆ ಸರ್ವರೀತಿಯ ಸಮಾನತೆಯಿಂದ ಮಾತ್ರ ಸಾಧ್ಯ. ನಿಸರ್ಗ ನಮ್ಮ ಅವಶ್ಯಕತೆಗಳನ್ನು ಪೂರೈಸುತ್ತದೆ. ಆದರೆ ಮಾನವ ತನ್ನ ದುರಾಸೆಗಳನ್ನು ಪೂರೈಸುವಲ್ಲಿ ತಲ್ಲೀನನಾಗಿದ್ದಾನೆ. ಆ ಮೂಲಕ ನಿಸರ್ಗ ಹಾಳಾಗಿ ಜೀವಜಾಲದಲ್ಲಿ ಸಮತೋಲನವಿಲ್ಲದೆ ಇಡೀ ಜಗತ್ತೇ ವಿನಾಶದ ಕಡೆಗೆ ಹೋಗುವ ಸಾಧ್ಯತೆಗಳು ಹೆಚ್ಚಿವೆ. ಈ ಕುರಿತು ಶರಣರು 12ನೇ ಶತಮಾನದಲ್ಲೇ ಎಚ್ಚರಿಸಿದ್ದಾರೆ ಎಂಬುದನ್ನು ಲೇಖಕಿ ಸೂಚಿಸಿದ್ದಾರೆ. ಸಕಲಜೀವಾತ್ಮರಿಗೆ ಲೇಸನೆ ಬಯಸುವುದು ಎಂದರೆ ಜೀವಜಾಲ ಸಮತೋಲನವನ್ನು ಕಾಪಾಡುವುದು ಎಂದೇ ಅರ್ಥ.

ನೀಲಾಂಬಿಕೆಯ ಆತ್ಮಸ್ಥೈರ್ಯ, ಮೇದಾರ ಕೇತಯ್ಯನ ಅಪರಿಗ್ರಹ ಕಲ್ಪನೆ, ಲದ್ದೆಯ ಸೋಮಣ್ಣನ ಆತ್ಮಾಭಿಮಾನ, ಬೊಂತಾದೇವಿಯ ಬಯಲ ತತ್ತ್ವದ ಚಿಂತನೆ. ಲಕ್ಕಮ್ಮನ ಕಾಯಕ ನಿಷ್ಠೆ, ಮೋಳಿಗೆ ಮಹಾದೇವಿಯ ತತ್ತ್ವನಿಷ್ಠೆ, ಮಹಿಳೆಯರ ಬಗೆಗಿನ ಶರಣರ ದೃಷ್ಟಿಕೋನ ಮುಂತಾದ ವಿಚಾರಗಳು ಓದುಗರಿಗೆ ಚಿಂತನೆಗೆ ಹಚ್ಚುವಂಥವುಗಳಾಗಿವೆ.

–ರಂಜಾನ್ ದರ್ಗಾ

ಸಾಧನಾ ಪಬ್ಲಿಕೇಷನ್

ಶಾಪ್ ನಂ. 144/1, ಉಲ್ಲಾಳ ಕೆರೆ ಹತ್ತಿರ

ವಿಶ್ವೇಶ್ವರಯ್ಯ ಬಡಾವಣೆ, 5ನೇ ಹಂತ, ಉಲ್ಲಾಳ ಮುಖ್ಯರಸ್ತೆ

ಬೆಂಗಳೂರು – 560 056

ಮೊ : 9480088960